ಶುಕ್ರವಾರ, ಮಾರ್ಚ್ 22, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ
ಕೋಲ್ಕತ್ತದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಬಾಲಿವುಡ್ ನಟಿ ಸುಶ್ಮಿತಾ ಸೇನ್ ಕಾಣಿಸಿಕೊಂಡಿದ್ದು ಹೀಗೆ



ಕಾಂಗ್ರೆಸ್ ಅಧ್ಯಕ್ಷ ಖರ್ಗೆ ಸ್ಪರ್ಧೆ ಇಲ್ಲ: ಪಕ್ಷದ ನಾಯಕರು, ಸಚಿವರ ಮಕ್ಕಳು, ಸಂಬಂಧಿಕರಿಗೆ ಮಣೆ

‘ಕೈ’ಗೆ ಕುಟುಂಬವೇ ಪ್ರಧಾನ, ಉಳಿದೆಲ್ಲ ಗೌಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಕರ್ನಾಟಕದ 17 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಕಾಂಗ್ರೆಸ್ ಗುರುವಾರ ರಾತ್ರಿ ಪ್ರಕಟಿಸಿದೆ. ರಾಜ್ಯದ ಐವರು ಸಚಿವರ ಮಕ್ಕಳಿಗೆ ಮಣೆ ಹಾಕಲಾಗಿದೆ. ಮತ್ತೊಬ್ಬ ಸಚಿವರ ಪತ್ನಿಗೆ ಅವಕಾಶ ಕಲ್ಪಿಸಲಾಗಿದೆ. ಪಕ್ಷದ ನಾಯಕರ ಮಕ್ಕಳಿಗೆ ಹಾಗೂ ಸಂಬಂಧಿಕರಿಗೆ ಆದ್ಯತೆ ನೀಡಲಾಗಿದೆ. ಅಭ್ಯರ್ಥಿಗಳ ಆಯ್ಕೆಯಲ್ಲಿ ಕುಟುಂಬವೇ ಪ್ರಧಾನವಾಗಿದ್ದರೆ, ಉಳಿದೆಲ್ಲ ಅಂಶಗಳು ಗೌಣವಾಗಿವೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಲಬುರಗಿ ಕ್ಷೇತ್ರದಿಂದ ಈ ಸಲ ಸ್ಪರ್ಧಿಸುವುದಿಲ್ಲ. 2019ರ ಚುನಾವಣೆಯಲ್ಲಿ ಅವರು ಸೋತಿದ್ದರು. ಈ ಬಾರಿ ಖರ್ಗೆ ಅಳಿಯ ರಾಧಾಕೃಷ್ಣ ದೊಡ್ಡಮನಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಪುತ್ರ ಪ್ರಿಯಾಂಕ್ ಖರ್ಗೆ ಅವರು ರಾಜ್ಯದ ಗ್ರಾಮೀಣಾಭಿವೃದ್ಧಿ ಸಚಿವ. ಖರ್ಗೆ ಕುಟುಂಬದ ಮತ್ತೊಬ್ಬ ಸದಸ್ಯರ ರಾಜಕಾರಣ ಪ್ರವೇಶಕ್ಕೆ ಲೋಕಸಭಾ ಚುನಾವಣೆಯು ವೇದಿಕೆ ಕಲ್ಪಿಸಿದೆ.

25 ವರ್ಷಗಳಲ್ಲಿ ಕಾಂಗ್ರೆಸ್ ಅಧ್ಯಕ್ಷರೊಬ್ಬರು ಲೋಕಸಭಾ ಚುನಾವಣೆಗೆ ಸ್ಪರ್ಧೆ ಮಾಡದಿರುವುದು ಇದೇ ಮೊದಲು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ಚುನಾವಣೆಗಳಲ್ಲಿ ಸ್ಪರ್ಧಿಸಿದ್ದರು. ‘ನನಗೀಗ 83 ವರ್ಷ. ನೀವು (ಪತ್ರಕರ್ತರು) 65 ವರ್ಷಕ್ಕೆ ನಿವೃತ್ತರಾಗುತ್ತೀರಿ. ಪಕ್ಷದ ರಾಜ್ಯ ನಾಯಕರು ಹಾಗೂ ಕಾರ್ಯಕರ್ತರು ಹೇಳಿದರೆ ನಾನು ಖಂಡಿತವಾಗಿ ಸ್ಪರ್ಧೆ ಮಾಡುತ್ತೇನೆ’ ಎಂದು ಖರ್ಗೆ ಇತ್ತೀಚೆಗೆ ಹೇಳಿದ್ದರು. ಖರ್ಗೆ ಅವರು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾಗಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಪರವಾಗಿ ದೇಶದಾದ್ಯಂತ ಪ್ರಚಾರ ನಡೆಸ ಬೇಕಾದ ಕಾರಣಕ್ಕೆ ಅವರು ಸ್ಪರ್ಧಿಸಲು ನಿರಾಕರಿಸಿದ್ದಾರೆ. ಕಲಬುರಗಿ ಕ್ಷೇತ್ರಕ್ಕೆ ಖರ್ಗೆ ಅವರ ಹೆಸರನ್ನು ಮಾತ್ರ ಪಕ್ಷದ ರಾಜ್ಯ ಘಟಕ ಶಿಫಾರಸು ಮಾಡಿತ್ತು.

ಸಚಿವರ ಬದಲು ಮಕ್ಕಳು: ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಸಚಿವರು ಹಿಂದೇಟು ಹಾಕಿದ್ದರು. ಹೀಗಾಗಿ, ಅವರ ಮಕ್ಕಳನ್ನು ಪಕ್ಷ ಕಣಕ್ಕಿಳಿಸಿದೆ.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಪುತ್ರಿ ಪ್ರಿಯಾಂಕಾ ಜಾರಕಿಹೊಳಿ ಚಿಕ್ಕೋಡಿಯಿಂದ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪುತ್ರ ಮೃಣಾಲ್ ಹೆಬ್ಬಾಳಕರ ಬೆಳಗಾವಿಯಿಂದ, ಸಕ್ಕರೆ ಸಚಿವ ಶಿವಾನಂದ ಪಾಟೀಲ ಪುತ್ರಿ ಸಂಯುಕ್ತ ಪಾಟೀಲ ಬಾಗಲಕೋಟೆಯಿಂದ, ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಪುತ್ರಿ ಸೌಮ್ಯಾ ರೆಡ್ಡಿ ಬೆಂಗಳೂರು ದಕ್ಷಿಣದಿಂದ ಹಾಗೂ ಅರಣ್ಯ ಸಚಿವ ಈಶ್ವರ್ ಖಂಡ್ರೆ ಪುತ್ರ ಸಾಗರ್ ಖಂಡ್ರೆ ಬೀದರ್‌ನಿಂದ ಸ್ಪರ್ಧಿಸಲಿದ್ದಾರೆ. ಸೌಮ್ಯಾ ರೆಡ್ಡಿ ಹೊರತುಪಡಿಸಿದರೆ ಉಳಿದವರು ರಾಜಕಾರಣಕ್ಕೆ ಹೊಸಬರು. ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕಿಯಾಗಿದ್ದ ಸೌಮ್ಯಾ ಅವರು 2023ರ ಚುನಾವಣೆಯಲ್ಲಿ ಅಲ್ಪ ಅಂತರದಿಂದ ಸೋತಿದ್ದರು.

ದಾವಣಗೆರೆ ಕ್ಷೇತ್ರದಿಂದ ಸಚಿವ ಎಸ್‌.ಎಸ್‌.ಮಲ್ಲಿಕಾರ್ಜುನ್ ಪತ್ನಿ ಪ್ರಭಾ ಮಲ್ಲಿಕಾರ್ಜುನ್ ಸ್ಪರ್ಧೆ ಮಾಡಲಿದ್ದಾರೆ. ಈ ಕ್ಷೇತ್ರದಲ್ಲಿ ಬಿಜೆಪಿಯು ಹಾಲಿ ಸಂಸದ ಜಿ.ಎಂ. ಸಿದ್ದೇಶ್ವರ ಪತ್ನಿ ಗಾಯತ್ರಿ ಸಿದ್ದೇಶ್ವರ ಅವರನ್ನು ಕಣಕ್ಕಿಳಿಸಿದೆ. ಕಳೆದ ಕೆಲವು ಚುನಾವಣೆಗಳಿಂದ ಜಿ.ಎಂ. ಸಿದ್ದೇಶ್ವರ ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ ಕುಟುಂಬ ಮುಖಾಮುಖಿಯಾಗುತ್ತಿವೆ.

ಬೆಂಗಳೂರು ಕೇಂದ್ರ ಕ್ಷೇತ್ರಕ್ಕೆ ಯುವ ಮುಖಂಡ ಮನ್ಸೂರ್ ಅಲಿ ಖಾನ್ ಹುರಿಯಾಳು. ಅವರು ಕೇಂದ್ರದ ಮಾಜಿ ಸಚಿವ ಕೆ. ರಹಮಾನ್ ಖಾನ್ ಅವರ ಪುತ್ರ. ಕೊಪ್ಪಳದ ಅಭ್ಯರ್ಥಿಯಾಗಿರುವ ರಾಜಶೇಖರ್ ಹಿಟ್ನಾಳ್ ಅವರು ಶಾಸಕ ರಾಘವೇಂದ್ರ ಹಿಟ್ನಾಳ್ ಅವರ ಸಹೋದರ.

ಕೇಂದ್ರದ ಮಾಜಿ ಸಚಿವ ಬಿ. ಜನಾರ್ದನ ಪೂಜಾರಿ ಅವರ ಆಪ್ತ ಪದ್ಮರಾಜ್ ಅವರಿಗೆ ದಕ್ಷಿಣ ಕನ್ನಡ ಕ್ಷೇತ್ರದಲ್ಲಿ ಮಣೆ ಹಾಕಲಾಗಿದೆ. ಉಡುಪಿ–ಚಿಕ್ಕಮಗಳೂರು ಕ್ಷೇತ್ರಕ್ಕೆ ಮಾಜಿ ಸಂಸದ ಕೆ.ಜಯಪ್ರಕಾಶ್ ಹೆಗ್ಡೆ ಹುರಿಯಾಳು. ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದ ಅವರು ಕೆಲವು ವರ್ಷಗಳ ಹಿಂದೆ ಬಿಜೆಪಿಗೆ ಪಕ್ಷಾಂತರಗೊಂಡಿದ್ದರು. ಕೆಲವು ದಿನಗಳ ಹಿಂದೆ ಕೈ ಪಾಳಯಕ್ಕೆ ಮರಳಿದ್ದರು.

ಚಿತ್ರದುರ್ಗ ಕ್ಷೇತ್ರದಲ್ಲಿ ಮಾಜಿ ಸಂಸದ ಬಿ.ಎನ್.ಚಂದ್ರಪ್ಪ ಸ್ಪರ್ಧಿಸಲಿದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿರುವ ಅವರು ಮಾದಿಗ ಸಮುದಾಯದ ಹಿರಿಯ ನಾಯಕರು. ಮೈಸೂರು ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಎಂ. ಲಕ್ಷ್ಮಣ ಪಕ್ಷದ ಅಭ್ಯರ್ಥಿ.

ರಾಯಚೂರು ಕ್ಷೇತ್ರದಿಂದ ನಿವೃತ್ತ ಐಎಎಸ್ ಅಧಿಕಾರಿ ಜಿ.ಕುಮಾರ್ ನಾಯಕ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಅವರು ಕೆಲವು ತಿಂಗಳ ಹಿಂದೆ ನಿವೃತ್ತರಾಗಿದ್ದರು. ಧಾರವಾಡದಲ್ಲಿ ರಾಜಕೀಯ ಹಿನ್ನೆಲೆ ಇಲ್ಲದ ವಿನೋದ್ ಅಸೂಟಿ ಅವರಿಗೆ ಅವಕಾಶ ನೀಡಲಾಗಿದೆ. ಕುರುಬ ಸಮುದಾಯಕ್ಕೆ ಸೇರಿದವರು. ಅವರು ಕೇಂದ್ರದ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರನ್ನು ಎದುರಿಸಲಿದ್ದಾರೆ. ಕಾಂಗ್ರೆಸ್ ಪಕ್ಷವು 24 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಿದಂತಾಗಿದೆ.

ಕಾಂಗ್ರೆಸ್ ಅಭ್ಯರ್ಥಿಗಳು

ಚಿತ್ರದುರ್ಗ	ಬಿ.ಎನ್.ಚಂದ್ರಪ್ಪ
ಬೆಂಗಳೂರು ದಕ್ಷಿಣ	ಸೌಮ್ಯಾ ರೆಡ್ಡಿ
ಬೆಂಗಳೂರು ಕೇಂದ್ರ	ಮನ್ಸೂರ್ ಅಲಿಖಾನ್
ಬೆಂಗಳೂರು ಉತ್ತರ	ಎಂ.ವಿ.ರಾಜೀವ್ ಗೌಡ
ಬೆಳಗಾವಿ	ಮೃಣಾಲ್ ಹೆಬ್ಬಾಳಕರ
ಚಿಕ್ಕೋಡಿ	ಪ್ರಿಯಾಂಕಾ ಜಾರಕಿಹೊಳಿ
ಬಾಗಲಕೋಟೆ	ಸಂಯುಕ್ತಾ ಶಿವಾನಂದ ಪಾಟೀಲ
ದಾವಣಗೆರೆ	ಪ್ರಭಾ ಮಲ್ಲಿಕಾರ್ಜುನ್
ಧಾರವಾಡ	ವಿನೋದ್ ಅಸೂಟಿ
ಕಲಬುರಗಿ	ರಾಧಾಕೃಷ್ಣ ದೊಡ್ಡಮನಿ
ರಾಯಚೂರು	ಜಿ.ಕುಮಾರ್ ನಾಯಕ
ದಕ್ಷಿಣ ಕನ್ನಡ	ಪದ್ಮರಾಜ್
ಉಡುಪಿ–ಚಿಕ್ಕಮಗಳೂರು	ಕೆ.ಜಯಪ್ರಕಾಶ್ ಹೆಗ್ಡೆ
ಕೊಪ್ಪಳ	ಕೆ. ರಾಜಶೇಖರ ಹಿಟ್ನಾಳ್
ಉತ್ತರ ಕನ್ನಡ	ಅಂಜಲಿ ನಿಂಬಾಳಕರ್
ಬೀದರ್	ಸಾಗರ್ ಖಂಡ್ರೆ
ಮೈಸೂರು	ಎಂ. ಲಕ್ಷ್ಮಣ್

ಅಭ್ಯರ್ಥಿಗಳ ಘೋಷಣೆಗೆ ಬಾಕಿ ಉಳಿದಿರುವ ಕ್ಷೇತ್ರಗಳು

*ಬಳ್ಳಾರಿ, ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರ


‘ಉದಯಪುರ ಘೋಷಣೆ’ಗೆ ಎಳ್ಳುನೀರು

2022ರ ಮೇ ತಿಂಗಳಲ್ಲಿ ಕಾಂಗ್ರೆಸ್ ಪಕ್ಷವು ಉದಯಪುರದಲ್ಲಿ ಚಿಂತನ ಶಿಬಿರ ನಡೆಸಿತ್ತು. ಪಕ್ಷದ ಪುನರುಜ್ಜೀವನಕ್ಕೆ ಅನೇಕ ಉಪಕ್ರಮಗಳನ್ನು ಕೈಗೊಳ್ಳಲು ತೀರ್ಮಾನಿಸಲಾಗಿತ್ತು. ‘ಉದಯಪುರ ಘೋಷಣೆ’ ಹೆಸರಿನಲ್ಲಿ ಅನೇಕ ಘೋಷಣೆಗಳನ್ನು ಮಾಡಲಾಗಿತ್ತು. ‘ಒಂದು ಕುಟುಂಬಕ್ಕೆ ಒಂದು ಟಿಕೆಟ್’ ಎಂಬ ಘೋಷಣೆಯೂ ಅದರಲ್ಲಿ ಸೇರಿತ್ತು. ಕನಿಷ್ಠ ಐದು ವರ್ಷ ಪಕ್ಷದ ಸಂಘಟನೆಯಲ್ಲಿ ಕೆಲಸ ಮಾಡಿದರೆ ಮಾತ್ರ ಕುಟುಂಬದ ಎರಡನೇ ಸದಸ್ಯನಿಗೆ ಟಿಕೆಟ್ ನೀಡಬಹುದು ಎಂಬ ಅಂಶವೂ ಈ ಘೋಷಣೆಯಲ್ಲಿ ಒಳಗೊಂಡಿದೆ. ಕರ್ನಾಟಕ ಲೋಕಸಭಾ ಚುನಾವಣೆಯ ಟಿಕೆಟ್ ಹಂಚಿಕೆಯ ಸಂದರ್ಭದಲ್ಲಿ ‘ಉದಯಪುರ ಘೋಷಣೆ’ಗೆ ಎಳ್ಳುನೀರು ಬಿಡಲಾಗಿದೆ. ‘ಗೆಲ್ಲುವ’ ಮಾನದಂಡವನ್ನು ಮುಂದಿಟ್ಟುಕೊಂಡು ಕುಟುಂಬ ಸದಸ್ಯರಿಗೆ ಟಿಕೆಟ್ ಹಂಚಿಕೆಯಲ್ಲಿ ಪ್ರಾಧಾನ್ಯ ನೀಡಲಾಗಿದೆ. ಈ ನಿರ್ಧಾರವನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಮರ್ಥಿಸಿಕೊಂಡಿದ್ದಾರೆ. ಯುವ ಮುಖಗಳಿಗೆ ಅವಕಾಶ ನೀಡಲಾಗಿದೆ. ಜತೆಗೆ, ಮಕ್ಕಳನ್ನು ಗೆಲ್ಲಿಸಿಕೊಂಡು ಬರುವ ಜವಾಬ್ದಾರಿ ಸಚಿವರದ್ದು ಎಂದೂ ಹೇಳಿದ್ದಾರೆ.

ಬೆಂಗಳೂರಿಗೆ ‘ಋತು’ವಿನ ಮೊದಲ ಚಾಲೆಂಜ್

ಇಂದಿನಿಂದ ಐಪಿಎಲ್

ಚೆನ್ನೈ: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಹೊಸ ‘ಋತು’ ಶುಕ್ರವಾರ ಆರಂಭವಾಗಲಿದೆ. ಫಫ್ ಡುಪ್ಲೆಸಿ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಯುವನಾಯಕ ಋತುರಾಜ್ ಗಾಯಕವಾಡ ಅವರ ಚೆನ್ನೈ ಸೂಪರ್ ಕಿಂಗ್ಸ್ ಸವಾಲೊಡ್ಡಲಿದೆ.



ನಾಯಕರ ಬಲಾಬಲ

ಋತುರಾಜ್ ಗಾಯಕವಾಡ (ಸಿಎಸ್‌ಕೆ)

ಪಂದ್ಯ	52
ರನ್	1797
ಶ್ರೇಷ್ಠ	101*
ಸ್ಟ್ರೈಕ್‌ರೇಟ್	135.52
ಶತಕ	1
ಅರ್ಧಶತಕ	14
ಬೌಂಡರಿ	159
ಸಿಕ್ಸರ್	73

ಫಫ್ ಡುಪ್ಲೆಸಿ (ಆರ್‌ಸಿಬಿ)

ಪಂದ್ಯ	130
ರನ್	4133
ಶ್ರೇಷ್ಠ	96
ಸ್ಟ್ರೈಕ್‌ರೇಟ್	134.14
ಅರ್ಧಶತಕ	33
ಬೌಂಡರಿ	374
ಸಿಕ್ಸರ್	145

ಪ್ರಮುಖ ಅಂಶಗಳು

- ಹತ್ತು ತಿಂಗಳುಗಳ ನಂತರ ಕ್ರಿಕೆಟ್ ಕಣಕ್ಕೆ ಮರಳಿದ ಮಹೇಂದ್ರಸಿಂಗ್ ಧೋನಿ
- ವೇಗಿ ಮೊಹಮ್ಮದ್ ಸಿರಾಜ್– ದೀಪಕ್ ಚಾಹರ್ ಮುಖಾಮುಖಿ

ಪಂದ್ಯ ಆರಂಭ ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್

ಮಾಹಿತಿ: ಐಪಿಎಲ್ ವೆಬ್‌ಸೈಟ್



ಬ್ರಹ್ಮೋತ್ಸವ ಲಕ್ಷಾಂತರ ಭಕ್ತರ ಹರ್ಷೋದ್ಗಾರಗಳ ನಡುವೆ ಗುರುವಾರ ರಾತ್ರಿ ಮಂಡ್ಯ ಜಿಲ್ಲೆಯ ಮೇಲುಕೋಟೆ ಚೆಲುವನಾರಾಯಣಸ್ವಾಮಿ ವೈರಮುಡಿ ಬ್ರಹ್ಮೋತ್ಸವ ನಡೆಯಿತು ಚಿತ್ರ: ಧನುಷ್ ಡಿ.ವಿ

ನಿರ್ದೇಶನ ಉಲ್ಲಂಘಿಸಿದ ಆರ್‌.ಎನ್‌. ರವಿ • ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ

ರಾಜ್ಯಪಾಲರ ನಡೆಗೆ ಕೋರ್ಟ್ ಛೀಮಾರಿ

ನವದೆಹಲಿ (ಪಿಟಿಐ): ಡಿಎಂಕೆ ಮುಖಂಡ ಕೆ. ಪೊನ್ಮುಡಿ ಅವರು ತಪ್ಪಿತಸ್ಥ ಎಂದು ಘೋಷಿಸಿದ್ದಕ್ಕೆ ತಾನು ತಡೆಯಾಜ್ಞೆ ನೀಡಿದ ನಂತರವೂ, ತಮಿಳುನಾಡು ಸಂಪುಟಕ್ಕೆ ಅವರನ್ನು ಸೇರಿಸಿಕೊಳ್ಳುವುದಕ್ಕೆ ಒಪ್ಪಿಗೆ ನೀಡದ ರಾಜ್ಯಪಾಲ ಆರ್‌. ಎನ್‌. ರವಿ ಅವರ ನಡವಳಿಕೆಗೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದೆ.



ಆರ್‌.ಎನ್‌. ರವಿ

ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ವಿಚಾರವಾಗಿ 24 ಗಂಟೆಗಳಲ್ಲಿ ತೀರ್ಮಾನ ತೆಗೆದುಕೊಳ್ಳಲು ಸುಪ್ರೀಂ ಕೋರ್ಟ್ ರವಿ ಅವರಿಗೆ ಗುರುವಾರ ಸೂಚಿಸಿದೆ.

ಘೋಷಿತ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಸಂಪಾದಿಸಿದ ಪ್ರಕರಣದಲ್ಲಿ ಪೊನ್ಮುಡಿ ಅವರು ತಪ್ಪಿತಸ್ಥ ಎಂಬ ತೀರ್ಪು ಮತ್ತು ಅವರಿಗೆ ವಿಧಿಸಲಾಗಿದ್ದ ಮೂರು ವರ್ಷಗಳ ಶಿಕ್ಷೆಗೆ ಸುಪ್ರೀಂ ಕೋರ್ಟ್ ಈಚೆಗೆ ತಡೆ ನೀಡಿದೆ. ಪೊನ್ಮುಡಿ ಅವರನ್ನು ಸಂಪುಟಕ್ಕೆ ಸೇರಿಸಲು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹೇಳಿದ್ದರೂ ರಾಜ್ಯಪಾಲರು ಅದಕ್ಕೆ ಒಪ್ಪಿಲ್ಲ.

ರಾಜ್ಯಪಾಲ ರವಿ ಅವರು ಸುಪ್ರೀಂ ಕೋರ್ಟ್‌ನ ಸೂಚನೆಯನ್ನು ಉಲ್ಲಂಘಿಸುತ್ತಿದ್ದಾರೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠ ಹೇಳಿದೆ. ಪೊನ್ಮುಡಿ ಅವರನ್ನು ಸಂಪುಟಕ್ಕೆ ಮತ್ತೆ ಸೇರಿಸಿಕೊಳ್ಳುವುದು ಸಾಂವಿಧಾನಿಕ ನೈತಿಕತೆಗೆ ವಿರುದ್ಧವಾಗುತ್ತದೆ ಎಂಬ ಮಾತನ್ನು ರಾಜ್ಯಪಾಲರು ಯಾವ ಆಧಾರದಲ್ಲಿ ಹೇಳುತ್ತಾರೆ ಎಂದು ಕೂಡ ಪೀಠವು ಪ್ರಶ್ನಿಸಿದೆ.

‘ರಾಜ್ಯಪಾಲರ ನಡೆಯ ವಿಚಾರವಾಗಿ ನಾವು ಗಂಭೀರ ಕಳವಳ ಹೊಂದಿದ್ದೇವೆ. ಈ ಮಾತನ್ನು ನಾವು ನ್ಯಾಯಾಲಯದಲ್ಲಿ ಗಟ್ಟಿಯಾಗಿ ಹೇಳಲು ಬಯಸಿರಲಿಲ್ಲ, ಆದರೆ ರಾಜ್ಯಪಾಲರು ಸುಪ್ರೀಂ ಕೋರ್ಟ್‌ನ ಮಾತನ್ನು ಧಿಕ್ಕರಿಸುತ್ತಿದ್ದಾರೆ. ರಾಜ್ಯಪಾಲರಿಗೆ ಸಲಹೆ ನೀಡಿದವರು ಆ ಕೆಲಸವನ್ನು ಸರಿಯಾಗಿ ಮಾಡಿಲ್ಲ. ವ್ಯಕ್ತಿಯೊಬ್ಬ ಅಪರಾಧಿ ಎಂದು ನೀಡಲಾದ ತೀರ್ಪಿಗೆ ಸುಪ್ರೀಂ ಕೋರ್ಟ್ ತಡೆ ನೀಡಿದೆ ಎಂದಾದರೆ, ಸುಪ್ರೀಂ ಕೋರ್ಟ್ ಕೊಟ್ಟ ತಡೆಯು ಜಾರಿಗೆ ಬಂದಿದೆ ಎಂದೇ ಅರ್ಥ’ ಎಂದು ನ್ಯಾಯಮೂರ್ತಿ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಇದ್ದ ತ್ರಿಸದಸ್ಯ ಪೀಠವು ಅಟಾರ್ನಿ ಜನರಲ್ ಆರ್‌. ವೆಂಕಟರಮಣಿ ಅವರನ್ನು ಉದ್ದೇಶಿಸಿ ಹೇಳಿತು.

‘ನಿಮ್ಮ ಕಡೆಯವರಿಂದ ಶುಕ್ರವಾರ ಉತ್ತರ ಬಂದಿಲ್ಲ ಎಂದಾದರೆ ಸಂವಿಧಾನಕ್ಕೆ ಅನುಗುಣವಾಗಿ ನಡೆದುಕೊಳ್ಳುವಂತೆ ಸೂಚಿಸಿ ನಾವು ರಾಜ್ಯಪಾಲರಿಗೆ ಆದೇಶ ಹೊರಡಿಸುತ್ತೇವೆ’ ಎಂದು ಪೀಠವು ಅಟಾರ್ನಿ ಜನರಲ್ ಅವರಿಗೆ ಹೇಳಿತು.

ವಿಚಾರಣೆ ಆರಂಭವಾದಾಗ ತಮಿಳುನಾಡು ಸರ್ಕಾರದ ಪರವಾಗಿ ಪೀಠಕ್ಕೆ ವಿವರಣೆ ನೀಡಿದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, ಮುಖ್ಯಮಂತ್ರಿಯ ಶಿಫಾರಸು ಆಧರಿಸಿ ಕ್ರಮ ಕೈಗೊಳ್ಳಲು ರಾಜ್ಯಪಾಲರು ನಿರಾಕರಿಸಿರುವುದು ಸ್ವತಂತ್ರ ಭಾರತದ ಇತಿಹಾಸದಲ್ಲಿ ಇದೇ ಮೊದಲು ಎಂದು ಹೇಳಿದರು.

‘ಅಟಾರ್ನಿ ಜನರಲ್ ಅವರೇ, ನಿಮ್ಮ ರಾಜ್ಯಪಾಲರು ಏನು ಮಾಡುತ್ತಿದ್ದಾರೆ? ತಪ್ಪಿತಸ್ಥ ಎಂದು ಘೋಷಿಸಿದ್ದಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಆದರೆ ರಾಜ್ಯಪಾಲರು ತಾವು ಅವರಿಗೆ ಪ್ರಮಾಣವಚನ ಬೋಧಿಸುವುದಿಲ್ಲ ಎನ್ನುತ್ತಿದ್ದಾರೆ. ನಾವು ಕೆಲವು ಗಂಭೀರ ಮಾತುಗಳನ್ನು ಹೇಳಬೇಕಾಗುತ್ತದೆ. ಇದನ್ನು ನಾವು ಗಂಭೀರವಾಗಿ ಪರಿಗಣಿಸುತ್ತಿದ್ದೇವೆ ಎಂಬುದನ್ನು ನಿಮ್ಮ ರಾಜ್ಯಪಾಲರಿಗೆ ತಿಳಿಸಿ’ ಎಂದು ಕೂಡ ನ್ಯಾಯಪೀಠವು ಹೇಳಿತು.

ಪೊನ್ಮುಡಿ ಅವರನ್ನು ತಪ್ಪಿತಸ್ಥ ಎಂದು ಘೋಷಿಸಿದ್ದಕ್ಕೆ ಸುಪ್ರೀಂ ಕೋರ್ಟ್ ವಿಭಾಗೀಯ ಪೀಠವೊಂದು ತಡೆಯಾಜ್ಞೆ ನೀಡಿದೆ ಎಂದಾದಲ್ಲಿ, ‘ಇದು ಕಳಂಕವನ್ನು ಅಳಿಸುವ ಕೆಲಸ ಮಾಡುವುದಿಲ್ಲ’ ಎಂದು ಹೇಳುವ ಅಧಿಕಾರವು ರಾಜ್ಯಪಾಲರಿಗೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಎಚ್ಚರಿಕೆ ನೀಡಿತು.

ತಮಿಳುನಾಡು ಸರ್ಕಾರ ಸಲ್ಲಿಸಿರುವ ಅರ್ಜಿಯ ವಿಚಾರವಾಗಿ ವೆಂಕಟರಮಣಿ ಅವರು ತಾಂತ್ರಿಕ ನೆಲೆಯಲ್ಲಿ ಕೆಲವು ಆಕ್ಷೇಪಗಳನ್ನು ಎತ್ತಿದರು. ಆದರೆ ಪೀಠವು, ‘ಅಟಾರ್ನಿ ಅವರೇ, ರಾಜ್ಯಪಾಲರು ಸಂವಿಧಾನವನ್ನು ಪಾಲಿಸದೆ ಇದ್ದಾಗ ಸರ್ಕಾರ ಏನು ಮಾಡಬೇಕು’ ಎಂದು ಪ್ರಶ್ನಿಸಿತು.

ಪೊನ್ಮುಡಿ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಶಿಫಾರಸಿಗೆ ಒಪ್ಪಿಗೆ ನೀಡಲು ರಾಜ್ಯಪಾಲರು ನಿರಾಕರಿಸಿದ್ದರು. ಪೊನ್ಮುಡಿ ಅವರು ತಪ್ಪಿತಸ್ಥ ಎಂದು ನೀಡಲಾದ ತೀರ್ಪು ಹಾಗೂ ಅವರಿಗೆ ವಿಧಿಸಿರುವ ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಲಾಗಿದೆ; ಆದರೆ ಅವೆರಡನ್ನು ಅನೂರ್ಜಿತಗೊಳಿಸಿಲ್ಲ ಎಂದು ರಾಜ್ಯಪಾಲರು ಹೇಳಿದ್ದಾರೆ.

ಕೋರ್ಟ್ ಹೇಳಿದ್ದು...

‘ಸಚಿವರಾಗಿದ್ದ ವ್ಯಕ್ತಿಯ ಬಗ್ಗೆ ನಮಗೆ ಭಿನ್ನ ಅಭಿಪ್ರಾಯ ಇರಬಹುದು. ಆದರೆ ಅದು ವಿಷಯವೇ ಅಲ್ಲ. ಇಲ್ಲಿರುವುದು ಸಾಂವಿಧಾನಿಕ ನಿಯಮಕ್ಕೆ ಸಂಬಂಧಿಸಿದ ವಿಷಯ. ತಾವು ಈ ವ್ಯಕ್ತಿಯನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಬಯಸುತ್ತಿರುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ... ಅದು ಸಂಸದೀಯ ಪ್ರಜಾತಂತ್ರ ವ್ಯವಸ್ಥೆ. ರಾಜ್ಯಪಾಲರು ನಾಮಮಾತ್ರದ ಮುಖ್ಯಸ್ಥ. ಸಲಹೆ ನೀಡುವ ಅಧಿಕಾರ ಮಾತ್ರ ಅವರಿಗೆ ಇದೆ, ಅಷ್ಟೇ...’

ಸಿಜೆಐ ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠ



ಸರ್ಕಾರದ ವಾದ

ರಾಜ್ಯಪಾಲ ಆರ್‌.ಎನ್‌. ರವಿ ಅವರು ಪರ್ಯಾಯ ಸರ್ಕಾರವೊಂದನ್ನು ನಡೆಸಲು ಯತ್ನಿಸುತ್ತಿದ್ದಾರೆ. ಕೆ. ಪೊನ್ಮುಡಿ ಅವರನ್ನು ಮತ್ತೆ ಸಚಿವರನ್ನಾಗಿ ನೇಮಿಸಲು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮಾಡಿರುವ ಶಿಫಾರಸನ್ನು ಒಪ್ಪಿಕೊಳ್ಳುವಂತೆ ರವಿ ಅವರಿಗೆ ಸೂಚನೆ ನೀಡಬೇಕು. ತಪ್ಪಿತಸ್ಥ ಎಂಬ ತೀರ್ಪಿಗೆ ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ಬಂದ ನಂತರದಲ್ಲಿ ಪೊನ್ಮುಡಿ ಅವರನ್ನು ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳಲು ಸಾಂವಿಧಾನಿಕವಾಗಿ ಯಾವ ಅಡ್ಡಿಯೂ ಇಲ್ಲ.

ಸುಪ್ರೀಂ ಕೋರ್ಟ್‌ನಲ್ಲಿ ತಮಿಳುನಾಡು ಸರ್ಕಾರ

ಚಿನ್ನದ ದರ ₹1,130, ಬೆಳ್ಳಿ ₹1,100 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ದರ ಏರಿಕೆ ಆಗಿದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಗುರುವಾರ ತಲುಪಿದೆ.

ಚಿನ್ನದ ದರವು 10 ಗ್ರಾಂಗೆ ₹1,130 ಏರಿಕೆಯಾಗಿದ್ದು, ₹67,450ಕ್ಕೆ ಮಾರಾಟವಾಯಿತು. ಬೆಳ್ಳಿ ಧಾರಣೆಯು ಪ್ರತಿ ಕೆ.ಜಿಗೆ ₹1,100 ಹೆಚ್ಚಳವಾಗಿದೆ. ಸದ್ಯ ಒಂದು ಕೆ.ಜಿಗೆ ₹77,750 ದರವಿದೆ.



ಅಮೆರಿಕದ ಫೆಡರಲ್ ರಿಸರ್ವ್ ಬ್ಯಾಂಕ್ ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿರುವುದೇ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ತಿಳಿಸಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,202 ಡಾಲರ್ ಮತ್ತು 25.51 ಡಾಲರ್‌ನಂತೆ ಮಾರಾಟವಾಗಿವೆ.

‘ಜಾಗತಿಕ ಮಾರುಕಟ್ಟೆಯಲ್ಲಿಯೂ ಚಿನ್ನದ ದರ ಏರಿಕೆ ಕಂಡಿದೆ. ಇದು ದೇಶೀಯ ಮಾರುಕಟ್ಟೆ ಮೇಲೂ ಪರಿಣಾಮ ಬೀರಿದೆ’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ದಿಲೀಪ್ ಪರ್ಮಾರ್ ಹೇಳಿದ್ದಾರೆ.

ಚುನಾವಣಾ ನೀತಿ ಸಂಹಿತೆ: ಹೈಕೋರ್ಟ್‌ಗೆ ಅಡ್ವೊಕೇಟ್ ಜನರಲ್ ಸ್ಪಷ್ಟನೆ

ಕಾಂತರಾಜು ವರದಿ–ಸದ್ಯಕ್ಕೆ ಕ್ರಮ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿ ಇರುವ ಕಾರಣ, ಕರ್ನಾಟಕ ರಾಜ್ಯ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದಿಂದ ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿಯ ಬಗ್ಗೆ ಜೂನ್ 6ರವರೆಗೆ ಸರ್ಕಾರದಿಂದ ಮುಂದಿನ ಯಾವುದೇ ಕ್ರಮ ಜರುಗುವುದಿಲ್ಲ’ ಎಂದು ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದ್ದಾರೆ.

ವರದಿ ಸಲ್ಲಿಕೆ ಆಕ್ಷೇಪಿಸಿ ನಗರದ ‘ಸಮಾಜ ಸಂಪರ್ಕ ವೇದಿಕೆ’ ಅಧ್ಯಕ್ಷ ಜಿ.ಎನ್.ಶ್ರೀಕಂಠಯ್ಯ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್‌.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್‌.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಅಭಿಷೇಕ್ ಕುಮಾರ್ ವಾದ ಮಂಡಿಸಿ, ‘ವರದಿ ಸಲ್ಲಿಸುವಾಗ ಆಯೋಗದ ಕಾರ್ಯದರ್ಶಿ ಅದಕ್ಕೆ ಸಹಿ ಮಾಡಿಲ್ಲ. ಆಯೋಗ ಸ್ವತಂತ್ರವಾಗಿ ಸಮೀಕ್ಷೆ ನಡೆಸಿರುವ ಬಗ್ಗೆ ಹಾಗೂ ವರದಿ ಬಗ್ಗೆ ಸಾಕಷ್ಟು ಅನುಮಾನವಿದೆ. ಈ ವರದಿಯು ಚುನಾವಣೆಯ ಮೇಲೆ ಪರಿಣಾಮ ಬೀರಬಹುದು. ಅದಕ್ಕೆಂದೇ ಚುನಾವಣೆಯ ಹಿನ್ನೆಲೆಯಲ್ಲಿ ಸರ್ಕಾರ ಇದನ್ನು ಗಡಿಬಿಡಿಯಲ್ಲಿ ಸ್ವೀಕರಿಸಿದೆ’ ಎಂದು ಬಲವಾಗಿ ಆಕ್ಷೇಪಿಸಿದರು.

ಇದನ್ನು ಅಲ್ಲಗಳೆದ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ ಶೆಟ್ಟಿ, ‘ಚುನಾವಣೆ ಘೋಷಣೆಗೂ ಮುನ್ನವೇ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಚುನಾವಣೆ ಘೋಷಣೆಗೂ, ಚುನಾವಣೆ ಜರುಗುವುದಕ್ಕೂ ವರದಿಯನ್ನು ಸರ್ಕಾರ ಸ್ವೀಕರಿಸುವುದಕ್ಕೂ ಯಾವುದೇ ಸಂಬಂಧವಿಲ್ಲ. ಆಯೋಗದ ಅವಧಿ ಮುಗಿದ ಹಿನ್ನೆಲೆಯಲ್ಲಿ ಸರ್ಕಾರ ವರದಿಯನ್ನು ಸ್ವೀಕರಿಸಿದೆ ಅಷ್ಟೇ’ ಎಂದು ವಿವರಿಸಿದರು.

ಆಯೋಗದ ಪರ ವಾದ ಮಂಡಿಸಿದ ಹಿರಿಯ ವಕೀಲ ರವಿವರ್ಮ ಕುಮಾರ್, ‘54 ಅಂಶಗಳನ್ನು ಆಧರಿಸಿದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಿದೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಕಾಯ್ದೆ-1995ರ ಕಲಂ 11ರ ಪ್ರಕಾರ ಸಮೀಕ್ಷಾ ವರದಿಗೆ ತನ್ನದೇ ಆದ ಶಾಸನಬದ್ಧತೆ ಇದೆ. ಬಿಹಾರದಲ್ಲೂ ಇಂತಹ ಸಮೀಕ್ಷೆ ನಡೆಸಲಾಗಿದೆ. ಒಡಿಶಾದಲ್ಲಿ ನಡೆಯುತ್ತಿದೆ. ಅಂತೆಯೇ, ತಮಿಳುನಾಡಿನಲ್ಲೂ ಪ್ರಾರಂಭವಾಗಿದೆ’ ಎಂದು ಅರುಹಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ ಕೇಂದ್ರ ಸರ್ಕಾರದ ಗೃಹ ಕಾರ್ಯದರ್ಶಿ, ಭಾರತೀಯ ಜನಗಣತಿ ಆಯೋಗ, ರಾಜ್ಯ ಸರ್ಕಾರ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ಇತರ ಅರ್ಜಿಗಳ ಜೊತೆಗೇ ‘ಸಮಾಜ ಸಂಪರ್ಕ ವೇದಿಕೆ’ಯ ಅರ್ಜಿಯನ್ನೂ ಪರಿಗಣಿಸಲಾಗುವುದು ಎಂದು ವಿಚಾರಣೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?

‘ಎಚ್‌.ಕಾಂತರಾಜು ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿರುವ ವರದಿಯ ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿರ್ದೇಶಿಸಬೇಕು. ಸಮೀಕ್ಷೆ ನಡೆಸಲು ಎಚ್‌.ಕಾಂತರಾಜು ಆಯೋಗಕ್ಕೆ 2014ರ ಜನವರಿ 21ರಂದು ಸರ್ಕಾರ ನೀಡಿದ್ದ ಆದೇಶವನ್ನು ರದ್ದುಪಡಿಸಬೇಕು. ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ ಕಾಯ್ದೆ-1995ರ ಕಲಂ 9(1) ಹಾಗೂ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ ಕಾಯ್ದೆ (ತಿದ್ದುಪಡಿ)–2014ರ ಕಲಂ 3 ಅನ್ನು ರದ್ದುಪಡಿಸಬೇಕು’ ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವಾಗ ಸಚಿವ ಸಂಪುಟದ ಸಭೆ ನಡೆಯುವುದಿಲ್ಲ. ಹೀಗಾಗಿ, ಸಮೀಕ್ಷೆಯ ವರದಿಗೆ ಸಂಬಂಧಿಸಿದಂತೆ ಚುನಾವಣೆ ಮುಗಿಯುವವರೆಗೆ ಯಾವುದೇ ಮುಂದಿನ ಕ್ರಮ ಜರುಗುವುದಿಲ್ಲ

ಕೆ.ಶಶಿಕಿರಣ ಶೆಟ್ಟಿ, ಅಡ್ವೊಕೇಟ್ ಜನರಲ್

ಸಚಿವೆ ಶೋಭಾ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾರೋ ತಮಿಳುನಾಡಿನಿಂದ ಬಂದು ದಿ ರಾಮೇಶ್ವರ ಕೆಫೆಯಲ್ಲಿ ಬಾಂಬ್ ಇರಿಸಿ ಹೋಗುತ್ತಾರೆ ಎಂಬುದಾಗಿ ಹೇಳಿಕೆ ನೀಡಿ ಪ್ರಚೋದಿಸಿದ್ದಾರೆ’ ಎಂಬ ಆರೋಪದಡಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವಿರುದ್ಧ ಕಾಟನ್‌ಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.



‘ಚುನಾವಣಾ ಆಯೋಗದ ನಿರ್ದೇಶನದಂತೆ ಬೆಂಗಳೂರು ಚುನಾವಣಾಧಿಕಾರಿಯವರು ಮಾರ್ಚ್ 21ರಂದು ದೂರು ನೀಡಿದ್ದರು. ಎನ್‌ಸಿಆರ್ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗಿತ್ತು. ನ್ಯಾಯಾಲಯದ ನಿರ್ದೇಶನದಂತೆ, ಪ್ರಜಾ ಪ್ರತಿನಿಧಿ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗೆ ನೋಟಿಸ್ ನೀಡಿ, ತನಿಖೆ ಮುಂದುವರಿಸಲಾಗುವುದು’ ಎಂದು ಪೊಲೀಸರು ಹೇಳಿದರು.

‘ಮೊಬೈಲ್ ಮಳಿಗೆ ಮಾಲೀಕನ ಕೊಲೆ ಯತ್ನ ಪ್ರಕರಣ ಖಂಡಿಸಿ ನಗರ್ತಪೇಟೆಯಲ್ಲಿ ಇತ್ತೀಚೆಗೆ ನಡೆದಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಶೋಭಾ ಕರಂದ್ಲಾಜೆ, ‘ವಿಧಾನಸೌಧ ಆವರಣಕ್ಕೆ ಯಾರೋ ಬಂದು ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗುತ್ತಾರೆ. ಮತ್ತೊಬ್ಬ ಹೆಣ್ಣು ಮಕ್ಕಳ ಮೇಲೆ ಆ್ಯಸಿಡ್ ದಾಳಿ ನಡೆಸುತ್ತಾನೆ. ಸ್ವಂತ ಅಂಗಡಿಯಲ್ಲಿ ಹನುಮಾನ್ ಚಾಲೀಸಾ ಸಿ.ಡಿ ಹಾಕಿದ್ದಕ್ಕೆ ಯುವಕನ ಮೇಲೆ ಇನ್ನೊಂದು ಗುಂಪು ಹಲ್ಲೆ ನಡೆಸುತ್ತದೆ. ಯಾರೋ ತಮಿಳುನಾಡಿನಿಂದ ಬಂದು ಬಾಂಬ್ ಇರಿಸಿ ಹೋಗುತ್ತಾರೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ’ ಎಂದು ದೂರಿದ್ದರು. ಈ ಹೇಳಿಕೆಗೆ ಹಲವರು ಆಕ್ಷೇಪ ವ್ಯಕ್ತಪಡಿಸಿದ್ದರು.

ತಮ್ಮ ಹೇಳಿಕೆ ಹಿಂಪಡೆಯುವುದಾಗಿ ತಿಳಿಸಿದ್ದ ಶೋಭಾ, ‘ತಮಿಳು ಸಹೋದರ, ಸಹೋದರಿಯರಿಗೆ ನನ್ನ ಮಾತಿನಿಂದ ನೋವಾಗಿದ್ದರೆ ಕ್ಷಮೆಯಾಚಿಸುತ್ತೇನೆ. ತಮಿಳುನಾಡಿನ ಜನರಲ್ಲಿ ನನ್ನ ಹೃದಯಾಂತರಾಳದಿಂದ ಕ್ಷಮೆ ಕೋರುತ್ತೇನೆ’ ಎಂದಿದ್ದರು. ಇದರ ಬೆನ್ನಲ್ಲೆ ಚುನಾವಣಾಧಿಕಾರಿಯವರು ಪೊಲೀಸರಿಗೆ ದೂರು ನೀಡಿದ್ದಾರೆ.

‘ಕರ್ನಾಟಕ ಮತ್ತು ತಮಿಳುನಾಡು ಜನರ ನಡುವೆ ಶತ್ರುತ್ವ ಮತ್ತು ದ್ವೇಷದ ಭಾವನೆ ಉತ್ತೇಜಿಸುವ ಹೇಳಿಕೆಯನ್ನು ಶೋಭಾ ಅವರು ನೀಡಿದ್ದಾರೆ. ಈ ಹೇಳಿಕೆ ನೀತಿ ಸಂಹಿತೆ ಉಲ್ಲಂಘನೆಯಾಗಿದೆ. ಪ್ರಜಾ ಪ್ರತಿನಿಧಿ ಕಾಯ್ದೆಯ ಸೆಕ್ಷನ್ 123 (3A), 123 (3) ಹಾಗೂ 125 ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪ ಸಾಬೀತಾದರೆ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಲು ನ್ಯಾಯಾಲಯಕ್ಕೆ ಅವಕಾಶವಿದೆ’ ಎಂದು ಪೊಲೀಸರು ಹೇಳಿದರು.

ಕೇಂದ್ರ ಸರ್ಕಾರಕ್ಕೆ ಚುನಾವಣಾ ಆಯೋಗ ಸೂಚನೆ

‘ವಿಕಸಿತ ಭಾರತ’ ಸಂದೇಶ ತಕ್ಷಣ ನಿಲ್ಲಿಸಿ

ನವದೆಹಲಿ (ಪಿಟಿಐ): ‘ವಿಕಸಿತ ಭಾರತ ಸಂಪರ್ಕ’ ಹೆಸರಿನಲ್ಲಿ ವಾಟ್ಸ್‌ಆ್ಯಪ್‌ನಲ್ಲಿ ಸಂದೇಶ ಕಳುಹಿಸುವುದನ್ನು ತಕ್ಷಣದಿಂದಲೇ ನಿಲ್ಲಿಸಬೇಕು ಎಂದು ಚುನಾವಣಾ ಆಯೋಗವು ಗುರುವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಲೋಕಸಭೆ ಚುನಾವಣೆಯ ವೇಳಾಪಟ್ಟಿ ಪ್ರಕಟವಾಗಿ ಮಾದರಿ ನೀತಿ ಸಂಹಿತೆ ಜಾರಿಯಾದ ಬಳಿಕವೂ ವಿಕಸಿತ ಭಾರತಕ್ಕೆ ಸಂಬಂಧಿಸಿದ ಸಂದೇಶಗಳು ವಾಟ್ಸ್‌ಆ್ಯಪ್‌ನಲ್ಲಿ ಬರುತ್ತಿವೆ ಎಂಬ ದೂರುಗಳು ಬಂದ ಕಾರಣ ಆಯೋಗವು, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ ನಿರ್ದೇಶನ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನರನ್ನು ಉದ್ದೇಶಿಸಿ ಬರೆದ ಪತ್ರದೊಂದಿಗೆ ವಿಕಸಿತ ಭಾರತ ಕುರಿತ ಸಂದೇಶವನ್ನು ನೀತಿ ಸಂಹಿತೆ ಜಾರಿಯಾಗುವುದಕ್ಕೆ ಮುನ್ನವೇ (ಮಾರ್ಚ್ 16) ವಾಟ್ಸ್‌ಆ್ಯಪ್‌ನಲ್ಲಿ ಕಳುಹಿಸಲಾಗಿತ್ತು ಎಂದು ಸಚಿವಾಲಯವು ಆಯೋಗಕ್ಕೆ ತಿಳಿಸಿತ್ತು.

‘ನೆಟ್‌ವರ್ಕ್‌ನಲ್ಲಿನ ಇತಿಮಿತಿ ಮತ್ತು ತಾಂತ್ರಿಕ ಸಮಸ್ಯೆಯ ಕಾರಣ ಆ ಸಂದೇಶಗಳು ಕೆಲವರಿಗೆ ವಿಳಂಬವಾಗಿ ತಲುಪಿರಬಹುದು’ ಎಂಬ ಕಾರಣವನ್ನೂ ನೀಡಿತ್ತು.

‘ವಿಕಸಿತ ಭಾರತ’ ಕುರಿತ ಸಂದೇಶಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದ ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್, ನೀತಿ ಸಂಹಿತೆ ಉಲ್ಲಂಘಿಸಿರುವುದಕ್ಕೆ ಕಠಿಣ ಕ್ರಮ ಕೈಗೊಳ್ಳುವಂತೆ ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದವು.

ವಿಶಿಷ್ಟ ಗುರುತು ಸಂಖ್ಯೆ ಸೇರಿ ಪೂರ್ಣ ಮಾಹಿತಿ ಕೊಟ್ಟ ಎಸ್‌ಬಿಐ • ಆಯೋಗದಿಂದ ವೆಬ್‌ಸೈಟ್‌ನಲ್ಲಿ ಪ್ರಕಟ

ಚುನಾವಣಾ ಬಾಂಡ್: ಸಮಗ್ರ ವಿವರ ಬಹಿರಂಗ

ನವದೆಹಲಿ (ಪಿಟಿಐ): ವಿಶಿಷ್ಟ ಗುರುತು ಸಂಖ್ಯೆ ಸೇರಿದಂತೆ ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದ ಸಮಗ್ರ ವಿವರವನ್ನು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಒದಗಿಸಿದ್ದು, ಚುನಾವಣಾ ಆಯೋಗ ಇದನ್ನು ಪ್ರಕಟಿಸಿದೆ.

ಬಾಂಡ್‌ಗಳಿಗೆ ನೀಡಲಾಗಿರುವ ವಿಶಿಷ್ಟ ಗುರುತು ಸಂಖ್ಯೆಯಿಂದ ನಿರ್ದಿಷ್ಟ ಬಾಂಡ್ ಅನ್ನು ಯಾರು ಖರೀದಿಸಿದ್ದಾರೆ ಹಾಗೂ ಅದನ್ನು ಯಾವ ಪಕ್ಷ ನಗದೀಕರಣ ಮಾಡಿಕೊಂಡಿದೆ ಎಂಬುದು ಬಹಿರಂಗವಾಗಲಿದೆ.

ಸುಪ್ರೀಂ ಕೋರ್ಟ್‌ನ ಕಟ್ಟುನಿಟ್ಟಿನ ಸೂಚನೆಯಂತೆ ಸಮಗ್ರ ವಿವರಗಳನ್ನು ನಿಗದಿಪಡಿಸಿದ ಗಡುವಿನ ಒಳಗೆ ಆಯೋಗಕ್ಕೆ ಸಲ್ಲಿಸಲಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ಎಸ್‌ಬಿಐ ಪೂರಕ ಪ್ರಮಾಣ ಪತ್ರವನ್ನು ಗುರುವಾರ ಸಲ್ಲಿಸಿತು.

ಬಾಂಡ್ ಖರೀದಿದಾರರ ಹೆಸರು, ಬಾಂಡ್‌ನ ಮೊತ್ತ, ಅದರ ವಿಶಿಷ್ಟ ಗುರುತು ಸಂಖ್ಯೆ ಹಾಗೂ ಈ ಬಾಂಡ್ ನಗದೀಕರಣ ಮಾಡಿಕೊಂಡಿರುವ ರಾಜಕೀಯ ಪಕ್ಷದ ಹೆಸರು, ನಗದೀಕರಿಸಲಾದ ಬಾಂಡ್‌ನ ವಿಶಿಷ್ಟ ಗುರುತು ಸಂಖ್ಯೆ ಹಾಗೂ ಅದರ ಬ್ಯಾಂಕ್ ಖಾತೆ ಸಂಖ್ಯೆಯ ಕಡೆಯ ನಾಲ್ಕು ಅಂಕಿಗಳನ್ನು ಒದಗಿಸಲಾಗಿದೆ ಎಂದು ಎಸ್‌ಬಿಐ ವಿವರಿಸಿದೆ.

ಎಸ್‌ಬಿಐ ಅಧ್ಯಕ್ಷರು ಪ್ರಮಾಣಪತ್ರದಲ್ಲಿ, ‘ಖಾತೆಗಳು ಮತ್ತು ಸೈಬರ್ ಭದ್ರತೆಯ ಕಾರಣದಿಂದ ರಾಜಕೀಯ ಪಕ್ಷಗಳ ಬ್ಯಾಂಕ್ ಖಾತೆಯ ಪೂರ್ಣ ಸಂಖ್ಯೆ, ಪಕ್ಷಗಳ ಖಾತೆಯ ಕೆವೈಸಿ (ಖಾತೆದಾರರ ವಿವರ) ಮತ್ತು ಬಾಂಡ್ ಖರೀದಿದಾರರ ಕೆವೈಸಿಯನ್ನು ಬಹಿರಂಗಪಡಿಸಿಲ್ಲ’ ಎಂದು ತಿಳಿಸಿದರು.

4ನೇ ಪುಟ ನೋಡಿ

ಯಥಾವತ್ ವಿವರ ಪ್ರಕಟ: ಆಯೋಗ

ಚುನಾವಣಾ ಬಾಂಡ್‌ಗಳ ಖರೀದಿದಾರರು ಮತ್ತು ಅವುಗಳನ್ನು ನಗದೀಕರಣ ಮಾಡಿಕೊಂಡಿರುವ ಪಕ್ಷಗಳ ಸಮಗ್ರ ವಿವರ ಕುರಿತು ಎರಡು ಪ್ರತ್ಯೇಕ ಪಟ್ಟಿಯನ್ನು ಚುನಾವಣಾ ಆಯೋಗ ಗುರುವಾರ ಪ್ರಕಟಿಸಿತು.

ಸುಪ್ರೀಂ ಕೋರ್ಟ್ ನಿಗದಿಪಡಿಸಿದ್ದ ಗಡುವಿನೊಳಗೆ ಎಸ್‌ಬಿಐ ಒದಗಿಸಿದ್ದ ವಿವರಗಳನ್ನು ‘ಯಥಾವತ್’ ಆಗಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಆಯೋಗವು ತಿಳಿಸಿದೆ.

ಫ್ಯೂಚರ್‌ನಿಂದ ಟಿಎಂಸಿಗೆ ₹540 ಕೋಟಿ

ಗರಿಷ್ಠ ಮೊತ್ತ ದೇಣಿಗೆ ನೀಡಿರುವ ಫ್ಯೂಚರ್ ಗೇಮಿಂಗ್ ಆ್ಯಂಡ್ ಹೋಟೆಲ್ ಸರ್ವೀಸಸ್ ಸಂಸ್ಥೆ ಡಿಎಂಕೆ ಅಲ್ಲದೆ, ಇತರೆ ಪ್ರಮುಖ ಪಕ್ಷಗಳಿಗೆ ಬಾಂಡ್‌ಗಳ ಮೂಲಕ ದೇಣಿಗೆ ಒದಗಿಸಿದೆ.

ರಾಜಕೀಯ ಪಕ್ಷಗಳು ಚುನಾವಣಾ ಆಯೋಗಕ್ಕೆ ಒದಗಿಸಿರುವ ಮಾಹಿತಿ ಅನುಸಾರ, ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ₹540 ಕೋಟಿ, ಬಿಜೆಪಿಗೆ ₹50 ಕೋಟಿ, ವೈಎಸ್‌ಆರ್ ಕಾಂಗ್ರೆಸ್‌ಗೆ ₹150 ಕೋಟಿ ದೇಣಿಗೆ ನೀಡಿದೆ.

ಶುಕ್ರವಾರ, ಮಾರ್ಚ್ 22, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 82 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಡ್ಯಾನ್ಸ್, ಫೈಟ್ಸ್‌ಗೆ ಅಪ್ಪುವೇ ಸ್ಫೂರ್ತಿ ಎನ್ನುತ್ತಿದ್ದಾರೆ ಯುವ ರಾಜ್‌ಕುಮಾರ್



ಆಳ-ಅಗಲ
ಬಿಹಾರ ಸೀಟು ಹಂಚಿಕೆ: ಎನ್‌ಡಿಎ ಸುಸೂತ್ರ, 'ಇಂಡಿಯಾ'ಕ್ಕಿಲ್ಲ ತಂತ್ರ

ಆಂಧ್ರ: ಬಿಜೆಪಿ ಮೂಲ, ವಲಸಿಗರ ತಿಕ್ಕಾಟ 9

'ಕೇಂದ್ರದ ನಡೆ; ಪ್ರಜಾತಂತ್ರಕ್ಕೆ ಪೆಟ್ಟು' 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,641 ▲	22,011 ▲	₹68,820 (ಬೆಂಗಳೂರು) ▲	₹77,300 (ಬೆಂಗಳೂರು) ▲	82.13 ▲

ಹುದ್ದೆಯಲ್ಲಿದ್ದಾಗಲೇ ಜೈಲುಪಾಲಾದ ಮೊದಲ ಮುಖ್ಯಮಂತ್ರಿ: ಇ.ಡಿಯಿಂದ ಕ್ರಮ

ದೆಹಲಿ ಸಿ.ಎಂ ಕೇಜ್ರಿವಾಲ್ ಬಂಧನ



ನವದೆಹಲಿ(ಪಿಟಿಐ): ದೆಹಲಿ ಮುಖ್ಯಮಂತ್ರಿ ಹಾಗೂ ಆಮ್ ಆದ್ಮಿ ಪಕ್ಷದ (ಎಎಪಿ) ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರನ್ನು ದೆಹಲಿ ಅಬಕಾರಿ ನೀತಿ ಹಗರಣದ ಜೊತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಆರೋಪದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಗುರುವಾರ ರಾತ್ರಿ ಬಂಧಿಸಿದ್ದಾರೆ.

ಕೇಜ್ರಿವಾಲ್ ಅವರು, ಸ್ವಾತಂತ್ರ್ಯ ನಂತರದಲ್ಲಿ ಬಂಧನಕ್ಕೆ ಒಳಗಾದ ಮೊದಲ ಹಾಲಿ ಮುಖ್ಯಮಂತ್ರಿ ಎನಿಸಿದ್ದಾರೆ.

ಈ ಪ್ರಕರಣದಲ್ಲಿ, ತಮ್ಮ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳದಂತೆ ಸೂಚಿಸಬೇಕು ಎಂದು ಕೋರಿ ಕೇಜ್ರಿವಾಲ್ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ದೆಹಲಿ ಹೈಕೋರ್ಟ್, ಈ ಹಂತದಲ್ಲಿ ಬಲವಂತದ ಕ್ರಮದಿಂದ ರಕ್ಷಣೆ ನೀಡಲು ಗುರುವಾರ ನಿರಾಕರಿಸಿತು. ಇದರ ಬೆನ್ನಲ್ಲೇ ಅವರನ್ನು ಇ.ಡಿ ಬಂಧಿಸಿತು. ಹೈಕೋರ್ಟ್ ಆದೇಶ ಪ್ರಶ್ನಿಸಿದ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಗುರುವಾರ ರಾತ್ರಿ ವಿಶೇಷ ಪೀಠವನ್ನು ರಚಿಸಲಿಲ್ಲ ಎಂದು ಮೂಲಗಳು ತಿಳಿಸಿವೆ.

'ಕೇಜ್ರಿವಾಲ್ ಅವರನ್ನು ಶುಕ್ರವಾರ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದು. ಹೆಚ್ಚಿನ ವಿಚಾರಣೆ ನಡೆಸುವುದಕ್ಕಾಗಿ ಅವರನ್ನು ವಶಕ್ಕೆ ನೀಡುವಂತೆ ಕೋರಲಾಗುವುದು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯವು ಕೇಜ್ರಿವಾಲ್ ಅವರಿಗೆ ಒಂಬತ್ತು ಬಾರಿ ಸಮನ್ಸ್ ಜಾರಿಗೊಳಿಸಿತ್ತು.

ತೀಕ್ಷ್ಣ ಪ್ರತಿಕ್ರಿಯೆ: ಲೋಕಸಭಾ ಚುನಾವಣೆಯ ಪ್ರಚಾರ ಕಾರ್ಯ ಆರಂಭಿಸಿರುವ ಈ ಹೊತ್ತಿನಲ್ಲಿ, ಪಕ್ಷದ ಸಂಚಾಲಕರೂ ಆಗಿರುವ ಕೇಜ್ರಿವಾಲ್ ವಿರುದ್ಧ ಇ.ಡಿ ಕೈಗೊಂಡಿರುವ ಕ್ರಮಕ್ಕೆ ಎಎಪಿ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ.

ಆಗ್ರಹ: ಕೇಜ್ರಿವಾಲ್ ತಮ್ಮ ಹುದ್ದೆಗೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿಯ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚದೇವ್ ಆಗ್ರಹಿಸಿದ್ದಾರೆ.



ಅರವಿಂದ ಕೇಜ್ರಿವಾಲ್ ಅವರನ್ನು ಇ.ಡಿ ಅಧಿಕಾರಿಗಳು ಬಂಧಿಸಿದ್ದನ್ನು ವಿರೋಧಿಸಿ ಆಮ್ ಆದ್ಮಿ ಪಕ್ಷದ ಬೆಂಬಲಿಗರು ನವದೆಹಲಿಯಲ್ಲಿ ಗುರುವಾರ ಕೇಜ್ರಿವಾಲ್ ನಿವಾಸದ ಮುಂದೆ ಪ್ರತಿಭಟಿಸಿದರು —ಪಿಟಿಐ ಚಿತ್ರ

ದಿನದ ಬೆಳವಣಿಗೆ

- ತಮ್ಮ ವಿರುದ್ಧ ಬಲವಂತದ ಕ್ರಮ ಕೈಗೊಳ್ಳುವುದರಿಂದ ರಕ್ಷಣೆ ನೀಡುವಂತೆ ಕೋರಿ ಕೇಜ್ರಿವಾಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆ
- ಮಧ್ಯಂತರ ರಕ್ಷಣೆ ನೀಡಲು ನಿರಾಕರಿಸಿ ದೆಹಲಿ ಹೈಕೋರ್ಟ್‌ನಿಂದ ಆದೇಶ. ವಿಚಾರಣೆ ಏ.22ಕ್ಕೆ ಮುಂದೂಡಿಕೆ
- ಕೇಜ್ರಿವಾಲ್ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಇ.ಡಿಗೆ ಹೈಕೋರ್ಟ್ ಸೂಚನೆ
- ಹೈಕೋರ್ಟ್ ಆದೇಶದ ಬೆನ್ನಲ್ಲೇ 6 ಅಧಿಕಾರಿಗಳ ಇ.ಡಿ ತಂಡ ಕೇಜ್ರಿವಾಲ್ ನಿವಾಸಕ್ಕೆ ಭೇಟಿ, ಶೋಧ
- ಹೈಕೋರ್ಟ್ ಆದೇಶ ಪ್ರಶ್ನಿಸಿ ಕೇಜ್ರಿವಾಲ್ ಅವರಿಂದ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಕೆ
- ಅರವಿಂದ ಕೇಜ್ರಿವಾಲ್ ನಿವಾಸದ ಬಳಿ ಎಎಪಿ ಕಾರ್ಯಕರ್ತರು, ಬೆಂಬಲಿಗರಿಂದ ಪ್ರತಿಭಟನೆ
- ಮುಂಜಾಗ್ರತಾ ಕ್ರಮವಾಗಿ ಕೇಜ್ರಿವಾಲ್ ನಿವಾಸದ ಬಳಿ ಬಿಗಿ ಬಂದೋಬಸ್ತ್. ದೆಹಲಿ ಪೊಲೀಸರು, ಆರ್‌ಎಎಫ್ ಸಿಬ್ಬಂದಿ ನಿಯೋಜನೆ

> ಅರವಿಂದ ಕೇಜ್ರಿವಾಲ್ ಅವರು ದೆಹಲಿ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದು, ಜೈಲಿನಿಂದಲೇ ತಮ್ಮ ಕರ್ತವ್ಯ ನಿಭಾಯಿಸಲಿದ್ದಾರೆ
> **ಆತಿಶಿ ಮರ್ಲೆನಾ,** ಸಚಿವೆ

ಇನ್ನಷ್ಟು ಸುದ್ದಿಗಳು 3B

ಚಿನಕುರಳಿ

ಪ್ರಕಾಶ್ ಶೆಟ್ಟಿ



ರೈಲು ಹರಿದು ಛಿದ್ರಗೊಂಡ ದೇಹ : ಚಂದ್ರಾಲೇಔಟ್ ಪೊಲೀಸರಿಂದ ತನಿಖೆ

ಮೆಟ್ರೊ ಹಳಿಗೆ ಹಾರಿ ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ತಿಗುಪ್ಪೆ ನಿಲ್ದಾಣದಲ್ಲಿ ಚಲಿಸುತ್ತಿದ್ದ ರೈಲಿನ ಮುಂದೆ ಹಳಿಗೆ ಹಾರಿ ಧ್ರುವ್ ಠಕ್ಕರ್ (19) ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ಚಂದ್ರಾ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮುಂಬೈನ ಧ್ರುವ್, ನಗರದಲ್ಲಿರುವ ರಾಷ್ಟ್ರೀಯ ಕಾನೂನು ಶಾಲೆಯಲ್ಲಿ ಮೊದಲ ವರ್ಷದ ವಿದ್ಯಾರ್ಥಿಯಾಗಿದ್ದು, ವಸತಿನಿಲಯದಲ್ಲಿ ನೆಲೆಸಿದ್ದರು. ಅವರ ತಂದೆ-ತಾಯಿ ಮುಂಬೈನಲ್ಲಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಅತ್ತಿಗುಪ್ಪೆ ಮೆಟ್ರೊ ನಿಲ್ದಾಣಕ್ಕೆ ಗುರುವಾರ ಮಧ್ಯಾಹ್ನ ಬಂದಿದ್ದ ಧ್ರುವ್, ಪ್ಲಾಟ್‌ಫಾರ್ಮ್‌ನಲ್ಲಿ ನಿಂತಿದ್ದರು. 2.10 ಗಂಟೆ ಸುಮಾರಿಗೆ ರೈಲು ನಿಲ್ದಾಣದತ್ತ ಬಂದಿತ್ತು. ಮೆಟ್ರೊ ರೈಲು ನಿಲ್ದಾಣ ತಲುಪಲು ಕೆಲ ಮೀಟರ್ ಇರುವಾಗಲೇ ಧ್ರುವ್, ಹೈ ವೋಲ್ಟೇಜ್ ವಿದ್ಯುತ್ ಹರಿಯುವ ಹಳಿಯ ಮೇಲೆ ಹಾರಿದ್ದರು. ಧ್ರುವ್ ಅವರ ಮೇಲೆ ರೈಲು ಹರಿದಿತ್ತು.

ಧ್ರುವ್ ಅವರ ದೇಹ ಛಿದ್ರವಾಗಿತ್ತು. ಮೆಟ್ರೊ ಸಿಬ್ಬಂದಿ ಹಾಗೂ ಪೊಲೀಸರು, ಹಳಿ ಮೇಲಿದ್ದ ಮೃತದೇಹದ ಭಾಗಗಳನ್ನು ಸಂಗ್ರಹಿಸಿ ಆಸ್ಪತ್ರೆಗೆ ಸಾಗಿಸಿದರು.

'ಇದೊಂದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದ್ದು, ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಬಿಎಂಆರ್‌ಸಿಎಲ್ ಅಧಿಕಾರಿಗಳು, ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು.

ಈ ದುರ್ಘಟನೆಯಿಂದಾಗಿ ಮೆಟ್ರೊ ರೈಲು ಸಂಚಾರ ವ್ಯತ್ಯಯಗೊಂಡಿತು. ಈ ಮಾರ್ಗದಲ್ಲಿ ಮಾಗಡಿಯಿಂದ ಚಲ್ಲಘಟ್ಟವರೆಗೆ ಸುಮಾರು 2 ತಾಸು ರೈಲು ಸಂಚಾರ ಸ್ಥಗಿತಗೊಂಡಿತ್ತು.



ಧ್ರುವ್ ಠಕ್ಕರ್

ಮೆಟ್ರೊ ರೈಲು ಪ್ರಯಾಣಿಕರ ಬಹುದಿನಗಳ ಆಗ್ರಹ • ಸುರಕ್ಷತೆಗಾಗಿ ಬೇಕಿದೆ ಸ್ವಯಂಚಾಲಿತ ತಂತ್ರಜ್ಞಾನ

‘ಪಿಎಸ್‌ಡಿ’ ಅಳವಡಿಕೆ ಆಗ್ರಹಕ್ಕೆ ಮರುಜೀವ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಅತ್ತಿಗುಪ್ಪೆ ನಿಲ್ದಾಣದಲ್ಲಿ ಗುರುವಾರ ಯುವಕನೊಬ್ಬ ಹಳಿಗೆ ಹಾರಿ ಜೀವ ಕಳೆದುಕೊಂಡ ದುರ್ಘಟನೆಯ ಬೆನ್ನಲ್ಲೇ ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ಮೆಟ್ರೊ ನಿಲ್ದಾಣಗಳಲ್ಲಿ ಪ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್ (ಪಿಎಸ್‌ಡಿ) ವ್ಯವಸ್ಥೆ ಅಳವಡಿಸಬೇಕು ಎಂಬ ಒತ್ತಾಯಕ್ಕೆ ಮತ್ತೆ ಜೀವ ಬಂದಿದೆ.

ಇದೇ ವರ್ಷ ಜನವರಿಯಲ್ಲಿ ಇಂದಿರಾನಗರ ಮೆಟ್ರೊ ನಿಲ್ದಾಣದಲ್ಲಿ ಕೆಳಗೆ ಬಿದ್ದ ಮೊಬೈಲ್ ಎತ್ತಿಕೊಳ್ಳಲು ಮಹಿಳೆಯೊಬ್ಬರು ಹಳಿಗೆ ಹಾರಿದ್ದರು. ಇದಾದ ಮೂರೇ ದಿನಗಳಲ್ಲಿ ಜಾಲಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಕೇರಳದ ಯುವಕನೊಬ್ಬ ರೈಲು ಬರುವಾಗ ಹಳಿ ಮೇಲೆ ಹಾರಿದ್ದ. ಎರಡೂ ಘಟನೆಗಳಲ್ಲಿ ‘ನಮ್ಮ ಮೆಟ್ರೊ’ ಸಿಬ್ಬಂದಿಯ ಸಮಯಪ್ರಜ್ಞೆಯಿಂದ ಇಬ್ಬರೂ ಪ್ರಾಣಾಪಾಯದಿಂದ ಪಾರಾಗಿದ್ದರು.

ಈ ಘಟನೆಗಳು ಸಂಭವಿಸಿದಾಗ ‘ಮೆಟ್ರೊ ನಿಲ್ದಾಣಗಳಲ್ಲಿ ಪಿಎಸ್‌ಡಿ ಅಳವಡಿಸಬೇಕು’ ಎಂಬ ಕೂಗು ಎದ್ದಿತ್ತು. ಗುರುವಾರ ಅತ್ತಿಗುಪ್ಪೆಯಲ್ಲಿ ನಡೆದ ಘಟನೆ ನಂತರ ಮತ್ತೆ ‘ಪಿಎಸ್‌ಡಿ’ ಅಳವಡಿಕೆಯ ಚರ್ಚೆ ಆರಂಭವಾಗಿದೆ.

ಪಿಎಸ್‌ಡಿಗೆ ಒತ್ತಾಯ: ‘ಹಳಿಗೆ ಯಾರೂ ನುಗ್ಗದಂತೆ ಪ್ಲಾಟ್‌ಫಾರ್ಮ್‌ಗಳಲ್ಲಿ ಗ್ಲಾಸ್ ಡೋರ್‌ಗಳು ಇರುತ್ತವೆ. ರೈಲು ಬಂದು ನಿಂತ ಮೇಲೆ ಈ ಡೋರ್‌ಗಳು ಸ್ವಯಂಚಾಲಿತವಾಗಿ ತೆರೆದುಕೊಳ್ಳುತ್ತವೆ. ಪ್ರಯಾಣಿಕರು ಇಳಿದು ಹತ್ತುವ ಪ್ರಕ್ರಿಯೆ ಮುಗಿದು ರೈಲಿನ ಬಾಗಿಲು ಮುಚ್ಚಿಕೊಳ್ಳುವ ಹೊತ್ತಿಗೆ ಗ್ಲಾಸ್ ಡೋರ್‌ಗಳೂ ಮುಚ್ಚಿಕೊಳ್ಳುತ್ತವೆ. ಪ್ಲಾಟ್‌ಫಾರಂ ಸ್ಕ್ರೀನ್ ಡೋರ್ ಎಂದು ಕರೆಯುವ ಈ ತಂತ್ರಜ್ಞಾನವು ಜಪಾನ್ ಸಹಿತ ಹಲವು ದೇಶಗಳಲ್ಲಿದೆ. ಚೆನ್ನೈ, ದೆಹಲಿ ಮತ್ತು ಮುಂಬೈನ ಕೆಲವು ಮೆಟ್ರೊ ನಿಲ್ದಾಣಗಳಲ್ಲಿ ಈ ತಂತ್ರಜ್ಞಾನ ಅಳವಡಿಸಲಾಗಿದೆ. ‘ನಮ್ಮ ಮೆಟ್ರೊ’ದಲ್ಲೂ ಈ ತಂತ್ರಜ್ಞಾನ ಬಳಸಬೇಕು’ ಎಂದು ಪ್ರಯಾಣಿಕ, ವಕೀಲ ರಘು ಕುಮಾರ್ ಆಗ್ರಹಿಸಿದರು.

‘ಪಿಎಸ್‌ಡಿ ತಂತ್ರಜ್ಞಾನವನ್ನು ಆಯ್ದ ಮೆಟ್ರೊ ನಿಲ್ದಾಣಗಳಿಗೆ ಅಳವಡಿಸುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಎಲ್ಲ ನಿಲ್ದಾಣಗಳಲ್ಲೂ ಇದನ್ನು ಅನುಷ್ಠಾನಗೊಳಿಸಬೇಕು’ ಎಂದು ಸಿಟಿಜನ್ಸ್ ಫಾರ್ ಸಿಟಿಜನ್ಸ್ ಸಂಸ್ಥಾಪಕ ರಾಜಕುಮಾರ್ ದುಗರ್ ಒತ್ತಾಯಿಸಿದರು.



ದೆಹಲಿಯ ಮೆಟ್ರೊ ನಿಲ್ದಾಣದಲ್ಲಿ ಇರುವ ಪ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್ ವ್ಯವಸ್ಥೆ

ಹೊಸದಾಗಿ ನಿರ್ಮಾಣವಾಗುವ ಭೂಗತ ನಿಲ್ದಾಣಗಳಲ್ಲಿ ಪಿಎಸ್‌ಡಿ

ನಿರ್ಮಾಣಗೊಳ್ಳುತ್ತಿರುವ ‘ನಮ್ಮ ಮೆಟ್ರೊ’ ಹಳದಿ ಮಾರ್ಗದ ಭೂಗತ ನಿಲ್ದಾಣಗಳಲ್ಲಿ ಪಿಎಸ್‌ಡಿ ಅಳವಡಿಸಲು ಯೋಜನೆ ರೂಪಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ.ಮಹೇಶ್ವರ ರಾವ್ ‘ಪ್ರಜಾವಾಣಿ’ಗೆ ತಿಳಿಸಿದರು.

ಹಳದಿ ಮಾರ್ಗದಲ್ಲಿ ಎಲೆಕ್ಟ್ರಾನಿಕ್ ಸಿಟಿ ಬಳಿಯ ಕೋನಪ್ಪನ ಅಗ್ರಹಾರ ಬಳಿ ನಿರ್ಮಾಣಗೊಳ್ಳುತ್ತಿರುವ ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್ ಅಳವಡಿಸಲು ಮೊದಲು ನಿರ್ಧರಿಸಲಾಗಿತ್ತು. ಬಳಿಕ ಎಲ್ಲ ಭೂಗತ ನಿಲ್ದಾಣಗಳಿಗೆ ವಿಸ್ತರಿಸುವ ಚಿಂತನೆ ನಡೆಸಲಾಗಿದೆ ಎಂದು ವಿವರಿಸಿದರು.

ಈಗಾಗಲೇ ಕಾರ್ಯಾಚರಣೆಯಲ್ಲಿ ಇರುವ ನೇರಳೆ ಮತ್ತು ಹಸಿರು ಮಾರ್ಗಗಳಲ್ಲಿ ಪಿಎಸ್‌ಡಿ ಅಳವಡಿಸುವುದು ಕಷ್ಟ. ಆದರೂ ಈ ಬಗ್ಗೆಯೂ ಮುಂದೆ ಚರ್ಚೆ ನಡೆಸಲಾಗುವುದು ಎಂದು ಮಾಹಿತಿ ನೀಡಿದರು.

2ನೇ ಪ್ರಕರಣ

ಅತ್ತಿಗುಪ್ಪೆಯಲ್ಲಿ ಗುರುವಾರ ವಿದ್ಯಾರ್ಥಿ ಧ್ರುವ್ ಠಕ್ಕರ್ (19) ಮೆಟ್ರೊ ಹಳಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದು, ಇದು ಮೆಟ್ರೊ ಹಳಿಗೆ ಹಾರಿ ಜೀವ ಕಳೆದುಕೊಂಡ ಎರಡನೇ ಪ್ರಕರಣವಾಗಿದೆ.

2012ರಲ್ಲಿ ಸೇಂಟ್ ಜೋಸೆಫ್ ಪಿಯು ಕಾಲೇಜಿನ ವಿದ್ಯಾರ್ಥಿ ವಿಷ್ಣು ಶರಣ್ (17) ಎಂ.ಜಿ. ರಸ್ತೆ ಮೆಟ್ರೊ ನಿಲ್ದಾಣದಲ್ಲಿ ರೈಲಿನಡಿಗೆ ಹಾರಿ ಜೀವ ಕಳೆದುಕೊಂಡಿದ್ದ. ಆಗ ‘ನಮ್ಮ ಮೆಟ್ರೊ’ ನೇರಳೆ ಮಾರ್ಗದ ಸೇವೆ ಆರಂಭವಾಗಿ ನಾಲ್ಕೂವರೆ ತಿಂಗಳಷ್ಟೇ ಆಗಿತ್ತು.

ಸುದ್ದಿ 2 ನಿಮಿಷ

ಬೆಟ್ಟ ಹತ್ತಲು ಯತ್ನ: ಜ್ಯೋತಿರಾಜ್ ವಶಕ್ಕೆ

ರಾಮನಗರ: ಅನುಮತಿ ಪಡೆಯದೆ ತಾಲ್ಲೂಕಿನ ಹಂದಿಗುಂದಿ ಬೆಟ್ಟವನ್ನು ಏಕಾಂಗಿಯಾಗಿ ಏರಲೆತ್ನಿಸಿದ ಸಾಹಸಿಗ ಜ್ಯೋತಿರಾಜ್ (ಕೋತಿ ರಾಜ್) ಅವರನ್ನು ಅರಣ್ಯ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಬೆಟ್ಟ ಹತ್ತಲು ಜ್ಯೋತಿರಾಜ್ ಐದಾರು ದಿನಗಳಿಂದ ಅನುಮತಿ ಕೋರಿದ್ದರು. ‘ಸುರಕ್ಷತೆಯ ದೃಷ್ಟಿಯಿಂದ ಪೊಲೀಸ್ ಮತ್ತು ಅಗ್ನಿಶಾಮಕ ಇಲಾಖೆಯ ಅನುಮತಿ ಪಡೆಯಿರಿ. ಆಮೇಲೆ ನಾವು ಕೊಡುತ್ತೇವೆ ಎಂದು ಸೂಚಿಸಿದ್ದೆವು’ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

‘ನಮ್ಮ ಸೂಚನೆ ಲೆಕ್ಕಿಸದೆ ಜ್ಯೋತಿರಾಜ್ ಬೆಳಿಗ್ಗೆ ಬೆಟ್ಟ ಹತ್ತುತ್ತಿರುವುದು ಗಮನಕ್ಕೆ ಬಂತು. ಹೀಗಾಗಿ ವಶಕ್ಕೆ ಪಡೆಯಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೂತನ ನ್ಯಾಯಮೂರ್ತಿಯಾಗಿ ಅನು ಶಿವರಾಮನ್ ಪ್ರಮಾಣ



ಬೆಂಗಳೂರು: ಕೇರಳ ಹೈಕೋರ್ಟ್‌ನಿಂದ ಕರ್ನಾಟಕ ಹೈಕೋರ್ಟ್‌ಗೆ ವರ್ಗಾವಣೆಯಾಗಿರುವ ನ್ಯಾಯಮೂರ್ತಿ ಅನು ಶಿವರಾಮನ್ ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು. ರಾಜಭವನದ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್, ನ್ಯಾಯಮೂರ್ತಿ ಅನು ಶಿವರಾಮನ್ ಅವರಿಗೆ ಪ್ರಮಾಣವಚನ ಬೋಧಿಸಿದರು.

ಈ ಸಂದರ್ಭದಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ರಜನೀಶ್ ಗೋಯಲ್ ಉಪಸ್ಥಿತರಿದ್ದರು.

ಅನು ಶಿವರಾಮನ್ ಅವರು 1991ರಲ್ಲಿ ಎರ್ನಾಕುಲಂ ಸರ್ಕಾರಿ ಕಾನೂನು ಕಾಲೇಜಿನಿಂದ ಕಾನೂನು ಪದವಿ ಪಡೆದಿದ್ದಾರೆ. 1991ರ ಮಾರ್ಚ್ 9ರಂದು ಸನ್ನದು ನೋಂದಣಿ ಮಾಡಿಸಿ ವೃತ್ತಿ ಆರಂಭಿಸಿದ್ದರು. 2015ರ ಏಪ್ರಿಲ್ 10ರಂದು ಕೇರಳ ಹೈಕೋರ್ಟ್ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡು, 2017ರ ಏಪ್ರಿಲ್ 5ರಂದು ಕಾಯಂಗೊಂಡಿದ್ದರು. ಸದ್ಯ ಕರ್ನಾಟಕ ಹೈಕೋರ್ಟ್ ಹಾಲ್-2ರಲ್ಲಿ ಕಲಾಪ ನಡೆಸಲಿದ್ದಾರೆ.

ಮಗನಿಗೆ ಬೈಕ್; ತಂದೆಗೆ ದಂಡ

ಹನೂರು: ಬಾಲಕನಿಗೆ ಸವಾರಿಗೆ ಬೈಕ್ ಕೊಟ್ಟಿದ್ದ ತಂದೆಗೆ ಇಲ್ಲಿನ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್ ಸಿ ಕೋರ್ಟ್‌ನ ನ್ಯಾಯಾಧೀಶರು ಗುರುವಾರ ₹25 ಸಾವಿರ ದಂಡ ವಿಧಿಸಿ ಆದೇಶಿಸಿದ್ದಾರೆ.

ಒಬ್ಬ ವಿದ್ಯಾರ್ಥಿನಿ; ಆರು ಪರೀಕ್ಷಾ ಸಿಬ್ಬಂದಿ!

ಪ್ರಜಾವಾಣಿ ವಾರ್ತೆ

ಕುಣಿಗಲ್: ಪಟ್ಟಣದ ಮಹಾತ್ಮ ಗಾಂಧಿ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಗುರುವಾರ ನಡೆದ ಸಂಸ್ಕೃತ ಪರೀಕ್ಷೆಯನ್ನು ಒಬ್ಬಳೇ ವಿದ್ಯಾರ್ಥಿನಿ ಬರೆದಳು. ಕೇಂದ್ರದಲ್ಲಿ ಮೇಲ್ವಿಚಾರಕರು ಸೇರಿದಂತೆ ಆರು ಜನ ಪರೀಕ್ಷಾ ಸಿಬ್ಬಂದಿ ನಿಯೋಜಿಸಲಾಗಿತ್ತು.

ಪಿಯು ದ್ವಿತೀಯ ವರ್ಷದ ವಾರ್ಷಿಕ ಪರೀಕ್ಷೆ ಕೊನೆಯ ದಿನವಾದ ಗುರುವಾರ ಹಿಂದಿ, ಸಂಸ್ಕೃತ ಸೇರಿ ಭಾಷಾ ವಿಷಯಗಳ ಪರೀಕ್ಷೆ ಇತ್ತು. ಬಿಜಿಎಸ್ ಕಾಲೇಜಿನ ಮಾನಸ ಪ್ರಥಮ ಭಾಷೆ ಸಂಸ್ಕೃತ ಪರೀಕ್ಷೆ ಬರೆದಳು.

ಮಹಾತ್ಮ ಗಾಂಧಿ ಪದವಿ ಪೂರ್ವ ಕಾಲೇಜಿನ 26 ವಿದ್ಯಾರ್ಥಿಗಳು ಪಟ್ಟಣದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಕೇಂದ್ರದಲ್ಲಿ ಸಂಸ್ಕೃತ ಭಾಷೆ ಪರೀಕ್ಷೆ ಬರೆದರು.

ಸಂಚಾರ ಸ್ಥಗಿತ; ವಾಹನ ದಟ್ಟಣೆ



ವಿದ್ಯಾರ್ಥಿ ಆತ್ಮಹತ್ಯೆ ಹಿನ್ನೆಲೆಯಲ್ಲಿ ರೈಲು ಸಂಚಾರ ಸ್ಥಗಿತಗೊಳಿಸಿದ್ದರಿಂದ ಅತ್ತಿಗುಪ್ಪೆ ಮೆಟ್ರೊ ನಿಲ್ದಾಣದ ಮುಂದೆ ಜನಸಂದಣಿ ಉಂಟಾಯಿತು –ಪ್ರಜಾವಾಣಿ ಚಿತ್ರ

ಅತ್ತಿಗುಪ್ಪೆಯಲ್ಲಿ ವಿದ್ಯಾರ್ಥಿ ಆತ್ಮಹತ್ಯೆಕೊಂಡಿದ್ದರಿಂದ ಮೆಟ್ರೊ ರೈಲು ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು. ಇದರಿಂದ ದೀಪಾಂಜಲಿ ನಗರದಿಂದ ವಿಜಯನಗರಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ಒಮ್ಮೆಲೇ ವಾಹನದಟ್ಟಣೆ ಉಂಟಾಯಿತು.

ಮಧ್ಯಾಹ್ನ 2.10 ರಿಂದ 4 ಗಂಟೆಯವರೆಗೆ ವೈಟ್‌ಫೀಲ್ಡ್‌ನಿಂದ ಮಾಗಡಿ ರಸ್ತೆ ಮಾರ್ಗದಲ್ಲಿ (ನೇರಳೆ) ಮಾತ್ರ ರೈಲುಗಳು ಸಂಚರಿಸಿದವು. ಮಾಗಡಿ ರಸ್ತೆಯಿಂದ ಚಲ್ಲಘಟ್ಟದವರೆಗೆ ಈ ಸಮಯದಲ್ಲಿ ಮೆಟ್ರೊ ರೈಲು ಸ್ಥಗಿತಗೊಂಡಿದ್ದರಿಂದ ಪ್ರಯಾಣಿಕರು ಅನಿವಾರ್ಯವಾಗಿ ಪರ್ಯಾಯ ವಾಹನಗಳನ್ನು ಅವಲಂಬಿಸಬೇಕಾಯಿತು.

ಮಾಜಿ ಸಂಸದ ಆಸ್ಪತ್ರೆಗೆ ದಾಖಲು

ಶಿರಾ: ಚಿತ್ರದುರ್ಗದ ಮಾಜಿ ಸಂಸದ ಸಿ.ಪಿ.ಮೂಡಲಗಿರಿಯಪ್ಪ (83) ಬುಧವಾರ ತೀವ್ರ ಅನಾರೋಗ್ಯದಿಂದಾಗಿ ಬೆಂಗಳೂರಿನ ಆಸ್ಪತ್ರೆಗೆ ದಾಖಲಾಗಿದ್ದಾರೆ. ಉಸಿರಾಟದ ತೊಂದರೆಯಿಂದ ಬಳಲುತ್ತಿರುವ ಅವರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಶಿರಾ ತಾಲ್ಲೂಕಿನ ಚಿರತಹಳ್ಳಿ ಗ್ರಾಮದ ಸಿ.ಪಿ.ಮೂಡಲಗಿರಿಯಪ್ಪ ಮೂರು ಬಾರಿ ಚಿತ್ರದುರ್ಗ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದರು. ಒಂದು ಬಾರಿ ಶಿರಾ ಕ್ಷೇತ್ರದಿಂದ ವಿಧಾನಸಭೆ ಪ್ರವೇಶಿಸಿದ್ದರು. ಶಿರಾ ಮಾಜಿ ಶಾಸಕ ಡಾ.ಸಿ.ಎಂ.ರಾಜೇಶ್ ಗೌಡ ಇವರ ಪುತ್ರ.

ಭ್ರೂಣಹತ್ಯೆ ಪ್ರಕರಣ ವರದಿ: ಅಧಿಕಾರಿಗಳ ಕಿತ್ತಾಟ


ವರದಿ ಸಲ್ಲಿಸದಂತೆ ಕಿರುಕುಳ: ಡಿಎಚ್‌ಒ ವಿರುದ್ಧ ಆರೋಗ್ಯ ಇಲಾಖೆ ಆಯುಕ್ತಾಲಯಕ್ಕೆ ದೂರು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಹೊಸಕೋಟೆ ಹಾಗೂ ನೆಲಮಂಗಲದಲ್ಲಿ ನಡೆದ ಭ್ರೂಣ ಹತ್ಯೆ, ಕಾನೂನುಬಾಹಿರ ಗರ್ಭಪಾತ ಪ್ರಕರಣದ ವರದಿ ಸಲ್ಲಿಸದಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ (ಡಿಎಚ್‌ಒ) ಡಾ.ಸುನೀಲ್ ಕುಮಾರ್ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಸ್.ಆರ್. ಮಂಜುನಾಥ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಆಯುಕ್ತಾಲಯಕ್ಕೆ ಬುಧವಾರ ದೂರು ಸಲ್ಲಿಸಿದ್ದಾರೆ.



ಡಾ.ಮಂಜುನಾಥ್



ಸುನೀಲ್‌ಕುಮಾರ್

‘ಹೊಸಕೋಟೆಯ ತಿರುಮಲ ಶೆಟ್ಟಿಹಳ್ಳಿಯ ಎಸ್‌ಪಿಜಿ ಆಸ್ಪತ್ರೆಯಲ್ಲಿ ನಡೆದ ಭ್ರೂಣ ಹತ್ಯೆ ಪ್ರಕರಣ ಹಾಗೂ ನೆಲಮಂಗಲದ ಆಸರೆ ಆಸ್ಪತ್ರೆಯಲ್ಲಿ ಕಾನೂನುಬಾಹಿರವಾಗಿ 74 ಗರ್ಭಪಾತ ಮಾಡಿದ ಪ್ರಕರಣದ ವರದಿಯನ್ನು ಡಿಎಚ್‌ಒಗೆ ಮೌಖಿಕವಾಗಿ ತಿಳಿಸಿದೆ. ಆಗ ಅವರು, ಲಿಖಿತ ವರದಿ ಸಲ್ಲಿಸದಂತೆ ತಾಕೀತು ಮಾಡಿದರು. ಅಲ್ಲದೇ, ವರದಿ ಸಲ್ಲಿಸಿದರೆ ಸಮಸ್ಯೆ ಎದುರಿಸಬೇಕಾದಿತು ಎಂದು ಬೆದರಿಕೆ ಹಾಕಿದರು’ ಎಂದು ಡಾ. ಮಂಜುನಾಥ್ ಆರೋಪಿಸಿದ್ದಾರೆ.

‘ವರದಿ ಸಲ್ಲಿಸದಂತೆ ಪ್ರತಿಕೂಲ ಸನ್ನಿವೇಶ ಸೃಷ್ಟಿಸಲು ಪದೇ ಪದೇ ನೋಟಿಸ್ ನೀಡಿ ಕಿರುಕುಳ ನೀಡಿದರು. ಒತ್ತಡ ಲೆಕ್ಕಿಸದೆ ಮಾರ್ಚ್ 18ರಂದು ಡಿಎಚ್‌ಒ ಕಚೇರಿ ಟಪಾಲಿಗೆ ಲಿಖಿತ ವರದಿ ಸಲ್ಲಿಸಿದ್ದೇನೆ. ನನ್ನ ಪ್ರಾಣಕ್ಕೆ ಏನಾದರೂ ತೊಂದರೆಯಾದರೇ ಅದಕ್ಕೆ ಡಿಎಚ್‌ಒ ಡಾ.ಸುನೀಲ್ ಕುಮಾರ್ ಕಾರಣ’ ಎಂದು ಆಯುಕ್ತಾಲಯಕ್ಕೆ ಸಲ್ಲಿಸಿದ ದೂರಿನಲ್ಲಿ ತಿಳಿಸಿದ್ದಾರೆ.

ಸುಧಾ ಓದಿರಿ



ಹೋಳಿ ಹಬ್ಬಕ್ಕೆ ಸಿದ್ಧತೆ

ಹೋಳಿಹಬ್ಬದ ಆಚರಣೆಗಾಗಿ ಬಸವನಗುಡಿಯ ಮಳಿಗೆಯೊಂದರಲ್ಲಿ ಬಣ್ಣ ಹಾಗೂ ಪಿಚಕಾರಿ ಖರೀದಿಸುತ್ತಿರುವ ದೃಶ್ಯ ಕಂಡುಬಂತು –ಪ್ರಜಾವಾಣಿ ಚಿತ್ರ/ಎಂ.ಎಸ್. ಮಂಜುನಾಥ್

ಯು.ಕೆ. ವಿವಿಗೆ ಲಿಂಗರಾಜ ಗಾಂಧಿ

ಪ್ರಜಾವಾಣಿ ವಾರ್ತೆ



ಲಿಂಗರಾಜ ಗಾಂಧಿ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯ ಕುಲಪತಿ ಲಿಂಗರಾಜ ಗಾಂಧಿ ಅವರು ಯು.ಕೆಯ ವೊಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾಲಯಕ್ಕೆ ಸಂದರ್ಶಕ ಸಂಶೋಧನಾ ವಿದ್ವಾಂಸರಾಗಿ ಆಹ್ವಾನಿಸಲಾಗಿದೆ.

ಇದೇ 25ರಿಂದ ಒಂದು ವಾರದವರೆಗೂ ವೊಲ್ವರ್ ಹ್ಯಾಂಪ್ಟನ್ ವಿಶ್ವವಿದ್ಯಾಲಯಕ್ಕೆ ಲಿಂಗರಾಜ ಗಾಂಧಿ ಭೇಟಿ ನೀಡಲಿದ್ದಾರೆ. ಎರಡು ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಜಾರಿಯಲ್ಲಿರುವ ‘ಸುಸ್ಥಿರ ಸ್ಮಾರ್ಟ್ ಸಿಟಿ’ ಸಂಶೋಧನೆಯ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

‘ತರಬೇತಿಯಿಂದ ಉದ್ಯಮಶೀಲತೆ ಮೊನಚುಗೊಳ್ಳಲಿ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ಅಂತರ್ಗತವಾಗಿರುವ ಉದ್ಯಮಶೀಲತೆಯ ಗುಣಗಳನ್ನು ತರಬೇತಿಯ ಮೂಲಕ ಮೊನಚುಗೊಳಿಸಿ ಅನುಷ್ಠಾನಕ್ಕೆ ತಂದಾಗ ಯಶಸ್ವಿ ಉದ್ಯಮಿಯಾಗಬಹುದು ಎಂದು ಕೂರ್ಗ್ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯ ಕೆ.ಎನ್. ಜನಾರ್ದನ್ ಅವರು ತಿಳಿಸಿದರು.

ಅರಿಶಿನಕುಂಟೆಯ ರುಡ್‌ಸೆಟ್ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಉದ್ಯಮಿಗಳಾಗುವ ಕನಸು ಹೊತ್ತ ಯುವಜನರಿಗೆ ರುಡ್‌ಸೆಟ್ ತರಬೇತಿ ನೀಡುವ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ವಿಸಿಎನ್‌ಆರ್ ಸಮೂಹ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಿ. ರಾಮಸ್ವಾಮಿ ಮಾತನಾಡಿ, ‘ಗ್ರಾಮೀಣ ನಿರುದ್ಯೋಗಿ ಯುವಕರನ್ನು ಉದ್ಯಮಿಗಳನ್ನಾಗಿ ರುಡ್‌ಸೆಟ್ ಮಾಡಿದೆ’ ಎಂದು ಶ್ಲಾಘಿಸಿದರು.


ರುಡ್‌ಸೆಟ್ ನಿರ್ದೇಶಕ ರವಿಕುಮಾರ್, ಉದ್ಯಮಿಗಳಾದ ಡೊರೆಟ್ಟಾ ಕ್ರಿಸ್ಟಾಬೆಲ್, ಮಂಜುನಾಥ್, ಸಿಬ್ಬಂದಿ ವಿದ್ಯಾ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

‘ಸಮಾವರ್ತನ’ ಪದವಿ ದಿನ-2024: ಅತಿಥಿಗಳು: ಟೆಸ್ಸಿ ಥಾಮಸ್, ಡಾ.ಎಂ.ಕೆ. ರಮೇಶ್, ಡಾ. ಮೀರಾ ಡಿ. ಮೆವುಂಡಿ, ಅಧ್ಯಕ್ಷತೆ: ಡಾ. ರಮೇಶ್ ಕೃಷ್ಣ ಕೆ., ಅಸಿಮಾ ಬಾನು, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಕೋಟೆ, ಕೆ.ಆರ್. ರಸ್ತೆ, ಬೆಳಿಗ್ಗೆ 8

ನ್ಯಾಯಮೂರ್ತಿ ‘ಅನು ಶಿವರಾಮನ್’ ಅವರ ಸ್ವಾಗತ ಕಾರ್ಯಕ್ರಮ: ಅತಿಥಿಗಳು: ಎನ್.ವಿ. ಅಂಜಾರಿಯಾ, ಕೊಳ್ಳೂರು ಅರವಿಂದ್ ಕಾಮತ್, ಕೆ. ಶಶಿಕಿರಣ್ ಶೆಟ್ಟಿ, ವಿವೇಕ್ ಸುಬ್ಬಾರೆಡ್ಡಿ, ಟಿ.ಜಿ. ರವಿ, ಹರೀಶ ಎಂ.ಟಿ., ಆಯೋಜನೆ: ಬೆಂಗಳೂರು ವಕೀಲರ ಸಂಘ, ಸ್ಥಳ: ಹೈಕೋರ್ಟ್ ಯೂನಿಟ್ ಹಾಲ್, ಮಧ್ಯಾಹ್ನ 1.45

ಕೆ.ಎನ್. ಲಿಂಗಪ್ಪ ಅವರ ‘ಮೀಸಲಾತಿ ಅಂತರಂಗ’ ಪುಸ್ತಕ ಬಿಡುಗಡೆ: ಎಸ್. ಜಿ. ಸಿದ್ದರಾಮಯ್ಯ, ಅಧ್ಯಕ್ಷತೆ: ಪಿ.ಎನ್. ಶ್ರೀನಿವಾಸಾಚಾರಿ, ಪುಸ್ತಕದ ಕುರಿತು: ಸಿ.ಎಸ್. ದ್ವಾರಕಾನಾಥ್, ಅತಿಥಿಗಳು: ರವೀಂದ್ರ ಭಟ್ಟ, ಭಕ್ತ ರಾಮೇಗೌಡ, ಉಪಸ್ಥಿತಿ: ಕೆ.ಎನ್. ಲಿಂಗಪ್ಪ, ಅಭಿರುಚಿ ಗಣೇಶ್, ಆಯೋಜನೆ: ಅಭಿರುಚಿ ಪ್ರಕಾಶನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಮಧ್ಯಾಹ್ನ 3.30



ಸಿದ್ಧರಾಮಯ್ಯ

‘ನ್ಯಾಯಮೂರ್ತಿ ಜಿ.ಎನ್. ಸಭಾಹಿತ್’ ಸ್ಮಾರಕ ದತ್ತಿ ಉಪನ್ಯಾಸ: ಅತಿಥಿಗಳು: ಬಿ. ವೀರಪ್ಪ, ಜಯಕುಮಾರ ಎಸ್. ಪಾಟೀಲ್, ಅಧ್ಯಕ್ಷತೆ: ನಾರಾಯಣ್ ಜಿ. ಸಭಾಹಿತ್, ಆಯೋಜನೆ: ನ್ಯಾಯಮೂರ್ತಿ ಜಿ.ಎನ್. ಸಭಾಹಿತ್ ಸ್ಮಾರಕ ಉಪನ್ಯಾಸ ಟ್ರಸ್ಟ್, ಸ್ಥಳ: ಚನ್ನಬಸಪ್ಪ ಸಭಾಂಗಣ, ಸೆಕ್ರೆಟರಿಯೇಟ್ ಕ್ಲಬ್, ಕಬ್ಬನ್ ಉದ್ಯಾನ, ಸಂಜೆ 5

ಪ್ರಹ್ಲಾದ್ ಕೆ.ವಿ. ಆಚಾರ್ಯ ಅವರ ಕಲಾಕೃತಿಗಳ ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30

ಬೆಂಗಳೂರು ಅಂತರರಾಷ್ಟ್ರೀಯ ಕಲಾ ಮಹೋತ್ಸವ: ಕೊಳಲು: ರೋನು ಮಜುಮದಾರ್, ವೀಣಾ: ಸುಮಾ ಸುಧೀಂದ್ರ, ತಬಲಾ: ರಾಜೇಂದ್ರ ನಾಕೋಡ್, ಮೃದಂಗ: ಬಿ.ಸಿ. ಮಂಜುನಾಥ್, ಘಟ: ಎಸ್.ಎನ್. ನಾರಾಯಣಮೂರ್ತಿ,‘ಕರ್ನಾಟಕ ಸಂಗೀತ’: ಗಾಯನ: ಅಭಿಷೇಕ್ ರಘುರಾಮ್, ಮೃದಂಗ: ಅರ್ಜುನ್ ಕುಮಾರ್, ಪಿಟೀಲು: ಎಚ್.ಎಂ. ಸ್ಮಿತಾ, ಖಂಜೀರಾ: ಜಿ. ಗುರು ಪ್ರಸನ್ನ, ಆಯೋಜನೆ: ಎಐಎಂ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6.30

ಅಲಂಕಾರ: ಮನ್ಮಥನಿಂದ ಸಂರಾಸುರನ ವಧೆ, ಆಯೋಜನೆ, ಸ್ಥಳ: ಕಾಮಣ್ಣನ ಗುಡಿ ಸೇವಾ ಸಮಿತಿ ಟ್ರಸ್ಟ್, ದೇವರ ಗಲ್ಲಿ, ಅರಳೇಪೇಟೆ, ಸಂಜೆ 6.30

ಹರಿನಾಮ ಸಂಕೀರ್ತನೆ: ಗಾಯನ: ಐಶ್ವರ್ಯ ಶ್ರೀನಿಧಿ ಕುಲಕರ್ಣಿ, ಹಾರ್ಮೋನಿಯಂ: ಸೃಷ್ಟಿ ದೇಸಾಯಿ, ತಬಲಾ: ಚಿ. ಋತುಪರ್ಣ ದೇಸಾಯಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವಿಜಯ ಮಾಧ್ವ ಸಂಘ, ವಿಜಯನಗರ, ಸಂಜೆ 6.30

ಡಾ. ಗಿರೀಶ ಕಾರ್ನಾಡರ ರಾಜ್ಯ ಮಟ್ಟದ ನಾಟಕೋತ್ಸವ: ‘ತುಘಲಕ್’ ನಾಟಕ ಪ್ರದರ್ಶನ: ಪ್ರಸ್ತುತಿ: ವೇದಿಕೆ ತಂಡ, ನಿರ್ದೇಶನ: ಸಿ.ಆರ್. ಸಿಂಹ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7.15

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಮಂಡ್ಯದ ಆರೋಪಿ ಬಂಧನ: ₹12 ಲಕ್ಷ ಮೌಲ್ಯದ 7 ಆಟೊಗಳು ಜಪ್ತಿ

ಹ್ಯಾಂಡಲ್ ಲಾಕ್ ಮುರಿದು ಆಟೊ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆಗಳ ಮುಂದೆ ನಿಲ್ಲಿಸುತ್ತಿದ್ದ ಆಟೊಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪದಡಿ ನಿಯಾಮತ್ ಖಾನ್ (28) ಎಂಬುವವರನ್ನು ಚಾಮರಾಜಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಂಡ್ಯದ ಕುತ್ತಲು ಸಾದತ್‌ನಗರದ ನಿಯಾಮತ್ ಖಾನ್, ಹಲವು ವರ್ಷಗಳಿಂದ ಕಳ್ಳತನ ಎಸಗುತ್ತಿದ್ದ. ಈತನಿಂದ ₹12 ಲಕ್ಷ ಮೌಲ್ಯದ 7 ಆಟೊಗಳನ್ನು ಜಪ್ತಿ ಮಾಡಲಾಗಿದೆ.


ಆರೋಪಿಯಿಂದ ಜಪ್ತಿ ಮಾಡಿರುವ ಆಟೊಗಳು

ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನೊಬ್ಬ ಆರೋಪಿ ರಫೀಕ್ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ವಾಲ್ಮೀಕಿ ನಗರದ ಸುಹೇಲ್ ಅಹಮ್ಮದ್ ಅವರು ತಮ್ಮ ಆಟೊವನ್ನು ಮೈಸೂರು ರಸ್ತೆಯ ಟೋಲ್‌ಗೇಟ್ ಬಳಿ ಮಾರ್ಚ್ 18ರಂದು ನಿಲ್ಲಿಸಿದ್ದರು. ಕೆಲಸದ ನಿಮಿತ್ತ ಬೇರೆಡೆ ಹೋಗಿದ್ದರು. ಅವರು ವಾಪಸು ಬರುವಷ್ಟರಲ್ಲಿ ಆಟೊ ಕಳ್ಳತನವಾಗಿತ್ತು. ಈ ಬಗ್ಗೆ ಠಾಣೆಗೆ ದೂರು ನೀಡಿದ್ದರು' ಎಂದು ತಿಳಿಸಿದರು.

'ಪ್ರಕರಣ ದಾಖಲಿಸಿಕೊಂಡು ಘಟನಾ ಸ್ಥಳ ಹಾಗೂ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಲಾಗಿತ್ತು. ಸುಳಿವು ಲಭ್ಯವಾಗುತ್ತಿದ್ದಂತೆ ಆರೋಪಿಯನ್ನು ಸೆರೆಹಿಡಿಯಲಾಗಿದೆ' ಎಂದರು.

'ಹ್ಯಾಂಡಲ್ ಲಾಕ್ ಮುರಿಯುವುದರಲ್ಲಿ ನಿಯಾಮತ್ ಖಾನ್ ಪರಿಣತನಾಗಿದ್ದ. ನಗರದ ಹಲವು ಕಡೆಗಳಲ್ಲಿ ಆಟೊಗಳ ಹ್ಯಾಂಡಲ್ ಲಾಕ್ ಮುರಿದು ಕಳ್ಳತನ ಮಾಡಿದ್ದ. ಅದೇ ಆಟೊಗಳನ್ನು ಹಾಗೂ ಬಿಡಿಭಾಗಗಳನ್ನು ಕಡಿಮೆ ಬೆಲೆಗೆ ಮಾರುತ್ತಿದ್ದ. ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದ. ಹಣ ಖಾಲಿಯಾಗುತ್ತಿದ್ದಂತೆ ಪುನಃ ಕಳ್ಳತನ ನಡೆಸುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಪೀಣ್ಯ ಹಾಗೂ ಇತರೆ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿರುವುದು ಗೊತ್ತಾಗಿದೆ. ಚಾಲಕರು ತಮ್ಮ ಆಟೊಗಳನ್ನು ಎಲ್ಲೆಂದರಲ್ಲಿ ನಿಲ್ಲಿಸುವ ಮುನ್ನ ಎಚ್ಚರಿಕೆ ವಹಿಸಬೇಕು. ಯಾರಾದರೂ ಅಪರಿಚಿತರು ಕಂಡುಬಂದರೆ ಠಾಣೆಗೆ ಮಾಹಿತಿ ನೀಡಬೇಕು' ಎಂದು ತಿಳಿಸಿದರು.

ಭೂಗತ ಪಾತಕಿಗಳ ಹೆಸರಿನಲ್ಲಿ ಬೆದರಿಕೆ: ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿನ್ನ ಅಶ್ಲೀಲ ಫೋಟೊ ಹಾಗೂ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡುತ್ತೇನೆ. ಭೂಗತ ಪಾತಕಿಗಳಾದ ದಾವೂದ್ ಇಬ್ರಾಹಿಂ ಹಾಗೂ ಛೋಟಾ ಶಕೀಲ್ ಮೂಲಕ ಕೊಲೆ ಮಾಡಿಸುತ್ತೇನೆ' ಎಂಬುದಾಗಿ ಯುವತಿಯೊಬ್ಬರಿಗೆ ಬೆದರಿಕೆಯೊಡ್ಡಿದ್ದ ಆರೋಪದಡಿ ಅಫಾನ್ ಅಹಮ್ಮದ್ (28) ಎಂಬುವವರನ್ನು ಭಾರತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಶಾಂತಿನಗರದ ಅಫಾನ್ ಅಹಮದ್ ವಿರುದ್ಧ 26 ವರ್ಷ ವಯಸ್ಸಿನ ಯುವತಿ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಸೆರೆಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಹಾಗೂ ಯುವತಿ, ಸಂಬಂಧಿಕರ ಮದುವೆಯೊಂದರಲ್ಲಿ ಪರಿಚಯವಾಗಿದ್ದರು. ನಂತರ, ಹಲವು ಬಾರಿ ಭೇಟಿಯಾಗಿದ್ದರು. ಇದೇ ಸಂದರ್ಭದಲ್ಲಿ ಆರೋಪಿ, ಖಾಸಗಿ ಕ್ಷಣಗಳ ಫೋಟೊ ಹಾಗೂ ವಿಡಿಯೊ ಮಾಡಿಟ್ಟುಕೊಂಡಿದ್ದ. ಆರೋಪಿ ಕೃತ್ಯದ ಬಗ್ಗೆ ತಿಳಿಯುತ್ತಿದ್ದಂತೆ ಯುವತಿಯು ಮಾತನಾಡುವುದನ್ನು ಬಿಟ್ಟಿದ್ದರು.'

'ಫೋಟೊ ಹಾಗೂ ವಿಡಿಯೊ ಇಟ್ಟುಕೊಂಡು ಯುವತಿಯನ್ನು ಬೆದರಿಸಿದ್ದ ಆರೋಪಿ, ₹ 1.28 ಲಕ್ಷ ಸುಲಿಗೆ ಮಾಡಿದ್ದನೆಂದು ಗೊತ್ತಾಗಿದೆ. ತಾನು ಕರೆದಲ್ಲಿ ಬರುವಂತೆ ಕಿರುಕುಳ ಸಹ ನೀಡಲಾರಂಭಿಸಿದ್ದ. ಬೇಸತ್ತ ಯುವತಿ, ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

ಕಾನ್‌ಸ್ಟೆಬಲ್ ಮೇಲೆ ಹಲ್ಲೆ: ಬೈಕ್ ಸವಾರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದಾಶಿವನಗರ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದ ಕಾನ್‌ಸ್ಟೆಬಲ್ ಪಿ.ವೈ. ಶಿವರಾಜು ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಬೈಕ್ ಸವಾರ ಪ್ರತೀಕ್ ಆರ್. ಶಿಂಧೆ (25) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

'ವೈಯಾಲಿಕಾವಲ್‌ನ ಪ್ರತೀಕ್, ತನ್ನ ಸ್ನೇಹಿತೆ ಜೊತೆ ಬೈಕ್‌ನಲ್ಲಿ ಹೊರಟಿದ್ದಾಗ ಈ ಘಟನೆ ನಡೆದಿದೆ. ಕಾನ್‌ಸ್ಟೆಬಲ್ ನೀಡಿದ್ದ ದೂರು ಆಧರಿಸಿ ಪ್ರತೀಕ್‌ನನ್ನು ಸೆರೆಹಿಡಿಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಪ್ರತೀಕ್, ಮಾ. 19ರಂದು ರಾತ್ರಿ 9 ಗಂಟೆ ಸುಮಾರಿಗೆ ಎಂ.ಎಸ್. ರಾಮಯ್ಯ ಜಂಕ್ಷನ್ ಕಡೆಯಿಂದ ಸದಾಶಿವನಗರ ಕಡೆಗೆ ಬೈಕ್‌ನಲ್ಲಿ ಹೊರಟಿದ್ದ. ಹಿಂಬದಿಯಲ್ಲಿ ಸ್ನೇಹಿತೆ ಕುಳಿತಿದ್ದಳು. ಪ್ರತೀಕ್, ಜಂಕ್ಷನ್‌ನಲ್ಲಿ ಸಿಗ್ನಲ್ ಜಂಪ್ ಮಾಡಿ ಮುಂದಕ್ಕೆ ಹೋಗಿದ್ದ. ಸಿಗ್ನಲ್‌ನಲ್ಲಿ ವ್ಯತ್ಯಾಸವಾಗಿರುವುದಾಗಿ ಭಾವಿಸಿದ್ದ ಆತ, ರಸ್ತೆ ಪಕ್ಕದಲ್ಲಿ ಬೈಕ್ ನಿಲ್ಲಿಸಿ ಕರ್ತವ್ಯನಿರತ ಕಾನ್‌ಸ್ಟೆಬಲ್ ಬಳಿ ತೆರಳಿದ್ದ. 'ಸರಿಯಾಗಿ ಸಿಗ್ನಲ್ ನಿರ್ವಹಿಸಲು ಬರುವುದಿಲ್ಲವೇ?' ಎಂದು ಜಗಳ ತೆಗೆದು, ಹಲ್ಲೆ ಮಾಡಿದ್ದ. ಸ್ಥಳದಿಂದ ಪರಾರಿಯಾಗಲು ಯತ್ನಿಸಿದ್ದ ಆರೋಪಿಯನ್ನು ಕಾನ್‌ಸ್ಟೆಬಲ್ ಹಾಗೂ ಸ್ಥಳೀಯರು ಬೆನ್ನಟ್ಟಿ ಹಿಡಿದು ಠಾಣೆಗೆ ಒಪ್ಪಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಕಾರ್ಖಾನೆ ಮಾಲೀಕರ ಬೆದರಿಸಿ ಸುಲಿಗೆ: ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಆಹಾರ ಪದಾರ್ಥ ತಯಾರಿಕೆ ಕಾರ್ಖಾನೆ ಮಾಲೀಕರನ್ನು ಬೆದರಿಸಿ ಹಣ ಸುಲಿಗೆ ಮಾಡಿದ್ದ ಮೂವರು ಆರೋಪಿಗಳನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರವಿಚಂದ್ರನ್, ರಮೇಶ್ ಹಾಗೂ ಪವನ್ ಕುಮಾರ್ ಬಂಧಿತರು. ಮಾನವ ಹಕ್ಕುಗಳ ರಕ್ಷಣಾ ಸಮಿತಿ ಹಾಗೂ ಭ್ರಷ್ಟಾಚಾರ ನಿಗ್ರಹ ಸಮಿತಿ ಹೆಸರಿನಲ್ಲಿ ಆರೋಪಿಗಳು ಕಾರ್ಖಾನೆ ಮಾಲೀಕರನ್ನು ಬೆದರಿಸಿದ್ದರು. ಬಂಧಿತರಿಂದ ₹ 1,870 ನಗದು, ಮೂರು ಮೊಬೈಲ್ ಹಾಗೂ ಕಾರು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಲ್ಲಿರುವ ಕಾರ್ಖಾನೆಯೊಂದಕ್ಕೆ ಮಾರ್ಚ್ 18ರಂದು ಹೋಗಿದ್ದ ಆರೋಪಿಗಳು, 'ಕೆಲಸಗಾರರು ತಲೆಗೆ ಯಾವುದೇ ಸುರಕ್ಷಿತ ಟೋಪಿ ಧರಿಸಿಲ್ಲ. ಕೂದಲುಗಳು ಆಹಾರ ಪದಾರ್ಥದಲ್ಲಿ ಸೇರ್ಪಡೆಯಾಗುತ್ತಿವೆ. ಇದರಿಂದ ಜನರಿಗೆ ಆರೋಗ್ಯ ಸಮಸ್ಯೆಯಾಗಲಿದೆ' ಎಂದಿದ್ದರು. ಕ್ರಿಮಿನಲ್ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸುವುದಾಗಿ ಮಾಲೀಕರನ್ನು ಬೆದರಿಸಿದ್ದರು.'

'ಪ್ರಕರಣ ದಾಖಲಿಸಬಾರದೆಂದರೆ ಹಣ ನೀಡುವಂತೆ ಆರೋಪಿಗಳು ಬೇಡಿಕೆ ಇರಿಸಿದ್ದರು. ಹೆದರಿದ್ದ ಮಾಲೀಕ, ₹6 ಸಾವಿರ ನೀಡಿದ್ದರು. ಸ್ಥಳದಿಂದ ಹೊರಟುಹೋಗಿದ್ದ ಆರೋಪಿಗಳು, ಮಾರ್ಚ್ 20ರಂದು ಪುನಃ ಕಾರ್ಖಾನೆಗೆ ಬಂದಿದ್ದರು. ₹9 ಸಾವಿರಕ್ಕೆ ಬೇಡಿಕೆ ಇರಿಸಿದ್ದರು. ಹಣವಿಲ್ಲವೆಂದು ಹೇಳಿದ್ದ ಮಾಲೀಕ, ₹4 ಸಾವಿರ ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

'ಆರೋಪಿಗಳು ಮತ್ತಷ್ಟು ಹಣಕ್ಕೆ ಬೇಡಿಕೆ ಇರಿಸಿದ್ದರು. ಅನುಮಾನಗೊಂಡ ಮಾಲೀಕ ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಮಾನವ ಹಕ್ಕುಗಳ ರಕ್ಷಣಾ ಸಮಿತಿ ಹಾಗೂ ಭ್ರಷ್ಟಾಚಾರ ನಿಗ್ರಹ ಸಮಿತಿ ಹೆಸರಿನಲ್ಲಿ ಆರೋಪಿಗಳು ಹಲವರನ್ನು ಬೆದರಿಸಿ ಹಣ ಸುಲಿಗೆ ಮಾಡಿರುವ ಮಾಹಿತಿ ಇದೆ' ಎಂದು ಹೇಳಿದರು.



ಪುರಸ್ಕಾರ

ಡಾ.ಪು.ತಿ.ನ. ಟ್ರಸ್ಟ್ ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ರಂಗಕರ್ಮಿ ಶಶಿಧರ ಭಾರಿಘಾಟ್ ಅವರಿಗೆ 'ಡಾ.ಪುತಿನ ಕಾವ್ಯ ನಾಟಕ ಪ್ರಬಂಧ ಪುರಸ್ಕಾರ'ವನ್ನು ಟ್ರಸ್ಟ್‌ನ ಅಧ್ಯಕ್ಷರೂ ಆಗಿರುವ ಕವಿ ಎಚ್.ಎಸ್.ವೆಂಕಟೇಶಮೂರ್ತಿ ಪ್ರದಾನ ಮಾಡಿದರು. ಟ್ರಸ್ಟಿ ಬಾಲಕೃಷ್ಣ ಉಪಸ್ಥಿತರಿದ್ದರು. ಪುರಸ್ಕಾರವು ₹25 ಸಾವಿರ ನಗದು ಒಳಗೊಂಡಿದೆ.

ಮಹಿಳೆ ಮೇಲೆ ದೌರ್ಜನ್ಯ: ಡೆಲಿವರಿ ಬಾಯ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯೊಂದಕ್ಕೆ ನುಗ್ಗಿ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಆಕಾಶ್ (27) ಎಂಬುವವರನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕಲಬುರಗಿ ಜಿಲ್ಲೆಯ ಆಕಾಶ್ ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದ. ಕುಂದಲಹಳ್ಳಿಯಲ್ಲಿ ವಾಸವಿದ್ದ. ಆ್ಯಪ್ ಆಧರಿತ ಆಹಾರ ಪೂರೈಕೆ ಕಂಪನಿಯೊಂದರಲ್ಲಿ ಡೆಲಿವರಿ ಬಾಯ್ ಆಗಿ ಕೆಲಸಕ್ಕೆ ಸೇರಿದ್ದ' ಎಂದು ಪೊಲೀಸರು ಹೇಳಿದರು.

'ಎಚ್‌ಎಎಲ್ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ಮಹಿಳೆ, ಮಾರ್ಚ್ 17ರಂದು ಆ್ಯಪ್ ಮೂಲಕ ಆಹಾರ ಕಾಯ್ದಿಸಿದ್ದರು. ಆಹಾರ ಪೊಟ್ಟಣ ತೆಗೆದುಕೊಂಡು ಆರೋಪಿ ಆಕಾಶ್ ಮನೆ ಬಾಗಿಲಿಗೆ ಬಂದಿದ್ದರು. ಮಹಿಳೆ ಸಹ ಪೊಟ್ಟಣ ಪಡೆಯಲು ಮುಂದಾಗಿದ್ದರು.'

'ರಸ್ತೆಯಲ್ಲಿ ಸಾರ್ವಜನಿಕ ಶೌಚಾಲಯಗಳಿಲ್ಲ. ನಿಮ್ಮ ಮನೆಯ ಶೌಚಾಲಯ ಬಳಸಬಹುದೆ?' ಎಂದು ಆಕಾಶ್ ಕೇಳಿದ್ದ. ಅದಕ್ಕೆ ಒಪ್ಪಿದ್ದ ಮಹಿಳೆ, ಮನೆಯೊಳಗೆ ಕರೆದಿದ್ದರು. ಶೌಚಾಲಯ ಬಳಸಿದ್ದ ಆರೋಪಿ, ಮನೆಯಲ್ಲಿ ಯಾರೂ ಇಲ್ಲದನ್ನು ನೋಡಿದ್ದ. ಒಂಟಿಯಾಗಿದ್ದ ಮಹಿಳೆಯ ಕೈ ಹಿಡಿದು ಎಳೆದಾಡಿದ್ದ. ಅಂಗಾಂಗಗಳನ್ನು ಮುಟ್ಟಲು ಯತ್ನಿಸಿದ್ದ. ಮಹಿಳೆ ಕೂಗಾಡುತ್ತಿದ್ದಂತೆ ಸ್ಥಳದಿಂದ ಹೊರಟುಹೋಗಿದ್ದ' ಎಂದು ಪೊಲೀಸರು ತಿಳಿಸಿದರು.

'ಘಟನೆ ಬಗ್ಗೆ ಮಹಿಳೆ ದೂರು ನೀಡುತ್ತಿದ್ದಂತೆ, ತನಿಖೆ ಕೈಗೊಂಡು ಆರೋಪಿಯನ್ನು ಸೆರೆಹಿಡಿಯಲಾಗಿದೆ. ಈತನ ಹಿನ್ನೆಲೆ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಹೇಳಿದರು.

‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಯ ದೂರದೃಷ್ಟಿ ಯೋಜನೆಗಳ ಅನುಷ್ಠಾನ ಅಗತ್ಯ– ತಜ್ಞರ ಆಶಯ

ಜಲ ಸ್ವಾವಲಂಬನೆ ಕತೆ; ಇಚ್ಛಾಶಕ್ತಿಯದೇ ಕೊರತೆ

• ಆರ್. ಮಂಜುನಾಥ್

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಈ ವರ್ಷ ಜಲಕ್ಷಾಮ ಹಿಂದೆಂದಿಗಿಂತಲೂ ಅತಿ ಹೆಚ್ಚಿನ ಪ್ರಮಾಣದಲ್ಲಿ ನಾಗರಿಕರನ್ನು ಬಾಧಿಸುತ್ತಿದೆ. ಕಾವೇರಿ ನೀರಿನ ಮೇಲೆಯೇ ಹೆಚ್ಚು ಅವಲಂಬಿತವಾಗಿರುವ ನಗರದಲ್ಲಿ, ಈ ಬಾರಿ ಬತ್ತಿರುವ ಕೊಳವೆಬಾವಿಗಳಿಂದಲೂ ಜನರು ಸಂಕಷ್ಟಕ್ಕೀಡಾಗಿದ್ದಾರೆ.

ನೀರಿನ ಸಂಕಷ್ಟದಿಂದ ಪಾರಾಗಿ, ಕುಡಿಯುವ ನೀರಿನ ಸ್ವಾವಲಂಬನೆ ಸಾಧಿಸಲು ತಜ್ಞರು ಹತ್ತಾರು ವರ್ಷಗಳಿಂದ ನೂರಾರು ಸಲಹೆಗಳನ್ನು ನೀಡಿದ್ದಾರೆ, ನೀಡುತ್ತಲೂ ಇದ್ದಾರೆ. ಆದರೆ, ಅವುಗಳ ಪರಿಪೂರ್ಣ ಅನುಷ್ಠಾನ ಸಾಧ್ಯವಾಗಿಲ್ಲ. ನೀರಿನ ನಿರ್ವಹಣೆ ಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಅಳವಡಿಕೆಯಲ್ಲಿ ಇಚ್ಛಾಶಕ್ತಿ ಕೊರತೆಯಿರುವ ಕಾರಣದಿಂದಲೇ ಜಲಕ್ಷಾಮದಂತಹ ಪರಿಸ್ಥಿತಿ ಬಂದೊದಗಿದೆ. ಈಗಲಾದರೂ ಜಲಮಂಡಳಿ, ಬಿಬಿಎಂಪಿ, ಜಿಲ್ಲಾಡಳಿತ ಎಚ್ಚೆತ್ತುಕೊಂಡು ದೂರದೃಷ್ಟಿಯ ಯೋಜನೆಗಳನ್ನು ತಕ್ಷಣದಿಂದಲೇ ಅಳವಡಿಸಿಕೊಳ್ಳಬೇಕು ಎಂದು ತಜ್ಞರು ಆಶಿಸುತ್ತಾರೆ.

ನಗರದ ಹೊರವಲಯದಲ್ಲಿ ಕಾವೇರಿ ನೀರು ಪೂರೈಕೆ ಇನ್ನೂ ಆರಂಭವಾಗಿಲ್ಲ. ಆದರೂ ಇಷ್ಟೂ ವರ್ಷ ಆ ಭಾಗದ ಜನರು ಕೊಳವೆ ಬಾವಿಗಳಿಂದಲೇ ನೀರು ಪಡೆಯುತ್ತಿದ್ದರು. ಈ ಬಾರಿ ಅಂತರ್ಜಲ ಕುಸಿತದ ಪರಿಣಾಮ ಕೊಳವೆಬಾವಿಗಳು ಬತ್ತಿದ್ದು, ಇದರಿಂದ ನೀರಿನ ಸಮಸ್ಯೆ ಎದುರಿಸುತ್ತಿದ್ದಾರೆ. ಇಂತಹ ಪರಿಸ್ಥಿತಿ ಮರುಕಳಿಸದಂತೆ ನೀರಿನ ಸ್ವಾವಲಂಬನೆ ಸಾಧಿಸಲು ಜಲಮಂಡಳಿ, ನಾಗರಿಕರು ಮತ್ತು ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಅಲ್ಪ ಹಾಗೂ ದೀರ್ಘಾವಧಿಯ ಯೋಜನೆಗಳನ್ನು ರೂಪಿಸಿದೆ.

‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಯಲ್ಲಿ ‘ನೀರಿನ ಭದ್ರತೆ ಬೆಂಗಳೂರು’ ವರ್ಗದಲ್ಲಿ ನಾಗರಿಕರು, ತಜ್ಞರ ಸಲಹೆ ಹಾಗೂ ನೋಡಲ್ ಅಧಿಕಾರಿ– ಜಲಮಂಡಳಿಯ ಮುಖ್ಯ ಎಂಜಿನಿಯರ್ ಕೆ.ಎನ್. ರಾಜೀವ್, ಸಂಯೋಜಕ– ಹೆಚ್ಚುವರಿ ಮುಖ್ಯ ಎಂಜಿನಿಯರ್ ವಿ.ಬಿ ಮಹೇಶ್ವರಪ್ಪ ಅವರ ಜೊತೆಗೆ ಸೇರಿಕೊಂಡು ದಯಾನಂದ ಸಾಗರ ಎಂಜಿನಿಯರಿಂಗ್ ಕಾಲೇಜಿನ ಶೈಕ್ಷಣಿಕ ತಜ್ಞರು ‘ಸಲಹೆಗಳ ಪಟ್ಟಿ’ಯನ್ನು ನೀಡಿದ್ದಾರೆ.



ನೀರಿನ ಭದ್ರತೆಗೆ ಹಲವು ಸಲಹೆ



ಸಂಸ್ಕರಿಸಿದ ನೀರಿನ ಮರುಬಳಕೆ, ಸಂಸ್ಕರಿಸಿದ ನೀರಿಗೆ ಪ್ರತ್ಯೇಕ ಕೊಳವೆ ಮಾರ್ಗ, ಸಂಸ್ಕರಿಸಿದ ನೀರಿನ ಮರುಬಳಕೆಯಲ್ಲಿನ ಸುರಕ್ಷತಾ ಕ್ರಮಗಳು, ಬಳಕೆಗೆ ಅರಿವು, ಅಂತರ್ಜಲ ಮರುಪೂರಣ, ಕೆರೆಗಳಿಗೆ ನೀರು ತುಂಬಿಸುವುದು, ಕೊಳವೆಬಾವಿಗಳ ಕೊರೆಸುವುದಕ್ಕೆ ನಿರ್ಬಂಧ ಸೇರಿದಂತೆ ನೀರಿನ ಭದ್ರತೆಗೆ ಸಾಕಷ್ಟು ಸಲಹೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಕೆಲವು ಅನುಷ್ಠಾನದ ಹಂತದಲ್ಲಿವೆ. ದೀರ್ಘ ಕಾಲದ ಯೋಜನೆಗಳನ್ನೂ ಅಳವಡಿಸಿಕೊಂಡರೆ ಕುಡಿಯುವ ನೀರಿಗೆ ನಗರಕ್ಕೆ ಎಂದಿಗೂ ಸಮಸ್ಯೆ ಬರುವುದಿಲ್ಲ.

ಡಾ. ಎಚ್.ಕೆ. ರಾಮರಾಜು, ಪ್ರಾಂಶುಪಾಲ, ದಯಾನಂದ ಸಾಗರ ಎಂಜಿನಿಯರಿಂಗ್ ಕಾಲೇಜು ಹಾಗೂ ‘ನೀರಿನ ಭದ್ರತೆ ಬೆಂಗಳೂರು’ ಸಂಯೋಜಕ

ಅಲ್ಪಾವಧಿಯಲ್ಲಿ ಅನುಷ್ಠಾನಗೊಳಿಸಬೇಕಾದ ಕ್ರಮಗಳು:

- ಕಟ್ಟಡಗಳ ನಿರ್ಮಾಣದಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಎಲ್ಲ ಸಮಯದಲ್ಲೂ ಬಳಸಬೇಕು ಎಂಬುದನ್ನು ಸರ್ಕಾರ ಕಡ್ಡಾಯಗೊಳಿಸಬೇಕು
- ಜಲಮಂಡಳಿ ಎಸ್‌ಟಿಪಿ (ತಾಜ್ಯ ನೀರು ಸಂಸ್ಕರಣಾ ಘಟಕ) ಸೇರಿದಂತೆ ಅಪಾರ್ಟ್‌ಮೆಂಟ್‌ಗಳಲ್ಲಿ ಸಂಸ್ಕರಿಸಿದ ನೀರನ್ನು ವಾಹನ ತೊಳೆಯಲು, ಉದ್ಯಾನಗಳಲ್ಲಿ ಬಳಸಲು, ಮೊಬೈಲ್ ಆ್ಯಪ್‌ನಲ್ಲಿ ಎಲ್ಲ ರೀತಿಯ ಮಾಹಿತಿ, ಬಳಕೆ, ಖರೀದಿಗೆ ಅನುವು ಮಾಡಿಕೊಡಬೇಕು.
- ಸರ್ಕಾರಿ, ಖಾಸಗಿ ಹಾಗೂ ಸಾರ್ವಜನಿಕ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹ ಅನುಷ್ಠಾನ, ನಿರ್ವಹಣೆಯನ್ನು ಕಡ್ಡಾಯಗೊಳಿಸಬೇಕು
- ಪಾದಚಾರಿ ಮಾರ್ಗಗಳ ಕೆಳಗೆ, ಚರಂಡಿ ಹಾಗೂ ರಾಜಕಾಲುವೆಗಳಲ್ಲಿ ಇಂಗುಗುಂಡಿಗಳನ್ನು ನಿರ್ಮಿಸಬೇಕು. ಇದರಿಂದ ಪ್ರವಾಹ ನಿಯಂತ್ರಣವಾಗುತ್ತದೆ.
- ಅನುಮತಿಯಿಲ್ಲದೆ, ಅವೈಜ್ಞಾನಿಕವಾಗಿ ಕೊಳವೆಬಾವಿ ಕೊರೆದವರಿಗೆ ಅತಿ ಹೆಚ್ಚಿನ ದಂಡ ವಿಧಿಸಿ, ಕಾನೂನು ಕ್ರಮ ಕೈಗೊಳ್ಳಬೇಕು
- ಕೆರೆಗಳ ಗುಣಮಟ್ಟ ಕಾಪಾಡಲು ರಾಜಕಾಲುವೆಗಳಲ್ಲಿ ಬಯೊ–ಫಿಲ್ಟರ್ ಅಥವಾ ಫ್ಲೋಟಿಂಗ್ ವೆಟ್‌ಲ್ಯಾಂಡ್ ಅಳವಡಿಸಬೇಕು
- ತಾಜ್ಯ ನೀರು ಸಂಸ್ಕರಣೆ ಘಟಕಗಳ ದಕ್ಷತೆ ಹಾಗೂ ವಿತರಣೆ ವ್ಯವಸ್ಥೆ ಉತ್ತಮಗೊಳಿಸಲು ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು
- ಬೆಂಗಳೂರಿನ ಅಚ್ಚುಕಟ್ಟು ಪ್ರದೇಶಗಳಲ್ಲಿ ಉಂಟಾಗುವ ಪ್ರವಾಹ ನೀರಿನ ಸಂಗ್ರಹ ಹಾಗೂ ಮರುಪೂರಣಗೊಳಿಸುವ ಮೂಲಕ ನೀರಿನ ಭದ್ರತೆ ಸಾಧಿಸಬೇಕು
- ಕೆರೆಗಳು, ಅಂತರ್ಜಲವನ್ನು ಮೂಲವನ್ನಾಗಿಸಿಕೊಂಡು ನೀರು ಸರಬರಾಜು ವ್ಯವಸ್ಥೆಯನ್ನು ವಿಕೇಂದ್ರೀಕರಣಗೊಳಿಸಬೇಕು

ದೀರ್ಘಾವಧಿಯಲ್ಲಿ ಕಾರ್ಯಗತವಾಗಬೇಕಾದ ಯೋಜನೆಗಳು

- ನಗರಕ್ಕೆ ನೀರು ಸರಬರಾಜು ಮಾಡಲು ಕೆರೆಗಳನ್ನು ಪರ್ಯಾಯ ಮೂಲವನ್ನಾಗಿ ಬಳಸುವಂತಹ ಯೋಜನೆ ರೂಪಿಸಬೇಕು. ಇದಕ್ಕೆ ಮೊದಲು ಗೃಹ ಹಾಗೂ ಕೈಗಾರಿಕೆ ಮಾಲಿನ್ಯದಿಂದ ಕೆರೆಗಳನ್ನು ನಿರ್ಬಂಧಿಸಬೇಕು. 50 ಮೀಟರ್‌ನಿಂದ 100 ಮೀಟರ್ ಬಫರ್ ವಲಯ ನಿರ್ವಹಣೆ ಮಾಡಬೇಕು. ಯಲಹಂಕ ಹಾಗೂ ಎಲೆಮಲ್ಲಪ್ಪ ಶೆಟ್ಟಿ ಕೆರೆಗಳನ್ನು ಮಳೆ ನೀರಿನ ಸಂಗ್ರಹ ಹಾಗೂ ಸಂಸ್ಕರಣೆ ತಾಣಗಳನ್ನಾಗಿಸಿಕೊಂಡರೆ 165 ಎಂಎಲ್‌ಡಿ ನೀರು ಪಡೆಯಬಹುದು
- ನೀರು ಸರಬರಾಜು ವ್ಯವಸ್ಥೆಯಲ್ಲಿ ಸೋರಿಕೆಯನ್ನು ಪತ್ತೆ ಮಾಡಿ, ಸೋರಿಕೆ ನಿಯಂತ್ರಿಸಲು ‘ಸ್ಮಾರ್ಟ್ ವಾಟರ್ ಸಪ್ಲೈ ಸ್ಕೀಮ್’ ಜಾರಿಗೆ ತರಬೇಕು
- ರಾಜಕಾಲುವೆಗಳ ರೂಪುರೇಷೆ ಬದಲಿಸಿ, ಕೆರೆಗಳೊಂದಿಗೆ ಸಂಪರ್ಕ ಕಲ್ಪಿಸಬೇಕು. ಇದರಿಂದ ಪ್ರವಾಹ ನಿಯಂತ್ರಿಸಬಹುದು ಹಾಗೂ ಮಳೆ ನೀರು ಸಂಗ್ರಹಿಸಬಹುದು
- ಜಪಾನಿನ ಟೋಕಿಯೊದಲ್ಲಿರುವಂತೆ ‘ಭೂಗತ ಜಲಾಶಯ’ ನಿರ್ಮಿಸಿ, ತುರ್ತಾಗಿ ಸಂಭವಿಸುವ ಪ್ರವಾಹವನ್ನು ನಿಯಂತ್ರಿಸಬಹುದು. ಮಡಿವಾಳ, ಅಗರ ಕೆರೆಗಳು ಸೇರಿದಂತೆ ಕೆಲವು ಕೆರೆಗಳ ನಡುವೆ ಪರಸ್ಪರ ಸಂಪರ್ಕಗಳನ್ನು ಅಭಿವೃದ್ಧಿಗೊಳಿಸಿ ಪ್ರವಾಹ ನಿಯಂತ್ರಣ ಜಲಾಶಯಗಳನ್ನಾಗಿ ಉಪಯೋಗಿಸಿಕೊಳ್ಳಬೇಕು
- 24x7 ಮಾದರಿಯಲ್ಲಿ ಸಮಗ್ರ ನಗರಕ್ಕೆ ನೀರು ಪೂರೈಸಬೇಕು

ಅಂಕಿ ಅಂಶಗಳು

- **11,894** ಕಿ.ಮೀ — ಒಟ್ಟು ಒಳಚರಂಡಿ ಮಾರ್ಗ
- **1,480** ಎಂಎಲ್‌ಡಿ — ತ್ಯಾಜ್ಯ ನೀರು ಉತ್ಪಾದನೆ
- **33** — ತ್ಯಾಜ್ಯ ನೀರು ಸಂಸ್ಕರಣೆ ಘಟಕಗಳು (ಎಸ್‌ಟಿಪಿ)
- **3.91** ಲಕ್ಷ — ಮ್ಯಾನ್ ಹೋಲ್‌ಗಳು
- **1200** ಎಂಎಲ್‌ಡಿ — ಸಂಸ್ಕರಣೆಯಾಗುತ್ತಿರುವ ತ್ಯಾಜ್ಯ ನೀರು

ಎಂಎಲ್‌ಡಿ	
850	ಜಲಮಂಡಳಿ ಮರು ಬಳಸುತ್ತಿರುವ ಸಂಸ್ಕರಿಸಿದ ನೀರು
380	ಕೋಲಾರ ಜಿಲ್ಲೆಯ ಕೆರೆಗಳಿಗೆ ತುಂಬುತ್ತಿರುವ ನೀರು
150	ಹೆಬ್ಬಾಳ, ಹೊರಮಾವು ಸೇರಿದಂತೆ ರಾಜಕಾಲುವೆಗಳಿಂದ ಸಂಸ್ಕರಿಸಿದ ನೀರು ಚಿಕ್ಕಬಳ್ಳಾಪುರ ಜಿಲ್ಲೆ ಕೆರೆಗಳಿಗೆ ಪೂರೈಕೆ
40	ದೇವನಹಳ್ಳಿ ಟಿಟಿಪಿಯಿಂದ (ತೃತೀಯ ಹಂತದ ಸಂಸ್ಕರಣೆ) ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪೂರೈಕೆ
15	ಜಕ್ಕೂರು ಟಿಟಿಯಿಂದ ಯಲಹಂಕದ ಕೆಪಿಸಿಎಲ್ ಗ್ಯಾಸ್ ಪವರ್ ಪ್ಲಾಂಟ್‌ಗೆ ಪೂರೈಕೆ
10	ಯಲಹಂಕ ಟಿಟಿಪಿಯಿಂದ ಕೆಐಎಎಲ್, ಐಎಎಫ್, ಬಿಇಎಲ್, ರೈಲು ಗಾಲಿ ಕಾರ್ಖಾನೆ, ಐಟಿಸಿ
4	ಕಬ್ಬನ್ ಪಾರ್ಕ್ ಟಿಟಿಪಿಯಿಂದ ರಾಜಭವನ, ವಿಧಾನಸೌಧ, ಹೈಕೋರ್ಟ್, ಗಾಲ್ಫ್ ಕೋರ್ಸ್ ಮತ್ತು ಕಬ್ಬನ್‌ಪಾರ್ಕ್‌ಗೆ ಪೂರೈಕೆ
1.5	ಲಾಲ್‌ಬಾಗ್ ಟಿಟಿಪಿಯಿಂದ ಲಾಲ್‌ಬಾಗ್‌ನಲ್ಲಿ ಬಳಕೆ

- **1.4** ಕೋಟಿ — ಬಿಬಿಎಂಪಿ ವ್ಯಾಪ್ತಿಯಲ್ಲಿನ ಜನಸಂಖ್ಯೆ
- **800** ಚ.ಕಿ.ಮೀ — ಬಿಬಿಎಂಪಿ ಒಟ್ಟು ವ್ಯಾಪ್ತಿ
- **245** ಚ.ಕಿ.ಮೀ — ಬೆಂಗಳೂರು ಕೋರ್ ಪ್ರದೇಶ
- **330** ಚ.ಕಿ.ಮೀ — 8 ಸ್ಥಳೀಯ ಸಂಸ್ಥೆಗಳಿದ್ದ ವ್ಯಾಪ್ತಿ
- **225** ಚ.ಕಿ.ಮೀ — 11 ಹಳ್ಳಿಗಳ ವಿಸ್ತೀರ್ಣ

ಅಂಕಿ ಅಂಶ

- **1450** ಎಂಎಲ್‌ಡಿ — ನಗರಕ್ಕೆ ಪೂರೈಕೆಯಾಗುತ್ತಿರುವ ಕಾವೇರಿ ನೀರು
- **10.70** ಲಕ್ಷ — ಗೃಹಬಳಕೆಯ ಸಂಪರ್ಕ
- **14,194** ಕಿ.ಮೀ — ನೀರು ಸರಬರಾಜಿನ ಕೊಳವೆಮಾರ್ಗ
- **7,477** — ಸಾರ್ವಜನಿಕರಿಗೆ ಉಚಿತ ನೀರು ನೀಡುತ್ತಿರುವ ನಲ್ಲಿಗಳು
- **28%** — ಆದಾಯವಿಲ್ಲದ ನೀರು (ಸೋರಿಕೆ ಪ್ರಮಾಣ)

2026ರ ವೇಳೆಗೆ ‘ಸರ್‌ಪ್ಲಸ್ ನೀರು’: ಜಲಮಂಡಳಿ ಅಧ್ಯಕ್ಷ

4 ತಿಂಗಳೊಳಗೆ ಅಗತ್ಯಕ್ಕೆ ತಕ್ಕಷ್ಟು ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅಗತ್ಯವನ್ನು ಪೂರೈಸುವಷ್ಟು ನೀರು ಜುಲೈ 1ರ ಒಳಗೆ ಲಭ್ಯವಾಗಲಿದೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ಹೇಳಿದರು.

2026ರ ವೇಳೆಗೆ ನಗರದ ಅಗತ್ಯವನ್ನೂ ಮೀರಿ ನೀರು (ಸರ್‌ಪ್ಲಸ್ ನೀರು) ಲಭ್ಯವಾಗಲಿದೆ. ಇದಕ್ಕಾಗಿ ಜಲಮಂಡಳಿ ಹಲವು ಸುಧಾರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

ನೀರಿನ ಉಳಿತಾಯ, ಸಂಸ್ಕರಿಸಿದ ನೀರಿನ ಬಳಕೆ ಹಾಗೂ ಮಳೆ ನೀರು ಮರುಪೂರಣದ ಮೂರು ಪ್ರಮುಖ ಯೋಜನೆಗಳ ಅಡಿಯಲ್ಲಿ ಅಭಿಯಾನ ಪ್ರಾರಂಭಿಸಿದ್ದೇವೆ ಎಂದರು.


ಕಾವೇರಿ ನೀರು ಹಾಗೂ ಕೊಳವೆಬಾವಿಗಳ ಮೂಲಕ ಲಭ್ಯವಾಗುತ್ತಿರುವ ಶುದ್ಧ ನೀರಿನ ಸಮರ್ಪಕ ಬಳಕೆ ಹಾಗೂ ಅದರ ದುರ್ಬಳಕೆಯನ್ನು ತಪ್ಪಿಸಿ ‘ಉಳಿತಾಯಕ್ಕೆ’ ಒತ್ತು ನೀಡುವುದು ಮೊದಲ ಆದ್ಯತೆಯಾಗಿದೆ. ಈ ನಿಟ್ಟಿನಲ್ಲಿ ಈಗಾಗಲೇ ಸಾರ್ವಜನಿಕರಿಗೆ ಹಲವಾರು ಸೂಚನೆಗಳನ್ನು ನೀಡಲಾಗಿದೆ ಎಂದರು.

ಅಂತರ್ಜಲ ಕುಸಿತದ ಕಾರಣ ಎದುರಾಗಿರುವ ಅಭಾವವನ್ನು ಸರಿದೂಗಿಸಲು, ಹೆಚ್ಚಿನ ಪ್ರಮಾಣದ ನೀರಿನ ಬಳಕೆದಾರರಿಗೆ (ಬಲ್ಕ್ ಯೂಸರ್ಸ್) ಶೇ 20ರಷ್ಟು ನೀರು ಕಡಿತಗೊಳಿಸಲಾಗುತ್ತದೆ. ಸ್ವಚ್ಛತೆ ಹಾಗೂ ಇನ್ನಿತರ ಅಗತ್ಯಕ್ಕೆ ರಿಯಾಯಿತಿ ದರದಲ್ಲಿ ವೈಜ್ಞಾನಿಕವಾಗಿ ಸಂಸ್ಕರಿಸಿದ ನೀರನ್ನು ಒದಗಿಸಲಾಗುತ್ತಿದೆ. 49 ಸಂಸ್ಥೆಗಳು ಸಂಸ್ಕರಿಸಿದ ನೀರನ್ನು ಈಗಾಗಲೇ ಬಳಸುತ್ತಿವೆ. 1,300 ಎಂಎಲ್‌ಡಿ ಅಷ್ಟು ಸಂಸ್ಕರಿಸಿದ ನೀರು ಲಭ್ಯವಿದ್ದು ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳೂ ಉಪಯೋಗಿಸುವಂತೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಸಂಸ್ಕರಿಸಿದ ನೀರನ್ನು 14ಕ್ಕೂ ಹೆಚ್ಚು ಕೆರೆಗಳಿಗೆ ತುಂಬಿಸಲಾಗುತ್ತಿದೆ. ಇನ್ನೂ ಹೆಚ್ಚಿನ ಕೆರೆಗಳನ್ನು ತುಂಬಿಸುವುದು ಆದ್ಯತೆಯಾಗಿದೆ. ಅಲ್ಲದೆ, ಬತ್ತಿಹೋಗಿರುವ ಕೊಳವೆಬಾವಿಗಳನ್ನು ಬಳಸಿಕೊಂಡು ಅಂತರ್ಜಲ ಮತ್ತು ಮಳೆ ನೀರು ಮರುಪೂರಣ ಮಾಡಲಾಗುತ್ತದೆ. ಪ್ರತಿಯೊಂದು ಹೊಸ ಕೊಳವೆಬಾವಿ ಕೊರೆಯುವ ಸಂದರ್ಭದಲ್ಲಿ ಎರಡು ಇಂಗುಗುಂಡಿಗಳನ್ನು ನಿರ್ಮಿಸುವುದನ್ನು ಕಡ್ಡಾಯಗೊಳಿಸಲಿದ್ದೇವೆ. ಜಲಮಂಡಳಿಯಿಂದಲೇ ಈ ಪ್ರಕ್ರಿಯೆಯನ್ನು ಆರಂಭಿಸಲಾಗುತ್ತದೆ ಎಂದು ಹೇಳಿದರು.

ಮುಖ್ಯಾಂಶಗಳು

- ಉಳಿತಾಯ, ಸಂಸ್ಕರಿಸಿದ ನೀರಿನ ಬಳಕೆ
- ಅಂತರ್ಜಲ ಹೆಚ್ಚಳದ ‘ಥ್ರೀ ಪ್ಲಾನ್ ಸ್ಟ್ರಾಟೆಜಿ’
- ಜನರಲ್ಲಿ ಜಾಗೃತಿ ಮೂಡಿಸುವ ಆಂದೋಲನ



‘ದಂಡ ಅಭಿಯಾನ’

‘ನೀರಿನ ದುರ್ಬಳಕೆ ಮಾಡುತ್ತಿರುವವರಿಗೆ ದಂಡ ವಿಧಿಸುವ ಅಭಿಯಾನವನ್ನು ಆರಂಭಿಸಲಾಗುತ್ತದೆ. ಈ ಎಲ್ಲಾ ಕ್ರಮಗಳು ಜಲಮಂಡಳಿಯನ್ನು ಶ್ರೀಮಂತಗೊಳಿಸುವುದಕ್ಕೆ ಅಲ್ಲ, ನಗರವನ್ನು ನೀರಿನ ಲಭ್ಯತೆಯಲ್ಲಿ ಶ್ರೀಮಂತಗೊಳಿಸುವುದಾಗಿದೆ. ಸಾರ್ವಜನಿಕರು ಇಂತಹ ಸಂಕಷ್ಟ ಕಾಲದಲ್ಲಿ ಮುಂಜಾಗ್ರತಾ ಕ್ರಮಗಳನ್ನು ಅಳವಡಿಸಿಕೊಂಡು ಜಲಮಂಡಳಿ ಜೊತೆ ಕೈಜೋಡಿಸಬೇಕು’ ಎಂದು ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಹೇಳಿದರು.

‘ಕಾವೇರಿ ಮತ್ತು ಕೊಳವೆಬಾವಿ ನೀರಿನ ಬಳಕೆಯಲ್ಲಿ ನಿಯಮ ಉಲ್ಲಂಘಿಸಿರುವ ಮೂರು ಪ್ರಕರಣಗಳನ್ನು ಸಂಜಯನಗರ, ಎಚ್‌ಎಸ್‌ಆರ್ ಲೇಔಟ್, ಮಹದೇವಪುರದಲ್ಲಿ ದಾಖಲಿಸಲಾಗಿದೆ’ ಎಂದರು.

ಸಂವಾದದಲ್ಲಿ ನ್ಯಾ. ಶ್ರೀಧರ್ ರಾವ್ ಅಭಿಮತ

ಕುಡಿಯಲು ನದಿ ನೀರು ಬಳಕೆಯಾಗಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನದಿ ನೀರನ್ನು ಕೃಷಿಗೆ ಬಳಸುವುದು ಎರಡನೇ ಆದ್ಯತೆಯಾಗಬೇಕು. ಕುಡಿಯಲು ಬಳಸುವುದೇ ಮೊದಲ ಆದ್ಯತೆಯಾಗಬೇಕು. ಈ ನಿಟ್ಟಿನಲ್ಲಿ ನಿಯಮ ರೂಪಿಸಬೇಕು ಎಂದು ಅಸ್ಸಾಂ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ. ಶ್ರೀಧರ್ ರಾವ್ ಸಲಹೆ ನೀಡಿದರು.

ಪಬ್ಲಿಕ್ ರಿಲೇಶನ್ಸ್ ಕೌನ್ಸಿಲ್ ಆಫ್ ಇಂಡಿಯಾದ ಬೆಂಗಳೂರು ಚಾಪ್ಟರ್ ಗುರುವಾರ ಹಮ್ಮಿಕೊಂಡಿದ್ದ ‘ಜಲ ನಿರ್ವಹಣೆ: ಪ್ರಸ್ತುತ ಮತ್ತು ಭವಿಷ್ಯದ ಸವಾಲುಗಳು’ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

18ನೇ ಶತಮಾನದಲ್ಲಿ ಬೆಂಗಳೂರು ಸುತ್ತಮುತ್ತ ಸಾವಿರ ಕೆರೆಗಳು ಇದ್ದವು. ಅಭಿವೃದ್ಧಿಯ ಹೆಸರಲ್ಲಿ ಹಲವು ಕೆರೆಗಳು ಮುಚ್ಚಿಹೋಗಿವೆ. ಉಳಿದಿರುವ ಕೆರೆಗಳನ್ನೂ ಒತ್ತುವರಿ ಮಾಡಲಾಗಿದೆ. ಬೆಳ್ಳಂದೂರು ಸಹಿತ ಹಲವು ಕೆರೆಗಳಿಗೆ ರಾಸಾಯನಿಕ ಸೇರಿ, ಆ ಕೆರೆಗಳ ನೀರನ್ನು ಬಳಕೆ ಮಾಡುವುದು ಕಷ್ಟವಾಗಿದೆ. ಕೆರೆ ಸಂರಕ್ಷಿಸುವುದರ ಜೊತೆಗೆ ಸಮರ್ಪಕವಾಗಿ ನಿರ್ವಹಣೆ ಮಾಡಿದರೆ ನೀರಿನ ಸಮಸ್ಯೆ ನೀಗಿಸಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಸತತ ಮೂರು ವರ್ಷ ಬರಗಾಲ ಇತ್ತು. ಆದರೂ ಬೆಂಗಳೂರಿನಲ್ಲಿ ಕುಡಿಯುವ ನೀರಿಗೆ ತತ್ವಾರ ಉಂಟಾಗಿರಲಿಲ್ಲ. ಆಗ ನಗರದ ಜನಸಂಖ್ಯೆ 40 ಲಕ್ಷದ ಒಳಗೆ ಇದ್ದುದು ಅದಕ್ಕೆ ಕಾರಣ. ಈಗ ಜನಸಂಖ್ಯೆ 1.5 ಕೋಟಿ ದಾಟಿದೆ. ಆದರೆ, ಜಲಮೂಲಗಳು ಹೆಚ್ಚಾಗಿಲ್ಲ ಎಂದು ವಿವರಿಸಿದರು.

ದೇಶದ ವಿವಿಧ ನಗರಗಳಿಗೆ ಹೋಲಿಸಿದರೆ ಬೆಂಗಳೂರಿನ ವಾತಾವರಣ ಬದುಕಲು ಯೋಗ್ಯವಾಗಿದೆ. ಜೊತೆಗೆ ಇಲ್ಲಿ ಹೆಚ್ಚು ಉದ್ಯೋಗ ಸೃಷ್ಟಿಯಾಗುತ್ತದೆ. ಐಟಿ ಕ್ಷೇತ್ರ ಮಾತ್ರವಲ್ಲ, ಹೋಟೆಲ್‌ನಿಂದ ಹಿಡಿದು ಸಲೂನ್‌ವರೆಗೆ ಎಲ್ಲ ಕ್ಷೇತ್ರಗಳಲ್ಲೂ ಉತ್ತಮ ಉದ್ಯೋಗಾವಕಾಶವಿದೆ. ಈ ಕಾರಣದಿಂದಾಗಿ ದೇಶದ ಎಲ್ಲ ಕಡೆಯಿಂದ ಜನರು ಇಲ್ಲಿಗೆ ಬರುತ್ತಿದ್ದಾರೆ. ಪಶ್ಚಿಮ ಬಂಗಾಳವೊಂದರಿಂದಲೇ ಇಲ್ಲಿಗೆ ಬಂದವರ ಸಂಖ್ಯೆ 15 ಲಕ್ಷ ಇದೆ. ಈ ಪ್ರಮಾಣದಲ್ಲಿ ವಲಸೆ ಬಂದಾಗ ಮೂಲಸೌಕರ್ಯಗಳ ಕೊರತೆಯಾಗುತ್ತದೆ. ನೀರಿನ ಕೊರತೆಯೂ ಉಂಟಾಗುತ್ತದೆ ಎಂದು ವಿಶ್ಲೇಷಿಸಿದರು.

ಬೆಂಗಳೂರಿನಂತೆ ರಾಜ್ಯದ ಎರಡನೇ ಸ್ತರದ ನಗರಗಳನ್ನು ಬೆಳೆಸುವಲ್ಲಿ ಸರ್ಕಾರಗಳು ವಿಫಲವಾಗಿವೆ. ಉಳಿದ ನಗರಗಳು ಬೆಳೆದಿದ್ದರೆ ವಲಸಿಗರು ಒಂದೇ ಕಡೆ ಕೇಂದ್ರೀಕೃತವಾಗುವುದು ತಪ್ಪುತ್ತಿತ್ತು. ಈಗಿನ ಅಧ್ಯಯನದ ಪ್ರಕಾರ ಮುಂದಿನ ವರ್ಷವೂ ಬರ ಮುಂದುವರಿಯಲಿದೆ. ಹಾಗಾಗಿ ಐಟಿ ಎಂಜಿನಿಯರ್‌ಗಳ ಸಹಿತ ವಿವಿಧ ಕ್ಷೇತ್ರಗಳ ಉದ್ಯೋಗಿಗಳಿಗೆ ‘ವರ್ಕ್ ಫ್ರಂ ಹೋಂ’ ಅವಕಾಶ ನೀಡಬೇಕು. ಉದ್ಯೋಗಿಗಳು ತಮ್ಮ ಊರಿನಿಂದಲೇ ಕೆಲಸ ಮಾಡುವಂತೆ ವ್ಯವಸ್ಥೆ ರೂಪಿಸಬೇಕು‘ ಎಂದು ಅಭಿಪ್ರಾಯ ಪಟ್ಟರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ. ಕೃಷ್ಣಭಟ್ ಮಾತನಾಡಿ, ‘ಇಸ್ರೇಲ್‌ನಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ ತ್ಯಾಜ್ಯ ನೀರನ್ನು ಪರಿಣಾಮಕಾರಿಯಾಗಿ ಸಂಸ್ಕರಿಸಿ ಮರುಬಳಕೆ ಮಾಡಲಾಗುತ್ತಿದೆ. ಇಂಥ ಕ್ರಮಗಳು ನಮ್ಮಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಿಲ್ಲ. ಬದಲಾಗಿ ಟ್ಯಾಂಕ್‌ಗಳಲ್ಲಿರುವ ನೀರು ಗ್ರಾಹಕನಿಗೆ ತಲುಪುವ ಮೊದಲು ಸೋರಿಕೆಯಾಗುತ್ತದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಪಬ್ಲಿಕ್ ರಿಲೇಶನ್ಸ್ ಕೌನ್ಸಿಲ್ ಆಫ್ ಇಂಡಿಯಾದ ಬೆಂಗಳೂರು ಚಾಪ್ಟರ್ ಅಧ್ಯಕ್ಷ ರಾಮಕೃಷ್ಣ ಎಚ್.ಎಲ್., ಗೌರವಾಧ್ಯಕ್ಷ ಎಂ.ಬಿ. ಜಯರಾಮ್, ರಾಷ್ಟ್ರೀಯ ಅಧ್ಯಕ್ಷೆ ಗೀತಾ ಶಂಕರ್, ನಿರ್ದೇಶಕ ಎಸ್.ಟಿ. ರಾಮಚಂದ್ರ, ವೈಸಿಸಿ ಅಧ್ಯಕ್ಷ ಚಿನ್ಮಯ ಪ್ರವೀಣ್, ಕಾರ್ಯದರ್ಶಿ ಆನಂದ ಗೋಪಾಲ್, ನಿವೃತ್ತ ಐಎಎಸ್ ಅಧಿಕಾರಿ ಜೈರಾಜ್ ಕೆ., ಪರಿಸರವಾದಿ ಸುರೇಶ್ ಹೆಬ್ಳೀಕರ್, ನಿವೃತ್ತ ಡಿಜಿ ಎಚ್.ಎಸ್.ಎಂ. ಪ್ರಕಾಶ್, ನಿವೃತ್ತ ಎಡಿಜಿಗಳಾದ ಎಂ.ಎಂ. ಸ್ವಾಮಿ, ಎಸ್.ಆರ್. ರಮೇಶ್, ಭೂವಿಜ್ಞಾನ ಪ್ರಾಧ್ಯಾಪಕ ಬಿ.ಸಿ ಪ್ರಭಾಕರ್, ನಿವೃತ್ತ ಕುಲಪತಿ ಕೆ.ಆರ್. ವೇಣುಗೋಪಾಲ್, ಭೂವಿಜ್ಞಾನಿ ಕೆ.ಎಸ್. ರಾಧಿಕಾ, ಬಿಎಂಆರ್‌ಸಿಎಲ್ ಮಾಹಿ ಭೂ ವಿಜ್ಞಾನಿ ಫರೀದುದ್ದೀನ್, ಎಚ್‌ಜಿಎಂಎಲ್ ನಿರ್ದೇಶಕ ಪ್ರಭಾಕರ್ ಸಂಗೂರ್‌ಮಠ್, ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜು ಉಪಪ್ರಾಂಶುಪಾಲ ಎಚ್.ಕೆ. ರಾಮರಾಜು ಸಂವಾದ ನಡೆಸಿದರು.



‘ಜಲ ನಿರ್ವಹಣೆ ಪ್ರಸ್ತುತ ಮತ್ತು ಭವಿಷ್ಯದ ಸವಾಲುಗಳು’ ಸಂವಾದ ಕಾರ್ಯಕ್ರಮದಲ್ಲಿ ಪಬ್ಲಿಕ್ ರಿಲೇಶನ್ಸ್ ಕೌನ್ಸಿಲ್ ಆಫ್ ಇಂಡಿಯಾ ಗೌರವಾಧ್ಯಕ್ಷ ಎಂ.ಬಿ. ಜಯರಾಂ ಅವರು ಅಸ್ಸಾಂ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ. ಶ್ರೀಧರ್ ರಾವ್ ಅವರನ್ನು ಸ್ವಾಗತಿಸಿದರು –ಪ್ರಜಾವಾಣಿ ಚಿತ್ರ

ಪತಂಜಲಿಯ ಆಚಾರ್ಯ ಬಾಲಕೃಷ್ಣ ಕ್ಷಮೆ ಯಾಚನೆ

ನವದೆಹಲಿ (ಪಿಟಿಐ): ಕಂಪನಿಯ ಉತ್ಪನ್ನಗಳು ಹಾಗೂ ಅವುಗಳ ಫಲದಾಯಕತೆಯ ಜಾಹೀರಾತಿಗೆ ಸಂಬಂಧಿಸಿದ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಪತಂಜಲಿ ಆಯುರ್ವೇದ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಆಚಾರ್ಯ ಬಾಲಕೃಷ್ಣ ಅವರು ಸುಪ್ರೀಂ ಕೋರ್ಟ್‌ನಲ್ಲಿ ಬೇಷರತ್ ಕ್ಷಮೆ ಯಾಚಿಸಿದ್ದಾರೆ.

ಈ ಪ್ರಕರಣದ ನೋಟಿಸ್‌ಗೆ ಪ್ರತಿಕ್ರಿಯಿಸಲು ಕಂಪನಿಯು ವಿಫಲವಾದ ಕಾರಣಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ಸುಪ್ರೀಂ ಕೋರ್ಟ್, ಯೋಗ ಗುರು ರಾಮದೇವ ಮತ್ತು ಬಾಲಕೃಷ್ಣ ಅವರಿಗೆ ಏ. 2 ರಂದು ನ್ಯಾಯಾಲಯಕ್ಕೆ ಖುದ್ದು ಹಾಜರಾಗುವಂತೆ ಸೂಚಿಸಿತ್ತು.

‘ಪ್ರತಿವಾದಿ (ಬಾಲಕೃಷ್ಣ) ಕಾನೂನಿನ ಮೇಲೆ ಅಪಾರ ಗೌರವ ಹೊಂದಿದ್ದಾರೆ. ಕಾನೂನು ಪಾಲಿಸಲು ಬದ್ಧರಾಗಿದ್ದಾರೆ. ಪ್ರಶ್ನಾರ್ಹ ಜಾಹೀರಾತಿಗೆ ವಿಷಾದಿಸುತ್ತೇವೆ’ ಎಂದು ಬಾಲಕೃಷ್ಣ, ಇದೇ 19ರಂದೇ ನ್ಯಾಯಮೂರ್ತಿ ಹಿಮಾ ಕೊಹ್ಲಿ ಅವರ ನೇತೃತ್ವದ ಪೀಠಕ್ಕೆ ಪ್ರಮಾಣಪತ್ರ ಸಲ್ಲಿಸಿದ್ದಾರೆ.

‘2023ರ ನ. 21ರ ಆದೇಶದ ಪ್ಯಾರಾ 3ರಲ್ಲಿ ದಾಖಲಿಸಲಾದ ಹೇಳಿಕೆಯ ಉಲ್ಲಂಘನೆಗಾಗಿ ಪ್ರತಿವಾದಿ (ಪತಂಜಲಿ) ಪರವಾಗಿ ಗೌರವಾನ್ವಿತ ನ್ಯಾಯಾಲಯದ ಮುಂದೆ ಬೇಷರತ್ ಕ್ಷಮೆ ಕೋರುತ್ತೇನೆ. ಮುಂದೆ ಇಂತಹ ಜಾಹೀರಾತುಗಳನ್ನು ಪ್ರಕಟಿಸುವುದಿಲ್ಲ’ ಎಂದು ಬಾಲಕೃಷ್ಣ ಪ್ರಮಾಣಪತ್ರದಲ್ಲಿ ಹೇಳಿದ್ದಾರೆ. ಪತಂಜಲಿಯ ವಕೀಲರು, ‘ಇನ್ನು ಮುಂದೆ ಕಂಪನಿಯ ಉತ್ಪನ್ನಗಳ ಜಾಹೀರಾತು, ಬ್ರ್ಯಾಂಡಿಂಗ್ ವಿಚಾರವಾಗಿ ಕಾನೂನು ಉಲ್ಲಂಘಿಸುವುದಿಲ್ಲ. ಯಾವುದೇ ವೈದ್ಯ ಪದ್ಧತಿಗಳ ವಿರುದ್ಧ ಬೀಸು ಹೇಳಿಕೆಗಳನ್ನು ನೀಡುವುದಿಲ್ಲ’ ಎಂದು ಕಳೆದ ವರ್ಷದ ನ. 21ರಂದು ಕೋರ್ಟ್‌ಗೆ ಭರವಸೆ ನೀಡಿದ್ದರು.

ರಾಮದೇವ ಅವರು ಕೋವಿಡ್ ಲಸಿಕೆ ಅಭಿಯಾನದ ವಿರುದ್ಧ ಹಾಗೂ ಆಧುನಿಕ ವೈದ್ಯಪದ್ಧತಿಯ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದಾರೆ ಎಂದು ದೂರಿ ಭಾರತೀಯ ವೈದ್ಯಕೀಯ ಸಂಘ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.

ಕಾಂಗ್ರೆಸ್ ಅಭ್ಯರ್ಥಿಗಳ ಪರಿಚಯ

ಎಂ.ವಿ. ರಾಜೀವ್ ಗೌಡ



ಎಂ.ವಿ. ರಾಜೀವ್ ಗೌಡ ಅವರು ಜನಿಸಿದ್ದು 1963ರಲ್ಲಿ. ಅವರ ತಂದೆ ಎಂ.ವಿ. ವೆಂಕಟಪ್ಪ ಅವರು ಮುಳಬಾಗಲು ವಿಧಾನಸಭಾ ಕ್ಷೇತ್ರದಿಂದ ಎರಡು ಬಾರಿ ಆಯ್ಕೆಯಾಗಿದ್ದು, ಎರಡು ಬಾರಿ ವಿಧಾನ ಪರಿಷತ್ತಿಗೆ ನಾಮನಿರ್ದೇಶನಗೊಂಡಿದ್ದರು. ಅಲ್ಲದೆ, ವಿಧಾನಸಭಾಧ್ಯಕ್ಷ ಮತ್ತು ವಿಧಾನ ಪರಿಷತ್ ಸಭಾಪತಿ ಆಗಿದ್ದರು.

ರಾಜೀವ್ ಗೌಡ ಅವರು 1984ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಎ, 1985ರಲ್ಲಿ ಫೋರ್ಡ್‌ಹಾಮ್ ವಿಶ್ವವಿದ್ಯಾಲಯದಿಂದ ಮಾಸ್ಟರ್ ಆಫ್ ಆರ್ಟ್ಸ್, 1992ರಲ್ಲಿ ಪೆನ್ಸಿಲ್ವೇನಿಯಾ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ ಪಡೆದಿದ್ದಾರೆ. ಅದೇ ವರ್ಷ ಅವರು ಒಕ್ಲಹೋಮ ವಿಶ್ವವಿದ್ಯಾಲಯಕ್ಕೆ ರಾಜ್ಯಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾಗಿ ಸೇರಿದರು. 2000ರಲ್ಲಿ ಭಾರತಕ್ಕೆ ಮರಳಿದ ಅವರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು (ಐಐಎಂಬಿ) ಸೇರಿದರು. ಅದೇ ವೇಳೆಗೆ ರಾಜಕೀಯದಲ್ಲಿಯೂ ಸಕ್ರಿಯರಾದರು. 2004ರಲ್ಲಿ ರಾಹುಲ್ ಗಾಂಧಿ ರಾಜಕೀಯ ಪ್ರವೇಶಿಸಿದಾಗ ಅವರೊಂದಿಗೆ ಕೆಲಸ ಮಾಡಿದ 24 ನಾಯಕರ ತಂಡದಲ್ಲಿ ಇವರೂ ಇದ್ದರು. ಕೆಪಿಸಿಸಿ ವಿಚಾರ ವಿಭಾಗದ ಸಂಚಾಲಕರೂ ಆಗಿದ್ದ ರಾಜೀವ್ ಗೌಡ, ವಿಧಾನಸಭೆ ಮತ್ತು ಬಿಬಿಎಂಪಿ ಚುನಾವಣೆ ಪ್ರಣಾಳಿಕೆ ಸಮಿತಿಯ ಭಾಗವಾಗಿದ್ದರು.

2013ರಲ್ಲಿ ಅವರನ್ನು ಎಐಸಿಸಿ ರಾಷ್ಟ್ರೀಯ ವಕ್ತಾರರನ್ನಾಗಿ ನೇಮಿಸಲಾಗಿತ್ತು. ರಾಜ್ಯದಿಂದ 2014ರಲ್ಲಿ ರಾಜ್ಯಸಭೆಗೆ ನಾಮನಿರ್ದೇಶನಗೊಂಡಿದ್ದರು. ಸದ್ಯ ಅವರು ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ.

ಸೌಮ್ಯಾ ರೆಡ್ಡಿ



ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರ ಪುತ್ರಿ. ಜನನ 1983. ಬೆಂಗಳೂರಿನ ಆರ್.ವಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಕೆಮಿಕಲ್ ಎಂಜಿನಿಯರಿಂಗ್ ವಿಷಯದಲ್ಲಿ ಪದವಿ ಮುಗಿಸಿದ ಬಳಿಕ ಅವರು ನ್ಯೂಯಾರ್ಕ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪರಿಸರ ತಂತ್ರಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿ (ಎಂಎಸ್) ಮುಗಿಸಿದರು. 2014ರಲ್ಲಿ ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ ಸದಸ್ಯರಾದ ಸೌಮ್ಯಾ ರೆಡ್ಡಿ, ಬಳಿಕ ರಾಜಕೀಯದತ್ತ ಒಲವು ತೋರಿದರು. ತಂದೆಯ ಮಾರ್ಗವನ್ನೇ ಹಿಡಿದ ಅವರು, 2016ರಲ್ಲಿ ಕೆಪಿಸಿಸಿ ಮಹಿಳಾ ಘಟಕದ ಕಾರ್ಯದರ್ಶಿ, 2017ರಲ್ಲಿ ಯುವ ಕಾಂಗ್ರೆಸ್ ಉಪಾಧ್ಯಕ್ಷರಾಗಿದ್ದರು. 2019ರಲ್ಲಿ ಅಖಿಲ ಭಾರತ ಮಹಿಳಾ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಆದರು.

2018ರ ವಿಧಾನಸಭೆ ಚುನಾವಣೆಯಲ್ಲಿ ಜಯನಗರ ಕ್ಷೇತ್ರದಿಂದ ಚುನಾಯಿತರಾಗಿದ್ದ ಅವರು, 2023ರ ಚುನಾವಣೆಯಲ್ಲಿ ಸೋಲು ಕಂಡಿದ್ದಾರೆ. ಬಿಜೆಪಿ ಸರ್ಕಾರದ ವಿರುದ್ಧದ ಹಲವು ಹೋರಾಟಗಳಲ್ಲಿ ಸೌಮ್ಯಾ ರೆಡ್ಡಿ ಮುಂಚೂಣಿಯಲ್ಲಿ ಕಾಣಿಸಿಕೊಳ್ಳುತ್ತಾರೆ.

ಮನ್ಸೂರ್ ಅಲಿ ಖಾನ್



ಐದು ಬಾರಿ ರಾಜ್ಯಸಭೆ ಸದಸ್ಯ, 2012ರಿಂದ 2014ರವರೆಗೆ ರಾಜ್ಯಸಭೆಯ ಉಪ ಸಭಾಪತಿ ಆಗಿದ್ದ ಕೆ. ರೆಹಮಾನ್ ಖಾನ್ ಅವರ ಪುತ್ರ. ಜನನ 1972. ರೆಹಮಾನ್ ಖಾನ್ ಅವರು ಕೇಂದ್ರದಲ್ಲಿ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವರಾಗಿಯೂ ಕೆಲಸ ಮಾಡಿದ್ದರು. ಮನ್ಸೂರ್, ಶಿಕ್ಷಣ ಸಂಸ್ಥೆಗಳನ್ನು ಹೊಂದಿದ್ದು, ಉದ್ಯಮಿಯೂ ಹೌದು. 1996ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಬಿ.ಎಂ ಪದವಿ ಪಡೆದ ಅವರು, 2001ರಲ್ಲಿ ಬೆಂಗಳೂರಿನಲ್ಲಿ ದೆಹಲಿ ಪಬ್ಲಿಕ್ ಸ್ಕೂಲ್ (ಡಿಪಿಎಸ್) ಸ್ಥಾಪಿಸಿದ ಅವರು, ಅದೇ ವರ್ಷ ಕೆಕೆ ಎಜುಕೇಷನಲ್ ಚಾರಿಟೆಬಲ್ ಟ್ರಸ್ಟ್ ಆರಂಭಿಸಿದರು. ಈ ಟ್ರಸ್ಟ್ ಹಲವು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ.

2013ರಲ್ಲಿ ಕೆಪಿಸಿಸಿಯ ವೃತ್ತಿನಿರತರ ಕೋಶದ ಉಪಾಧ್ಯಕ್ಷರಾದ ಅವರು ಬಳಿಕ ರಾಜಕೀಯದಲ್ಲಿ ಸಕ್ರಿಯರಾದರು. ರಾಜಕೀಯವಾಗಿ ತಂದೆಯ ಹಾದಿ ತುಳಿದಿರುವ ಮನ್ಸೂರ್, ಎಐಸಿಸಿ ಕಾರ್ಯದರ್ಶಿಯಾಗಿ ತೆಲಂಗಾಣದಲ್ಲಿ ಕೆಲಸ ಮಾಡಿದ್ದರು. ಅಲ್ಲದೆ, ಇತ್ತೀಚೆಗೆ ನಡೆದ ತೆಲಂಗಾಣ ವಿಧಾನಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿನ ಹಿಂದೆ ಮನ್ಸೂರ್ ಕೂಡ ಸಕ್ರಿಯವಾಗಿ ಕೆಲಸ ಮಾಡಿದ್ದರು. 2022ರಲ್ಲಿ ಕೆಪಿಸಿಸಿಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡ ಅವರು, ಅದೇ ವರ್ಷ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಎರಡನೇ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

ರಾಜ್ಯಸಭೆ ಚುನಾವಣೆ: ಕಾಂಗ್ರೆಸ್‌ಗೆ ಮತ ಚಲಾಯಿಸಿದ್ದಕ್ಕೆ ನೀಡಿದ್ದ ನೋಟಿಸ್‌ಗೆ 170 ಪುಟಗಳ ಉತ್ತರ

ಶೋಭಾ ಅಂದರೆ ಭಯ: ಸೋಮಶೇಖರ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಬೆಂಗಳೂರು ಉತ್ತರ ಕ್ಷೇತ್ರದ ಅಭ್ಯರ್ಥಿ ಶೋಭಾ ಕರಂದ್ಲಾಜೆ ಅವರು ಯಾವಾಗ ನನ್ನ ವಿರುದ್ಧ ದ್ವೇಷ ಭಾಷಣ ಮಾಡುತ್ತಾರೋ ಎಂಬ ಭಯ ಕಾಡುತ್ತಿದೆ' ಎಂದು ಯಶವಂತಪುರ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ಅವರು ಹೇಳಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿ, 'ಈ ಹಿಂದೆ ಇಲ್ಲಿನ ಸಂಸದರಾಗಿದ್ದ ಡಿ.ಬಿ.ಚಂದ್ರೇಗೌಡ ಮತ್ತು ಡಿ.ವಿ. ಸದಾನಂದ ಗೌಡ ಅವರ ಜತೆ ಯಾವುದೇ ಭಿನ್ನಾಭಿಪ್ರಾಯ ಇರಲಿಲ್ಲ. ಆದರೆ, ಶೋಭಾ ಕರಂದ್ಲಾಜೆ ಯಾವಾಗ ನನ್ನ ವಿರುದ್ಧ ದ್ವೇಷ ಭಾಷಣ ಮಾಡುತ್ತಾರೆ ಎಂಬುದು ಗೊತ್ತಿಲ್ಲ. ಅಸಂಬದ್ಧವಾಗಿ ಮಾತನಾಡುತ್ತಿದ್ದಾರೆ. ಮತೀಯ ಗಲಭೆಗೆ ಉತ್ತೇಜನ ನೀಡುವ ಮಾತು ಆಡುತ್ತಿದ್ದಾರೆ. ಹೀಗಾಗಿ ಕ್ಷೇತ್ರಕ್ಕೆ ಹೋಗಲು ಭಯ ಆಗುತ್ತಿದೆ' ಎಂದರು.

'ಒಂದು ವೇಳೆ ದ್ವೇಷ ಭಾಷಣ ಮುಂದುವರಿದರೆ ಪೊಲೀಸ್ ಕಮಿಷನರ್ ಅವರನ್ನು ಭೇಟಿ ಮಾಡಿ ರಕ್ಷಣೆ ಕೇಳಬೇಕಾಗುತ್ತದೆ. ಅವರು ಇಲ್ಲಿಗೆ ಸಂಸದೆಯಾಗಲು ಬಂದಿದ್ದಾರೋ ಅಥವಾ ಜನರನ್ನು ಪ್ರಚೋದಿಸಲು ಬಂದಿದ್ದಾರೋ' ಎಂದು ಅವರು ಪ್ರಶ್ನಿಸಿದರು.

ನೋಟಿಸ್‌ಗೆ 170 ಪುಟಗಳ ಉತ್ತರ: ರಾಜ್ಯಸಭಾ ಚುನಾವಣೆಯಲ್ಲಿ ಪಕ್ಷದ ವಿಪ್ ಉಲ್ಲಂಘಿಸಿ ಕಾಂಗ್ರೆಸ್‌ಗೆ ಮತ ಚಲಾಯಿಸಿದ ಎಸ್.ಟಿ.ಸೋಮಶೇಖರ್ ಮತ್ತು ಮತ ಚಲಾಯಿಸದ ಶಿವರಾಮ್ ಹೆಬ್ಬಾರ್ ಅವರು ಬಿಜೆಪಿ ವರಿಷ್ಠರು ನೀಡಿದ ನೋಟಿಸ್‌ಗೆ ತಲಾ 170 ಪುಟಗಳ ಉತ್ತರ ನೀಡಿರುವುದಾಗಿ ಹೇಳಿದರು.

'ದೇಶದ ವಿವಿಧ ನ್ಯಾಯಾಲಯಗಳು ಅಡ್ಡ ಮತದಾನದ ಕುರಿತು ನೀಡಿರುವ ತೀರ್ಪುಗಳನ್ನು ಉಲ್ಲೇಖಿಸಿ ಉತ್ತರ ನೀಡಲಾಗಿದೆ. ರಾಜ್ಯಸಭಾ ಚುನಾವಣೆಯ ಸಂದರ್ಭದಲ್ಲಿ ಇತರ ರಾಜ್ಯಗಳಲ್ಲಿ ಬಿಜೆಪಿ ಪರ ಕಾಂಗ್ರೆಸ್ ಮತ್ತು ಇತರ ಪಕ್ಷಗಳ ಶಾಸಕರು ಮತ ಚಲಾಯಿಸಿರುವುದನ್ನೂ ಉಲ್ಲೇಖಿಸಿದ್ದೇವೆ. ಯಾವ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಕಾಯುತ್ತಿದ್ದೇವೆ' ಎಂದು ಸೋಮಶೇಖರ್ ಮತ್ತು ಹೆಬ್ಬಾರ್ ವಿವರಿಸಿದರು.

'ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್‌ಗೆ ಸಹಾಯ ಮಾಡುವ ನಿಟ್ಟಿನಲ್ಲಿ ಇವರಿಬ್ಬರನ್ನು ಕರೆಸಿಕೊಂಡು ಶಿವಕುಮಾರ್ ಮಾತುಕತೆ ನಡೆಸಿದ್ದಾರೆ. ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಡಿ.ಕೆ.ಸುರೇಶ್ ಅವರ ಪರವಾಗಿ ಸಹಾಯ ಮಾಡಲು ಕೇಳಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಶೋಭಾ ಕರಂದ್ಲಾಜೆ ಅವರು ಅಭ್ಯರ್ಥಿ ಘೋಷಣೆಯಾದ ಬಳಿಕ ಯಶವಂತಪುರ ಶಾಸಕ ಸೋಮಶೇಖರ್ ಅವರನ್ನು ಭೇಟಿ ಮಾಡಿಲ್ಲ. ಆದರೆ, ಅವರ ಕಟ್ಟಾ ಎದುರಾಳಿ ಜೆಡಿಎಸ್‌ನ ಜವರಾಯಿಗೌಡ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.

ಮುಂಜಾಗ್ರತಾ ಕ್ರಮ: ಕೆಲವು ರೌಡಿಗಳನ್ನು ವಶಕ್ಕೆ ಪಡೆದು ವಿಚಾರಣೆ

234 ರೌಡಿಗಳ ಮನೆ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ನಗರದ 234 ರೌಡಿಗಳ ಮನೆಗಳ ಮೇಲೆ ಪೊಲೀಸರು ದಾಳಿ ಮಾಡಿದ್ದು, ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ದಕ್ಷಿಣ ವಿಭಾಗದ ಜಯನಗರ, ಜೆ.ಪಿ.ನಗರ, ಬಸವನಗುಡಿ, ಸಿದ್ದಾಪುರ, ಬನಶಂಕರಿ, ಪುಟ್ಟೇನಹಳ್ಳಿ, ಕುಮಾರಸ್ವಾಮಿ ಲೇಔಟ್, ಸುಬ್ರಹ್ಮಣ್ಯಪುರ, ಕೋಣನಕುಂಟೆ, ತಲಘಟ್ಟಪುರ, ವಿ.ವಿ.ಪುರ, ಶಂಕರಪುರ, ಹನುಮಂತನಗರ, ಕೆಂಪೇಗೌಡ ನಗರ, ಗಿರಿನಗರ ಹಾಗೂ ಚನ್ನಮ್ಮನ ಅಚ್ಚುಕಟ್ಟು ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ರೌಡಿಗಳ ಮನೆಯಲ್ಲಿ ಪೊಲೀಸರು ಶೋಧ ನಡೆಸಿದರು.



ರೌಡಿಯೊಬ್ಬನ ಮನೆಯಲ್ಲಿ ಪೊಲೀಸರು ಶೋಧ ನಡೆಸಿದರು

'ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದೆ. ಕೆಲ ರೌಡಿಗಳು, ಕಾನೂನು ಸುವ್ಯಸ್ಥೆಗೆ ಧಕ್ಕೆ ತರುವ ಹಾಗೂ ಮತದಾರರನ್ನು ಬೆದರಿಸುವ ಬಗ್ಗೆ ಮಾಹಿತಿ ಇದೆ. ಹೀಗಾಗಿ, ವಿಶೇಷ ತಂಡಗಳನ್ನು ರಚಿಸಿ ಗುರುವಾರ ನಸುಕಿನಿಂದಲೇ ರೌಡಿಗಳ ಮನೆಗಳಲ್ಲಿ ಶೋಧ ನಡೆಸಲಾಯಿತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'234 ರೌಡಿಗಳ ಮನೆಯ ಎಲ್ಲ ಕಡೆಯೂ ಪರಿಶೀಲಿಸಲಾಯಿತು. ದಾಳಿ ಸಂದರ್ಭದಲ್ಲಿ 90 ರೌಡಿಗಳು ಮನೆಯಲ್ಲಿ ಇರಲಿಲ್ಲ. ಅವರು ಎಲ್ಲಿದ್ದಾರೆ? ಎಂಬ ಮಾಹಿತಿ ಕಲೆಹಾಕಲಾಗುತ್ತಿದೆ. ಉಳಿದ ರೌಡಿಗಳಿಗೆ ಅಪರಾಧಗಳಲ್ಲಿ ತೊಡಗದಂತೆ ಎಚ್ಚರಿಕೆ ನೀಡಲಾಗಿದೆ. ಕೆಲವರಿಂದ ಮುಚ್ಚಳಿಕೆ ಸಹ ಬರೆಸಿಕೊಳ್ಳಲಾಗಿದೆ' ಎಂದು ತಿಳಿಸಿದರು.

ಜೆಡಿಎಸ್ ಮಾಜಿ ಶಾಸಕರು ಇಂದು ಕಾಂಗ್ರೆಸ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್‌ನ ಮೂವರು ನಾಯಕರು 'ಕೈ' ಹಿಡಿಯಲು ನಿರ್ಧರಿಸಿದ್ದಾರೆ.

ಮಂಡ್ಯದ ಮಾಜಿ ಶಾಸಕ ಎಂ. ಶ್ರೀನಿವಾಸ್, ವಿಧಾನ ಪರಿಷತ್ ಮಾಜಿ ಸದಸ್ಯ ನಾಗಮಂಗಲದ ಅಪ್ಪಾಜಿ ಗೌಡ ಮತ್ತು ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ಗುರುವಾರ ರಾಜೀನಾಮೆ ನೀಡಿರುವ ಮರಿತಿಬ್ಬೇಗೌಡ ಕಾಂಗ್ರೆಸ್ ಸೇರಲಿರುವ ನಾಯಕರು.

ಕೆಪಿಸಿಸಿ ಕಚೇರಿಯಲ್ಲಿ ಮಧ್ಯಾಹ್ನ 12 ಗಂಟೆಗೆ ಪಕ್ಷ ಸೇರ್ಪಡೆ ಕಾರ್ಯಕ್ರಮ ನಡೆಯಲಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಕೇಜ್ರಿವಾಲ್ ಬಂಧನ: ಎಎಪಿ ಪ್ರಚಾರಕ್ಕೆ ಹಿನ್ನಡೆ?

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಬಂಧನವು ಲೋಕಸಭೆ ಚುನಾವಣೆಯಲ್ಲಿ ವಿವಿಧೆಡೆ ತನ್ನ ಖಾತೆ ತೆರೆಯುವ ಆಮ್ ಆದ್ಮಿ ಪಕ್ಷದ (ಎಎಪಿ) ಯತ್ನಕ್ಕೆ ಹಿನ್ನಡೆ ಆಗುವ ಸಾಧ್ಯತೆಗಳಿವೆ.

ಅರವಿಂದ್ ಕೇಜ್ರಿವಾಲ್ ಅವರು ಎಎಪಿ ಪಕ್ಷದ ಪ್ರಮುಖ ಪ್ರಚಾರಕರಾಗಿದ್ದಾರೆ. ಎಎಪಿ ಪ್ರಸ್ತುತ ಲೋಕಸಭೆ ಚುನಾವಣೆಗೆ ದೆಹಲಿ, ಹರಿಯಾಣ ಮತ್ತು ಗುಜರಾತ್‌ನಲ್ಲಿ ಸ್ಪರ್ಧೆಯಲ್ಲಿದ್ದು, ಕಾಂಗ್ರೆಸ್ ಜೊತೆಗೆ ಮೈತ್ರಿ ಮಾಡಿಕೊಂಡಿದೆ.

ಎಎಪಿ ಈಗಾಗಲೇ ಪಕ್ಷದ ಮುಖಂಡರಾದ ಮನೀಶ್ ಸಿಸೋಡಿಯಾ, ಸತ್ಯೇಂದ್ರ ಜೈನ್ ಮತ್ತು ಸಂಜಯ್ ಸಿಂಗ್ ಅವರ ಅನುಪಸ್ಥಿತಿಯನ್ನು ಎದುರಿಸುತ್ತಿದೆ. ಈಗ ಕೇಜ್ರಿವಾಲ್ ಅವರ ಬಂಧನವು ಪಕ್ಷದ ಮೇಲೆ ಪರಿಣಾಮ ಬೀರಬಹುದಾಗಿದೆ.

ದೆಹಲಿಯಲ್ಲಿ 4, ಗುಜರಾತ್‌ನಲ್ಲಿ 2 ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಎಎಪಿ, ಕೇಜ್ರಿವಾಲ್ ಅವರ ಪ್ರಚಾರವನ್ನು ಅವಲಂಬಿಸಿದೆ. ಪಂಜಾಬ್‌ನಲ್ಲಿ 13 ಕ್ಷೇತ್ರಗಳಿಗೆ ಸ್ಪರ್ಧಿಸಿದ್ದು, ಅಲ್ಲಿ ಮುಖ್ಯಮಂತ್ರಿ ಭಗವಂತ ಮಾನ್ ಪ್ರಚಾರದ ಹೊಣೆ ಹೊತ್ತಿದ್ದಾರೆ.



ಅರವಿಂದ ಕೇಜ್ರಿವಾಲ್ ಅವರನ್ನು ಇ.ಡಿ ಅಧಿಕಾರಿಗಳು ಬಂಧಿಸಿದ್ದನ್ನು ವಿರೋಧಿಸಿ ನವದೆಹಲಿಯಲ್ಲಿ ಪ್ರತಿಭಟನೆ ನಡೆಸಿದ ಆಮ್ ಆದ್ಮಿ ಪಕ್ಷದ ಬೆಂಬಲಿಗರೊಬ್ಬರನ್ನು ಪೊಲೀಸರು ವಶಕ್ಕೆ ಪಡೆದರು –ಪಿಟಿಐ ಚಿತ್ರ

> **ಪುಕ್ಕಲು ಸರ್ವಾಧಿಕಾರಿ ಪ್ರಜಾಪ್ರಭುತ್ವವನ್ನು ಮುಗಿಸಲು ಹೊರಟಿದ್ದಾರೆ. ಲೋಕಸಭಾ ಚುನಾವಣೆಯ ಭಯ ಬಿಜೆಪಿಗೆ ಇದೆ ಎನ್ನುವುದಕ್ಕೆ ಇದೇ ಸಾಕ್ಷಿ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

> **ದಶಕಗಳ ವೈಫಲ್ಯ ಹಾಗೂ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಸೋಲುವ ಭೀತಿಯಿಂದ ಬಿಜೆಪಿ ಹೀಗೆ ಮಾಡಿದೆ**
> **ಎಂ.ಕೆ.ಸ್ಟಾಲಿನ್,** ತಮಿಳುನಾಡಿನ ಸಿ.ಎಂ

> **ಚುನಾವಣೆಯಲ್ಲಿ ಸೋಲುವ ಆತಂಕವು ಬಿಜೆಪಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಾಡುತ್ತಿದೆ**
> **ಸೀತಾರಾಂ ಯೆಚೂರಿ**
> ಸಿಪಿಎಂ ಪ್ರಧಾನ ಕಾರ್ಯದರ್ಶಿ

ಇಂದು ದೇಶದಾದ್ಯಂತ ಪ್ರತಿಭಟನೆ: ಎಎಪಿ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನ ವಿರೋಧಿಸಿ ದೇಶದಾದ್ಯಂತ ಶುಕ್ರವಾರ ಬಂದ್‌ಗೆ ಆಮ್ ಆದ್ಮಿ ಪಕ್ಷ (ಎಎಪಿ) ಕರೆ ನೀಡಿದೆ.

'ಇದು ಪ್ರಜಾಪ್ರಭುತ್ವದ ಕಗ್ಗೊಲೆ. ಸರ್ವಾಧಿಕಾರಿ ಧೋರಣೆಯ ಪ್ರಕಟಣೆ. ಇದನ್ನು ವಿರೋಧಿಸಿ ಶುಕ್ರವಾರ ದೇಶದಾದ್ಯಂತ ಬಿಜೆಪಿ ಕಚೇರಿಗಳ ಎದುರು ಪ್ರತಿಭಟನೆ ನಡೆಸಲು ಕರೆ ನೀಡುತ್ತಿದ್ದೇನೆ. ದೆಹಲಿಯ ಎಎಪಿ ಕಚೇರಿಯಲ್ಲಿ ಶುಕ್ರವಾರ ಬೆಳಿಗ್ಗೆ ಪಕ್ಷದ ನಾವೆಲ್ಲರೂ ಸೇರುತ್ತೇವೆ. ಪ್ರತಿಭಟನೆ ಪ್ರಾರಂಭಿಸುತ್ತೇವೆ' ಎಂದು ಪಕ್ಷದ ದೆಹಲಿ ಘಟಕದ ಸಂಚಾಲಕ ಗೋಪಾಲ್ ರಾಯ್ ಗುರುವಾರ ಪ್ರತಿಕ್ರಿಯಿಸಿದರು.

> **ಅಷ್ಟು ಸೀಟು ಗೆಲ್ಲುತ್ತೇವೆ, ಇಷ್ಟು ಸೀಟು ಗೆಲ್ಲುತ್ತೇವೆ ಎಂದು ದಿನವೂ ಸುಳ್ಳು ಹೇಳುವ ಬಿಜೆಪಿ ಈಗ ವಿರೋಧ ಪಕ್ಷಗಳನ್ನು ದುರ್ಬಲಗೊಳಿಸಲು ಅಕ್ರಮ ಮಾರ್ಗವನ್ನೂ ಹಿಡಿದಿದೆ**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

> **ಕೇಂದ್ರ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಬಿಜೆಪಿ ಪ್ರತೀಕಾರದ ಮೂಲಕ ವಿರೋಧ ಪಕ್ಷಗಳನ್ನು ಗುರಿಯಾಗಿಸುತ್ತಿದೆ**
> **ಶರದ್ ಪವಾರ್,** ಎನ್‌ಸಿಪಿ ನಾಯಕ

ಬಿಎಸ್‌ವೈ ಭೇಟಿಯಾದ ಪ್ರಜ್ವಲ್ ರೇವಣ್ಣ

ಬೆಂಗಳೂರು: ಹಾಸನ ಕ್ಷೇತ್ರದ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ತಮ್ಮ ತಂದೆ ಎಚ್.ಡಿ.ರೇವಣ್ಣ ಅವರ ಜತೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಗುರುವಾರ ಭೇಟಿ ಮಾಡಿ ಮಾತುಕತೆ ನಡೆಸಿದರು.

ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಪ್ರಜ್ವಲ್, 'ಮುಂಬರುವ ಚುನಾವಣೆಗೆ ಆಶೀರ್ವಾದ ಪಡೆಯಲು ಬಂದಿದ್ದೇನೆ. ಚುನಾವಣೆಯಲ್ಲಿ ಗೆಲುವಿಗಾಗಿ ನೆರವು ನೀಡುವುದಾಗಿ ಅವರು ಭರವಸೆ ನೀಡಿದರು' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

'ಕನ್ನಡಪರ ಸಂಘಟನೆಗಳ ಮುಖಂಡರು ಚುನಾವಣೆಗೆ ಸ್ಪರ್ಧಿಸಿ'



ಬೆಂಗಳೂರು: 'ರಾಜ್ಯದಲ್ಲಿರುವ ಎಲ್ಲ ಕನ್ನಡಪರ ಸಂಘಟನೆಗಳ ಮುಖಂಡರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಬೇಕು' ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಕರೆ ನೀಡಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ತತ್ವ, ಸಿದ್ಧಾಂತದ ಮೇಲೆ ಚುನಾವಣೆ ನಡೆಯಬೇಕು. ಜಾತಿ, ಭ್ರಷ್ಟಾಚಾರ, ಉಡುಗೊರೆ ಹಂಚಿಕೆಯೇ ಚುನಾವಣೆ ಆಗಬಾರದು. ಕರ್ನಾಟಕದಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮೂರು ಪಕ್ಷಗಳಲ್ಲಿ ಜಾತಿವಾದಿಗಳು ಮತ್ತು ಭ್ರಷ್ಟರು ಇದ್ದಾರೆ. ಚುನಾವಣೆ ವ್ಯವಸ್ಥೆ ಹದಗೆಟ್ಟಿದೆ. ಚುನಾವಣೆ ಎಂದರೆ ದರೋಡೆ ಎನ್ನುವಂತಾಗಿದೆ' ಎಂದು ದೂರಿದರು.

135 ಕುಕ್ಕರ್ ಸೆಟ್ ವಶ

ಮಾಗಡಿ: ತಾಲ್ಲೂಕಿನ ತಟವಾಳ್ ಗ್ರಾಮದ ಮನೆಯೊಂದರ ಮೇಲೆ ಗುರುವಾರ ದಾಳಿ ನಡೆಸಿದ ಮಾಗಡಿ ಪೊಲೀಸರು ಮತ್ತು ಚುನಾವಣಾ ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿಗಳು ಅಂದಾಜು ₹6 ಲಕ್ಷ ಮೌಲ್ಯದ 135 ಕುಕ್ಕರ್ ಮತ್ತು ಪ್ಯಾನ್ ಸೆಟ್ (ತವಾ) ವಶಪಡಿಸಿಕೊಂಡಿದ್ದಾರೆ.

ಮಾಹಿತಿ ಮೇರೆಗೆ ಗ್ರಾಮದ ಪ್ರಕಾಶ್ ಎಂಬುವರ ಮನೆ ಮೇಲೆ ದಾಳಿ ನಡೆಸಿದ ಅಧಿಕಾರಿಗಳ ತಂಡ ಮನೆಯಲ್ಲಿ ಜೋಡಿಸಿ ಇಟ್ಟಿದ್ದ 135 ಬಾಕ್ಸ್‌ಗಳನ್ನು ವಶಪಡಿಸಿಕೊಂಡಿದೆ.

ಈ ಬಾಕ್ಸ್ ಮೇಲೆ ಯಾವುದೇ ಪಕ್ಷದ ಚಿಹ್ನೆ, ಅಭ್ಯರ್ಥಿಯ ಹೆಸರು ಅಥವಾ ಭಾವಚಿತ್ರ ಇಲ್ಲ. ಯಾವುದೇ ದಾಖಲೆ ಇಲ್ಲದ ಕಾರಣ ಮನೆ ಮಾಲೀಕ ಪ್ರಕಾಶ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಸುರಪುರಕ್ಕೆ ವೇಣುಗೋಪಾಲ ನಾಯಕ 'ಕೈ' ಅಭ್ಯರ್ಥಿ

ನವದೆಹಲಿ: ಸುರಪುರ ವಿಧಾನಸಭೆ ಕ್ಷೇತ್ರದ ಉಪಚುನಾವಣೆಗೆ ರಾಜಾ ವೆಂಕಟಪ್ಪನಾಯಕ ಅವರ ಪುತ್ರ ರಾಜಾ ವೇಣುಗೋಪಾಲ ನಾಯಕ ಅವರಿಗೆ ಕಾಂಗ್ರೆಸ್ ಪಕ್ಷವು ಟಿಕೆಟ್ ನೀಡಿದೆ.

ಶಾಸಕರಾಗಿದ್ದ ರಾಜಾ ವೆಂಕಟಪ್ಪ ನಾಯಕ ಇತ್ತೀಚೆಗೆ ನಿಧನರಾಗಿದ್ದರು. ಈ ಕ್ಷೇತ್ರಕ್ಕೆ ಮೇ 7ರಂದು ಉಪಚುನಾವಣೆ ನಡೆಯಲಿದೆ.

ಆಯನೂರು ಅಭ್ಯರ್ಥಿ: ನೈರುತ್ಯ ಪದವೀಧರರ ಕ್ಷೇತ್ರದ ಆಯನೂರು ಮಂಜುನಾಥ್ ಅವರನ್ನು ಪಕ್ಷದ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಲಾಗಿದೆ.

2023ರ ವಿಧಾನಸಭಾ ಚುನಾವಣೆಯಲ್ಲಿ ಶಿವಮೊಗ್ಗ ಕ್ಷೇತ್ರಕ್ಕೆ ಆಯನೂರು ಅವರು ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದರು. ಅವರಿಗೆ ಪಕ್ಷ ಟಿಕೆಟ್ ಸಿಕ್ಕಿರಲಿಲ್ಲ. ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಕಾಂಗ್ರೆಸ್ ಟಿಕೆಟ್‌ಗೆ ಪ್ರಯತ್ನಿಸಿದ್ದರು. ಅವರ ಸ್ಪರ್ಧೆಗೆ ಹೈಕಮಾಂಡ್ ಒಪ್ಪಿಗೆ ಕೊಟ್ಟಿರಲಿಲ್ಲ. ಬಳಿಕ ಅವರು ಜೆಡಿಎಸ್‌ಗೆ ಪಕ್ಷಾಂತರಗೊಂಡು ಸ್ಪರ್ಧಿಸಿದ್ದರು. ಚುನಾವಣೆಯಲ್ಲಿ ಸೋತಿದ್ದ ಅವರು ಕೆಲವು ತಿಂಗಳ ಹಿಂದೆ ಕಾಂಗ್ರೆಸ್‌ಗೆ ಪಕ್ಷಾಂತರಗೊಂಡಿದ್ದರು. ಪದವೀಧರರ ಕ್ಷೇತ್ರಕ್ಕೆ ಜೂನ್‌ನಲ್ಲಿ ಚುನಾವಣೆ ನಡೆಯಲಿದೆ.

ಅಧಿಕಾರಿ ಅಮಾನತು

ಕೆಜಿಎಫ್: ಸಚಿವ ರಾಮಲಿಂಗಾ ರೆಡ್ಡಿ ಜತೆ ಮಂಗಳವಾರ ದೇವಾಲಯ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮುಜರಾಯಿ ಇಲಾಖೆ ಕಾರ್ಯನಿರ್ವಹಣಾಧಿಕಾರಿ ಸುಬ್ರಹ್ಮಣಿ ಅವರನ್ನು ಚುನಾವಣೆ ನೀತಿ ಸಂಹಿತಿ ಉಲ್ಲಂಘನೆ ಆರೋಪದ ಅಡಿ ಜಿಲ್ಲಾಧಿಕಾರಿ ಅಕ್ರಂ ಪಾಷಾ ಅಮಾನತುಗೊಳಿಸಿದ್ದಾರೆ.

ನಗರದ ಪ್ರಸನ್ನ ಲಕ್ಷ್ಮಿ ವೆಂಕಟರಮಣ ರಥೋತ್ಸವ ಅಂಗವಾಗಿ ಮಂಗಳವಾರ ನಡೆದ ಶಿಬಿಕ ವಾಹನೋತ್ಸವದಲ್ಲಿ ಭಾಗವಹಿಸಲು ಬಂದಿದ್ದ ರಾಮಲಿಂಗಾ ರೆಡ್ಡಿ ಅವರನ್ನು ದೇವಾಲಯದ ಕಾರ್ಯನಿರ್ವಹಣಾಧಿಕಾರಿ ಸುಬ್ರಹ್ಮಣಿ ಸ್ವಾಗತಿಸಿ, ಕರೆತಂದಿದ್ದರು. ಆಗ ದೇವಾಲಯ ಆವರಣದಲ್ಲಿ ಪತ್ರಕರ್ತರ ಜತೆ ಸಚಿವರು ರಾಜಕೀಯ ವಿಷಯ ಮಾತನಾಡಿದ್ದರು. ಇದು ಪತ್ರಿಕೆಗಳಲ್ಲಿ ವರದಿಯಾಗಿತ್ತು.

ನಕಲಿ ಜಾತಿ ಪ್ರಮಾಣಪತ್ರ: ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೀದರ್ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ; ಪ್ರವರ್ಗ ಒಂದರಲ್ಲಿ ಬರುವ ಬೆಸ್ತರ ಉಪ ಜಾತಿಯಾದ ಪರಿವಾರ ಹಾಗೂ ತಳವಾರ ಬೋಯಿ ಉಪ ಪಂಗಡದವರಿಗೂ ಪರಿಶಿಷ್ಟ ಪಂಗಡದ (ಎಸ್‌ಟಿ) ನಕಲಿ ಜಾತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರವು ನಕಲಿ ಜಾತಿ ಪ್ರಮಾಣಪತ್ರ ಪಡೆದವರಿಗೆ ಇದೇ 27ರೊಳಗೆ ನೋಟಿಸ್ ನೀಡಿ ಶೀಘ್ರ ಕ್ರಮ ಜರುಗಿಸಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಕುರಿತಂತೆ ಯಾದಗಿರಿ ಜಿಲ್ಲೆಯ, 'ರಾಜ್ಯ ಎಸ್‌ಸಿ-ಎಸ್‌ಟಿ ನಕಲಿ ಜಾತಿ ಪ್ರಮಾಣಪತ್ರಗಳ ತಡೆ ಸಮಿತಿ' ಪ್ರಧಾನ ಕಾರ್ಯದರ್ಶಿ ಮಾರಪ್ಪ ನಾಯಕ ಸೇರಿದಂತೆ ನಾಲ್ವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ರವಿವರ್ಮ ಕುಮಾರ್, 'ಪ್ರವರ್ಗ ಒಂದರಲ್ಲಿ ಬರುವ ಬೆಸ್ತರ ಉಪ ಜಾತಿಯಾದ ಪರಿವಾರ ಹಾಗೂ ತಳವಾರ ಬೋಯಿ ಉಪ ಪಂಗಡದವರಿಗೂ ಎಸ್‌ಟಿ ಜಾತಿ ಪ್ರಮಾಣಪತ್ರಗಳನ್ನು ಅಧಿಕಾರಿಗಳು ವಿತರಿಸುತ್ತಿದ್ದಾರೆ. ಈ ರೀತಿ 60ಕ್ಕೂ ಹೆಚ್ಚು ನಕಲಿ ಜಾತಿ ಪ್ರಮಾಣಪತ್ರಗಳ ವಿವರಗಳನ್ನು ಅರ್ಜಿಯಲ್ಲಿ ಅಡಕ ಮಾಡಲಾಗಿದೆ' ಎಂದು ವಿವರಿಸಿದರು.

'ನಕಲಿ ಜಾತಿ ಪ್ರಮಾಣಪತ್ರಗಳನ್ನು ಪಡೆದವರು ಶೈಕ್ಷಣಿಕ, ಔದ್ಯೋಗಿಕ ಲಾಭ ಪಡೆಯುತ್ತಿದ್ದಾರೆ. ಅಷ್ಟೇ ಅಲ್ಲದೆ, ಚುನಾವಣೆಗಳಲ್ಲಿ ಸ್ಪರ್ಧಿಸುವ ಮುಖೇನ ಎಸ್‌ಟಿಗಳಿಗೆ ಲಭ್ಯವಿರುವ ಎಲ್ಲಾ ಪ್ರಯೋಜನಗಳನ್ನು ಪಡೆಯುತ್ತಿದ್ದಾರೆ. ಇದರಿಂದ ಮೀಸಲಿಗೆ ಅರ್ಹರಾದವರು ಸರ್ಕಾರಿ ಸೌಲಭ್ಯಗಳಿಂದ ವಂಚಿತವಾಗುತ್ತಿದ್ದಾರೆ ಮಾತ್ರವಲ್ಲ, ಇದು ಸಾಮಾಜಿಕ ನ್ಯಾಯ ಬುಡಮೇಲಾಗುವಂತೆ ಮಾಡಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸರ್ಕಾರದ ಪರ ವಿಶೇಷ ವಕೀಲ ಸಿ.ಜಗದೀಶ್, 'ಅರ್ಜಿದಾರರು ನಕಲಿ ಜಾತಿ ಪ್ರಮಾಣಪತ್ರದ ಬಗ್ಗೆ ದೂರು ನೀಡಿದ್ದರೆ ಆ ಬಗ್ಗೆ ಪರಿಶೀಲಿಸಿ ಅಯಾ ಜಿಲ್ಲಾಕಾರಿಗಳು ಕ್ರಮ ಕೈಗೊಳ್ಳುತ್ತಿದ್ದರು. ಆದರೆ ಅರ್ಜಿದಾರರು ದೂರು ನೀಡಿಲ್ಲ' ಎಂದು ಬಲವಾಗಿ ಆಕ್ಷೇಪಿಸಿದರು.

'ಸದ್ಯ ಚುನಾವಣೆ ನಡೆಯುತ್ತಿರುವುದರಿಂದ ಜಿಲ್ಲಾಧಿಕಾರಿಗಳು ಕೆಲಸದ ಒತ್ತಡದಲ್ಲಿದ್ದಾರೆ. ಆದರೂ ಕೋರ್ಟ್ ನಿರ್ದೇಶನದ ಅನುಸಾರ ನಕಲಿ ಜಾತಿ ಪ್ರಮಾಣಪತ್ರ ಪಡೆದಿದ್ದಾರೆ ಎಂದು ಆರೋಪಿಸಲಾದವರಿಗೆ ನೋಟಿಸ್ ನೀಡಿ, ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲು ಒಂದಷ್ಟು ಕಾಲಾವಕಾಶ ನೀಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಅರ್ಜಿದಾರರು ಗಂಭೀರವಾದ ವಿಷಯವೊಂದನ್ನು ನ್ಯಾಯಪೀಠದ ಮುಂದಿಟ್ಟಿದ್ದಾರೆ. ಹೀಗಾಗಿ, ಸಾರ್ವಜನಿಕರ ಹಿತಾಸಕ್ತಿ ರಕ್ಷಿಸುವ ಹೊಣೆ ಹೊತ್ತ ಸರ್ಕಾರವು ಅರ್ಜಿದಾರರು ಆರೋಪಿಸಿರುವಂತೆ ನಕಲಿ ಜಾತಿ ಪ್ರಮಾಣ ಪತ್ರಗಳನ್ನು ಪಡೆದವರಿಗೆ ನೋಟಿಸ್ ನೀಡಬೇಕು. ಸೂಕ್ತ ತನಿಖೆ ನಡೆಸಿ, ಕಾನೂನು ಕ್ರಮ ಜರುಗಿಸಬೇಕು. ಈ ಕುರಿತ ವರದಿಯನ್ನು ಮುಂದಿನ ವಿಚಾರಣೆ ವೇಳೆಗೆ ಕೋರ್ಟ್‌ಗೆ ಸಲ್ಲಿಸಬೇಕು' ಎಂದು ಆದೇಶಿಸಿ ವಿಚಾರಣೆಯನ್ನು ಏಪ್ರಿಲ್ 2ಕ್ಕೆ ಮುಂದೂಡಿತು.

ಸೈದ್ಧಾಂತಿಕ ಭಿನ್ನಾಭಿಪ್ರಾಯ ಕಲಾವಿದರಿಂದ ಬಹಿಷ್ಕಾರ

ಕರ್ನಾಟಕ ಶಾಸ್ತ್ರೀಯ ಸಂಗೀತ ಪ್ರಕಾರದ ಖ್ಯಾತ ಗಾಯಕ ಟಿ.ಎಂ. ಕೃಷ್ಣ ಅವರಿಗೆ ಮದ್ರಾಸ್ ಸಂಗೀತ ಅಕಾಡೆಮಿಯು 'ಸಂಗೀತ ಕಲಾನಿಧಿ' ಪ್ರಶಸ್ತಿಯನ್ನು ಘೋಷಿಸಿದೆ. ಈ ಬಳಿಕ ದೊಡ್ಡ ವಿವಾದವೇ ಎದ್ದಿದೆ. 'ಸಾಮಾಜಿಕ ಸುಧಾರಣೆಗಾಗಿ ಕೃಷ್ಣ ಅವರು ಸಂಗೀತವನ್ನು ಸಾಧನವನ್ನಾಗಿ ಬಳಸಿಕೊಂಡಿದ್ದಾರೆ' ಎಂದು ಅಭಿಪ್ರಾಯಪಟ್ಟ ಅಕಾಡೆಮಿಯು ಕೃಷ್ಣ ಅವರ ಆಯ್ಕೆಯ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿತ್ತು.

'ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಹಾನಿ ಮಾಡಿದ್ದಾರೆ' ಎಂದು ಆರೋಪಿಸಿ ಹಲವು ಖ್ಯಾತ ಸಂಗೀತಕಾರರು ಕೃಷ್ಣ ಅವರ ಆಯ್ಕೆಯನ್ನು ವಿರೋಧಿಸಿದ್ದಾರೆ. ಜೊತೆಗೆ, ಇದೇ ವರ್ಷಾಂತ್ಯಕ್ಕೆ ಅಕಾಡೆಮಿ ನಡೆಸುವ ಕಾರ್ಯಕ್ರಮಕ್ಕೆ ಬಹಿಷ್ಕಾರವನ್ನೂ ಹಾಕಿದ್ದಾರೆ. ಆದರೆ, ಮದ್ರಾಸ್ ಸಂಗೀತ ಅಕಾಡೆಮಿ ಮಾತ್ರ ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಹೇಳಿದೆ

'ಪೆರಿಯಾರ್ ವೈಭವ'

ಬ್ರಾಹ್ಮಣರ ಮಾರಣಹೋಮಕ್ಕೆ ಪೆರಿಯಾರ್ ಬಹಿರಂಗವಾಗಿಯೇ ಕರೆ ನೀಡಿದ್ದರು. ಬ್ರಾಹ್ಮಣ ಸಮುದಾಯದ ಹೆಣ್ಣುಮಕ್ಕಳ ಬಗ್ಗೆ ಪದೇ ಪದೇ ಅಶ್ಲೀಲ ಮಾತುಗಳನ್ನಾಡಿದ ಇವರನ್ನು ಕೃಷ್ಣ ಅವರು ವೈಭವೀಕರಿಸುತ್ತಾರೆ. ಕೃಷ್ಣ ಅವರು ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಪ್ರಜ್ಞಾಪೂರ್ವಕವಾಗಿಯೇ ಅಪಾರ ಹಾನಿ ಉಂಟು ಮಾಡಿದ್ದಾರೆ

ರಂಜನಿ–ಗಾಯತ್ರಿ ಸಹೋದರಿಯರು, ಖ್ಯಾತ ಗಾಯಕಿಯರು

'ಭಿನ್ನಾಭಿಪ್ರಾಯಗಳಿವೆ'

ಕೃಷ್ಣ ಅವರೊಂದಿಗೆ ನನಗೆ ಸೈದ್ಧಾಂತಿಕವಾಗಿ ಭಿನ್ನಾಭಿಪ್ರಾಯಗಳಿವೆ. ಧರ್ಮದ ಕುರಿತು, ಅಯೋಧ್ಯೆ, ರಾಮನ ಕುರಿತು ಅವರು ನೀಡಿರುವ ಹೇಳಿಕೆಗಳಿಂದ ನನಗೆ ನೋವಾಗಿದೆ. ರಾಮಾನುಜ, ವೇದಾಂತ ದೇಶಿಕಾ ಮತ್ತು ಕಂಚಿ ಪರಮಾಚಾರ್ಯ ಅವರ ಬೋಧನೆಗಳಿಂದ ನನ್ನ ಜೀವನವನ್ನು ರೂಪಿಸಿಕೊಂಡಿದ್ದೇನೆ. ಕೃಷ್ಣ ಅವರಿಗೆ ಪ್ರಶಸ್ತಿ ನೀಡಿದ ಮರುದಿನವೇ ನಾನು ಹಾಡುವುದು ಈ ಎಲ್ಲರಿಗೂ ಅಗೌರವ ಸೂಚಿಸಿದಂತಾಗುತ್ತದೆ

ದುಷ್ಯಂತ್ ಶ್ರೀಧರ್, ಹರಿಕಥಾ ಗಾಯಕ



ಸಂಗೀತವು ನನ್ನನ್ನು ಪ್ರಾಮಾಣಿಕವಾಗಿ ಇರುವಂತೆ ಮಾಡಿದೆ. ಒಂದು ರಾಗಕ್ಕೆ ನಿಮ್ಮದೆಲ್ಲವನ್ನೂ ಅರ್ಪಿಸಿಕೊಂಡಾಗ, ಆ ಇಡೀ ಅನುಭೂತಿಯು ನಿಮ್ಮನ್ನು ಆವರಿಸಿಕೊಂಡು ಬಿಡುತ್ತದೆ. ಹೀಗೆ ಅನುಭೂತಿಯು ನಿಮ್ಮನ್ನು ಆವರಿಸಿಕೊಂಡಾಗ, ನಾನು–ನನ್ನದು, ನನ್ನಿಂದಲೇ ಎಲ್ಲ ಎನ್ನುವುದಕ್ಕೆಲ್ಲ ಜಾಗವೇ ಇರುವುದಿಲ್ಲ

ಟಿ.ಎಂ. ಕೃಷ್ಣ, ಗಾಯಕ ('ಸಂಗೀತ ಕಲಾನಿಧಿ' ಪ್ರಶಸ್ತಿ ಘೋಷಣೆಯಾದ ಬಳಿಕ ಫೇಸ್‌ಬುಕ್‌ನಲ್ಲಿ ಹಂಚಿಕೊಂಡ ಪ್ರತಿಕ್ರಿಯೆ)

ಟಿ.ಎಂ. ಕೃಷ್ಣ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಹಾಡುವುದು ಎಂದರೆ, ನಮ್ಮ ದೃಷ್ಟಿಯಲ್ಲಿಯೇ ನಾವು ಆಷಾಢಭೂತಿಗಳಂತೆ ಕಾಣುತ್ತೇವೆ

ಶ್ರೀಕೃಷ್ಣ ಮೋಹನ್ ಮತ್ತು ರಾಮಕುಮಾರ್ ಮೋಹನ್ (ತ್ರಿಚೂರ್ ಸಹೋದರರು), ಗಾಯಕರು

'ಯುವಕರನ್ನು ಮತಿಗೇಡಿ ಪ್ಯಾದೆಗಳನ್ನಾಗಿಸಿದ್ದಾರೆ'

ಭಾರತೀಯ ಶಾಸ್ತ್ರೀಯ ಸಂಗೀತ ಹಾಗೂ ನೃತ್ಯ ಕ್ಷೇತ್ರಗಳಷ್ಟೇ ಅಲ್ಲದೆ, ಒಟ್ಟಾರೆಯಾಗಿ ಭಾರತವನ್ನೇ ಕೃಷ್ಣ ಅವರು ಜಾತಿ ಮತ್ತು ಕೋಮು ನೆಲೆಯಲ್ಲಿ ಧ್ರುವೀಕರಣ ಮಾಡಿದ್ದಾರೆ. ವೃತ್ತಿ ಬದುಕಿನ ಮಹತ್ವದ ಘಟ್ಟದಲ್ಲಿ ಉತ್ತಮ ಸಾಧನೆಗೈಯಬೇಕಿದ್ದ ಯುವಕರ ಮನಸ್ಸುಗಳನ್ನು ಅಲ್ಲಿಂದ ಬೇರೆಡೆಗೆ ಸೆಳೆದಿದ್ದಾರೆ. ಅವರನ್ನು ಕೆಲವು ಕಾರ್ಯಸೂಚಿಗಳ ಮೂಲಕ ಮತಿಗೇಡಿ ಪ್ಯಾದೆಗಳನ್ನಾಗಿ ಮಾಡಿದ್ದಾರೆ

ಚಿತ್ರವೀಣಾ ಎನ್. ರವಿಕಿರಣ್ ವಾದಕ, ಸಂಗೀತಕಾರ

(ಪ್ರತಿಭಟನಾತ್ಮಕವಾಗಿ 'ಸಂಗೀತ ಕಲಾನಿಧಿ' ಪ್ರಶಸ್ತಿಯನ್ನು ವಾಪಸ್ ಮಾಡುವುದಾಗಿ ಹೇಳಿಕೊಂಡಿದ್ದಾರೆ)

ಆಧಾರ: ಪಿಟಿಐ

'ಸಂಸ್ಥೆಯು ವ್ಯಕ್ತಿಗಳಿಂತಲೂ ದೊಡ್ಡದು'

ಬಹಿಷ್ಕಾರ ಹಾಕುವ ಸಂಗೀತಗಾರರ ಪಟ್ಟಿ ಎಷ್ಟೇ ಉದ್ದ ಬೆಳೆದರೂ ನಮ್ಮ ನಿರ್ಧಾರಕ್ಕೆ ನಾವು ಬದ್ಧ. ಈ ಸಂಸ್ಥೆಯು ವ್ಯಕ್ತಿಗಳಿಗಿಂತಲೂ ದೊಡ್ಡದು. ಬಹಿಷ್ಕಾರ ಹಾಕುತ್ತಿರುವ ಯಾರೂ ಕೃಷ್ಣ ಅವರ ಸಂಗೀತದ ಕುರಿತು ತಕರಾರು ಎತ್ತುತ್ತಿಲ್ಲ ಬದಲಿಗೆ ಬೇರೆಯದೇ ವಿಷಯಕ್ಕೆ ವಿರೋಧಿಸುತ್ತಿದ್ದಾರೆ

ಎನ್. ಮುರಳಿ, ಅಧ್ಯಕ್ಷ, ಮದ್ರಾಸ್ ಸಂಗೀತ ಅಕಾಡೆಮಿ

'ಅನುಮಾನಕ್ಕೆ ಎಡೆಮಾಡಿದೆ'

ಹಿರಿಯ ಸಂಗೀತಕಾರನ ಕುರಿತು ವಿಷಕಾರಿ ಹಾಗೂ ನಿಂದನಾತ್ಮಕ ಮಾತುಗಳನ್ನು ಆಡಿದ್ದೀರಿ. ಇದರಿಂದ ನನಗೆ ಆಘಾತವಾಗಿದೆ. ಪ್ರಶಸ್ತಿಯ ಆಯ್ಕೆಯನ್ನು ಎಚ್ಚರಿಕೆಯಿಂದ ಮಾಡಲಾಗುತ್ತದೆ. ನಿಮ್ಮ ಪತ್ರಕ್ಕೆ ಉತ್ತರ ನೀಡುವ ಮೊದಲೇ, ನಿಮ್ಮ ಪತ್ರದಲ್ಲಿನ ಭಾಗಗಳನ್ನು ಜಾಲತಾಣಗಳಲ್ಲಿ ಹಾಕಿರುವುದರ ನಿಮ್ಮ ಉದ್ದೇಶವು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ

(ರಂಜಿನಿ–ಗಾಯತ್ರಿ ಅವರ ಪತ್ರಕ್ಕೆ ಮುರಳಿ ಅವರು ನೀಡಿದ ಉತ್ತರದ ಆಯ್ದ ಭಾಗ)

ಸುದ್ದಿ 2 ನಿಮಿಷ

ಕರಾವಳಿ, ದಕ್ಷಿಣ ಒಳನಾಡಿನಲ್ಲಿ ಮೂರು ದಿನ ಮಳೆ ಸಾಧ್ಯತೆ

ಬೆಂಗಳೂರು: ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವೆಡೆ ಶುಕ್ರವಾರದಿಂದ ಮೂರು ದಿನ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ, ದಕ್ಷಿಣ ಒಳನಾಡಿನ ಬಳ್ಳಾರಿ, ಚಿಕ್ಕಮಗಳೂರು,



ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು ಹಾಗೂ ಮೈಸೂರಿನಲ್ಲಿ ಶುಕ್ರವಾರ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನಲ್ಲಿ ಕೊಪ್ಪಳ ಹಾಗೂ ದಕ್ಷಿಣ ಒಳನಾಡಿನಲ್ಲಿ ಬೆಂಗಳೂರು ಗ್ರಾಮಾಂತರ, ಮೈಸೂರು ಹಾಗೂ ಮಂಡ್ಯದಲ್ಲಿ ಗರಿಷ್ಠ ತಾಪಮಾನವು ಸಾಮಾನ್ಯಕ್ಕಿಂತ ಎರಡು ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಕೊಪ್ಪಳದಲ್ಲಿ ಗರಿಷ್ಠ (38.6 ಡಿಗ್ರಿ ಸೆಲ್ಸಿಯಸ್) ಹಾಗೂ ಬೀದರ್‌ನಲ್ಲಿ ಕನಿಷ್ಠ (19.4 ಡಿಗ್ರಿ ಸೆಲ್ಸಿಯಸ್) ಉಷ್ಣಾಂಶ ಗುರುವಾರ ದಾಖಲಾಗಿದೆ ಎಂದು ಇಲಾಖೆ ತಿಳಿಸಿದೆ.

ಬೇಲೂರು: ತಾಳಿ ಕಿತ್ತುಕೊಂಡ ಪ್ರೇಮಿಯೊಂದಿಗೇ ಮದುವೆ!

ಬೇಲೂರು (ಹಾಸನ ಜಿಲ್ಲೆ): ಇಲ್ಲಿನ ಒಕ್ಕಲಿಗರ ಕಲ್ಯಾಣ ಮಂಟಪದಲ್ಲಿ ಗುರುವಾರ ನಡೆಯುತ್ತಿದ್ದ ಮದುವೆಗೆ ಬಂದ ವಧುವಿನ ಪ್ರೇಮಿಯು ವರನಿಂದ ತಾಳಿ ಕಿತ್ತುಕೊಂಡ ಘಟನೆ ನಡೆಯಿತು. ನಂತರ, ಆತನೊಂದಿಗೇ ಮದುವೆ ನಿಗದಿಯಾಯಿತು.

ಬೇಲೂರಿನ ಯುವತಿ ಹಾಗೂ ಶಿವಮೊಗ್ಗ ನಿವಾಸಿ ಪ್ರಮೋದ್‌ಕುಮಾರ್ ಅವರ ಮದುವೆ ಏರ್ಪಾಡಾಗಿತ್ತು. ವರನು ವಧುವಿಗೆ ತಾಳಿ ಕಟ್ಟುವ ವೇಳೆ ಧಾವಿಸಿದ ಪ್ರೇಮಿ, ಹಾಸನದ ಗವೇನಹಳ್ಳಿಯ ನವೀನ್ ಎಂಬಾತ ತಾಳಿ ಕಿತ್ತಿಟ್ಟುಕೊಂಡ. 'ನಾನು ಹಾಗೂ ಯುವತಿ ಪ್ರೀತಿಸುತ್ತಿದ್ದು, ನನಗೇ ಮದುವೆ ಮಾಡಿಕೊಡಬೇಕು' ಎಂದು ವಾಗ್ವಾದಕ್ಕಿಳಿದ. ಗೊಂದಲದ ವಾತಾವರಣ ಸೃಷ್ಟಿಯಾಗಿದ್ದರಿಂದ, ಪೊಲೀಸರು ಸ್ಥಳಕ್ಕೆ ಬಂದು, ಆತನನ್ನು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದರು.

ವಧು–ವರನ ಕುಟುಂಬದವರ ನಡುವೆ ವಾಗ್ವಾದ ನಡೆಯಿತು. ನಂತರ ವರನು ಮದುವೆಯಾಗಲು ನಿರಾಕರಿಸಿ, ವಧುವಿಗೆ ನೀಡಿದ್ದ ಆಭರಣಗಳನ್ನು ವಾಪಸ್ ಪಡೆದು ನಿರ್ಗಮಿಸಿದರು.

ಯುವತಿ ಮತ್ತು ನವೀನ್ ಕುಟುಂಬದವರ ನಡುವೆಯೂ ಮಾತುಕತೆ ನಡೆಯಿತು. ಪೊಲೀಸರ ಮಧ್ಯಸ್ಥಿಕೆಯಲ್ಲಿ, ಎರಡು ತಿಂಗಳ ನಂತರ ಇಬ್ಬರಿಗೂ ಮದುವೆ ಮಾಡಲು ಹಾಗೂ ತಕ್ಷಣದಲ್ಲೇ ಕಾನೂನು ಪ್ರಕಾರ ನೋಂದಣಿ ಮಾಡಿಸಿ, ಮದುವೆ ಮಾಡಿಸಲು ಯುವತಿ ಪೋಷಕರು ಒಪ್ಪಿಗೆ ನೀಡಿದ ನಂತರ ಗೊಂದಲಕ್ಕೆ ತೆರೆ ಬಿದ್ದಿತು.



ಹೊಸ ವರ್ಷ ಪಾರ್ಸಿ ಹೊಸ ವರ್ಷ 'ನವ್‌ರೋಜ್' ಅಂಗವಾಗಿ ಸಮುದಾಯದ ಜನರು ಮುಂಬೈನಲ್ಲಿ ಗುರುವಾರ 'ಫೈರ್ ಟೆಂಪಲ್'ಗೆ ಭೇಟಿ ನೀಡಿದರು —ಪಿಟಿಐ ಚಿತ್ರ

ಮೋಹಿನಿಯಾಟ್ಟಂ: ಕಲಾವಿದರ ಮೈಬಣ್ಣದ ಹೇಳಿಕೆಗೆ ಆಕ್ರೋಶ


ಪ್ರಜಾವಾಣಿ ವಾರ್ತೆ

ತಿರುವನಂತಪುರ: ಮೋಹಿನಿಯಾಟ್ಟಂ ಕಲಾವಿದರೊಬ್ಬರನ್ನು ಗುರಿಯಾಗಿಸಿ ಕಲಾವಿದೆ ಕಲಾಮಂಡಲಂ ಸತ್ಯಭಾಮಾ ನೀಡಿರುವ ಹೇಳಿಕೆ ಕೇರಳದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿದೆ.

ಜನಾಂಗೀಯ ನಿಂದನೆ ಎಂಬ ಟೀಕೆಗಳು ಕೇಳಿಬಂದಿವೆ. ಇದನ್ನು ನಿರಾಕರಿಸಿರುವ ಸತ್ಯಭಾಮಾ ಅವರು, 'ನಾನು ಯಾವ ಕಲಾವಿದರನ್ನೂ ಗುರಿಯಾಗಿಸಿ ಈ ಹೇಳಿಕೆ ನೀಡಿಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

'ಕಾಗೆ ಬಣ್ಣದಂತಹ ಮೈಬಣ್ಣ ಹೊಂದಿದ ಪುರುಷ ಕಲಾವಿದನೊಬ್ಬ ನೀಡಿರುವ ಮೋಹಿನಿಯಾಟ್ಟಂ ಪ್ರದರ್ಶನ ಅಶ್ಲೀಲವೆನಿಸುತ್ತದೆ. ಪುರುಷ ತನ್ನ ಕಾಲುಗಳನ್ನು ಅಗಲಿಸಿ ನೃತ್ಯ ಮಾಡುವುದನ್ನು ನೋಡುವುದು ವಿಲಕ್ಷಣವೆನಿಸುತ್ತದೆ' ಎಂದು ಸತ್ಯಭಾಮಾ ಹೇಳಿದ್ದಾರೆ.

ಯೂಟ್ಯೂಬ್ ಚಾನೆಲ್‌ಗೆ ನೀಡಿರುವ ಸಂದರ್ಶನದಲ್ಲಿ ಈ ಮಾತುಗಳನ್ನಾಡಿರುವ ಸತ್ಯಭಾಮಾ, 'ಆ ಕಲಾವಿದನ



ತಾಯಿ ಕೂಡ ಆತನ ನೃತ್ಯ ಪ್ರದರ್ಶನ ಸಹಿಸಲಾರಳು' ಎಂದಿದ್ದಾರೆ.

ತಮ್ಮ ಮಾತುಗಳಲ್ಲಿ ಯಾವುದೇ ಕಲಾವಿದನ ಹೆಸರನ್ನು ಸತ್ಯಭಾಮಾ ಉಲ್ಲೇಖ ಮಾಡಿಲ್ಲವಾದರೂ, ಮೋಹಿನಿಯಾಟ್ಟಂ ಕಲಾವಿದ ಆರ್.ಎಲ್.ವಿ.ರಾಮಕೃಷ್ಣನ್ ಇದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ.

'ಚಾಲಕ್ಕುಡಿ ಮೂಲದ ಕಲಾವಿದನನ್ನು ಗುರಿಯಾಗಿಸಿ ಸತ್ಯಭಾಮಾ ಈ ಟೀಕೆ ಮಾಡಿದ್ದಾರೆ. ಚಾಲಕ್ಕುಡಿ ನನ್ನ ಸ್ವಂತ ಊರು. ಹೀಗಾಗಿ, ನನ್ನನ್ನೇ ಗುರಿಯಾಗಿಸಿ ಅವರು ಈ ಟೀಕೆ ಮಾಡಿರುವುದು ಸ್ಪಷ್ಟ' ಎಂದು ರಾಮಕೃಷ್ಣನ್ ಹೇಳಿದ್ದಾರೆ.

ಮೋಹಿನಿಯಾಟ್ಟಂ ಕುರಿತು ಪಿಎಚ್‌.ಡಿ ಪದವಿ ಪಡೆದಿರುವ ರಾಮಕೃಷ್ಣನ್ ಅವರು, ದಿವಂಗತ ನಟ ಕಲಾಭವನ ಮಣಿ ಅವರ ಸಹೋದರ.

'ಈ ರೀತಿಯ ಜನಾಂಗೀಯ ನಿಂದನೆ ಮಾಡಿರುವುದಕ್ಕಾಗಿ ಸತ್ಯಭಾಮಾ ವಿರುದ್ಧ ಕಾನೂನುಕ್ರಮ ಕೈಗೊಳ್ಳುವೆ. ನನ್ನ ಕುರಿತು ಅವರು ದ್ವೇಷ ಸಾಧಿಸುತ್ತಲೇ ಬಂದಿದ್ದಾರೆ. ಈ ಹಿಂದೆಯೂ ಹಲವು ಬಾರಿ ನನ್ನನ್ನು ಅವಮಾನಿಸಿದ್ದಾರೆ' ಎಂದು ರಾಮಕೃಷ್ಣನ್ ಹೇಳಿದ್ದಾರೆ.

ಸತ್ಯಭಾಮಾ ಅವರ ಹೇಳಿಕೆಗೆ ಸಮಾಜದ ವಿವಿಧ ಸ್ತರದ ಜನರಿಂದಲೂ ವ್ಯಾಪಕ ಟೀಕೆ ವ್ಯಕ್ತವಾಗಿದೆ.

ಆದರೆ, ಸತ್ಯಭಾಮಾ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. 'ಮೋಹಿನಿಯಾಟ್ಟಂ ಪ್ರದರ್ಶಿಸುವವರಿಗೆ ಗೌರವರ್ಣ ಇರಬೇಕು. ಮೈಬಣ್ಣವೇ ಈ ನೃತ್ಯಪ್ರಕಾರದ ತಿರುಳು' ಎಂದಿರುವ ಅವರು 'ನಾನು ಎಲ್ಲಿಯೂ ರಾಮಕೃಷ್ಣನ್ ಅವರ ಹೆಸರು ಪ್ರಸ್ತಾಪಿಸಿಲ್ಲ' ಎಂದು ಹೇಳಿದ್ದಾರೆ.

ಪಿಎಸ್‌ಐ ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ಮೇ 8ರಂದು ನಿಗದಿ ಮಾಡಿದ್ದ ಪಿಎಸ್‌ಐ ಲಿಖಿತ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮುಂದೂಡಿದೆ. ಲೋಕಸಭಾ ಚುನಾವಣೆ ಕಾರಣಕ್ಕೆ ಮುಂದೂಡಲಾಗಿದೆ. ಪರಿಷ್ಕೃತ ದಿನಾಂಕವನ್ನು ಚುನಾವಣೆ ಮುಗಿದ ಬಳಿಕ ಪ್ರಕಟಿಸಲಾಗುವುದು ಎಂದು ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಹೇಳಿದ್ದಾರೆ.

402 ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಗಳ ನೇರ ನೇಮಕಾತಿಗೆ ಮೇ 8ರಂದು ಲಿಖಿತ ಪರೀಕ್ಷೆ ನಿಗದಿಯಾಗಿತ್ತು. ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದವರಿಗೆ ಲಿಖಿತ ಪರೀಕ್ಷೆಗೆ ಅವಕಾಶ ನೀಡಲು ಕೆಇಎ ಪ್ರಕಟಣೆ ಹೊರಡಿಸಿತ್ತು.

ಚುನಾವಣಾ ಬಾಂಡ್: ಸಮಗ್ರ ವಿವರ ಬಹಿರಂಗ

1ನೇ ಪುಟದಿಂದ...

'ದೇಣಿಗೆ ಪಡೆದಿರುವ ರಾಜಕೀಯ ಪಕ್ಷಗಳನ್ನು ಗುರುತಿಸಲು ಅದರ ಬ್ಯಾಂಕ್ ಖಾತೆಯ ಪೂರ್ಣ ಸಂಖ್ಯೆ ಹಾಗೂ ಗ್ರಾಹಕರಿಗೆ ಸಂಬಂಧಿಸಿದ ಸಮಗ್ರ ವಿವರಗಳು ಅನಗತ್ಯ' ಎಂದು ಎಸ್‌ಬಿಐ ತನ್ನ ಈ ಕ್ರಮವನ್ನು ಸಮರ್ಥಿಸಿಕೊಂಡಿದೆ.

ಬಾಂಡ್ ವಿಷಯದಲ್ಲಿ ತನ್ನ ಸೂಚನೆ ಪಾಲಿಸದ ಬ್ಯಾಂಕ್‌ನ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ಸುಪ್ರೀಂ ಕೋರ್ಟ್, 'ಮಾರ್ಚ್ 21ರ ಒಳಗೆ ಸಮಗ್ರ ವಿವರ ಬಹಿರಂಗಪಡಿಸಿ' ಎಂದು 18ರಂದು ತಾಕೀತುಮಾಡಿತ್ತು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ಪೀಠವು, ಬಾಂಡ್‌ಗಳ ವಿಶಿಷ್ಟ ಗುರುತು ಸಂಖ್ಯೆಯನ್ನು ಬಹಿರಂಗಪಡಿಸಬೇಕು ಎಂದು ನಿರ್ದಿಷ್ಟವಾಗಿ ಸೂಚಿಸಿತ್ತು. ಆ ಪ್ರಕಾರ, ಎಲ್ಲ ವಿವರವನ್ನು ಆಯೋಗಕ್ಕೆ ಒದಗಿಸಲಾಗಿದೆ ಎಂದು ಎಸ್‌ಬಿಐ ಅಧ್ಯಕ್ಷ ದಿನೇಶ್ ಕುಮಾರ್ ಖಾರಾ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

2024ರ ಫೆಬ್ರುವರಿ 15ರ ತೀರ್ಪು ಮತ್ತು 2024ರ ಮಾರ್ಚ್ 18ರ ಆದೇಶದ ಅನುಸಾರ ಗ್ರಾಹಕರ (ರಾಜಕೀಯ ಪಕ್ಷಗಳು) ಪೂರ್ಣ ಖಾತೆ ಸಂಖ್ಯೆ, ವೈಯಕ್ತಿಕ ಮಾಹಿತಿ ಹೊರತುಪಡಿಸಿ ಉಳಿದೆಲ್ಲ ವಿವರ ಒದಗಿಸಲಾಗಿದೆ ಎಂದು ತಿಳಿಸಿದ್ದಾರೆ.

ಬಿಆರ್‌ಎಸ್ ಪಕ್ಷಕ್ಕೆ ₹1322 ಕೋಟಿ ದೇಣಿಗೆ

ಹೈದರಾಬಾದ್ (ಪಿಟಿಐ): ಭಾರತ್ ರಾಷ್ಟ್ರ ಸಮಿತಿ (ಬಿಆರ್‌ಎಸ್) ಪಕ್ಷ ಚುನಾವಣಾ ಬಾಂಡ್‌ಗಳ ಮೂಲಕ ₹1,322 ಕೋಟಿ ದೇಣಿಗೆ ಪಡೆದಿದೆ. ಪಕ್ಷವು 2,188 ಚುನಾವಣಾ ಬಾಂಡ್ ನಗದೀಕರಣಗೊಳಿಸಿದೆ. ಇದರಲ್ಲಿ ಅರ್ಧದಷ್ಟನ್ನು (₹661 ಕೋಟಿ) ಅ.11, 2018ರಿಂದ ಸೆ.30, 2023ರ ನಡುವೆ ನಾಲ್ಕು ಭಿನ್ನ ದಿನಗಳಂದು ನಗದೀಕರಿಸಿದೆ.

ಎಸ್‌ಬಿಐ ಗುರುವಾರ ಚುನಾವಣಾ ಆಯೋಗಕ್ಕೆ ಒದಗಿಸಿರುವ ವಿವರದಲ್ಲಿ ಈ ಅಂಶ ಉಲ್ಲೇಖಿಸಲಾಗಿದೆ. ಆ ಪ್ರಕಾರ, ಪಕ್ಷವು 2022ರ ಏಪ್ರಿಲ್ 12ರಂದು ₹268 ಕೋಟಿ, 11ರಂದು ₹90 ಕೋಟಿ, 2021ರ ಅಕ್ಟೋಬರ್ 8ರಂದು ₹85 ಕೋಟಿ, 2023ರ ಜುಲೈ 13ರಂದು ₹218 ಕೋಟಿ ಮೊತ್ತವನ್ನು ನಗದೀಕರಣ ಮಾಡಿದೆ.

ಬಿಆರ್‌ಎಸ್ ಪಕ್ಷ ಚುನಾವಣಾ ಆಯೋಗಕ್ಕೆ ಈ ಕುರಿತು ಮಾಹಿತಿ ಒದಗಿಸಿದೆ. ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 30, 2023ರವರೆಗೆ ನಗದೀಕರಣ ಮಾಡಿಕೊಂಡಿರುವ ಬಾಂಡ್‌ಗಳ ವಿವರ ದಾಖಲಿಸಬೇಕು ಎಂದು ಆಯೋಗವು ಎಲ್ಲ ರಾಜಕೀಯ ಪಕ್ಷಗಳಿಗೆ ಸೂಚಿಸಿತ್ತು.

ಸತ್ಯಶೋಧನಾ ಘಟಕಕ್ಕೆ ಸುಪ್ರೀಂ ಕೋರ್ಟ್ ತಡೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಸುಳ್ಳುಸುದ್ದಿಗಳನ್ನು ಪತ್ತೆ ಮಾಡಲು ಪ್ರೆಸ್ ಇನ್ಫಾರ್ಮೇಷನ್ ಬ್ಯೂರೊ (ಪಿಐಬಿ) ಅಡಿಯಲ್ಲಿ ಸತ್ಯಶೋಧನಾ ಘಟಕವೊಂದನ್ನು ಆರಂಭಿಸಲು ಕೇಂದ್ರ ಸರ್ಕಾರ ಹೊರಡಿಸಿದ್ದ ಅಧಿಸೂಚನೆಗೆ ಸುಪ್ರೀಂ ಕೋರ್ಟ್ ಗುರುವಾರ ತಡೆ ನೀಡಿದೆ.

ಮಾಹಿತಿ ತಂತ್ರಜ್ಞಾನ ನಿಯಮಗಳು – 2021ರ ಅಡಿಯಲ್ಲಿ ಸತ್ಯಶೋಧನಾ ಘಟಕ ಆರಂಭಿಸುವುದಕ್ಕೆ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಸಚಿವಾಲಯವು ಅಧಿಸೂಚನೆಯನ್ನು ಬುಧವಾರ ಹೊರಡಿಸಿತ್ತು. ಈ ಘಟಕವನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ಇದೆ ಎಂದು ಮಾಧ್ಯಮ ಸಂಸ್ಥೆಗಳು ಹಾಗೂ ಕೆಲವು ನಾಗರಿಕ ಸಂಘಟನೆಗಳು ಕಳವಳ ವ್ಯಕ್ತಪಡಿಸಿದ್ದವು.

ಸತ್ಯಶೋಧನಾ ಘಟಕ ಆರಂಭಿಸುವುದಕ್ಕೆ ಮಧ್ಯಂತರ ತಡೆ ನೀಡಲು ನಿರಾಕರಿಸಿದ್ದ ಬಾಂಬೆ ಹೈಕೋರ್ಟ್‌ನ ಮಾರ್ಚ್ 11ರ ಆದೇಶವನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಅನೂರ್ಜಿತಗೊಳಿಸಿತು. 'ಹೈಕೋರ್ಟ್ ಮುಂದಿರುವ ಪ್ರಶ್ನೆಗಳು ಸಂವಿಧಾನದ 19(1)(ಎ) ವಿಧಿಗೆ ಸಂಬಂಧಿಸಿವೆ ಎಂಬುದು ನಮ್ಮ ವಿಚಾರಪೂರ್ಣ ಅಭಿಪ್ರಾಯ' ಎಂದು ಪೀಠವು ಹೇಳಿತು.

ಹೈಕೋರ್ಟ್ ಮುಂದಿರುವ ಅರ್ಜಿಗಳಲ್ಲಿ ಗಂಭೀರವಾದ ಸಾಂವಿಧಾನಿಕ ಪ್ರಶ್ನೆಗಳು ಇವೆ. ನಿಯಮದ ಕಾರಣದಿಂದಾಗಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಉಂಟಾಗುವ ಪರಿಣಾಮಗಳನ್ನು ಹೈಕೋರ್ಟ್ ಪರಿಶೀಲಿಸ ಬೇಕಿದೆ ಎಂದು ಸುಪ್ರೀಂ ಕೋರ್ಟ್ ಪೀಠವು ಹೇಳಿದೆ. ಈ ಪೀಠದಲ್ಲಿ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಇದ್ದಾರೆ.

ಕೇಂದ್ರ ಸರ್ಕಾರ ಕುರಿತ ಯಾವುದೇ ಸುಳ್ಳು ಸುದ್ದಿಗಳ ಬಗ್ಗೆ ಎಚ್ಚರಿಸಲು ಅಥವಾ ಅಂತಹ ಸುದ್ದಿಗಳನ್ನು ನಿಗ್ರಹಿಸಲು ಸತ್ಯಶೋಧನಾ ಘಟಕವು ನೋಡಲ್ ಏಜೆನ್ಸಿಯ ಮಾದರಿಯಲ್ಲಿ ಕೆಲಸ ನಿರ್ವಹಿಸುತ್ತದೆ. ಬಾಂಬೆ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಭಾರತೀಯ ಸಂಪಾದಕರ ಕೂಟ ಮತ್ತು ಇತರರು ಅರ್ಜಿ ಸಲ್ಲಿಸಿದ್ದಾರೆ.

ಲೋಕಸಭಾ ಚುನಾವಣೆ ಹತ್ತಿರವಾಗಿದೆ. ಈ ಹೊತ್ತಿನಲ್ಲಿ ಸತ್ಯಶೋಧನಾ ಘಟಕವು ಕೇಂದ್ರ ಸರ್ಕಾರದ ಪಾಲಿಗೆ ಮಾಹಿತಿಗಳನ್ನು ನಿಯಂತ್ರಿಸುವ ಸಾಧನವಾಗಿ ಬಳಕೆಯಾಗಲಿದೆ ಎಂದು ಅರ್ಜಿದಾರರ ಪರವಾಗಿ ಹಾಜರಿದ್ದ ಹಿರಿಯ ವಕೀಲ ಡೇರಿಯಸ್ ಖಂಬಾಟಾ ಹೇಳಿದರು.

ಹಂಸಲೇಖಗೆ 'ವಿಶ್ವ ಚೇತನ' ಪ್ರಶಸ್ತಿ



ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಯಡೂರು ಗ್ರಾಮದ ಕಾಡಸಿದ್ಧೇಶ್ವರ ಮಠ ನೀಡುವ ವಿಶ್ವ ಚೇತನ ಪ್ರಶಸ್ತಿಗೆ ಸಂಗೀತ ನಿರ್ದೇಶಕ ಹಂಸಲೇಖ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹ 51 ಸಾವಿರ ನಗದು ಮತ್ತು ಸ್ಮರಣಿಕೆ ಹೊಂದಿದೆ.

ಮಾರ್ಚ್ 25ರಂದು ನಡೆಯುವ ವೀರಭದ್ರದೇವ ಕಾಡಸಿದ್ದೇಶ್ವರ ಮಠ ಮತ್ತು ಭದ್ರಕಾಳಿ ವೀರಭದ್ರೇಶ್ವರ ಕಲ್ಯಾಣ ಮಹಾಮಹೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಎಚ್‌ಡಿಕೆ ಹೃದಯ ಶಸ್ತ್ರಚಿಕಿತ್ಸೆ ಯಶಸ್ವಿ

ಬೆಂಗಳೂರು: ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಚೆನ್ನೈನಲ್ಲಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಆರೋಗ್ಯವಾಗಿದ್ದಾರೆ.ಈ ಕುರಿತು ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಕುಮಾರಸ್ವಾಮಿ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ, ಚೆನ್ನೈನ ಅಪೊಲೊ ಆಸ್ಪತ್ರೆಯಲ್ಲಿ ಗುರುವಾರ ನಡೆದ ತೆರೆದ ಹೃದಯ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದೆ. ಎಂದು ಹೇಳಿದ್ದಾರೆ.

'ಗ್ಯಾರಂಟಿ' ಕೈ ಬಿಡಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ 'ಗ್ಯಾರಂಟಿ'ಗಳು ಕೈ ಬಿಡಲ್ಲ. ಲೋಕಸಭೆ ಚುನಾವಣೆಯಲ್ಲಿ ನಮಗೆ ಕನಿಷ್ಠ 20 ಸ್ಥಾನಗಳನ್ನು ಗೆಲ್ಲುವ ಉತ್ತಮ ಅವಕಾಶವಿದೆ' ಎಂದು ಪಕ್ಷದ ಅಭ್ಯರ್ಥಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ತುಂಬಿದರು.

ಅಭ್ಯರ್ಥಿಗಳ ಜೊತೆ ಗುರುವಾರ ಚರ್ಚೆ ನಡೆಸಿದ ಮುಖ್ಯಮಂತ್ರಿ, 'ಜನರ ನಡುವೆ ಗಟ್ಟಿಯಾಗಿ ನಿಂತು ಸಮರ್ಥವಾಗಿ ಚುನಾವಣೆ ಎದುರಿಸಿ ಗೆದ್ದು ಬನ್ನಿ' ಎಂದು ಹಾರೈಸಿದರು.

'ರಾಜ್ಯದಲ್ಲಿಯೂ ಸೇರಿದಂತೆ ಬಹುತೇಕ ಕಡೆಗಳಲ್ಲಿ ಬಿಜೆಪಿ ವಿರುದ್ಧವಾದ ಅಲೆ ತೀವ್ರವಾಗಿದೆ. ಈ ಸರ್ಕಾರ ಬದಲಾಗಲೇಬೇಕಿದೆ ಎನ್ನುವ ಅಭಿಪ್ರಾಯ ವಿದ್ಯಾವಂತ ಸಮುದಾಯದಲ್ಲಿದೆ. ಹೀಗಾಗಿ, ರಾಜ್ಯದಲ್ಲಿ ನಾವು 20 ಸ್ಥಾನ ಗೆಲ್ಲಬಹುದು' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಸರ್ಕಾರದ ಗ್ಯಾರಂಟಿಗಳ ಫಲ ಪ್ರತೀ ದಿನ, ಪ್ರತೀ ತಿಂಗಳು ನಾಡಿನ ಹೆಣ್ಣುಮಕ್ಕಳ ಮಡಿಲು ಸೇರುತ್ತಿದೆ. ಈ ಧನ್ಯತೆ ಅವರ ಹೃದಯದಲ್ಲಿದೆ. ಅವರಿಗೆ ಕೈ ಮುಗಿದು ಮತ ಕೇಳಿ' ಎಂದು ಸಲಹೆ ನೀಡಿದರು.

'ಮತದಾರರ ಮನೆ, ಮನಸ್ಸು ತಲುಪಲು ಯೋಜನೆ ರೂಪಿಸಿ. ಪಕ್ಷದ ಕಾರ್ಯಕರ್ತರನ್ನು, ಸ್ಥಳೀಯ ಮುಖಂಡರನ್ನು ಮಾತಾಡಿಸಿ. ಪ್ರತಿಷ್ಠೆ ಬಿಟ್ಟು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಿ. ಜನರನ್ನು ಭಾವನಾತ್ಮಕವಾಗಿ ಕೆರಳಿಸಿ, ವಂಚಿಸುವ ಬಿಜೆಪಿಯವರ ಷಡ್ಯಂತ್ರವನ್ನು ಜನರಿಗೆ ಮನವರಿಕೆ ಮಾಡಿ. ಅಧಿಕಾರ ದುರುಪಯೋಗ ಮಾಡುವ ಅವರು ನಮಗೆ ತೊಂದರೆ ಕೊಡುತ್ತಾರೆ. ಎದೆಗಾರಿಕೆಯಿಂದ ಎದುರಿಸಿ ಜನರಿಂದ ಶಕ್ತಿ ಪಡೆದುಕೊಳ್ಳಿ' ಎಂದೂ ಹೇಳಿದರು.

ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಅಭ್ಯರ್ಥಿಗಳಾದ ಸಂಯುಕ್ತಾ ಪಾಟೀಲ, ಮನ್ಸೂರ್ ಅಲಿ ಖಾನ್, ವಿನೋದ್ ಅಸೂಟಿ, ಬಿ.ಎನ್. ಚಂದ್ರಪ್ಪ, ಕೆ. ಜಯಪ್ರಕಾಶ್ ಹೆಗ್ಡೆ, ಎಸ್.ಪಿ. ಮುದ್ದಹನುಮೇಗೌಡ, ಪದ್ಮರಾಜ್, ಇ. ತುಕಾರಾಂ, ಜಿ. ಕುಮಾರ ನಾಯಕ್, ಸೌಮ್ಯಾ ರೆಡ್ಡಿ, ಅಂಜಲಿ ನಿಂಬಾಳ್ಕರ್, ವೆಂಕಟರಮಣೇಗೌಡ (ಸ್ಟಾರ್ ಚಂದ್ರು), ಎಂ. ಲಕ್ಷ್ಮಣ್, ಎಂ.ವಿ. ರಾಜೀವ್ ಗೌಡ, ಸಾಗರ್ ಖಂಡ್ರೆ, ಮೃಣಾಲ್ ಹೆಬ್ಬಾಳಕರ ಇದ್ದರು.

ನಡೆಯದ ಬೋರ್ಡ್ ಪರೀಕ್ಷೆ; ಆತಂಕ

ಬೆಂಗಳೂರು: 5,8 ಹಾಗೂ 9ನೇ ತರಗತಿ ಪರೀಕ್ಷೆಗಳು ಪೂರ್ಣಗೊಳ್ಳದ ಕಾರಣ ಪೋಷಕರು ಹಾಗೂ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಿದ್ದಾರೆ.

ಇದೇ ಮಾರ್ಚ್ 11ರಿಂದ ಆರಂಭವಾಗಿದ್ದ ಪರೀಕ್ಷೆಗಳನ್ನು ಸುಪ್ರೀಂಕೋರ್ಟ್ ಆದೇಶದಂತೆ ಮಾರ್ಚ್ 13ರಂದು ಸ್ಥಗಿತಗೊಳಿಸಲಾಗಿತ್ತು. ಅಂದು ಪರೀಕ್ಷೆಗಳನ್ನು ಮುಂದೂಡದೇ ಇದ್ದಿದ್ದರೆ, 5ನೇ ತರಗತಿಗೆ ಮಾರ್ಚ್ 14ರಂದು, 8 ಹಾಗೂ 9ನೇ ತರಗತಿಗೆ ಮಾರ್ಚ್16ರಂದು ಪರೀಕ್ಷೆಗಳು ಮುಗಿಯುತ್ತಿದ್ದವು. ಮಕ್ಕಳು ಬೇಸಿಗೆ ರಜೆಗೆ ತೆರಳುತ್ತಿದ್ದರು. ಪರೀಕ್ಷೆಗಳು ಪೂರ್ಣಗೊಳ್ಳದೇ ಪೋಷಕರು ಹಾಗೂ ವಿದ್ಯಾರ್ಥಿಗಳು ಅತಂತ್ರ ಸ್ಥಿತಿಯಲ್ಲಿ ಇದ್ದಾರೆ.

'ಇದೇ ಮಾರ್ಚ್ 25ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಆರಂಭವಾಗುತ್ತವೆ. ಹಲವು ಶಿಕ್ಷಕರು ಪರೀಕ್ಷಾ ಕಾರ್ಯಕ್ಕೆ ತೆರಳುವರು, ಕೆಲವರು ಚುನಾವಣಾ ಕಾರ್ಯಕ್ಕೆ ನಿಯೋಜಿತರಾಗಿದ್ದಾರೆ. ಹಾಗಾಗಿ, ಪರೀಕ್ಷೆ ನಡೆಸಲು ಕೋರ್ಟ್ ಅನುಮತಿ ನೀಡಿದರೂ, ಶಿಕ್ಷಕರು ಲಭ್ಯವಾಗುವುದಿಲ್ಲ. ಮಕ್ಕಳು ಪರೀಕ್ಷೆಗೆ ನಿರಾಸಕ್ತಿ ತೋರುತ್ತಿದ್ದಾರೆ' ಎಂದು ಬೆಂಗಳೂರು ಉತ್ತರ ಜಿಲ್ಲೆಯ ಪೋಷಕರೊಬ್ಬರು ಅಳಲು ತೋಡಿಕೊಂಡರು.

5,8,9 ಹಾಗೂ 11ನೇ ತರಗತಿಗೆ ಬೋರ್ಡ್ ಪರೀಕ್ಷೆ ನಡೆಸುವ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ, ಶಾಲಾ ಶಿಕ್ಷಣ ಇಲಾಖೆಯ ನಿರ್ಧಾರ ಪ್ರಶ್ನಿಸಿ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘ (ರುಪ್ಸ) ಹೈಕೋರ್ಟ್ ಮೆಟ್ಟಿಲೇರಿತ್ತು. ಪ್ರಕರಣದ ತೀರ್ಪಿನತ್ತ ಎಲ್ಲರ ಚಿತ್ತ ನೆಟ್ಟಿದೆ.

'ಕರ್ನಾಟಕ ಶಿಕ್ಷಣ ಕಾಯಿದೆಯ ನಿಯಮಗಳಂತೆ ಕಲಿಕೆಯ ಪ್ರಗತಿ ಪರಿಶೀಲಿಸಲು 2012ರಿಂದ ನಿರಂತರ ಮೌಲ್ಯಾಂಕನ ಪದ್ಧತಿ ಜಾರಿಗೊಳಿಸಲಾಗಿದೆ. ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವನ್ನು ಅತ್ಯಂತ ವೈಜ್ಞಾನಿಕವಾಗಿ ವಿಶ್ಲೇಷಿಸಲಾಗುತ್ತಿದೆ. ಕೇಂದ್ರ ಪಠ್ಯಕ್ರಮದ ಶಾಲೆಗಳಲ್ಲಿ 10ನೇ ತರಗತಿಯವರೆಗೆ ಪರೀಕ್ಷೆ ಇರುವುದಿಲ್ಲ. ರಾಜ್ಯ ಪಠ್ಯಕ್ರಮಕ್ಕೆ ಮಾತ್ರ ಪರೀಕ್ಷೆ ಏಕೆ' ಎನ್ನುವುದು ರುಪ್ಸ ವಾದ.

ಕೈದಿ – ವಕೀಲರ ಸಂಭಾಷಣೆಗೆ ಅನುಕೂಲವಾಗಲಿ: ಹೈಕೋರ್ಟ್

ಅತ್ಯುತ್ತಮ ವಿಡಿಯೊ ಕಾನ್ಫರೆನ್ಸ್ ವ್ಯವಸ್ಥೆ ಕಲ್ಪಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಎಲ್ಲ ಜೈಲುಗಳಲ್ಲಿರುವ ಕೈದಿಗಳು ತಮ್ಮ ವಕೀಲರ ಜೊತೆ ಸಂಭಾಷಣೆ ನಡೆಸಲು ಅನುವಾಗುವಂತೆ ಅತ್ಯುತ್ತಮವಾದ ವಿಡಿಯೊ ಕಾನ್ಫರೆನ್ಸಿಂಗ್ ವ್ಯವಸ್ಥೆಯನ್ನು ಕಲ್ಪಿಸಿ' ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಬಿಜೆಪಿಯ ಯುವ ಮೋರ್ಚಾ ಮುಖಂಡರಾಗಿದ್ದ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಸುಳ್ಯ ತಾಲ್ಲೂಕಿನ ಎತ್ತಿನಹೊಳೆಯ ಅಬ್ದುಲ್ ಬಷೀರ್ (ಸದ್ಯ ಬಳ್ಳಾರಿ ಜೈಲಿನಲ್ಲಿ ಕೈದಿ) ಸೇರಿದಂತೆ ಬಳ್ಳಾರಿ, ಧಾರವಾಡ, ಶಿವಮೊಗ್ಗ, ಮೈಸೂರು, ವಿಜಯಪುರ ಮತ್ತು ಕಲಬುರಗಿ ಜೈಲುಗಳಲ್ಲಿರುವ ಒಟ್ಟು 13 ಜನ ಆರೋಪಿಗಳು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವೆಗಳು ವಿಭಾಗದ



ಐಜಿಪಿ ಹಾಗೂ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿ.ಜಿ.ಭಾನುಪ್ರಕಾಶ್ ಮತ್ತು ಎನ್‌ಐಎ ಪರವಾಗಿ ವಾದ ಮಂಡಿಸಿದ್ದ ಪಿ.ಪ್ರಸನ್ನಕುಮಾ ರ್ಅರ್ಜಿದಾರರ ಮನವಿಯನ್ನು ತೀವ್ರವಾಗಿ ಆಕ್ಷೇಪಿಸಿದ್ದರು.

'ಅರ್ಜಿದಾರರನ್ನು ಒಂದೇ ಕಡೆ ಇರಿಸಿದಲ್ಲಿ ಅವರೆಲ್ಲಾ ಮತ್ತೊಂದು ಪಿತೂರಿ ನಡೆಸಲು ಸಿದ್ಧತೆ ಮಾಡಿಕೊಳ್ಳಬಹುದು. ಅಂತೆಯೇ ಅವರು ಈಗಿರುವ ಜೈಲುಗಳಲ್ಲಿ, ಅವರ ಮೇಲೆ ಯಾವುದೇ ರೀತಿಯ ಹಲ್ಲೆ ನಡೆದಿಲ್ಲ. ಅರ್ಜಿದಾರರ ಕತೆಗಳನ್ನೆಲ್ಲಾ ನಂಬಬಾರದು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದ್ದರು.

'ರಾಜ್ಯದ ಎಲ್ಲಾ ಜೈಲುಗಳಲ್ಲಿ ವಿಡಿಯೊ ಕಾನ್ಫರೆನ್ಸ್ ವ್ಯವಸ್ಥೆಯಿದೆ. ಅವರಿಗೆ ಅಗತ್ಯವಿದ್ದ ಸಂದರ್ಭದಲ್ಲಿ ಅದನ್ನು ಬಳಕೆ ಮಾಡಿಕೊಳ್ಳಬಹುದಾಗಿದೆ. ಬೆಂಗಳೂರಿನ ಕೇಂದ್ರ ಕಾರಾಗೃಹ ಕೇವಲ 4 ಸಾವಿರ ಕೈದಿಗಳ ಸಾಮರ್ಥ್ಯ ಹೊಂದಿದ್ದು ಇಲ್ಲೀಗ 5,200 ಕೈದಿಗಳನ್ನು ಇರಿಸಲಾಗಿದೆ. ಎಲ್ಲ ಅರ್ಜಿದಾರರನ್ನು ಬೆಂಗಳೂರಿನ ಕಾರಾಗೃಹಕ್ಕೆ ಸ್ಥಳಾಂತರ ಮಾಡುವುದು ಉತ್ತಮ ಬೆಳವಣಿಗೆಯಲ್ಲ' ಎಂದು ನ್ಯಾಯಪೀಠಕ್ಕೆ ವಿವರಿಸಿದ್ದರು.

'ನಮಗೆಲ್ಲಾ ಜೀವ ಭಯ ಇದೆ. ಹಾಗಾಗಿ, ನಾವೆಲ್ಲಾ ನಮ್ಮ ವಕೀಲರ ಜೊತೆ ಚರ್ಚೆ ನಡೆಸಲು ನಮ್ಮನ್ನೆಲ್ಲಾ ಒಂದೇ ಜೈಲಿಗೆ ಸ್ಥಳಾಂತರ ಮಾಡಲು ನಿರ್ದೇಶಿಸಬೇಕು' ಎಂಬ ಅರ್ಜಿದಾರರ ಮನವಿಯನ್ನು ನ್ಯಾಯಪೀಠ ತಿರಸ್ಕರಿಸಿದೆ. 'ಈ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಎಲ್ಲ ಆರೋಪಿಗಳು ನಿಷೇಧಿತ ಪ್ಯಾಪುಲರ್ ಫ್ರಂಟ್ ಆಫ್ ಇಂಡಿಯಾದ ಸದಸ್ಯರಾಗಿದ್ದಾರೆ. ಒಬ್ಬ ಕೈದಿ ಈಗಾಗಲೇ ತಪ್ಪು ಒಪ್ಪಿಕೊಂಡಿರುವುದರಿಂದ ಇನ್ನಿತರರನ್ನೂ ಒಂದೇ ಕಡೆ ಇರಿಸುವುದು ಸೂಕ್ತವಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

'ವಕೀಲರು ಹಾಗೂ ಕುಟುಂಬದ ಸದಸ್ಯರೊಂದಿಗೆ ನಡೆಸುವ ಸಂಭಾಷಣೆ ಮತ್ತೊಬ್ಬರಿಗೆ ತಿಳಿಯದಂತೆ ಗೋಪ್ಯತೆ ಕಾಪಾಡಬೇಕು. ಇದಕ್ಕಾಗಿ ಅವರಿಗೆ ಹೆಡ್ ಫೋನ್‌ಗಳನ್ನು ಒದಗಿಸಬೇಕು. ಇಂತಹ ಸೌಲಭ್ಯಗಳು ಯಾವ ಜೈಲಿನಲ್ಲಿ ಇಲ್ಲವೊ ಅಲ್ಲೆಲ್ಲಾ ಈ ಸೌಲಭ್ಯ ಕಲ್ಪಿಸಲು ಸರ್ಕಾರ ಶೀಘ್ರವೇ ಮುಂದಾಗಬೇಕು. ಎಲ್ಲಿ ಇಂತಹ ವ್ಯವಸ್ಥೆ ಇದೆಯೊ ಅಲ್ಲಿ ದೋಷರಹಿತವಾಗಿ ಕಾರ್ಯನಿರ್ವಹಣೆಗೆ ನಿರ್ದೇಶಿಸಬೇಕು' ಎಂದು ಆದೇಶದಲ್ಲಿ ವಿವರಿಸಿದೆ.

ಪ್ರಕರಣ: 2022ರ ಜುಲೈ 26ರಂದು ಸುಳ್ಯ ತಾಲ್ಲೂಕಿನ ಬೆಳ್ಳಾರೆಯಲ್ಲಿ ಪ್ರವೀಣ್ ನೆಟ್ಟಾರು ಅವರನ್ನು ದುಷ್ಕರ್ಮಿಗಳು ಹತ್ಯೆ ಮಾಡಿದ್ದರು. ಬೈಕ್‌ನಲ್ಲಿ ಬಂದ ಅಪರಿಚಿತರು ತಲವಾರಿನಿಂದ ಪ್ರವೀಣ್ ಅವರ ತಲೆಗೆ ಹೊಡೆದು ಪರಾರಿಯಾಗಿದ್ದರು. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಸೇರಿಸಲು ಒಯ್ಯುತ್ತಿದ್ದ ವೇಳೆ ಮಾರ್ಗ ಮಧ್ಯೆ ಮೃತಪಟ್ಟಿದ್ದರು.

'ಧಾರ್ಮಿಕ ಮಸೂದೆ: ಸ್ಪಷ್ಟನೆ ನೀಡಿ ಅಂಕಿತ ಪಡೆಯುತ್ತೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಜರಾಯಿ ಇಲಾಖೆಯ ವ್ಯಾಪ್ತಿಯ ಶ್ರೀಮಂತ ದೇವಸ್ಥಾನಗಳಲ್ಲಿ ಸಂಗ್ರಹವಾಗುವ 'ಸಾಮಾನ್ಯ ಸಂಗ್ರಹಣಾ ನಿಧಿ'ಯನ್ನು ಆದಾಯ ಇಲ್ಲದಿರುವ 'ಸಿ' ವರ್ಗದ ದೇವಸ್ಥಾನಗಳಿಗೆ ಬಳಸುವುದನ್ನು ಕಡ್ಡಾಯಗೊಳಿಸುವ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಮಸೂದೆಯನ್ನು ಸೂಕ್ತ ಸ್ಪಷ್ಟೀಕರಣದೊಂದಿಗೆ ಮತ್ತೆ ಸಲ್ಲಿಸಿ, ರಾಜ್ಯಪಾಲರಿಂದ ಅನುಮೋದನೆ ಪಡೆಯಲಾಗುವುದು' ಎಂದು ಮುಜರಾಯಿ ಇಲಾಖೆ ಹೇಳಿದೆ.

'ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ– 1997'ಕ್ಕೆ 2023ರಲ್ಲಿ ತಿದ್ದುಪಡಿ ತಂದಾಗಲೂ ರಾಜ್ಯಪಾಲರು ಕೆಲವು ಸ್ಪಷ್ಟೀಕರಣ ಕೇಳಿದ್ದರು. ಕಾನೂನು ಇಲಾಖೆಯ ಮೂಲಕ ಸೂಕ್ತ ಸ್ಪಷ್ಟೀಕರಣ ನೀಡಿ ಅನುಮೋದನೆ ಪಡೆಯಲಾಗಿತ್ತು. ಈ ಬಾರಿ ಕೂಡ ರಾಜ್ಯಪಾಲರು ಕೆಲವು ಸ್ಪಷ್ಟೀಕರಣ ಕೇಳಿದ್ದಾರೆ' ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

'ರಾಜ್ಯ ಹೈಕೋರ್ಟ್ ಈ ಕಾಯ್ದೆಯನ್ನು ರದ್ದುಗೊಳಿಸಿ ನೀಡಿದ್ದ ತೀರ್ಪಿಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ. ಹೀಗಾಗಿ ಈ ಕಾಯ್ದೆ ಚಾಲ್ತಿಯಲ್ಲಿದೆ. ಹಿಂದೂ ಧಾರ್ಮಿಕ ಸಂಸ್ಥೆಗಳ ಆಡಳಿತಕ್ಕೆ ಪ್ರಾಂತ್ಯಾವಾರು ಕಾಯ್ದೆಗಳಿವೆ. ಕರ್ನಾಟಕದಲ್ಲಿ ಏಕರೂಪದ ಕಾಯ್ದೆ ತರುವ ಉದ್ದೇಶದಿಂದ 1997ರಲ್ಲಿ ಈ ಕಾಯ್ದೆಯನ್ನು ಸರ್ಕಾರ ರೂಪಿಸಿತ್ತು. 2003ರ ಮೇ 1ರಿಂದ ಕಾಯ್ದೆ ಜಾರಿಯಲ್ಲಿದೆ. ಈ ಕಾಯ್ದೆಗೆ 2011ರಲ್ಲಿ ತಿದ್ದುಪಡಿ ತಂದು 'ಸಾಮಾನ್ಯ ಸಂಗ್ರಹಣಾ ನಿಧಿ' ಸಂಗ್ರಹಿಸಲಾಗುತ್ತಿದೆ. ಸದ್ಯ ವಾರ್ಷಿಕ ಅಂದಾಜು ₹ 8 ಕೋಟಿ ಸಂಗ್ರಹವಾಗುತ್ತಿದೆ. ಅದನ್ನು ಹಿಂದೂ ಧಾರ್ಮಿಕ ಸಂಸ್ಥೆಗಳ ವಿವಿಧ ಉದ್ದೇಶಗಳಿಗೆ ಬಳಸಲಾಗುತ್ತಿದೆ' ಎಂದು ಸಚಿವರು ವಿವರಿಸಿದ್ದಾರೆ.

'ಇತರೆ ಧರ್ಮಗಳಿಗೆ ಸಂಬಂಧಪಟ್ಟಂತೆ ರಾಜ್ಯಪಾಲರು ಕೇಳಿರುವ ಸ್ಪಷ್ಟೀಕರಣ, ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ' ಎಂದೂ ಅವರು ಹೇಳಿದ್ದಾರೆ

ಸಿನಿಮಾ ಪುರವಣಿ


ಯುವ ರಾಜ್‌ಕುಮಾರ್

ಯುವ ರಾಜಕುಮಾರನ ಕಥೆ

ದೊಡ್ಮನೆಯ ಮತ್ತೊಂದು ಕುಡಿ ಚಂದನವನಕ್ಕೆ ಹೆಜ್ಜೆ ಇಡುತ್ತಿದೆ. 'ಯುವ' ಸಿನಿಮಾ ಮೂಲಕ ರಾಘವೇಂದ್ರ ರಾಜ್‌ಕುಮಾರ್ ಕಿರಿಯ ಪುತ್ರ ಯುವ ರಾಜ್‌ಕುಮಾರ್ ಬೆಳ್ಳಿತೆರೆಗೆ ಪ್ರವೇಶಿಸುತ್ತಿದ್ದಾರೆ. ಸಿನಿಮಾ ಪುರವಣಿ ಜೊತೆ ಮಾತಿಗೆ ಸಿಕ್ಕಾಗ ಅವರು ತಮ್ಮ ಪಯಣವನ್ನು ಬಿಚ್ಚಿಟ್ಟರು...

ಅಭಿಲಾಷ್ ಪಿ.ಎಸ್.

- **'ಯುವ' ಸಿನಿಮಾಗೆ ನಿಮ್ಮ ತಯಾರಿ ಹೇಗಿತ್ತು?**

ಸಂತೋಷ್ ಆನಂದ್‌ರಾಮ್ ಜೊತೆ ಕೆಲಸ ಮಾಡಬೇಕು ಎನ್ನುವ ಆಸೆಯಿತ್ತು. ಸುಮಾರು ನಾಲ್ಕೈದು ವರ್ಷಗಳ ಹಿಂದೆಯೇ 'ಯುವರತ್ನ' ಸಿನಿಮಾ ಶೂಟಿಂಗ್ ಸಂದರ್ಭದಲ್ಲಿ ಅವರೊಂದಿಗೆ ಈ ವಿಷಯ ಹಂಚಿಕೊಂಡಿದ್ದೆ. 2022ರಲ್ಲಿ 'ಯುವ' ಚಿತ್ರದ ಸ್ಕ್ರಿಪ್ಟಿಂಗ್ ಆರಂಭವಾಗಿತ್ತು. ಶೂಟಿಂಗ್ ಆರಂಭಕ್ಕೂ ಮುನ್ನ ಸುಮಾರು ಎಂಟು ತಿಂಗಳು ಚಿತ್ರತಂಡದೊಂದಿಗೆ ಕಳೆದಿದ್ದೆ. ಸ್ಕ್ರಿಪ್ಟ್ ಪಯಣದಲ್ಲಿ ನಾನು ನನ್ನ ಪಾತ್ರವನ್ನು ಅರ್ಥೈಸಿಕೊಂಡೆ. ಚಿತ್ರಕಥೆ, ಸಂಭಾಷಣೆ ಸಿದ್ಧವಾಗುವ ಸಂದರ್ಭದಲ್ಲಿ ಅಲ್ಲಲ್ಲೇ ನಾನು ಪಾತ್ರದ ನಟನೆಯ ಅಭ್ಯಾಸ ಶುರುಮಾಡಿಕೊಂಡಿದ್ದೆ. ಅದನ್ನು ಚಿತ್ರತಂಡ ಶೂಟ್ ಮಾಡಿಕೊಂಡು ಬದಲಾವಣೆಗಳ ಸಲಹೆ ನೀಡುತ್ತಿತ್ತು. ಫುಡ್ ಡೆಲಿವರಿ ಬಾಯ್ ಆಗಿ ಪಾತ್ರ ನಿರ್ವಹಿಸಲು ಅವರೊಂದಿಗೆ ನಾಲ್ಕೈದು ದಿನ ಕಳೆದಿದ್ದೆ. ಅವರ ನಡವಳಿಕೆ, ಅನುಭವಗಳ ಬಗ್ಗೆ ತಿಳಿದುಕೊಂಡೆ.

ಡಬ್ಬಿಂಗ್ ಕೂಡಾ ಬಹಳ ಸವಾಲಿನಿಂದ ಕೂಡಿತ್ತು. ಮೊದಲ ಬಾರಿಗೆ ನಿರ್ದೇಶಕರು ಇಲ್ಲದೇ ಡಬ್ಬಿಂಗ್ ಮಾಡಿದ್ದೆ. ನಂತರ ತಪ್ಪುಗಳನ್ನು ತಿದ್ದಿಕೊಂಡು ಇಡೀ ಸಿನಿಮಾವನ್ನು ಮೂರು ಬಾರಿ ಡಬ್ ಮಾಡಿದ್ದೇನೆ. ನಾನು ಆತ್ಮವಿಶ್ವಾಸದಿಂದ ಇದ್ದೇನೆ. ಆದರೆ ಭಯವೂ ಇದೆ. ಜನ ನನ್ನನ್ನು ಇಷ್ಟಪಡುತ್ತಾರೋ ಇಲ್ಲವೋ ಎನ್ನುವ ಕುತೂಹಲವೂ ಇದೆ.

- **ನಟನೆಯ ಬಗ್ಗೆ ಒಲವು ಮೂಡಿದ್ದು ಯಾವಾಗ?**

ಚಿಕ್ಕವಯಸ್ಸಿನಿಂದಲೂ ನಟನಾಗಬೇಕು ಎನ್ನುವ ಹಂಬಲ ಇತ್ತು. ಆದರೆ ಓದಿನ ಕಡೆಗೆ ನನ್ನ ಗಮನವಿತ್ತು. ಒಂದು ಡಿಗ್ರಿ ಪಡೆದು ಸಿನಿಮಾ ಕ್ಷೇತ್ರದತ್ತ ಇಳಿಯುವ ನಿರ್ಧಾರ ಮಾಡಿದೆ. ಹೀಗಾಗಿ ಆರ್ಕಿಟೆಕ್ಚರ್ ಶಿಕ್ಷಣ ಪೂರ್ಣಗೊಳಿಸಿದೆ. ನಂತರದಲ್ಲಿ ಮುಂಬೈನಲ್ಲಿ ಒಂದು ವರ್ಷ ನಟನೆ, ಡ್ಯಾನ್ಸ್ ಹಾಗೂ ಫೈಟ್ ತರಬೇತಿ ಪಡೆದುಕೊಂಡೆ. ಬಳಿಕ ಇಲ್ಲಿರುವ ಫೈಟ್ ಮಾಸ್ಟರ್‌ಗಳ ಬಳಿಯೂ ತರಬೇತಿ ಪಡೆದುಕೊಂಡೆ. ಈ ಸಿನಿಮಾದಲ್ಲಿ ಪ್ರತಿ ದೃಶ್ಯದ ಚಿತ್ರೀಕರಣಕ್ಕೂ ಮುನ್ನ 10–15 ದಿನ ರಿಹರ್ಸಲ್ ಮಾಡಿಕೊಂಡೇ ಭಾಗವಹಿಸುತ್ತಿದ್ದೆ. ಶೂಟಿಂಗ್ ಪ್ರಾರಂಭವಾದಾಗಿನಿಂದ ಹಲವು ವಿಷಯಗಳನ್ನು ಕಲಿತಿದ್ದೇನೆ. ನನ್ನ ಎದುರಿಗಿದ್ದವರೆಲ್ಲರೂ ಹಿರಿಯ ಕಲಾವಿದರು. ಅನುಭವ ಹೊಂದಿದವರು. ತರಬೇತಿ ಪಡೆದಿದ್ದ ಕಾರಣ ಆತ್ಮವಿಶ್ವಾಸ ನನ್ನೊಳಗಿತ್ತು. ಶೂಟಿಂಗ್‌ಗೂ ಮುನ್ನ ಕಾರ್ಯಾಗಾರ ಮಾಡಿದ್ದ ಕಾರಣದಿಂದ ನಟನೆ ಸುಲಭವಾಯಿತು.

- **ನಿಮಗೆ ಸ್ಫೂರ್ತಿ ಯಾರು?**

ನನಗೆ ಡ್ಯಾನ್ಸ್, ಫೈಟ್ ಎಂದರೆ ತುಂಬಾ ಇಷ್ಟ. ಇದಕ್ಕೆ ಚಿಕ್ಕಪ್ಪನೇ(ಪುನೀತ್ ರಾಜ್‌ಕುಮಾರ್) ಸ್ಫೂರ್ತಿ. ದೊಡ್ಡಪ್ಪನ (ಶಿವರಾಜ್‌ಕುಮಾರ್) ನಟನೆಯನ್ನೂ ನಾನು ತುಂಬಾ ಸೂಕ್ಷ್ಮವಾಗಿ ಗಮನಿಸುತ್ತೇನೆ. ಅವರ ಸ್ಟೈಲ್ ವಿಭಿನ್ನ. ಇಬ್ಬರಿಗೂ ಅವರದ್ದೇ ಆದ ಶೈಲಿ ಇದೆ. ಆದರೆ ನನಗೆ ಯಾರನ್ನೂ ನಕಲು ಮಾಡಬೇಕು ಎನ್ನುವುದು ಮನಸ್ಸಿನಲ್ಲಿ ಇಲ್ಲ.

- **ಅಪ್ಪ-ಅಣ್ಣನ ಸಲಹೆ...**

ಸಿನಿಮಾಗೆ ಅಪ್ಪ ಬೆಂಬಲವಾಗಿ ನಿಂತರು. ಅಣ್ಣ(ವಿನಯ್ ರಾಜ್‌ಕುಮಾರ್) ತರಬೇತಿ ಪಡೆದುಕೊಳ್ಳುತ್ತಿರುವಾಗ, ತಾನು ಮಾಡಿದ್ದ ತಪ್ಪುಗಳನ್ನು, ಮಾಡಿಕೊಂಡ ಬದಲಾವಣೆಗಳನ್ನು ನನಗೆ ಹೇಳುತ್ತಿದ್ದ. ಪ್ರತಿ ಬಾರಿಯೂ ಆತನ ಸಲಹೆಯನ್ನು ಪಡೆದುಕೊಳ್ಳುತ್ತಿರುತ್ತೇನೆ.

- **ಈ ಸಿನಿಮಾ ನಿಮ್ಮ ಜೀವನಕ್ಕೆ ಎಷ್ಟು ಹತ್ತಿರವಿದೆ?**

ಸಿಕ್ಕಾಪಟ್ಟೆ ಹತ್ತಿರವಿದೆ. ಈ ಸ್ಕ್ರಿಪ್ಟ್ ನನಗೆ ತುಂಬಾ ಇಷ್ಟವಾಗಿದ್ದೇ ತಂದೆ–ಮಗನ ವಿಷಯದಲ್ಲಿ. ನೋಡಿದವರಿಗೂ ಇದು ಕನೆಕ್ಟ್ ಆಗುತ್ತದೆ. ಏಕೆಂದರೆ ಪ್ರತಿ ತಂದೆ–ಮಗನ ನಡುವೆ ಈ ಗೊಂದಲ ಇದ್ದೇ ಇರುತ್ತದೆ. ನನ್ನ ವಿಚಾರದಲ್ಲಿ ಮನೆ ಜವಾಬ್ದಾರಿ ತಂದೆ ಮೇಲಿತ್ತು. ಚಿಕ್ಕಪ್ಪನ ಕಥೆಗಳನ್ನು ಕೇಳುತ್ತಿದ್ದರು, ಜೊತೆಗೆ ಚಿತ್ರೀಕರಣಕ್ಕೂ ಹೋಗುತ್ತಿದ್ದರು. ಆ ಸಂದರ್ಭದಲ್ಲಿ ತಂದೆಯ ಜೊತೆ ಸಮಯವನ್ನು ಕಳೆಯುವುದೇ ಕಷ್ಟವಾಗಿತ್ತು. ನನಗೂ ತಂದೆಯನ್ನು ಅರಿಯಲು ಸಮಯ ಹಿಡಿಯಿತು. ತಂದೆಗೆ ಸ್ಟ್ರೋಕ್ ಆದಾಗ ನಾನಿನ್ನೂ ಕಾಲೇಜಿನಲ್ಲಿದ್ದೆ. ವಿನಯ್ ಆಗಷ್ಟೇ ಕೆರಿಯರ್ ಆರಂಭಿಸಿದ್ದ. ಅಲ್ಲಿಯವರೆಗೂ ಎಲ್ಲ ಜವಾಬ್ದಾರಿ ಅವರ ಮೇಲಿತ್ತು, ಸ್ಟ್ರೋಕ್ ಆದ ಬಳಿಕ ಯಾವ ಕೆಲಸವೂ ಮುಂದುವರಿಯುತ್ತಿರಲಿಲ್ಲ. ಆಗ ತಂದೆಯ ಜವಾಬ್ದಾರಿ ಬಗ್ಗೆ ಅರಿವಾಯಿತು. ಸ್ಟ್ರೋಕ್ ಆದಾಗ ಚಿಕ್ಕಪ್ಪ, ದೊಡ್ಡಪ್ಪ ಅವರನ್ನು ನೋಡಿಕೊಂಡರು. ಪ್ರತಿ ಹೆಜ್ಜೆಯಲ್ಲೂ ಮನೆಯವರು ಜೊತೆಗಿದ್ದರು. ಕಾಲೇಜಿನಲ್ಲಿ ಓಡಾಡಿಕೊಂಡು, ಮಜಾ ಮಾಡುತ್ತಿದ್ದ ನನಗೆ ಈ ಘಟನೆಗಳು ಬದಲಾವಣೆ ತಂದವು. ಈ ಪಾತ್ರ ಮಾಡುವಾಗ ಎಷ್ಟೋ ವಿಷಯಗಳು ಹೋಲಿಕೆಯಾದವು.

ಸಂತೋಷ್ ಅವರ ಪ್ರತಿ ಸಿನಿಮಾದಲ್ಲೂ ತಂದೆ ಸೆಂಟಿಮೆಂಟ್ ಜಾಸ್ತಿ. 'ಯುವ' ಸಿನಿಮಾನೂ ಇದೇ ಕಥಾಹಂದರ ಹೊಂದಿದೆ. ಎಲ್ಲ ವರ್ಗದ ಪ್ರೇಕ್ಷಕರಿಗೆ ಬೇಕಾದ ಅಂಶಗಳು ಸಿನಿಮಾದಲ್ಲಿವೆ.

- **ನಿಮ್ಮ ಮೇಲಿರುವ ಒತ್ತಡ...**

ಒಂದು ರೀತಿಯಲ್ಲಿ ನನ್ನ ಮೇಲಿರುವ ಒತ್ತಡವೇ ಶಕ್ತಿಯಾಗಿ ಬದಲಾಗಿದೆ. ಆ ಒತ್ತಡದಿಂದ ಜವಾಬ್ದಾರಿ ಬಂದಿದೆ. ಹೀಗಾಗಿ ಎಲ್ಲ ವಿಭಾಗಗಳಲ್ಲೂ ಪ್ರಾಮಾಣಿಕವಾದ ಪ್ರಯತ್ನ ಹಾಕಿದ್ದೇನೆ. ಈ ವಿಚಾರದಲ್ಲಿ ಪೂರ್ಣತೃಪ್ತಿ ಇದೆ.

- **ಮುಂದಿನ ಸಿನಿಮಾಗಳು...**

ಹೊಂಬಾಳೆ ಜೊತೆ ಮತ್ತಷ್ಟು ಸಿನಿಮಾಗಳನ್ನು ಮಾಡಲಿದ್ದೇನೆ. ❖

'ಇದೊಂದು ಸ್ಟಾರ್ ಸಿನಿಮಾ ಅಲ್ಲ'


ಸಂತೋಷ್ ಆನಂದ್‌ರಾಮ್

ಸಿನಿಮಾ ಬಗ್ಗೆ ಮಾಹಿತಿ ಬಿಚ್ಚಿಟ್ಟ ನಿರ್ದೇಶಕ ಸಂತೋಷ್ ಆನಂದ್‌ರಾಮ್, 'ಇದು ಸ್ಟಾರ್ ಅಥವಾ ಸೂಪರ್‌ಹೀರೊ ಸಿನಿಮಾವಲ್ಲ. ಹೀರೊಗೆ ಯಾವ ಹೈಪು, ಸ್ಲೋಮೋಷನ್, ಬಿಲ್ಡ್‌ಅಪ್ ಇಲ್ಲಿಲ್ಲ. ನೇರವಾಗಿ ಹೀರೊ ಪರಿಚಯ ಮಾಡುತ್ತೇವೆ. ಯುವ ಈ ಸಿನಿಮಾದಲ್ಲಿ ತುಂಬಾ ಕೋಪ ಇರುವಂತಹ ಈ ಜನರೇಷನ್ ಹುಡುಗ. ಆತನನ್ನೂ ಡೆಲಿವರಿ ಬಾಯ್ ಆಗಿಯೂ ತೋರಿಸಿದ್ದೇವೆ. Against physics ನಾವು ಈ ಸಿನಿಮಾದಲ್ಲಿ ಯಾವುದನ್ನೂ ಮಾಡಿಲ್ಲ. ನನ್ನ ಹಿಂದಿನ ಸಿನಿಮಾಗಳಲ್ಲಿ ಅಪ್ಪ–ಮಗನ ಕಥೆಯಿದ್ದರೂ, ಅವರಿಬ್ಬರ ನಡುವಿನ ಸಂಘರ್ಷ ಬೇರೆ ಬೇರೆಯದ್ದಾಗಿತ್ತು. ಶಿಕ್ಷಣ ಮುಗಿಯುವ ಸಂದರ್ಭದಲ್ಲಿ ಎಲ್ಲ ಕುಟುಂಬದಲ್ಲಿ ತಂದೆ ಮಗನ ನಡುವೆ ನಡೆಯುವ ಒಂದು ಸಂಘರ್ಷವನ್ನು 'ಯುವ' ಸಿನಿಮಾದಲ್ಲಿ ತೆಗೆದುಕೊಂಡಿದ್ದೇನೆ. ಈ ಸಿನಿಮಾವನ್ನು ತಂದೆ–ಮಗನ ಲವ್‌ಸ್ಟೋರಿ ಎನ್ನಬಹುದು' ಎಂದರು.

'ಯುವ ಸಿನಿಮಾವನ್ನು ಒಂದು ಜವಾಬ್ದಾರಿಯಾಗಿ ತೆಗೆದುಕೊಂಡಿದ್ದೇನೆ. ನಟನೆಯಲ್ಲಿ ಯುವ ಪ್ರಬುದ್ಧತೆ ನೋಡಿ ಆಶ್ಚರ್ಯಪಟ್ಟಿದ್ದೆ. ಕಣ್ಣಿನಲ್ಲಿ ಶಿವಣ್ಣನ ಕಿಚ್ಚು, ಡ್ಯಾನ್ಸ್ ಮತ್ತು ಫೈಟ್‌ನಲ್ಲಿ ಅಪ್ಪು ಅವರನ್ನು ಯುವ ಹೋಲುತ್ತಾನೆ. ಆದರೆ ನಟನೆಯಲ್ಲಿ ಅವರದ್ದೇ ಆದ ಸ್ವಂತಿಕೆ ಇದೆ' ಎನ್ನುತ್ತಾರೆ ಸಂತೋಷ್ ಆನಂದ್‌ರಾಮ್.



ಮಯೂರ್ ಭಾವ ತೀರ ಯಾನ...

ಎಪಿಎಸ್

ಚಂದ್ರಶೇಖರ ಕಂಬಾರರು ರಚಿಸಿದ 'ಸಾಂಬಶಿವ ಪ್ರಹಸನ' ನಾಟಕದ 'ಅಗಲಿ ಇರಲಾರೆನೋ.. ಮರೆತು ಇರಲಾರೆನೋ..ನಿನ್ನನ್ನ' ಹಾಡನ್ನು ಇದೀಗ ಹಲವರು ಗುನುಗುತ್ತಿದ್ದಾರೆ. ಇದಕ್ಕೆ ಕಾರಣರಾದವರು ಸಂಗೀತ ನಿರ್ದೇಶಕ ಮಯೂರ್ ಅಂಬೆಕಲ್ಲು. ಸುಮಾರು ನಾಲ್ಕು ದಶಕಗಳ ಹಿಂದೆ ರಚನೆಯಾದ ಈ ಗೀತೆಗೆ ಹೊಸ ಸ್ಪರ್ಶ ನೀಡಿ ಬೆಳ್ಳಿಪರದೆಗೆ ತಂದಿರುವ ಮಯೂರ್ ಪ್ರಯೋಗಮುಖಿ ಸಂಗೀತ ಸಂಯೋಜಕ. ಚೊಚ್ಚಲ ಸಿನಿಮಾ 'ಶಾಖಾಹಾರಿ'ಯಲ್ಲಿ ನಶೆಯಂತೆ ಸೆಳೆಯುವ ಮೂರು ಹಾಡುಗಳನ್ನು ನೀಡಿರುವ ಮಯೂರ್, ಕನಸಿನ ಗೋಪುರವನ್ನೇ ಕಟ್ಟಿಕೊಂಡು ಚಂದನವನದಲ್ಲಿ ಪಯಣಿಸುತ್ತಿದ್ದಾರೆ. ಅವರೊಂದಿಗಿನ ಮಾತುಕತೆ ಇಲ್ಲಿದೆ...

'ನಾನು ದಕ್ಷಿಣ ಕನ್ನಡದ ಸುಳ್ಯದವನು. ಚಿಕ್ಕವಯಸ್ಸಿನಿಂದಲೂ ಹಾಡುವುದರಲ್ಲಿ ಆಸಕ್ತಿ ಹೊಂದಿದ್ದೆ. ನನ್ನ ಆಸಕ್ತಿಯ ಬೆನ್ನಿಗೆ ನಿಂತವರು ಪೋಷಕರು. ಕೆ.ಆರ್.ಗೋಪಾಲಕೃಷ್ಣ ಅವರಿಂದ ಸುಗಮ ಸಂಗೀತ ಕಲಿತೆ. ಭಾವಗೀತೆಗಳು, ಗಜಲ್‌ನಲ್ಲಿ ಹೆಚ್ಚಿನ ಆಸಕ್ತಿ ಇತ್ತು. ಪ್ರೌಢ ಶಿಕ್ಷಣಕ್ಕೆ ಮೂಡಬಿದಿರೆಯ ಆಳ್ವಾಸ್ ಶಾಲೆಗೆ ಸೇರಿದೆ. ದ್ವಿತೀಯ ಪಿ.ಯುವರೆಗೂ ಅಲ್ಲಿಯೇ ಶಿಕ್ಷಣ ಮುಂದುವರಿಸಿದ್ದೆ. ಅಲ್ಲಿ ನನ್ನ ಈ ಕಲೆಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿತು. ನುಡಿಸಿರಿ, ವಿರಾಸತ್‌ನಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಹೆಚ್ಚಿನ ಪ್ರಭಾವ ಬೀರಿದವು. ಖ್ಯಾತ ಕಲಾವಿದರನ್ನು ಭೇಟಿಯಾಗುವ ಅವಕಾಶ ಸಿಕ್ಕಿತು. ಅಲ್ಲಿಂದ ಹಾಡುವುದರ ಜೊತೆಗೆ ರಾಗ ಸಂಯೋಜನೆ, ಸಂಗೀತ ಸಂಯೋಜನೆಯ ಕ್ಷೇತ್ರದತ್ತ ಒಲವು ಹೆಚ್ಚಾಯಿತು. ರಂಗಭೂಮಿಯ ಪ್ರವೇಶವೂ ಅಲ್ಲಿಯೇ ಆಗಿತ್ತು. ಜೀವನ್‌ರಾಂ ಸುಳ್ಯ ಅವರು ಗುರುಗಳಾಗಿದ್ದರು. ದ್ವಿತೀಯ ಪಿ.ಯು ಮುಗಿಸಿ ನೇರವಾಗಿ ಬೆಂಗಳೂರಿಗೆ ಬಂದು, ಸಿನಿಮಾಗಳಲ್ಲಿ ಅವಕಾಶಕ್ಕಾಗಿ ಕಾಯುತ್ತಿದ್ದೆ. ಒಳ್ಳೆಯ ಒಂದು ಪ್ರಾಜೆಕ್ಟ್ ಸಿಗುವವರೆಗೂ ಕಾದೆ. ಈ ಅವಧಿಯಲ್ಲಿ ಆಲ್ಬಂ ಹಾಡುಗಳು, ಮೊಲೊಡಿ ಸಿಂಗಲ್ಸ್ ಮಾಡಿದೆ. ಇಂತಹ ಒಂದು ಸಿಂಗಲ್ ನೋಡಿಯೇ 'ಶಾಖಾಹಾರಿ' ನಿರ್ದೇಶಕ ಸಂದೀಪ್ ಸುಂಕದ್ ಅವರ ಸಿನಿಮಾದಲ್ಲಿ ಅವಕಾಶ ನೀಡಿದರು' ಎಂದು ತಮ್ಮ ಹಿನ್ನೆಲೆ ಬಿಚ್ಚಿಟ್ಟರು ಮಯೂರ್.

'ಮೊದಲಿಗೆ ಕೇವಲ ಒಂದು ಹಾಡು 'ಸೌಗಂಧಿಕ' ಸಂಗೀತ ಸಂಯೋಜಿಸಲು ಸಂದೀಪ್ ತಿಳಿಸಿದ್ದರು. ಇದಾದ ಬಳಿಕ 'ಸೋಲ್ ಆಫ್ ಶಾಖಾಹಾರಿ' ಪ್ರಯತ್ನಿಸಬಹುದೇ ಎಂದು ಕೇಳಿದರು. ನನ್ನ ಎರಡೂ ಕೆಲಸಗಳು ಸಂದೀಪ್ ಅವರಿಗೆ ಇಷ್ಟವಾದವು. ಒಂದು ರೀಲ್‌ಗೆಂದು ಆರಂಭವಾದ ಸಿನಿಮಾದ ಬ್ಯಾಕ್‌ಗ್ರೌಂಡ್ ಸ್ಕೋರ್ ಕೆಲಸ ಕೊನೆಗೆ ಇಡೀ ಸಿನಿಮಾಗೇ ಬ್ಯಾಕ್‌ಗ್ರೌಂಡ್ ಸ್ಕೋರ್ ನೀಡುವಂತೆ ಮಾಡಿತು. 'ಸೋಲ್ ಆಫ್ ಶಾಖಾಹಾರಿ' ಹಾಡಿನ ಸಂಯೋಜನೆ ಸವಾಲಿನಿಂದ ಕೂಡಿತ್ತು. ಹಲವು ಟ್ರಯಲ್ ಆ್ಯಂಡ್ ಎರರ್ ಆಗಿತ್ತು. ಚೈತ್ರಾ ಅವರ ಧ್ವನಿಯ ಟೆಕ್ಸ್ಚರ್ ಇದಕ್ಕೆ ಪೂರಕವಾಯಿತು. ಅದೇ ರೀತಿ 'ಅಗಲಿ ಇರಲಾರೆನೋ..' ಎಲ್ಲರಿಗೂ ಪರಿಚಯ ಇರುವ ಹಾಡು. ಹೀಗಾಗಿ ರಿಸ್ಕ್ ಕೂಡಾ ಅಧಿಕ. ನಿರ್ದೇಶಕರು ಮೊದಲೇ ಈ ಹಾಡು ಬೇಕು ಎಂದು ನಿರ್ಧಾರ ಮಾಡಿದ್ದರು. ಹೀಗಾಗಿ ಸಿನಿಮ್ಯಾಟಿಕ್ ಫೀಲ್ ಕೊಟ್ಟು ಮೂಲಸ್ವರೂಪಕ್ಕೆ ಧಕ್ಕೆ ತರದೆ ರಿ–ಅರೇಂಜ್ ಮಾಡಿ, ಹಾಡಿದೆ' ಎಂದರು.

ಸದ್ಯ ಹೊಸಬರ ಎರಡು ಸಿನಿಮಾಗಳಿಗೆ ಸಂಗೀತ ಸಂಯೋಜನೆ ಮಾಡುತ್ತಿರುವ ಮಯೂರ್, 'ಭಾವ ತೀರ ಯಾನ' ಎಂಬ ಮ್ಯೂಸಿಕಲ್ ರೊಮ್ಯಾಂಟಿಕ್ ಸಿನಿಮಾವೊಂದಕ್ಕೆ ಸಂಗೀತ ನಿರ್ದೇಶನದ ಜೊತೆಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಈ ಸಿನಿಮಾ ಜೂನ್‌ನಲ್ಲಿ ತೆರೆಕಾಣಲಿದೆ. ❖

'ಪ್ರೇಮಲೋಕ'ದಲ್ಲಿ ಮುಳುಗಿದ ರವಿ


ರವಿಚಂದ್ರನ್–ಅಮೈರ

'ಪ್ರೇಮಲೋಕ' ಎರಡನೇ ಭಾಗದ ಬಗ್ಗೆ ನಟ ರವಿಚಂದ್ರನ್ ಹಲವು ಕುತೂಹಲಕಾರಿ ವಿಷಯಗಳನ್ನು ಬಿಚ್ಚಿಟ್ಟಿದ್ದಾರೆ. ಸಿನಿಮಾದಲ್ಲಿ 25 ಹಾಡುಗಳಿದ್ದು, 40ಕ್ಕೂ ಅಧಿಕ ಸೆಟ್‌ಗಳಲ್ಲಿ ಸಿನಿಮಾ ಚಿತ್ರೀಕರಣ ನಡೆಯಲಿದೆ ಎಂದಿದ್ದಾರೆ ಕ್ರೇಜಿಸ್ಟಾರ್.

ಬ್ಯಾಂಗಲೂರ್ ಮೂವೀಸ್ ನಿರ್ಮಾಣದಲ್ಲಿ ಸ್ಪೆನ್ಸರ್ ಮ್ಯಾಥ್ಯೂ ನಿರ್ದೇಶನದ ಮಾಡುತ್ತಿರುವ, ರವಿಚಂದ್ರನ್–ಅಮೈರ ಜೋಡಿ ನಟಿಸಿರುವ 'ತಪಸ್ಸಿ' ಸಿನಿಮಾದ ಮುಹೂರ್ತ ಸಮಾರಂಭ ಇತ್ತೀಚೆಗೆ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ರವಿಚಂದ್ರನ್, 'ನಾನು ಪ್ರೇಮಲೋಕ–2ರಲ್ಲಿ ಮುಳುಗಿ ಹೋಗಿದ್ದೇನೆ. 25 ಹಾಡುಗಳು ಸಿದ್ಧವಾಗಿವೆ. ಮೇ 30 ನನ್ನ ಜನ್ಮದಿನ. ಆವತ್ತಿನಿಂದ ಎರಡನೇ ಭಾಗದ ಚಿತ್ರೀಕರಣ ಆರಂಭಿಸುತ್ತೇನೆ. ಮನೋರಂಜನ್ ಹಾಗೂ ನಾನು ಪ್ರಮುಖ ಪಾತ್ರಗಳಲ್ಲಿದ್ದು, ನಾಯಕಿಯ ಆಯ್ಕೆ ಇನ್ನೂ ಆಗಿಲ್ಲ. ವಿಕ್ರಮ್ ಕೂಡಾ ಸಿನಿಮಾದಲ್ಲಿ ಇರಲಿದ್ದಾನೆ. ಇನ್ನೊಂದಿಷ್ಟು ಪಾತ್ರಗಳ ಆಯ್ಕೆ ಆಗಬೇಕಿದೆ. 40–50 ಸೆಟ್‌ಗಳಲ್ಲಿ ಈ ಸಿನಿಮಾದ ಚಿತ್ರೀಕರಣ ನಡೆಯಲಿದೆ. ಸಿಕ್ಕಾಪಟ್ಟೆ ಖರ್ಚು ಖಂಡಿತಾ ಇದೆ. ಇದು ಕಡಿಮೆ ಬಜೆಟ್ ಸಿನಿಮಾವಂತೂ ಅಲ್ಲ. ಪ್ರೇಮಲೋಕ ಕಾಮನ್ ಮ್ಯಾನ್ ಜೊತೆ ನಡೆಯುವ ಕಥೆ' ಎಂದರು.

'ತಪಸ್ಸಿ' ಬಗ್ಗೆ ವಿವರ ನೀಡಿ, 'ಈಗಾಗಲೇ ಸಿನಿಮಾದ ಚಿತ್ರೀಕರಣ ಆರಂಭವಾಗಿ, ಉಳಿದ ಪಾತ್ರಗಳ ಶೂಟಿಂಗ್ ಪೂರ್ಣಗೊಂಡಿದೆ. ನನ್ನ ಪಾತ್ರದ ಚಿತ್ರೀಕರಣವಷ್ಟೇ ಬಾಕಿ ಇದೆ. 'ರವಿ ಬೋಪಣ್ಣ' ಚಿತ್ರದಿಂದ ನನಗೆ ಮ್ಯಾಥ್ಯೂ ಪರಿಚಯವಿದೆ. ಅವರಿಗೆ ಸಿನಿಮಾ ಮೇಲಿರುವ ಬದ್ಧತೆ ನನಗೆ ಈ ಸಿನಿಮಾ ಒಪ್ಪಿಕೊಳ್ಳುವಂತೆ ಮಾಡಿತು' ಎಂದರು. ❖

'ಲೈನ್‌ಮ್ಯಾನ್'ಗೆ 'ದಿಲ್‌ಖುಷ್'

ಇಂದು ತೆರೆಗೆ

ಪ್ರಜಾವಾಣಿ ನೋಡಿಯೊ — ಸಿನಿಮಾತು ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಐಪಿಎಲ್ ಹಬ್ಬ ಆರಂಭದ ದಿನವೇ ಚಂದನವನದ ತೆರೆಗಳಲ್ಲಿ ಇಂದು(ಮಾರ್ಚ್ 22) ಐದಾರು ಸಿನಿಮಾಗಳು ತೆರೆಕಾಣುತ್ತಿವೆ.


ತ್ರಿಗುಣ್

ಲೈನ್‌ಮ್ಯಾನ್: ಹಳ್ಳಿಯೊಂದರಲ್ಲಿ ಬದಲಾವಣೆ ತಂದ ಲೈನ್‌ಮ್ಯಾನ್ ಒಬ್ಬನ ಕಥಾಹಂದರವನ್ನು ಈ ಸಿನಿಮಾ ಹೊಂದಿದೆ. ಪರ್ಪಲ್ ರಾಕ್ ಸಂಸ್ಥೆಯಿಂದ ನಿರ್ಮಾಣವಾಗಿರುವ ಈ ಚಿತ್ರವು ಕನ್ನಡ ಹಾಗೂ ತೆಲುಗಿನಲ್ಲಿ ನಿರ್ಮಾಣವಾಗಿದೆ. ಚಾಮರಾಜನಗರದ ಚಂದಕವಾಡಿಯಲ್ಲಿ ಇಡೀ ಚಿತ್ರವನ್ನು ಚಿತ್ರೀಕರಿಸಲಾಗಿದೆ. ಇತ್ತೀಚೆಗೆ ನಡೆದ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಲ್ಲೂ ಈ ಚಿತ್ರ ಪ್ರದರ್ಶನ ಕಂಡಿತ್ತು. ತೆಲುಗಿನ ನಟ ತ್ರಿಗುಣ್ ಈ ಚಿತ್ರದ ನಾಯಕನಾಗಿದ್ದು, ಕಾಜಲ್ ಕುಂದರ್, ಬಿ.ಜಯಶ್ರೀ, ಮೈಕೋ ನಾಗರಾಜ್, ಹರಿಣಿ, ಕಮಲ ತಾರಾಬಳಗದಲ್ಲಿದ್ದಾರೆ.

ರಾಕ್ಷಸತಂತ್ರ: ಮೇಘಾ ಅಕ್ಷರಾ ಆ್ಯಕ್ಷನ್ ಕಟ್ ಹೇಳಿರುವ ಈ ಚಿತ್ರವು, ಕಂಪ್ಯೂಟರ್ ಸ್ಕ್ರೀನ್ ಬೇಸ್ ಹಾರರ್ ಕಥಾಹಂದರ ಹೊಂದಿದೆ. ಐದು ಜನ ಸ್ನೇಹಿತರು ವಿಡಿಯೋ ಕಾನ್ಫರೆನ್ಸ್ ಕಾಲ್‌ನಲ್ಲಿ ವಿಚಿತ್ರವಾದ ವಿಡಿಯೊವೊಂದನ್ನು ನೋಡುತ್ತಾರೆ. ಅದರಿಂದ ಮುಂದೇನಾಗುತ್ತದೆ ಎನ್ನುವುದು ಚಿತ್ರದ ಕಥೆ. ಈ ಚಿತ್ರದ ತಾರಾಗಣದಲ್ಲಿ ರಕ್ಷಿತಾ ನಾಗರಾಜು, ಸುಖೇಶ್ ಆನಂದ್, ರಕ್ಷಿತಾ ಮಲ್ಲಿಕ್, ತಿಲಕ್ ಕುಮಾರ್ ಹಾಗೂ ಮೇಘಾ ಅಕ್ಷರಾ ನಟಿಸಿದ್ದಾರೆ.



ತೂತ್ ಕಾಸು: ಹಂಸಲೇಖ ಅವರ ಮಾರ್ಗದರ್ಶನದಲ್ಲಿ ಪಳಗಿದ ಒಂದಿಷ್ಟು ಜನರು ಸೇರಿ ಮಾಡಿದ ಸಿನಿಮಾವಿದು. ಕಾಮಿಡಿ ಜಾನರ್ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ರವಿ ತೇಜಸ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಇದು ಇವರ ಚೊಚ್ಚಲ ಸಿನಿಮಾ. ಚಿತ್ರದಲ್ಲಿ ನಾಯಕನಾಗಿ ವರುಣ್ ದೇವಯ್ಯ ನಟಿಸಿದ್ದು, ನಾಯಕಿಯರಾಗಿ ಪ್ರಿಷಾ ಹಾಗೂ ಪ್ರೇರಣ ಭಟ್ ಬಣ್ಣಹಚ್ಚಿದ್ದಾರೆ. 'ತೂತ್ ಕಾಸು' 1942ರಿಂದ 1947ರವರೆಗೆ ಚಲಾವಣೆಯಲ್ಲಿದ್ದ ನಾಣ್ಯ. ಸ್ವಾತಂತ್ರ್ಯ ನಂತರ ಇದರ ಚಲಾವಣೆ ನಿಂತಿತು. ಸಿನಿಮಾದಲ್ಲಿ ಇದೊಂದು ಕೋಡ್ ವರ್ಡ್ ಆಗಿ ಬಳಸಲಾಗಿದೆ ಎಂದಿದೆ ಚಿತ್ರತಂಡ. ❖


ಸ್ಪಂದನ ಸೋಮಣ್ಣ

ದಿಲ್‌ಖುಷ್: ರೊಮ್ಯಾಂಟಿಕ್ ಕಾಮಿಡಿ ಕಥಾಹಂದರದ ಈ ಸಿನಿಮಾವನ್ನು ಪ್ರಮೋದ್ ಜಯ ನಿರ್ದೇಶಿಸಿದ್ದಾರೆ. ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಯನ್ನು ನಿರ್ದೇಶಕರೇ ಬರೆದಿದ್ದಾರೆ. ಸಿಂಪಲ್ ಸುನಿ ಬಳಿ ಕಾರ್ಯನಿರ್ವಹಿಸಿರುವ ಪ್ರಮೋದ್ ಜಯ ಅವರಿಗೆ ಇದು ಚೊಚ್ಚಲ ಚಿತ್ರ. ರಂಜಿತ್ ಮೊದಲ ಬಾರಿಗೆ ಈ ಚಿತ್ರದ ಮೂಲಕ ನಾಯಕನಾಗಿ ಚಿತ್ರರಂಗ ಪ್ರವೇಶಿಸಿದ್ದಾರೆ. ಸ್ಪಂದನ ಸೋಮಣ್ಣ ಚಿತ್ರದ ನಾಯಕಿ. ರಂಗಾಯಣ ರಘು, ಧರ್ಮಣ್ಣ ಕಡೂರು, ರವಿ ಭಟ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನಿಮ್ಮ ಕೆಲಸಕ್ಕೆ ನೀವು ತಲೆಬಾಗಿದರೆ ಬೇರೆ ಯಾರಿಗೂ ತಲೆಬಾಗಬೇಕಾದ ಅಗತ್ಯವಿಲ್ಲ. ನಿಮ್ಮ ಕೆಲಸವನ್ನು ನೀವು ಹಾಳುಗೆಡವಿದರೆ ಪ್ರತಿಯೊಬ್ಬರಿಗೂ ತಲೆಬಾಗಬೇಕಾಗುತ್ತದೆ.

–ಎ.ಪಿ.ಜೆ. ಅಬ್ದುಲ್ ಕಲಾಂ

ಆಯುಕ್ತರ ನೇಮಕ ತಡೆಗೆ ನಕಾರ ಕಾನೂನಿನ ದೋಷ ನಿವಾರಣೆ ಎಂದು?

ಇಬ್ಬರು ಚುನಾವಣಾ ಆಯುಕ್ತರನ್ನು ಕಳೆದ ವಾರ ಅವಸರದಲ್ಲಿ ನೇಮಕ ಮಾಡಿದ ಕ್ರಮವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ಆದರೆ, ಸರ್ಕಾರದ ನಡೆಯು 'ಅನಗತ್ಯವಾಗಿತ್ತು, ತಡೆಹಿಡಿಯಬಹುದಾಗಿತ್ತು' ಎಂದು ಕೋರ್ಟ್ ಹೇಳಿದೆ. ಹೊಸ ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ಮತ್ತು ಸುಖಬೀರ್ ಸಿಂಗ್ ಸಂಧು ಅವರನ್ನು ಮಾರ್ಚ್ 14ರಂದು ನೇಮಕ ಮಾಡಲಾಯಿತು. ಈ ನೇಮಕ ನಡೆದದ್ದು, ನೇಮಕಾತಿಗೆ ಸಂಬಂಧಿಸಿದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕಿದ್ದ ಒಂದು ದಿನ ಮೊದಲು. ವಿಚಾರವು ನ್ಯಾಯಾಲಯದ ಮುಂದೆ ಇದ್ದ ಕಾರಣ ಕೇಂದ್ರವು ಸ್ವಲ್ಪ ಕಾಲ ಕಾಯಬಹುದಿತ್ತು ಎಂದು ಕೂಡ ಕೋರ್ಟ್ ಹೇಳಿದೆ. ಚುನಾವಣಾ ಆಯುಕ್ತರ ನೇಮಕಕ್ಕೆ ಸಂಬಂಧಿಸಿದಂತೆ 2023ರಲ್ಲಿ ರೂಪಿಸಿದ ಕಾಯ್ದೆಗೆ ಅನುಗುಣವಾಗಿ ಈ ಇಬ್ಬರನ್ನು ನೇಮಕ ಮಾಡಲಾಗಿದೆ. ಚುನಾವಣಾ ಆಯುಕ್ತರ ನೇಮಕಕ್ಕೆ ಸಂಬಂಧಿಸಿದ ಸಮಿತಿಯಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಅವರೂ ಇರಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದ ನಂತರದಲ್ಲಿ ರೂಪಿಸಿದ ಕಾಯ್ದೆ ಇದು.



ಆಯ್ಕೆ ಸಮಿತಿಯಲ್ಲಿ ಕಾರ್ಯಾಂಗವು ಹೊಂದಿರುವ ನಿರ್ಣಾಯಕ ಪಾತ್ರವು ಇಲ್ಲಿ ಪ್ರಶ್ನೆಗೆ ಒಳಗಾಗಿತ್ತು

'ಕಾಯ್ದೆಗೆ ಈಗ ತಡೆ ನೀಡಲು ಸಾಧ್ಯವಿಲ್ಲ. ತಡೆ ನೀಡಿದರೆ ಗೊಂದಲಗಳು ಹಾಗೂ ಅನಿಶ್ಚಿತತೆಗಳು ಸೃಷ್ಟಿಯಾಗುತ್ತವೆ' ಎಂದು ಕೋರ್ಟ್ ಹೇಳಿದೆ. ಅಂದರೆ, ಕೋರ್ಟ್ ಯಾವುದೇ ಆದೇಶ ನೀಡುವ ಮೊದಲು ಚುನಾವಣಾ ಆಯುಕ್ತರನ್ನು ನೇಮಕ ಮಾಡಬೇಕು ಎಂದು ಸರ್ಕಾರವು ಕಡೆಯಿಂದ ನಡೆದ ಯತ್ನಕ್ಕೆ ಜಯ ಸಿಕ್ಕಿದೆ ಎಂಬುದನ್ನು ಇದು ತೋರಿಸುತ್ತದೆ. ಆಯ್ಕೆ ಸಮಿತಿಯ ಸದಸ್ಯರಿಗೆ ಹೆಸರುಗಳನ್ನು ಪರಿಶೀಲಿಸಲು ಇನ್ನಷ್ಟು ಸಮಯ ನೀಡಬೇಕಿತ್ತು ಎಂದು ಕೋರ್ಟ್ ಹೇಳಿರುವುದು ಇಲ್ಲಿ ಸಂಗತವಲ್ಲ. ಏಕೆಂದರೆ, ಕೋರ್ಟ್ ಹೇಳಿರುವಂತೆ, ಅವಸರದಿಂದ ಕೈಗೊಂಡ ಕ್ರಮವು ಇಲ್ಲಿ ಅಮಾನ್ಯವಾಗಿ ಆಗಿಲ್ಲ. ಸರ್ಕಾರವು ಏನು ಮಾಡಲು ಹೊರಟಿತ್ತೋ ಅದನ್ನು ಮಾಡುವುದನ್ನು ಕೋರ್ಟ್ ಮೊದಲೇ ಊಹಿಸಬಹುದಿತ್ತೇ ಎಂಬ ಪ್ರಶ್ನೆಯು ಇಲ್ಲಿ ಮಹತ್ವದ್ದಾಗುತ್ತದೆಯಾದರೂ, ನೇಮಕಾತಿ ಪ್ರಕ್ರಿಯೆಯನ್ನು ಕೋರ್ಟ್ ತಾನೇ ಮಾನ್ಯ ಮಾಡಿದೆ ಎಂಬುದನ್ನು ಗಮನಿಸಬೇಕು. 'ನೇಮಕ ಆಗಿರುವ ವ್ಯಕ್ತಿಗಳ ವಿರುದ್ಧ ಯಾವುದೇ ಆರೋಪ ಇಲ್ಲವಾದ ಕಾರಣ' ಸರ್ಕಾರ ರೂಪಿಸಿರುವ ಕಾಯ್ದೆಯು ಹೇಗೆ ಜಾರಿಗೆ ಬರಬೇಕು ಎಂಬುದು ಇನ್ನೂ ಪ್ರಶ್ನೆಯಾಗಿಯೇ ಇದೆ. ಆಯ್ಕೆ ಸಮಿತಿಯಲ್ಲಿ ಕಾರ್ಯಾಂಗವು ಹೊಂದಿರುವ ನಿರ್ಣಾಯಕ ಪಾತ್ರವನ್ನು ಇಲ್ಲಿ ಕೋರ್ಟ್ ಗಮನಕ್ಕೆ ತರಲಾಗಿತ್ತು.

ಸರ್ಕಾರವು ತೋರಿದ ಅನಗತ್ಯ ಅವಸರದ ಬಗ್ಗೆ ಕೋರ್ಟ್ ಪರಿಶೀಲನೆ ನಡೆಸಿದೆಯಾದರೂ, ನೇಮಕಾತಿಗೆ ತಡೆ ನೀಡಲು ತಾನು ನಿರಾಕರಿಸುವುದು ಏಕೆ ಎಂಬ ಬಗೆಗಿನ ಆದೇಶವು ಆದರಿಂದ ಬರಬೇಕಿದೆ. 'ಚುನಾವಣೆಯು ಹತ್ತಿರವಾಗುತ್ತಿದೆ. ಈ ಹೊತ್ತಿನಲ್ಲಿ ಅನುಕೂಲಗಳ ಸಮತೋಲನವೂ ಕೂಡ ಮುಖ್ಯ, ಅದಕ್ಕೆ ಮತ್ತಷ್ಟು ನೀಡಬೇಕಾಗುತ್ತದೆ' ಎಂದು ಕೋರ್ಟ್ ಹೇಳಿದೆ. ನ್ಯಾಯದಾನ ಮಾಡಿದರೆ ಮಾತ್ರವೇ ಸಾಲದು, ನ್ಯಾಯದಾನ ಆಗುತ್ತಿದೆ ಎಂಬುದು ಗೊತ್ತಾಗುವಂತೆಯೂ ಇರಬೇಕು ಎಂದು ಕೂಡ ಕೋರ್ಟ್ ಹೇಳಿದೆ. ಈ ಮಾತನ್ನು ಅದು ಸರ್ಕಾರ ತೋರಿಸಿದ ಅವಸರವನ್ನು ಉಲ್ಲೇಖಿಸಿ ಹೇಳಿದೆ. ಈ ಮಾತು ಚುನಾವಣಾ ಆಯುಕ್ತರ ಆಯ್ಕೆ ಪ್ರಕ್ರಿಯೆಗೆ ಕೂಡ ಸಮಾನವಾಗಿ ಅನ್ವಯ ಆಗಬೇಕು. ಆಯ್ಕೆ ಪ್ರಕ್ರಿಯೆಯು ನ್ಯಾಯಸಮ್ಮತವಾಗಿ ಇರುತ್ತದೆ ಎಂಬುದು ಇತರರಿಗೂ ಗೊತ್ತಾಗುವಂತೆ ಮಾಡುವ ಉದ್ದೇಶದಿಂದ ಆಯ್ಕೆ ಸಮಿತಿಯಲ್ಲಿ ಸಿಜೆಐ ಇರಬೇಕು ಎಂದು ಈ ಹಿಂದೆ ಸುಪ್ರೀಂ ಕೋರ್ಟ್ ಹೇಳಿತ್ತು. ಆದರೆ, ತನ್ನ ಮಾತೇ ಅಂತಿಮವಾಗುವ ಆಯ್ಕೆ ಪ್ರಕ್ರಿಯೆಯೊಂದನ್ನು ಸರ್ಕಾರ ರೂಪಿಸಿತು. ಇದು ಈ ಕಾನೂನಿನಲ್ಲಿ ಹಾಗೂ ಕಾನೂನು ವಿವರಿಸುವ ಪ್ರಕ್ರಿಯೆಯಲ್ಲಿ ಒಂದು ದೋಷವಾಗಿ ಉಳಿದುಕೊಳ್ಳಲಿದೆ.

ದಿನದ ಟ್ವೀಟ್

ನ್ಯಾಯಸಮ್ಮತ ಚುನಾವಣೆ ಎಂದರೆ...

ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ಎಂದರೆ ಮತದಾನವಷ್ಟೇ ಮುಕ್ತ ಮತ್ತು ನ್ಯಾಯಸಮ್ಮತವಾಗಿ ನಡೆಯಬೇಕು ಎಂದರ್ಥವಲ್ಲ. ವಿರೋಧ ಪಕ್ಷವು ನಿಧಿ ಸಂಗ್ರಹಿಸಲು, ಪ್ರಚಾರ ನಡೆಸಲು, ಮುಕ್ತವಾಗಿ ಮಾತನಾಡಲು ಸಹ ಅವಕಾಶ ಇರಬೇಕು ಎಂದರ್ಥ. ಮತದಾನದ ವೇಳೆ ನೀವು ವಂಚನೆ ಎಸಗದೇ ಚುನಾವಣೆಯನ್ನು ವಂಚನೆಗೆ ಒಳಪಡಿಸಲು ಸಾಧ್ಯ. ಪ್ರಜಾಪ್ರಭುತ್ವದಲ್ಲಿ ಚುನಾವಣೆಗಿಂತ ಹೆಚ್ಚಿನದ್ದಿದೆ ಮತ್ತು ಚುನಾವಣೆಯಲ್ಲಿ ಮತದಾನಕ್ಕಿಂತ ಹೆಚ್ಚಿನದ್ದಿದೆ.

ಅಮಿತ್ ವರ್ಮಾ, ಲೇಖಕ

ಕಿಡಿನುಡಿ

'ಕರೆನ್ಸಿ ನೋಟ್'ನಂತೆ ಇರುವುದರಿಂದ ಬಾಂಡ್ ಸಂಖ್ಯೆಯನ್ನು ತಾವು ದಾಖಲಿಸಿ ಇಡುವುದಿಲ್ಲ ಎಂದು ಎಸ್‌ಬಿಐ ಪರ ವಕೀಲರು ಕೆಲ ದಿನಗಳ ಹಿಂದೆ ವಾದಿಸಿದ್ದರು. ಆದರೆ ಎಸ್‌ಬಿಐ ಈವರೆಗೆ ಸುಳ್ಳು ಹೇಳುತ್ತಲೇ ಬಂದಿತ್ತು ಎಂಬುದು ಈಗ ನಮಗೆ ಗೊತ್ತಾಗಿದೆ. ಈ ಹಿಂದಿನಿಂದಲೂ ಎಲ್ಲ ಮಾಹಿತಿಯೂ ಅದರ ಬಳಿ ಸಿದ್ಧವಾಗಿಯೇ ಇತ್ತು. ಸುಪ್ರೀಂ ಕೋರ್ಟ್ ಒಳ್ಳೆಯ ಕೆಲಸ ಮಾಡಿದೆ!

ಮೇಘನಾದ್, ಲೇಖಕ

25 ವರ್ಷಗಳ ಹಿಂದೆ

ಸೋಮವಾರ, 22-3-1999

• **ನಾಡಿಗೆ ಬಂದು ಸೆರೆಯಾದ ಕಾಡುಕೋಣ**

ವಿಜಾಪುರ, ಮಾರ್ಚ್ 21– ವಿಜಾಪುರ ಜಿಲ್ಲೆಯ ಮುಳಸಾವಳಗಿ ಗ್ರಾಮದಲ್ಲಿ ಕಳೆದ 10 ದಿನಗಳಿಂದ ಜೋಳ, ಕಬ್ಬು, ಬಾಳೆ ತೋಟಗಳಲ್ಲಿ ದಾಂದಲೆ ಮಾಡುತ್ತಿದ್ದ ತುಂಟ ಕಾಡುಕೋಣವೊಂದನ್ನು ಊರ ಜನರು ಹಿಡಿದು ಕಟ್ಟಿಹಾಕಿದ್ದು, ಅದನ್ನು ಸೋಮವಾರ ಮುಂಜಾನೆ ಬೆಂಗಳೂರಿನ ಬನ್ನೇರುಘಟ್ಟ ಪ್ರಾಣಿ ಸಂಗ್ರಹಾಲಯಕ್ಕೆ ಸಾಗಿಸಲಾಗುತ್ತಿದೆ.

ಸುಮಾರು 5 ಕ್ವಿಂಟಲ್ ತೂಕದ ಈ ಕೋಣವನ್ನು ಮುಳಸಾವಳಗಿಯ ಎಂಟು ಯುವಕರು ಹಗ್ಗದ ಬಲೆಯಲ್ಲಿ ಅಡ್ಡಗಟ್ಟಿ ಬೀಳಿಸಿ, ಮೂಗುದಾರ ಹಾಕಿ, ಕಾಲಿಗೆ ಹಗ್ಗ ಸಿಕ್ಕಿಸಿ ಮರಕ್ಕೆ ಕಟ್ಟಿ ಹಾಕುವ ಸಾಹಸ ಮೆರೆದಿದ್ದಾರೆ. ಇಬ್ಬರು ಗಾಯಗೊಂಡಿದ್ದಾರೆ.

ಕ್ರೂರ ನೋಟದ ಕಂದು ಮಿಶ್ರಿತ ತಿಳಿ ಕಪ್ಪುಬಣ್ಣದ, ಆರು ಹಲ್ಲಿನ ಈ ಆಜಾನುಬಾಹು ಕೋಣವನ್ನು ನೋಡಲು ಗ್ರಾಮದ ಸುತ್ತಮುತ್ತಲ ಊರಿನ ಜನರು ಜಾತ್ರೆಯ ಮಾದರಿಯಲ್ಲಿ ಬಂದು ಹೋಗುತ್ತಿದ್ದಾರೆ. ಹಿಂದೆಂದೂ ನಾವು ಇಂತಹ ಕಾಡುಪ್ರಾಣಿಯನ್ನು ನೋಡಿರಲಿಲ್ಲ ಎಂದು ವಿಸ್ಮಯ ವ್ಯಕ್ತಪಡಿಸುತ್ತಿದ್ದಾರೆ.

• **ಜಯಾ ರಕ್ಷಣೆಗೆ ಕೇಂದ್ರದ ಯತ್ನ ಇಲ್ಲ: ವಾಜಪೇಯಿ**

ತಿರುಚಿ, ಮಾರ್ಚ್ 21– ಬಿಜೆಪಿ ನೇತೃತ್ವದ ಸರ್ಕಾರ ತನ್ನ ಉಳಿವಿಗಾಗಿ ಎಐಎಡಿಎಂಕೆ ನಾಯಕಿ ಜಯಲಲಿತಾ ಅವರನ್ನು ಭ್ರಷ್ಟಾಚಾರದ ಆಪಾದನೆಯಿಂದ ಮುಕ್ತಗೊಳಿಸಲು ಯತ್ನಿಸುತ್ತಿದೆ ಎಂಬ ಆರೋಪವನ್ನು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ತಳ್ಳಿಹಾಕಿದರು.

ಕಾನೂನು ತಜ್ಞರ ಅಭಿಪ್ರಾಯ ಪಡೆದೇ ಜಯಲಲಿತಾ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳನ್ನು ಮೂರು ವಿಶೇಷ ನ್ಯಾಯಾಲಯಗಳಿಂದ ಬೇರೆಡೆಗೆ ವರ್ಗ ಮಾಡಲಾಗಿದೆ ಎಂದು ವಾಜಪೇಯಿ ತಮ್ಮ ಸರ್ಕಾರದ ನಿರ್ಧಾರವನ್ನು ಸಮರ್ಥಿಸಿಕೊಂಡರು.

50 ವರ್ಷಗಳ ಹಿಂದೆ

ಶುಕ್ರವಾರ, 22-3-1974

• **ಚುನಾವಣೆ ಫಲಿತಾಂಶ ಬುಡಮೇಲು ಮಾಡಲು ಕೆಲವು ಶಕ್ತಿಗಳ ಸಂಚು**

ನವದೆಹಲಿ, ಮಾರ್ಚ್ 21– ರಾಷ್ಟ್ರದ ಕೆಲವು ಕಡೆ ನಡೆಯುತ್ತಿರುವ ಹಿಂಸಾಚಾರಕ್ಕಾಗಿ ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ವ್ಯಥೆ ವ್ಯಕ್ತಪಡಿಸಿ, ಇದು ಪ್ರಜಾತಂತ್ರ ಹಾಗೂ ರಾಷ್ಟ್ರದ ರೀತಿನೀತಿಗಳ ವಿರುದ್ಧ ಕೆಲವು ಶಕ್ತಿಗಳು ಎಸಗಿರುವ 'ದಾಳಿ' ಎಂದು ವರ್ಣಿಸಿದರು.

ಭಾರತ ರಾಷ್ಟ್ರೀಯ ಗಣಿ ಕೆಲಸಗಾರರ ಫೆಡರೇಷನ್ನಿನ ರಜತ ಮಹೋತ್ಸವ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಗಾಂಧಿ ಅವರು, ಚುನಾವಣೆ ಫಲಿತಾಂಶಗಳನ್ನು ತಪ್ಪು ಮಾರ್ಗಗಳಿಂದ ಬುಡಮೇಲು ಮಾಡುವುದು ಈ ಶಕ್ತಿಗಳ ಬಯಕೆ. ಇಂತಹ ಕೆಲವರು ಈ ಚಳವಳಿಗಳಿಗೆ ಸಂಬಂಧಪಡದ ಬಹುಸಂಖ್ಯಾತರ ಧ್ವನಿ ಅದುಮಿ ಹಾಕಲು ಭೀತಗ್ರಸ್ತ ವಾತಾವರಣ ಸೃಷ್ಟಿಸುತ್ತಿದ್ದಾರೆ ಎಂದರು.

• **ರಾಜ್ಯಸಭೆಗೆ ಕೊಲ್ಲೂರು, ಆಳ್ವ, ರಾಚಯ್ಯ, ಲಕ್ಷ್ಮಣಗೌಡ**

ಬೆಂಗಳೂರು, ಮಾರ್ಚ್ 21– ವಿಧಾನಸಭೆಯ ಕಾಂಗ್ರೆಸ್ ಸದಸ್ಯರು ಮತಾಂತರ ಮಾಡದೆ ಶಿಸ್ತಿನಿಂದ ಮತ ಚಲಾಯಿಸಿದ್ದರಿಂದ, ಪಕ್ಷದ ಅಭ್ಯರ್ಥಿಗಳಾದ ಕೊಲ್ಲೂರು ಮಲ್ಲಪ್ಪ, ಬಿ.ರಾಚಯ್ಯ, ಮಾರ್ಗರೇಟ್ ಆಳ್ವ ಹಾಗೂ ಪಕ್ಷ ಬೆಂಬಲ ನೀಡಿದ ಪಕ್ಷೇತರ ಅಭ್ಯರ್ಥಿ ಯು.ಕೆ. ಲಕ್ಷ್ಮಣಗೌಡ ರಾಜ್ಯಸಭೆಗೆ ಆಯ್ಕೆಯಾದರು.

ನಾಲ್ಕು ಸ್ಥಾನಗಳಿಗೆ ಐದು ಮಂದಿ ಸ್ಪರ್ಧಿಸಿದ್ದು, ಕಾಂಗ್ರೆಸ್ಸಿನ ಹೆಚ್ಚುವರಿ ಮತಗಳನ್ನು ಪಡೆದ ಯು.ಕೆ. ಲಕ್ಷ್ಮಣಗೌಡ ಅವರು ಸಂಸ್ಥಾ ಕಾಂಗ್ರೆಸ್ ಅಭ್ಯರ್ಥಿ ಎಂ.ಎಸ್. ಗುರುಪಾದಸ್ವಾಮಿ ಅವರನ್ನು ಸೋಲಿಸಿದರು.

ಚಿಪ್ ಕ್ರಾಂತಿಯಿಂದ ಸಾಧ್ಯವಾಗಲಿದೆ ಎಲೆಕ್ಟ್ರಾನಿಕ್ ತಂತ್ರಜ್ಞಾನ ಕ್ಷೇತ್ರದಲ್ಲಿ ಪರಿಣತಿ

ಸ್ವಾವಲಂಬನೆ: ಚರಕದಿಂದ ಚಿಪ್‌ವರೆಗೆ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಮಹಾತ್ಮ ಗಾಂಧೀಜಿಯ ಚರಕವು ಭಾರತ ಸ್ವಾತಂತ್ರ್ಯ ಹೋರಾಟದ ಚರಿತ್ರೆಯನ್ನು ಎಳೆ ಎಳೆಯಾಗಿ ಜೋಡಿಸಿ ಕೊಟ್ಟರೆ, ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಇಂಡಿಯಾ ಸೆಮಿಕಂಡಕ್ಟರ್ ಮಿಷನ್ (ಐಎಸ್‌ಎಂ), ಎಲೆಕ್ಟ್ರಾನಿಕ್ಸ್ ತಂತ್ರಜ್ಞಾನ ಕ್ಷೇತ್ರದಲ್ಲಿ ದೇಶವನ್ನು ಸ್ವಾವಲಂಬಿಯನ್ನಾಗಿಸುವ ಉದ್ದೇಶದಿಂದ ಮಹತ್ವದ ಹೆಜ್ಜೆ ಇರಿಸಿದೆ.

ಹತ್ತಿ ಅರಳೆಯಿಂದ ಖಾದಿ ಬಟ್ಟೆಯನ್ನು ನೀಡಿದ ಬಾಪೂಜಿಯ ಚರಕವು ಸ್ವತಂತ್ರ ಹಾಗೂ ಚಲನಶೀಲ ಭಾರತದ ಸಂಕೇತದಂತೆ ಮೇಲ್ನೋಟಕ್ಕೆ ಕಂಡರೂ ಆಳದಲ್ಲಿ ದೇಶದ ಅಸ್ಮಿತೆ, ಸ್ವಾವಲಂಬನೆ, ಸ್ವದೇಶಿತನ ಮತ್ತು ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ದಿಟ್ಟತನವನ್ನು ಎತ್ತಿ ತೋರಿಸುತ್ತಿತ್ತು. ಗಾಂಧೀಜಿಯ ಚರಕದಿಂದ ಎಳೆ ಎಳೆಯಾಗಿ ಹೊಮ್ಮಿದ ಖಾದಿ ಬಟ್ಟೆಯು ವಿದೇಶದ ವಸ್ತ್ರಗಳನ್ನು ಈ ನೆಲದಿಂದ ಹೊರಹಾಕುವಲ್ಲಿ ಬಹುತೇಕ ಯಶಸ್ವಿಯಾಗಿತ್ತು. ಸಾಬರಮತಿ ಆಶ್ರಮದಿಂದ ಮುಖ್ಯವಾಹಿನಿಗೆ ಬಂದ ಖಾದಿ ತಯಾರಿಕೆ ಕೆಲವೇ ವರ್ಷಗಳಲ್ಲಿ ಉದ್ಯಮವಾಗಿ ರೂಪುಗೊಂಡದ್ದು ಈಗ ಇತಿಹಾಸ. ಇಂದಿಗೆ ಸರಿಯಾಗಿ ನೂರು ವರ್ಷಗಳ ಹಿಂದೆ ಸ್ಥಾಪನೆಗೊಂಡ ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಕೋಟ್ಯಂತರ ಜನರಿಗೆ ಬೇಕಾದ ಸ್ವದೇಶಿ ಸೊಗಡಿನ ಬಟ್ಟೆಯನ್ನು ಇಂದಿಗೂ ನೇಯ್ದು ಕೊಡುತ್ತಿದೆ.

ಒಂದು ಶತಮಾನದ ಹಿಂದೆ, ತೊಡುವ ಬಟ್ಟೆಯ ವಿಚಾರದಲ್ಲಿ ಸ್ವಾವಲಂಬನೆ ಸಾಧಿಸಿ ತೋರಿಸಿದ ನಾವು, ಇಂದು ವಿಕಸಿತ ಭಾರತದ ಮಂತ್ರ ಜಪಿಸುತ್ತಾ ಎಲೆಕ್ಟ್ರಾನಿಕ್ಸ್ ಉದ್ಯಮ ಕ್ಷೇತ್ರದ ಸ್ವಾವಲಂಬನೆ ಸಾಧಿಸುವ ದಿಸೆಯಲ್ಲಿ ದೃಢ ಹೆಜ್ಜೆ ಇಡುತ್ತಿದ್ದೇವೆ. ಅಂದು ಮೈತುಂಬ ಧರಿಸುವ ಖಾದಿಯಿಂದ ವಿಶ್ವಕ್ಕೆ ನಮ್ಮತನ ತೋರಿದ್ದ ನಾವು, ಈಗ ಕೈಯ ಉಗುರಿನ, ಕಣ್ಣ ರೆಪ್ಪೆಯ ಸಂದಿಗಳ ಒಳಗೆ ಅಡಗಿಸಿ ಇಡಬಹುದಾದಷ್ಟು ಚಿಕ್ಕ ಅಳತೆಯ ಚಿಪ್ ತಯಾರಿಸಿ ವಿದ್ಯುನ್ಮಾನ ಉಪಕರಣ ಕ್ಷೇತ್ರದ ಸ್ವಾವಲಂಬನೆ ಗಳಿಸುವ ಪಣ ತೊಟ್ಟಿದ್ದೇವೆ. ನಾವು ಬಳಸುವ ಪ್ರತಿ ಎಲೆಕ್ಟ್ರಾನಿಕ್ ಉಪಕರಣದ ಜೀವಕೇಂದ್ರವೇ ಆಗಿರುವ ಚಿಪ್‌ನ ತಯಾರಿಕೆ ನಮ್ಮಲ್ಲಿ 40 ವರ್ಷಗಳ ಹಿಂದೆಯೇ ಶುರುವಾಗಿದ್ದರೂ ನಾವು ಬಯಸಿದ ಸಾಧನೆ ಆಗಿರಲಿಲ್ಲ.

ತೈವಾನ್, ಚೀನಾ, ಅಮೆರಿಕ ದೇಶಗಳು ಚಿಪ್ ತಯಾರಿಕಾ ಉದ್ಯಮದ ಬಹುದೊಡ್ಡ ಮಾರುಕಟ್ಟೆ ಸ್ವಾಮ್ಯ ಸಾಧಿಸಿ ಸೆಮಿಕಂಡಕ್ಟರ್ ಉದ್ಯಮದ ಮುಂಚೂಣಿಯಲ್ಲಿವೆ. ಅಮೆರಿಕ ಮೂಲದ ಎನ್‌ವಿಡಿಯ ಮತ್ತು ಜಪಾನ್‌ನ ಎಲೆಕ್ಟ್ರಾನಿಕ್ ಕಂಪನಿಗಳ ಷೇರು ಬಂಡವಾಳ ಹಲವು ಅಭಿವೃದ್ಧಿಪರ ದೇಶಗಳ ಆರ್ಥಿಕ ಗಾತ್ರಕ್ಕೆ ಸಮನಾಗಿದೆ. ಗೇಮಿಂಗ್ ಕನ್ಸೋಲ್, ಜಿಪಿಯು ಮತ್ತು ಸಿಪಿಯುಗಳಿಗೆ ಚಿಪ್ ಒದಗಿಸುವ ಎನ್‌ವಿಡಿಯ ಕಂಪನಿಯ ಇಂದಿನ ಷೇರು ಮೌಲ್ಯ ಇನ್ನೂರ ಇಪ್ಪತ್ತು ಶತಕೋಟಿ ಡಾಲರ್‌ನಷ್ಟಿದೆ. ಮೈಕ್ರೊಸಾಫ್ಟ್ ಮತ್ತು ಆ್ಯಪಲ್ ಕಂಪನಿಗಳಿಗೆ ಪೈಪೋಟಿ ನೀಡುತ್ತಿರುವ ಇದರ ಗಳಿಕೆ ಇದೇ ವೇಗದಲ್ಲಿ ಮುಂದುವರಿದರೆ, ವಿಶ್ವದ ಆರ್ಥಿಕತೆಯೇ ಎನ್‌ವಿಡಿಯ ಕಂಪನಿಯ ಗಳಿಕೆಯ ಎದುರು ಕುಬ್ಜವಾಗಲಿದೆ ಎಂಬ ಮಾತು ಆರ್ಥಿಕ ವಲಯದಲ್ಲಿ ಕೇಳಿಬರುತ್ತಿದೆ.

1987ರಿಂದಲೂ ಸೆಮಿಕಂಡಕ್ಟರ್ ಉದ್ಯಮದ ಮುಂಚೂಣಿಯಲ್ಲಿರುವ ತೈವಾನ್ ದೇಶದ ಸೆಮಿಕಂಡಕ್ಟರ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ (ಟಿಎಸ್‌ಎಂಸಿ) ವಿಶ್ವದ ಅತ್ಯುತ್ತಮ ಚಿಪ್ ತಯಾರಿಕೆಗೆ ಹೆಸರುವಾಸಿಯಾಗಿದೆ. ಹೋದ ವರ್ಷ ಬರೀ ಚಿಪ್ ತಯಾರಿಕೆ ಒಂದರಿಂದಲೇ 6,900 ಕೋಟಿ ಡಾಲರ್ ಗಳಿಸಿರುವ ಕಂಪನಿಯು ವಾರ್ಷಿಕ ಗಳಿಕೆಯ ವಿಷಯದಲ್ಲಿ ಸ್ಯಾಮ್ಸಂಗ್ ಮತ್ತು ಇಂಟೆಲ್ ಕಂಪನಿಗಳನ್ನು ಹಿಂದಿಕ್ಕಿದೆ. ಇದರ ಒಂದು ಬ್ರ್ಯಾಂಚ್ ಆಫೀಸು ನಮ್ಮ ಬೆಂಗಳೂರಿನ ದೊಮ್ಮಲೂರಿನಲ್ಲೂ ಇದೆ.

ಕೋವಿಡ್ ಸಾಂಕ್ರಾಮಿಕದ ಕಾಲದಲ್ಲಿ ಸೆಮಿಕಂಡಕ್ಟರ್ ಉದ್ಯಮ ಭಾರಿ ಬೇಡಿಕೆ ಗಳಿಸಿತ್ತು. ದೇಶ ವಿದೇಶಗಳಿಗೆ ಅತ್ಯಗತ್ಯವಾಗಿ ಬೇಕಾಗಿದ್ದ ಚಿಪ್‌ಗಳನ್ನು ಸರಬರಾಜು ಮಾಡುತ್ತಿದ್ದ ವ್ಯವಸ್ಥೆ ಹಿಂದೆಂದೂ ಕಂಡರಿಯದ ಒತ್ತಡವನ್ನು ಎದುರಿಸಿತು. ಕೆಲವೇ ಕೆಲವು ಮುಂಚೂಣಿ ಉದ್ಯಮಗಳು ಬೇಡಿಕೆಯನ್ನು ಪೂರೈಸಲಾರದೆ ಒದ್ದಾಡಿದವು. ಬೇಡಿಕೆ ಹೆಚ್ಚಿದಂತೆ ಬೆಲೆಯೂ ಹೆಚ್ಚಾಯಿತು.

ಸೆಮಿಕಂಡಕ್ಟರ್ ಕ್ಷೇತ್ರಕ್ಕೆ ಕಾಲಿಡಬೇಕೆನ್ನುವ ನಾವು 1983ರಷ್ಟು ಹಿಂದೆಯೇ ಚಂಡೀಗಢದಲ್ಲಿ ಚಿಪ್ ತಯಾರಿಕೆಗೆ ಕೈ ಹಾಕಿದ್ದೆವು. ಚಿಪ್ ತಯಾರಿಕೆಗೆ ಬೇಕಾಗಿದ್ದ ತಂತ್ರಜ್ಞಾನ ನಮ್ಮಲ್ಲಿ ಇರಲಿಲ್ಲ ಮತ್ತು ಹೊರದೇಶಗಳಿಂದ ತಂತ್ರಜ್ಞಾನದ ನೆರವು ದೊರಕದ್ದರಿಂದ ಅಂದುಕೊಂಡ ಸಾಧನೆ ನಮ್ಮಿಂದಾಗಲಿಲ್ಲ. ಇದರ ಹಿನ್ನೆಲೆಯಲ್ಲಿ 2022ರಲ್ಲಿಯೇ ಸೆಮಿಕಂಡಕ್ಟರ್ ಇಂಡಿಯಾ ಮಿಷನ್‌ಗೆ ಚಾಲನೆ ನೀಡಿದ ಕೇಂದ್ರ ಸರ್ಕಾರ, ಈಗ ಚಿಪ್ ತಯಾರಿಕಾ ಕ್ಷೇತ್ರದಲ್ಲಿ ದಾಪುಗಾಲಿಡಲು ಸಜ್ಜಾಗಿದೆ. ತಾಂತ್ರಿಕ ಜ್ಞಾನದ ಸ್ವಾವಲಂಬನೆಗಾಗಿ ನಾವೀಗ ಸೆಮಿಕಂಡಕ್ಟರ್ ಕ್ಷೇತ್ರಕ್ಕೆ ಬರೋಬ್ಬರಿ ₹ 76,000 ಕೋಟಿ ಬಂಡವಾಳ ತೆಗೆದಿಟ್ಟಿದ್ದೇವೆ.

ಯಾವುದೇ ಎಲೆಕ್ಟ್ರಾನಿಕ್ ಉಪಕರಣಗಳ ಮೆದುಳಿನಂತಿರುವ ಚಿಪ್‌ನ ಗಾತ್ರ ಕೆಲವೇ ವರ್ಷಗಳ ಹಿಂದೆ ಸೆಂಟಿ ಮೀಟರ್‌ಗಳಷ್ಟು ಇರುತ್ತಿತ್ತು. ಈಗ ನ್ಯಾನೊಮೀಟರ್ ಗಾತ್ರ ತಲುಪಿದ್ದು ಬರೀ ಎರಡು ನ್ಯಾನೊಮೀಟರ್ ಗಾತ್ರದ ಚಿಪ್ ತಯಾರಿಕೆಯೂ ಸಾಧ್ಯವಿದೆ. ಮಾರುಕಟ್ಟೆಗೆ ಬರುತ್ತಿರುವ ಯಾವುದೇ ಎಲೆಕ್ಟ್ರಾನಿಕ್ ಉಪಕರಣ ಅಥವಾ ವಾಹನದಲ್ಲಿ ಚಿಪ್ ಇರಲೇಬೇಕು. ಸಣ್ಣ ಸಣ್ಣ ಸಿಗ್ನಲ್ ಟ್ರಾನ್ಸಿಸ್ಟರ್‌ಗಳು, ಸ್ವಿಚಿಂಗ್ ಡಯೋಡ್, ಹೈ ವೋಲ್ಟೇಜ್ ತಡೆಯುವ ಸರ್ಕ್ಯೂಟ್ ಬ್ರೇಕರ್‌ಗಳು, ತನ್ನಿಂತಾನೆ ಕೆಲಸ ಶುರುಮಾಡುವ- ಸುಮ್ಮನಾಗುವ ಎಲೆಕ್ಟ್ರಾನಿಕ್ ಭಾಗಗಳು, ಎಲೆಕ್ಟ್ರೊಸ್ಟಾಟಿಕ್ ಡಿಸ್ಚಾರ್ಜ್ ತಡೆಯುವ ಸಾಧನ ತಯಾರಿಕೆಯ ಏಕಸ್ವಾಮ್ಯ ಗಳಿಸಿರುವ ತೈವಾನ್‌ನ ಟಿಎಸ್‌ಎಂಸಿಯು ಇಂಟೆಲ್ ಮತ್ತು ಸ್ಯಾಮ್ಸಂಗ್ ಕಂಪನಿಗಳಿಗೆ ಎಷ್ಟೋ ಸಾರಿ ಗ್ರಹಣ ಹಿಡಿಸಿದೆ.

ಇಂದು, ನಾಳಿನ ತಂತ್ರಜ್ಞಾನ ಎಂದೇ ಬಿಂಬಿತವಾಗಿರುವ ಯಾಂತ್ರಿಕ ಬುದ್ಧಿಮತ್ತೆ (ಎ.ಐ) ಮತ್ತು ಕ್ರಿಪ್ಟೊ ತಂತ್ರಜ್ಞಾನಕ್ಕೆ ಅತ್ಯಾಧುನಿಕ ಕ್ಷಮತೆಯ ಚಿಪ್ ಇರಲೇಬೇಕು. ವಿಶ್ವದ ಪ್ರತಿಯೊಂದು ದೇಶವೂ ಯಾಂತ್ರಿಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಬಳಸಲು ಮುಂದಾಗುತ್ತಿರುವುದರಿಂದ ಚಿಪ್ ಉದ್ಯಮದ ಪೈಪೋಟಿ ತಾರಕಕ್ಕೇರಿದೆ. ಇದುವರೆಗೂ ಬಳಕೆದಾರನಾಗಿದ್ದ ನಾವು ಉತ್ಪಾದಕನಾಗಬೇಕಿದೆ. ಅದಕ್ಕಾಗಿ ಭಾರತ್ ಸೆಮಿಕಂಡಕ್ಟರ್ ರಿಸರ್ಚ್ ಸೆಂಟರ್ ಅಸ್ತಿತ್ವಕ್ಕೆ ಬರುತ್ತಿದೆ. ದೇಶದ ತಂತ್ರಜ್ಞಾನ ಕ್ಷೇತ್ರದ ದೊಡ್ಡಣ್ಣ ಟಾಟಾ ಸಮೂಹವು ಸರ್ಕಾರದ ಕೆಲಸಕ್ಕೆ ಕೈಜೋಡಿಸಿದೆ.

ದಶಕಗಳ ಹಿಂದೆ ನಾವೂ ಉಕ್ಕು ತಯಾರಿಸುತ್ತೇವೆ (ವೀ ಆಲ್ಸೋ ಮೇಕ್ ಸ್ಟೀಲ್) ಎಂದು ಹೇಳಿ ಅದನ್ನು ತಯಾರಿಸಿ ತೋರಿಸಿದ ಉದಾಹರಣೆ ನಮ್ಮೆದುರಿಗಿದೆ. ಈಗ 'ನಾವೂ ಚಿಪ್ ತಯಾರಿಸುತ್ತೇವೆ' (ವೀ ಆಲ್ಸೋ ಮೇಕ್ ಚಿಪ್) ಎಂಬ ಧ್ಯೇಯವಾಕ್ಯದಿಂದ ಮುನ್ನುಗ್ಗುತ್ತಿದ್ದೇವೆ. ತೈವಾನ್‌ನ ಪಿಎಸ್‌ಎಂಸಿ (ಪವರ್‌ಚಿಪ್ ಸೆಮಿಕಂಡಕ್ಟರ್ ಮ್ಯಾನ್ಯುಫ್ಯಾಕ್ಚರಿಂಗ್ ಕಾರ್ಪೊರೇಷನ್) ಜೊತೆ ಒಪ್ಪಂದ ಮಾಡಿಕೊಂಡಿರುವ ಟಾಟಾ ಎಲೆಕ್ಟ್ರಾನಿಕ್ಸ್, ಗುಜರಾತ್‌ನ ಧೋಲೆರೋ ಮತ್ತು ಸಾನಂದ್ ಹಾಗೂ ಅಸ್ಸಾಂನ ಮೋರಿಗಾಂ ಘಟಕಗಳಲ್ಲಿ ₹ 1 ಲಕ್ಷ ಕೋಟಿ ಬಂಡವಾಳ ಹೂಡುತ್ತಿದೆ. ಈ ಯೋಜನೆ ಸಫಲವಾಗಲು ಕನಿಷ್ಠ ನಾಲ್ಕು ವರ್ಷಗಳು ಬೇಕು. ಕೌಶಲ ಗಳಿಸಿದ, 60 ಲಕ್ಷದಿಂದ 70 ಲಕ್ಷ ಕೆಲಸಗಾರರು ಬೇಕು. ಮೈಕ್ರಾನ್ ಮತ್ತು ಟವರ್ ಕಂಪನಿಗಳು ಈಗಾಗಲೇ ಉನ್ನತ ಶಿಕ್ಷಣ ಸಂಸ್ಥೆಗಳ ಜೊತೆ ಒಪ್ಪಂದ ಮಾಡಿಕೊಂಡಿದ್ದು ಅಲ್ಲಿನ ವಿದ್ಯಾರ್ಥಿಗಳಿಗೆ ಚಿಪ್ ತಯಾರಿಕಾ ತರಬೇತಿಯನ್ನು ಪ್ರಾರಂಭಿಸಲು ಮುಂದಾಗಿವೆ.

ಸೆಮಿಕಂಡಕ್ಟರ್ ಉತ್ಪಾದನೆ ಮತ್ತು ಮಾರಾಟದ ವಿಷಯದಲ್ಲಿ ಏರುತ್ತಿರುವ ಬಿಸಿ ಮತ್ತು ಪೈಪೋಟಿಯ ಈ ದಿನಗಳಲ್ಲಿ ನಮ್ಮ ಪ್ರಯತ್ನಗಳು ನಿಶ್ಚಿತ ಫಲ ನೀಡಿದಲ್ಲಿ ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿ ಸ್ವಾವಲಂಬನೆ ಗಳಿಸುವ ದಿನಗಳು ದೂರವಿಲ್ಲ. ಗಾಂಧೀಜಿಯ ಚರಕದಿಂದ ಸ್ವಾವಲಂಬನೆಯ ಪ್ರಾಥಮಿಕ ಪಾಠ ಕಲಿತು ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿದ್ದ ನಾವು, ಚಿಪ್ ಕ್ರಾಂತಿಯಿಂದ ಎಲೆಕ್ಟ್ರಾನಿಕ್ ತಂತ್ರಜ್ಞಾನ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸುತ್ತೇವೆ ಎಂಬ ನಂಬಿಕೆ ಇದೆ.

ಮರೆಯುವ ಮುನ್ನ: ನೆನಪಿರಲಿ, ಒಂದು ಸೆಂಟಿಮೀಟರ್ ಉದ್ದದ ಚಿಪ್ ತಯಾರಿಸಲು 28 ಲೀಟರ್‌ನಷ್ಟು ಶುದ್ಧ ನೀರು ಬಳಕೆಯಾಗುತ್ತದೆ. ಚಿಪ್ ತಯಾರಿಸಿ ಹಣ ಗಳಿಸುತ್ತೇವೆ ಎಂಬ ಹುಂಬತನಕ್ಕೆ ಬಿದ್ದು ಜೀವಾಮೃತವನ್ನು ಕಳೆದುಕೊಳ್ಳಬಾರದು. ಆರ್ಥಿಕ ಅಭಿವೃದ್ಧಿಯು ನೈಸರ್ಗಿಕ ಸಂಪನ್ಮೂಲಕ್ಕೆ ಕೊಡಲಿ ಏಟು ಹಾಕಬಾರದು.



ಚುರುಮುರಿ



ರಪ್ಪ ಮತ್ತು ರಪ್ಪ!

• ಬಿ.ಎನ್.ಮಲ್ಲೇಶ್

'ಗುಡ್ಡೆ, ಶಿವಮೊಗ್ಗದ ರಪ್ಪ ಅಂಡ್ ರಪ್ಪ ಅವರ ಗದ್ಲ ಎಲ್ಲಿಗೆ ಬಂತಲೆ?' ದುಬ್ಬೀರ ಕೇಳಿದ.

'ಅದಾ... ಎದೆ ಬಗೆದು ತೋರ್ಸೋ ಲೆವೆಲ್ಲಿಗೆ ಬಂದು ನಿಂತೇತಪ. ಮುಂದೆ ಕಿಡ್ನಿ, ಲಿವರ್ ತಂಕ ಹೋಗಬಹುದು' ಗುಡ್ಡೆ ನಕ್ಕ.

'ಲೇಯ್, ಕಿಡ್ನಿ, ಲಿವರ್ ತೋರ್ಸಿದ್ರೆ ಪಕ್ಷನಿಷ್ಠೆ, ವ್ಯಕ್ತಿನಿಷ್ಠೆ ಗೊತ್ತಾಗ್ತತಾ?'

'ಸುಮ್ನೆ ಹೇಳಿದೆ ಕಣಲೆ, ಆದ್ರೆ ಯಾರ್ಯಾರ ಎದೆ ಒಳಗೆ ಯಾರ್ಯಾರಿದಾರೆ ಅಂತ ಒಂದ್ ಲೆವೆಲ್‌ಗೆ ಗೊತ್ತಾಗ್ತಾ ಐತಿ'.

'ಅಲ್ಲೋ... ರಪ್ಪ ಅಂಡ್ ರಪ್ಪಗಳು ಜೋಡೆತ್ತು ಅಂತಿದ್ರು. ಅದ್ಯಾಕೆ ಏರಿಗೊಬ್ರು, ನೀರಿಗೊಬ್ರು ಆದ್ರು ಅಂತ' ತೆಪರೇಸಿ ಕೇಳಿದ.

'ರಾಜಕೀಯ ಅಂದ್ರೆ ಅದೇ ಕಣಲೆ, ಪಕ್ಷ, ಸಿದ್ಧಾಂತ ಇವೆಲ್ಲ ಮಾತಿನ ಬದ್ನೇಕಾಯಿ. ಅವರವರ ಹೆಂಡ್ತಿಗೆ, ಮಕ್ಕಳಿಗೆ ಟಿಕೆಟ್ ಸಿಗದಿದ್ರೆ ಎಲ್ಲರೂ ರೆಬೆಲ್ ಸ್ಟಾರ್‌ಗಳೇ'.

'ಹೋಗ್ಲಿ ಬಂಡಾಯದ ರಪ್ಪ ಅವ್ರನ್ನ ರಾಜ್ಯಪಾಲರಾಗಿ ಮಾಡಿ ರಪ್ ಅಂತ ಬಾಯಿ ಮುಚ್ಚಿಸ್ತಾರಾ?' ಕೊಟ್ರೇಶಿ ಕೊಕ್ಕೆ.

'ಇದ್ಕೆ 'ಬೇರೆ ಪ್ರಶ್ನೆ ಇದ್ರೆ ಕೇಳಣ್ಣ' ಅಂತ ಕಮಲಾಧ್ಯಕ್ಷರು ಹೇಳಿದ್ರಂತೆ. ನಿಂಗೂ ಅದೇ ಉತ್ತರ' ಗುಡ್ಡೆ ನಕ್ಕ.

'ಪಾಪ, ಬಂಡಾಯದ ರಪ್ಪ ಅವರಿಗೆ ಅನ್ಯಾಯ ಆಗಬಾರ್ದಿತ್ತು...' ಮಂಜಮ್ಮ ಕನಿಕರ ತೋರಿದಳು.

'ನಂ ಸಿಎಂ ತರ ಸ್ಟ್ರಾಂಗ್ ಆಗ್ಬೇಕು ಮಂಜಮ್ಮ, ಆಗ್ಲೇ ಎಲ್ರು ಮಾತು ಕೇಳೋದು...'

'ಈ ಪಿಂಕ್ಲಿ ಮಾತೆಲ್ಲ ಬ್ಯಾಡ, ನಾವೂ ಸ್ಟ್ರಾಂಗೇ.. ನಮ್ ರಪ್ಪ ಟಿಕೆಟ್ ತಗಂಡೇ ತಗಾತಾರೆ ನೋಡ್ತಿರು' ಮಂಜಮ್ಮ ತಿರುಗೇಟು ನೀಡಿದಳು.

'ಈಗ ಈ ಟಿಕೆಟ್ ಗಲಾಟೆ ಬಿಡ್ರಪ್ಪ, ಇವತ್ತಿಂದ ವಿಕೆಟ್ ಗಲಾಟೆ ಶುರುವಾಗೇತಿ. ನಮ್ ಆರ್‌ಸಿಬಿ ಹುಡುಗ್ರು ಈ ಸಲನಾದ್ರು ಕಪ್ ಹೊಡೀತಾರಾ?' ದುಬ್ಬೀರ ಮಾತು ಬದಲಿಸಿದ.

'ಮತ್ತೆ ಬಿಡ್ತಾರಾ? ಇನ್ನೂ ನೂರು ಸಲ ಸೋತ್ರೂ ಕಪ್ ನಮ್ದೇ' ಎಂದ ಗುಡ್ಡೆ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಕುಡಿಗಳಿಗಾಗಿ, ಎಲ್ಲ ಕುಡಿಗಳಿಗಾಗಿ!

ನಮ್ಮ ದೇಶದ ಪ್ರಜಾಪ್ರಭುತ್ವಕ್ಕೆ ದೊಡ್ಡ ಅಡ್ಡಿಯಾಗಿದೆ ಅಧಿಕಾರದ ವಂಶಪಾರಂಪರ್ಯ ವರ್ಗಾವಣೆಯ ಚಿಂತನೆ

• ಆರ್.ಲಕ್ಷ್ಮೀನಾರಾಯಣ

'ಬರುತ್ತಾ ಬರುತ್ತಾ ರಾಯರ ಕುದುರೆ ಕತ್ತೆಯಾಯಿತು' ಎಂಬ ಕನ್ನಡದ ಹಳೆಯ ಗಾದೆ ಸದ್ಯ ನಮ್ಮ ರಾಜಕಾರಣಿಗಳ ಕೈಗೆ ಸಿಕ್ಕಿ ಅರ್ಥ ಕಳೆದುಕೊಳ್ಳುತ್ತಿರುವ ನಮ್ಮ ದೇಶದ ಪ್ರಜಾಪ್ರಭುತ್ವಕ್ಕೆ ಅತ್ಯಂತ ಚೆನ್ನಾಗಿ ಅನ್ವಯಿಸುತ್ತದೆ. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವವೆಂದು ನರ ನರವನ್ನೂ ಸೆಟೆಸಿಕೊಂಡು ವೇದಿಕೆಗಳ ಮೇಲಿನಿಂದ ಸ್ವಾತಂತ್ರ್ಯೋತ್ಸವದಂದು, ಗಣರಾಜ್ಯೋತ್ಸವದಂದು ಭಾಷಣ ಬಿಗಿಯುತ್ತಾರೆ ನಮ್ಮ ರಾಜಕೀಯ ಧುರೀಣರು. ಅಂತಹವರು, ಪ್ರಜಾಪ್ರಭುತ್ವ ಸ್ಥಾಪಿತವಾಗಿ 75 ವರ್ಷಗಳನ್ನು ಕಳೆದು ಶತಮಾನದತ್ತ ದಾಪುಗಾಲು ಹಾಕುತ್ತಿರುವ ಹೊತ್ತಿನಲ್ಲಿ ಅತ್ಯಂತ ಅಪ್ರಬುದ್ಧರಾಗಿ ನಡೆದುಕೊಳ್ಳುತ್ತಿರುವುದನ್ನು ನೋಡಿದಾಗ 'ಮತದಾನ ಅತ್ಯಂತ ಪವಿತ್ರವಾದ ಕರ್ತವ್ಯ' ಎಂಬ ಮಾತಿಗೇನಾದರೂ ಅರ್ಥ ಉಳಿದಿದೆಯೇ ಎಂದು ತಲೆಕೆಡಿಸಿಕೊಳ್ಳುವಂತೆ ಆಗುತ್ತದೆ. ಅದು ಅವರಂಥವರನ್ನು ಅಧಿಕಾರಕ್ಕೆ ಏರಿಸುವುದಕ್ಕಷ್ಟೇ ಎಂಬುದು ನಮ್ಮ ದೇಶದ ಸಂದರ್ಭದಲ್ಲಿ ಮತ್ತೆ ಮತ್ತೆ ಸಾಬೀತಾಗುತ್ತಿದೆ.

ಮೂವತ್ತು, ನಲವತ್ತು ವರ್ಷಗಳು ಒಂದು ಪಕ್ಷದಲ್ಲಿದ್ದು, ಆ ಪಕ್ಷದ ಸಿದ್ಧಾಂತಕ್ಕೆ ಬದ್ಧರೆಂದು ಸಾರುತ್ತ, ಪಕ್ಷವೆಂದರೆ ತಾಯಿ ಇದ್ದಂತೆ, ತಾಯಿಗೆ ದ್ರೋಹ ಬಗೆಯುವ ಕೆಲಸ ಎಂದಿಗೂ ಮಾಡುವುದಿಲ್ಲ ಎಂದೆಲ್ಲ ಹೇಳುತ್ತಲೇ, ರಾತ್ರಿ ಕಳೆದು ಬೆಳಗಾಗುವುದರೊಳಗೆ ತಮ್ಮ ಮಾತುಗಳನ್ನೆಲ್ಲ ಗಾಳಿಗೆ ತೂರಿ ಇನ್ನೊಂದು ಪಕ್ಷದ ಕಚೇರಿಯ ಬಾಗಿಲು ಕಾಯುತ್ತ ನಿಂತುಕೊಂಡುಬಿಡುವುದಕ್ಕೆ ನಿಜಕ್ಕೂ ಏನಾದರೂ ಮಹತ್ವದ ಕಾರಣವಿದೆಯೇ? ಅಧಿಕಾರದಾಹ, ಹಣದ ಹಪಹಪಿ ಬಿಟ್ಟರೆ ಉಳಿದೆಲ್ಲ ಕಾರಣಗಳು ಬರೀ ನೆಪಗಳೆಂಬುದನ್ನು ಅರಿತುಕೊಳ್ಳಲು ವಿಶೇಷ ಶ್ರಮವೇನೂ ಬೇಕಾಗುವುದಿಲ್ಲ. ದೇಶದ ಉದ್ದಗಲಕ್ಕೂ ಎಲ್ಲ ಪಕ್ಷಗಳಲ್ಲೂ ಚುನಾವಣೆಯ ಸಮಯದಲ್ಲಿ, ಚುನಾವಣೆಗಳು ಮುಗಿದು ಮಂತ್ರಿಮಂಡಲ ರಚನೆಯ ಸಂದರ್ಭದಲ್ಲಿ ಇದು ಎಂದಿನ ಸಾಮಾನ್ಯ ದೃಶ್ಯವಾಗುತ್ತಿದೆ.

ಸಾಮಾನ್ಯ ಕಾರ್ಯಕರ್ತರು ಹಲವಾರು ವರ್ಷ ತಮ್ಮ ಧುರೀಣರ ಪಲ್ಲಕ್ಕಿಗಳನ್ನು ಹೊತ್ತು ಮೆರೆಸಿ, ಈ ಪಕ್ಷದಲ್ಲಿ ತಮಗೇನೂ ಬರ್ಕತ್ತಾಗದೆಂದು, ತಮ್ಮ ಹಣೆಯಲ್ಲಿ ಬರೆದುದು ಇಷ್ಟೇ ಎಂದು ತೀರ್ಮಾನಿಸಿ ಪಕ್ಷ ಬದಲಿಸಿದರೆ ಅದಕ್ಕಾದರೂ ಒಂದು ಅರ್ಥವಿದ್ದೀತು. ಆದರೆ ಮೂರು– ನಾಲ್ಕು ದಶಕಗಳ ಕಾಲ ಶಾಸಕರಾಗಿಯೋ ಸಂಸತ್ ಸದಸ್ಯರಾಗಿಯೋ ಮುಖ್ಯಮಂತ್ರಿಯಾಗಿಯೋ ಪಕ್ಷದ ಅಧ್ಯಕ್ಷರಾಗಿಯೋ ವಿರೋಧ ಪಕ್ಷದ ನಾಯಕರಾಗಿಯೋ ಅಧಿಕಾರ, ಸವಲತ್ತು, ಎಲ್ಲವನ್ನೂ ಅನುಭವಿಸಿ, ತಮ್ಮ ಮೂರು ನಾಲ್ಕು ತಲೆಮಾರಿಗಾಗುವಷ್ಟು ಸಂಪತ್ತನ್ನು ಭ್ರಷ್ಟ ಮಾರ್ಗದಿಂದ ದಕ್ಕಿಸಿಕೊಂಡವರೂ ತಮಗೆ ಮತ್ತೆಯೂ ಟಿಕೆಟ್ ಕೊಡಲಿಲ್ಲವೆಂದೋ ತಮ್ಮ ಮಗನಿಗೋ ಮಗಳಿಗೋ ಹೆಂಡತಿಗೋ ಟಿಕೆಟ್ ಕೊಡಲಿಲ್ಲವೆಂದೋ ಮುಖಂಡನೆನಿಸಿಕೊಂಡ ಯಾವುದೋ ವ್ಯಕ್ತಿ ಮೋಸ ಮಾಡಿದನೆಂದೋ ಪಕ್ಷಗಳನ್ನು ತೊರೆಯುತ್ತಿರುವುದನ್ನು ಏನೆಂದು ಅರ್ಥೈಸಬೇಕು?

ವಿದ್ಯಾವಂತರು, ಟೆಕಿಗಳು ಮತಗಟ್ಟೆಗಳತ್ತ ಸುಳಿಯುವುದಿಲ್ಲವೆಂದು ಆಕ್ಷೇಪಿಸುವವರು, ತಮ್ಮ ಇಂತಹ ನಡೆಯಿಂದ ಮತದಾರರು ಅದೆಷ್ಟು ಭ್ರಮನಿರಸನಗೊಳ್ಳುತ್ತಾರೆ ಎಂದು ಒಮ್ಮೆಯಾದರೂ ಯೋಚಿಸುತ್ತಾರೆಯೇ? ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ಬುಡವನ್ನೇ ಅಲುಗಾಡಿಸುವ ಇವರ ಇಂಥ ನಡೆಯಿಂದ ಯಾರಿಗಾದರೂ ಜನತಂತ್ರದಲ್ಲಿ ನಂಬಿಕೆ ಉಳಿದುಬರಲು ಸಾಧ್ಯವೇ? ಕೊನೆಯಪಕ್ಷ ಬಹಳಷ್ಟು ಕಾಲ ಅಧಿಕಾರಸ್ಥಾನಗಳಲ್ಲಿ ಇದ್ದವರು ಇನ್ನು ರಾಜಕೀಯ ಸಾಕು ಎಂದು ನಿವೃತ್ತಿಯನ್ನಾದರೂ ಪಡೆದುಕೊಂಡರೆ ಅಷ್ಟರಮಟ್ಟಿಗೆ ಮರ್ಯಾದೆಯಾದರೂ ಉಳಿದೀತು. ಆದರೆ ಹಾಗೆ ನಿವೃತ್ತಿ ಘೋಷಿಸುವುದು ಕೂಡ ಮತ್ತೆ ತಮ್ಮ ವಂಶದ ಕುಡಿಗಳಿಗೆ ಸ್ಥಾನ ಕೊಡಿಸುವ ನೆಪವಾಗಿ ಅಷ್ಟೆ.

ಕೋಮುವಾದಿ ಪಕ್ಷವೆಂದು ಅತ್ಯಂತ ಕಟು ಶಬ್ದಗಳಲ್ಲಿ ಟೀಕಿಸಿದ ಪಕ್ಷದತ್ತಲೇ ಅದರ ಪರಿವೆಯೇ ಇಲ್ಲದೆ ಹೇಗಾದರೂ ಮುಖ ಮಾಡುತ್ತಾರೆ? ಅಥವಾ ಅದೇ ಕೋಮುವಾದಿ ಎನ್ನುವ ಪಕ್ಷದಲ್ಲಿ ಜೀವಮಾನವಿಡೀ ಇದ್ದು, ಅದರ ವಿರುದ್ಧ ಪಕ್ಷಕ್ಕೆ ಸೇರಿದ ಕೂಡಲೇ ಬಿಟ್ಟುಬಂದ ಪಕ್ಷವನ್ನು ಕೋಮುವಾದಿ ಎಂದು ಆ ಪಕ್ಷದವರೊಂದಿಗೆ ಸೇರಿಕೊಂಡು ಪಲ್ಲವಿ ಹಾಡತೊಡಗುತ್ತಾರೆ. ಇದಕ್ಕೆ ಆತ್ಮಸಾಕ್ಷಿ ಒಪ್ಪುತ್ತದೆಯೇ ಎಂದರೆ, ಬಹುಶಃ ಹಾಗೆಂದರೇನೆಂದು ಕೇಳಿಯಾರು. ಅಥವಾ ಇವರು ಸೇರಿದ ಕೂಡಲೇ ಅದು ಪವಿತ್ರ ಪಕ್ಷವಾಗಿ ಬಿಡುತ್ತದೆಂದು ಮತದಾರರು ತಿಳಿಯುತ್ತಾರೆ ಎಂದರೆ, ಹಾಗೇನೂ ಇಲ್ಲ ಎಂದು ಅವರಿಗೂ ಗೊತ್ತು. ಬರೀ ಜಾತಿ, ಧರ್ಮ, ಹಣ, ಮದ್ಯದ ಮೇಲೆ ನಡೆಯುವ ಚುನಾವಣೆಗಳಲ್ಲಿ ಯಾರಾದರೂ ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವವನ್ನು ಹುಡುಕುತ್ತಾರೆ ಎಂದರೆ ಅವರು ಕವಿ ಜನ್ನನ ಮಾತಿನಲ್ಲಿ 'ಮೊರಡಿಯೊಳೆ ಮಾದುಪಳವನರಸದಿರಂ'.



ರಾಜಕೀಯಸ್ಥರಿಗೆ ತಮ್ಮ ಮಕ್ಕಳು ರಾಜಕೀಯಕ್ಕೇ ಬರಬೇಕೆಂದು ಏಕಾದರೂ ಅನ್ನಿಸಬೇಕು? ಸಮಾಜದಲ್ಲಿ ಎಷ್ಟೆಲ್ಲ ರಂಗಗಳಿವೆ? ವೈದ್ಯಕೀಯ, ವಿಜ್ಞಾನ, ತಂತ್ರಜ್ಞಾನ, ಸಾಹಿತ್ಯ... ಇಲ್ಲ ಇದಾವುದೂ ಆಗದು. ಅಧಿಕಾರದ ಮುಂಚೂಣಿಯಲ್ಲೇ ಅವರೂ ಇರಬೇಕು, ಇವರಂತೆ ಅವರೂ ದೇಶೋದ್ಧಾರವನ್ನೇ ಮಾಡಬೇಕು!

ಈ ಧೃತರಾಷ್ಟ್ರ ಪುತ್ರವ್ಯಾಮೋಹ ಮತ್ತು ಅದು ಆಸ್ತಿಯೋ ಅಧಿಕಾರವೋ ಯಾವುದಾದರೂ ಸರಿ ಪಿತ್ರಾರ್ಜಿತವಾಗಿಯೇ ಮಕ್ಕಳಿಗೆ ವರ್ಗಾವಣೆಯಾಗಿ-ಬಿಡಬೇಕೆಂಬ ರಾಜಕಾರಣಿಗಳ ಚಿಂತನೆಯೇ ದೇಶದ ಪ್ರಜಾಪ್ರಭುತ್ವಕ್ಕೆ ದೊಡ್ಡ ಅಡ್ಡಿ.

ವಾಚಕರ ವಾಣಿ

ಆಹಾರ ಕಲುಷಿತಗೊಳ್ಳದಿರಲಿ

ವಸತಿನಿಲಯಗಳಲ್ಲಿ ಆಹಾರ ಸೇವಿಸಿದ ನಂತರ ವಿದ್ಯಾರ್ಥಿಗಳು ಅಸ್ವಸ್ಥರಾಗುವ ಪ್ರಕರಣಗಳು ಪದೇ ಪದೇ ಸಂಭವಿಸುತ್ತಿವೆ. ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ಅರಕೇರಾದ ಪರಿಶಿಷ್ಟ ಪಂಗಡದ ಬಾಲಕಿಯರ ಮೆಟ್ರಿಕ್ ಪೂರ್ವ ವಸತಿ ನಿಲಯದಲ್ಲಿ ಇತ್ತೀಚೆಗೆ ಬೆಳಗಿನ ಉಪಾಹಾರ ಸೇವಿಸಿದ ನಂತರ 70 ವಿದ್ಯಾರ್ಥಿನಿಯರು ಅಸ್ವಸ್ಥರಾಗಿದ್ದರು. ವಸತಿನಿಲಯಗಳಲ್ಲಿ ಅಡುಗೆ ತಯಾರಿಸುವಾಗ ಸ್ವಚ್ಛತೆಯ ಕಡೆ ಗಮನ ಕೊಡದಿರುವುದರಿಂದ ಆಹಾರ ಕಲುಷಿತಗೊಳ್ಳುತ್ತದೆ. ಈ ಬಗೆಯ ಆಹಾರ ಸೇವಿಸಿದವರಲ್ಲಿ ವಾಂತಿ, ಭೇದಿ, ತಲೆಸುತ್ತಿನಂತಹ ಅನಾರೋಗ್ಯ ಕಾಣಿಸಿಕೊಳ್ಳುತ್ತದೆ.

ಇಂತಹ ಪ್ರಕರಣಗಳಿಗೆ ಅಡುಗೆ ತಯಾರಕರನ್ನು ಮಾತ್ರವಲ್ಲದೆ, ಉಸ್ತುವಾರಿ ಜವಾಬ್ದಾರಿ ಹೊತ್ತವರನ್ನೂ ಹೊಣೆಗಾರರನ್ನಾಗಿ ಮಾಡುವುದು ಸೂಕ್ತ. ಆಗ ಅವರು ಎಚ್ಚರಿಕೆಯಿಂದ ಇರುತ್ತಾರೆ. ಅಡುಗೆ ತಯಾರಿಸುವಾಗ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಭವಿಷ್ಯದಲ್ಲಿ ಇಂತಹ ಪ್ರಕರಣಗಳು ಮರುಕಳಿಸದಂತೆ ನೋಡಿಕೊಳ್ಳಲು ಈ ಬಗೆಯ ಕ್ರಮ ಅಗತ್ಯ.

ಜಿ.ನಾಗೇಂದ್ರ ಕಾವೂರು, ಸಂಡೂರು

ಆರಂಭವಾಗಲಿ ಖರೀದಿ ಕೇಂದ್ರ

ಜೋಳ ಮತ್ತು ಮೆಣಸಿನಕಾಯಿಯ ಬೆಲೆಯಲ್ಲಿ ಆಗಿರುವ ದಿಢೀರ್ ಕುಸಿತ ರೈತರಲ್ಲಿ ಆತಂಕ ಉಂಟುಮಾಡಿದೆ. ಒಂದೆಡೆ, ಬರಗಾಲ ಆವರಿಸಿದ್ದರೆ ಮತ್ತೊಂದೆಡೆ, ಪರಿಹಾರ ಸಿಗದೇ ರೈತರು ಒದ್ದಾಡುತ್ತಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದ ರಾಯಚೂರು ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಜೋಳ ಮತ್ತು ಮೆಣಸಿನಕಾಯಿಯನ್ನು ಈ ವರ್ಷ ಹೆಚ್ಚಾಗಿ ಬೆಳೆಯಲಾಗಿದೆ. ಮಳೆ ಕೊರತೆಯ ನಡುವೆಯೂ ರೈತರು ಸಾಲ ಮಾಡಿ ಬೆಳೆ ಬೆಳೆದಿದ್ದಾರೆ. ಮೆಣಸಿನಕಾಯಿ ಬೆಳೆಗೆ ಮುಕ್ತ ಮಾರುಕಟ್ಟೆ ಅಷ್ಟಾಗಿ ಇರದ ಕಾರಣ ನೈಜ ಬೆಲೆ ಸಿಗುತ್ತಿಲ್ಲ. ಇದರ ನಡುವೆ, ರೈತರಿಗಾಗಿ ಜಾರಿಗೆ ತಂದ ಫಸಲ್ ಬಿಮಾ ಯೋಜನೆಯಡಿ ಭಾರಿ ಭ್ರಷ್ಟಾಚಾರ ನಡೆದಿದೆ ಎಂಬ ಕೂಗು ಜನಜನಿತವಾಗಿದೆ. ಸರ್ಕಾರ ತನಿಖೆ ಕೈಗೊಂಡು ಅರ್ಹ ರೈತರಿಗೆ ಪರಿಹಾರ ದೊರಕುವಂತೆ ಮಾಡಬೇಕು. ಶೀಘ್ರವೇ ಜೋಳ ಮತ್ತು ಮೆಣಸಿನಕಾಯಿ ಖರೀದಿ ಕೇಂದ್ರ ಆರಂಭಿಸಿ, ರೈತರಿಂದ ಇವುಗಳನ್ನು ಖರೀದಿಸಬೇಕು. ಜೊತೆಗೆ ತ್ವರಿತವಾಗಿ ರೈತರಿಗೆ ಬರ ಪರಿಹಾರ ನೀಡಬೇಕು.

ವಿಜಯಕುಮಾರ್ ಎಚ್.ಕೆ., ರಾಯಚೂರು

ಜಾತಿ ರಾಜಕೀಯಕ್ಕೆ ಬೇಕು ಕಡಿವಾಣ

ಲೋಕಸಭಾ ಚುನಾವಣೆ ಘೋಷಣೆಯಾಗಿರುವ ಬೆನ್ನಲ್ಲೇ ಜಾತಿ ರಾಜಕೀಯ ತೀವ್ರ ಸ್ವರೂಪ ಪಡೆದುಕೊಳ್ಳತೊಡಗಿದೆ. ಇದರಿಂದ, ನಮ್ಮ ಸಂವಿಧಾನದ ಜಾತ್ಯತೀತ ಮೌಲ್ಯಕ್ಕೆ ಧಕ್ಕೆಯಾಗುತ್ತಿದೆ. ಒಬ್ಬ ಮಠಾಧೀಶರಂತೂ ತಾವು ಸೂಚಿಸಿದ ವ್ಯಕ್ತಿಗೆ ಟಿಕೆಟ್ ನೀಡದಿದ್ದರೆ ತಾವು ಪ್ರತಿನಿಧಿಸುವ ಸಮುದಾಯದ ಮೂಲಕ ಪಾಠ ಕಲಿಸುವುದಾಗಿ ಹೇಳಿದ್ದಾರೆ. ಮತ್ತೊಬ್ಬ ಮುಖಂಡರು 'ನಮ್ಮ ಜಾತಿಯ ಮತಗಳು ಈ... ಪಕ್ಷಕ್ಕೆ ಬೇಡವೇ' ಎಂದು ಪ್ರಶ್ನಿಸಿದ್ದಾರೆ.

ಈ ರೀತಿಯ ಜಾತಿ ಆಧಾರಿತ ಹೇಳಿಕೆಗಳು ಚುನಾವಣಾ ಪಾವಿತ್ರ್ಯವನ್ನು ಹಾಳು ಮಾಡುತ್ತವೆ. ಎಲ್ಲ ಪಕ್ಷಗಳಲ್ಲೂ ಎಲ್ಲ ಜಾತಿ ಸಮುದಾಯದ, ಎಲ್ಲ ಧರ್ಮದ ಮತದಾರರಿದ್ದಾರೆ. ಮಠಾಧೀಶರಾಗಲೀ ಮುಖಂಡರಾಗಲೀ ಇಂಥವರಿಗೇ ಮತ ಹಾಕಿ ಎಂದು ಆಜ್ಞಾಪಿಸಿದರೆ ಮತದಾರರ ಸ್ವಾತಂತ್ರ್ಯವನ್ನು ಕಿತ್ತುಕೊಂಡಂತೆ ಆಗುತ್ತದೆ. ಮತದಾರರು ದೇಶದ ಹಿತವನ್ನು ಲಕ್ಷಿಸಿ ಅರ್ಹ ಅಭ್ಯರ್ಥಿಗೆ ಮತ ಹಾಕುವ ಸ್ವಾತಂತ್ರ್ಯವನ್ನು ನಮ್ಮ ಸಂವಿಧಾನ ನಮಗೆ ನೀಡಿದೆ. ಅದರ ಮೇಲೆ ಯಾರ ಯಜಮಾನಿಕೆಯೂ ಇರಬಾರದು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ತುರಿಕೆ: ವೈದ್ಯರಿಂದ ಪರಿಶೀಲನೆಗೆ ಒಳಗಾಗಲಿ

ಮೆಟ್ರೊ ನಿಲ್ದಾಣದಲ್ಲಿ ಮಹಿಳೆಯರ ಮುಂದೆ ಅಸಭ್ಯವಾಗಿ ತುರಿಸಿಕೊಂಡ ಆರೋಪದ ಮೇಲೆ ಭದ್ರತಾ ಸಿಬ್ಬಂದಿಯನ್ನು ಬಿಎಂಆರ್‌ಸಿಎಲ್ ಅಧಿಕಾರಿಗಳು ಅಮಾನತು ಮಾಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಮಾರ್ಚ್ 21). ತುರಿಕೆ ಯಾವ ಸಮಯಕ್ಕೆ ಬರುತ್ತದೆ ಎಂಬುದನ್ನು ವೈದ್ಯರು ಸಹ ಅರಿಯರು. ಇದು ದೇಹದ ಯಾವ ಭಾಗದಲ್ಲಿಯಾದರೂ ಆಕಸ್ಮಿಕವಾಗಿ ಬರುವಂತಹದ್ದಾಗಿದೆ. ಭದ್ರತಾ ಸಿಬ್ಬಂದಿಯು ಮಹಿಳೆಯರ ಮುಂದೆ ದುರುದ್ದೇಶಪೂರ್ವಕವಾಗಿಯೇ ತುರಿಸಿಕೊಂಡಿದ್ದರೆ ಆತನಿಗೆ ಶಿಕ್ಷೆ ಕೊಡುವುದು ಸರಿ. ಒಂದುವೇಳೆ ಆತನಿಗೆ ಚರ್ಮ ರೋಗವಿದ್ದಲ್ಲಿ ಯಾವುದೇ ಸಂದರ್ಭದಲ್ಲಿಯೂ ತುರಿಕೆ ಬರುವ ಸಾಧ್ಯತೆ ಇರುತ್ತದೆ. ಹೀಗಾಗಿ, ವೈದ್ಯರಿಂದ ಪರಿಶೀಲಿಸಿದ್ದರೆ ಆತನ ನಿಜಸ್ಥಿತಿಯ ಅರಿವಾಗುತ್ತಿತ್ತು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಮನೆಯಿಂದಲೇ ಮತ: 80 ವರ್ಷದವರನ್ನೂ ಪರಿಗಣಿಸಿ

ಮತದಾನಕ್ಕೆ ವಯಸ್ಸು ಅಡ್ಡಿಯಾಗದಿರಲಿ ಎಂಬ ಕಾರಣಕ್ಕೆ ಚುನಾವಣಾ ಆಯೋಗವು 85 ಮತ್ತು ಅದಕ್ಕೂ ಮೇಲಿನ ವಯಸ್ಸಿನವರಿಗೆ 'ಮನೆಯಿಂದಲೇ ಮತ ಚಲಾಯಿಸುವ' ವ್ಯವಸ್ಥೆ ಮಾಡಿರುವುದು ಸ್ವಾಗತಾರ್ಹ. ವಯೋಸಹಜ ದೈಹಿಕ ದೌರ್ಬಲ್ಯದಿಂದ ತಮ್ಮ ಮತವನ್ನು ಚಲಾಯಿಸಲು ಸಾಧ್ಯವಾಗದಿರುವ ವೃದ್ಧರಿಗೆ ಇದರಿಂದ ಮತದಾನ ಮಾಡುವ ಸೌಲಭ್ಯ ದೊರೆತಿದೆ.

ತಮ್ಮ ಮತ ಇರುವ ಊರುಗಳಿಂದ ದೂರ ಇರುವ ನೌಕರರಿಗೂ ಅಂಚೆ ಮೂಲಕ ಮತದಾನ ಮಾಡುವ ವ್ಯವಸ್ಥೆಯಲ್ಲೂ ಯಾರೂ ಮತದಾನದ ಹಕ್ಕಿನಿಂದ ವಂಚಿತರಾಗಬಾರದು ಎನ್ನುವ ಕಾಳಜಿ ಇದೆ. ಆದರೆ ಈಗ ವರ್ಷದ ಹಿಂದೆ ನಡೆದ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ 80 ಮತ್ತು ಅದಕ್ಕಿಂತ ಹೆಚ್ಚು ವಯಸ್ಸಾದವರಿಗೆ ಮನೆಯಿಂದ ಮತ ನೀಡುವ ವ್ಯವಸ್ಥೆ ಮಾಡಲಾಗಿತ್ತು. 80ರಿಂದ 85 ವರ್ಷದೊಳಗಿನವರಲ್ಲೂ ಅನೇಕರು ದೈಹಿಕ ನಿಶ್ಶಕ್ತಿಯಿಂದ ಬಳಲುತ್ತಿರುತ್ತಾರೆ. ಅಂತಹವರಿಗೆ ಮತಗಟ್ಟೆಗೆ ಬಂದು ಸರದಿಯಲ್ಲಿ ನಿಂತು ಮತ ಚಲಾಯಿಸುವುದು ಕಷ್ಟ ಆಗುತ್ತದೆ. ಹೀಗಾಗಿ, ಬಹಳಷ್ಟು ಹಿರಿಯರು ತಮ್ಮ ಮತದಾನದ ಹಕ್ಕಿನಿಂದ ವಂಚಿತರಾಗುತ್ತಾರೆ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ಮತವೂ ಅಮೂಲ್ಯವಾಗಿರುವುದನ್ನು ಮನಗಂಡು ಆಯೋಗವು ವಿಧಾನಸಭೆಯ ಚುನಾವಣೆಯಲ್ಲಿ ಅನುಸರಿಸಿದಂತೆ 80ಕ್ಕೂ ಹೆಚ್ಚು ವಯಸ್ಸಿನ ಹಿರಿಯರಿಗೆ ಮನೆಯಿಂದಲೇ ಮತ ಚಲಾಯಿಸುವ ವ್ಯವಸ್ಥೆಯನ್ನು ಲೋಕಸಭಾ ಚುನಾವಣೆಯಲ್ಲೂ ಅನುಸರಿಸಲಿ.

ಸತ್ಯಬೋಧ, ಬೆಂಗಳೂರು


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಿಹಾರ ಸೀಟು ಹಂಚಿಕೆ

ಎನ್‌ಡಿಎ ಸುಸೂತ್ರ 'ಇಂಡಿಯಾ'ಕ್ಕಿಲ್ಲ ತಂತ್ರ

ಸಂಸತ್ತಿಗೆ ಅತಿಹೆಚ್ಚು ಸಂಸದರನ್ನು ಕಳುಹಿಸುವ ರಾಜ್ಯಗಳಲ್ಲಿ ಬಿಹಾರವೂ ಒಂದು. ಬಿಹಾರವು ಲೋಕಸಭೆಗೆ 40 ಸಂಸದರನ್ನು ಕಳುಹಿಸುತ್ತದೆ. ಹೀಗಾಗಿ ರಾಜ್ಯದ ರಾಜಕಾರಣವು ರಾಷ್ಟ್ರರಾಜಕಾರಣದಲ್ಲಿ ಮಹತ್ವ ಪಡೆದೇ ಪಡೆಯುತ್ತದೆ. ಪ್ರಾದೇಶಿಕ ಪಕ್ಷಗಳೇ ಪ್ರಧಾನವಾಗಿರುವ ರಾಜ್ಯದಲ್ಲಿ, ರಾಷ್ಟ್ರೀಯ ಪಕ್ಷಗಳು ಮೈತ್ರಿ ಮೊರೆ ಹೋಗುವುದು ಅನಿವಾರ್ಯ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಎರಡೂ ರಾಷ್ಟ್ರೀಯ ಪಕ್ಷಗಳು ಪ್ರಾದೇಶಿಕ ಪಕ್ಷಗಳೊಂದಿಗೆ ಮೈತ್ರಿಯಲ್ಲಿವೆ. ಕಾಂಗ್ರೆಸ್ ತನ್ನ ಹಳೆಯ ಮೈತ್ರಿಯನ್ನೇ ಮುಂದುವರಿಸಿದ್ದರೆ, ಬಿಜೆಪಿ ಮೈತ್ರಿಯನ್ನು ಬದಲಿಸಿದೆ. ಇದರ ಜತೆಯಲ್ಲೇ ಮೈತ್ರಿ ಲೆಕ್ಕಾಚಾರ ಮತ್ತು ರಾಜಕೀಯ ಸಂಯೋಜನೆ ಈ ಲೋಕಸಭಾ ಚುನಾವಣೆಯ ಹೊಸ್ತಿಲಲ್ಲಿ ಹೊಸ ರೂಪ ಪಡೆದುಕೊಳ್ಳುತ್ತಿದೆ





ಪ್ರಜಾವಾಣಿ ವಾರ್ತೆ

ಲೋಕಸಭಾ ಚುನಾವಣೆಗೆ ಒಂದೆರಡು ತಿಂಗಳು ಇರುವಂತೆಯೇ ಬಿಹಾರದಲ್ಲಿ ಮೈತ್ರಿ ಲೆಕ್ಕಾಚಾರ ಬದಲಾಗಿತ್ತು. ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ' ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು, 'ಇಂಡಿಯಾ' ಮೈತ್ರಿಕೂಟವನ್ನೂ ತೊರೆದರು. ರಾಜ್ಯದಲ್ಲಿನ ಮಹಾಮೈತ್ರಿಕೂಟವನ್ನೂ ತೊರೆದರು. ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ಆರ್‌ಜೆಡಿ–ಜೆಡಿಯು–ಕಾಂಗ್ರೆಸ್‌ನ ಮಹಾಮೈತ್ರಿಕೂಟದ ಸರ್ಕಾರವನ್ನು ಬೀಳಿಸಿ, ಬಿಜೆಪಿಗೆ ಹೆಗಲು ಜೋಡಿಸಿದರು. ಹೊಸ ಸರ್ಕಾರವನ್ನೂ ರಚಿಸಿದರು. ಇದು ಬಿಹಾರದಲ್ಲಿ 'ಇಂಡಿಯಾ' ಮೈತ್ರಿಕೂಟಕ್ಕೆ ಬಿದ್ದ ದೊಡ್ಡ ಹೊಡೆತ ಎಂದೇ ವಿಶ್ಲೇಷಿಸಲಾಯಿತು.

ಜೆಡಿಯು ಬಿಜೆಪಿಗೆ ಜತೆಯಾಗುವುದರ ಮೂಲಕ ರಾಜ್ಯದಲ್ಲಿ ಎನ್‌ಡಿಎ ಮೈತ್ರಿಕೂಟ ಬಲವಾಯಿತು. 'ಇಂಡಿಯಾ' ಮೈತ್ರಿಕೂಟ ದುರ್ಬಲವಾಯಿತು. ಇಂತಹ ಬೆಳವಣಿಗೆ ಅಲ್ಲಿಗೇ ನಿಲ್ಲಲಿಲ್ಲ. ಇನ್ನಿತರ ಸಣ್ಣಪುಟ್ಟ ಪಕ್ಷಗಳನ್ನೂ ಬಿಜೆಪಿ ಸೆಳೆಯತೊಡಗಿತು. ಈ ಬಗ್ಗೆ ಕಾದು ನೋಡುವ ತಂತ್ರದ ಮೊರೆ ಹೋದ ಆರ್‌ಜೆಡಿ–ಕಾಂಗ್ರೆಸ್ ತಮ್ಮ ತಂತ್ರಗಾರಿಕೆಯನ್ನೂ ಬದಲಿಸಿದವು. ಅಲ್ಲಿಂದಲೇ ಬಿಹಾರದ ರಾಜಕಾರಣ ಆಸಕ್ತಿಕರ ತಿರುವು ಪಡೆದುಕೊಂಡಿತು.

ಬಿಹಾರದಲ್ಲಿ ಹೊಸ ಸರ್ಕಾರ ರಚಿಸುವ ಮೂಲಕ ತಮ್ಮ ನೆಲೆ ಭದ್ರವಾಯಿತು ಎಂದು ನಿತೀಶ್ ಕುಮಾರ್ ಭಾವಿಸಿದ್ದರು. ಹೊಸ ಮೈತ್ರಿಯ ಬಗ್ಗೆ ಅವರು ಆಡಿದ್ದ ಮಾತುಗಳು ಮತ್ತು ಆರ್‌ಜೆಡಿ ಮುಂದಾಳು ಲಾಲು ಪ್ರಸಾದ್ ಅವರ ಆಹ್ವಾನವನ್ನು ತಿರಸ್ಕರಿಸಿದ ರೀತಿ ಇದನ್ನೇ ಸೂಚಿಸುತ್ತವೆ. ಆದರೆ ಇಲ್ಲಿ ನಿತೀಶ್ ಅವರಿಗೆ ಆಗಿದ್ದು ಹಿನ್ನಡೆಯೇ ಹೌದು ಎಂಬುದನ್ನು ಎನ್‌ಡಿಎ ಮೈತ್ರಿಕೂಟದ ಸೀಟು ಹಂಚಿಕೆ ದೃಢಪಡಿಸುತ್ತದೆ. ಇರುವ 40 ಕ್ಷೇತ್ರಗಳಲ್ಲಿ ಸಿಂಹಪಾಲನ್ನು ಬಿಜೆಪಿ ತನ್ನಲ್ಲೇ ಉಳಿಸಿಕೊಂಡಿದೆ. ಬಿಜೆಪಿ 17 ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯುತ್ತಿದ್ದರೆ, ಜೆಡಿಯುಗೆ ದಕ್ಕಿದ್ದು 16 ಕ್ಷೇತ್ರಗಳು ಮಾತ್ರ. ಈಗ ಜೆಡಿಯುವಿನ ಸಂಸದರ ಸಂಖ್ಯೆಯೂ ಅಷ್ಟೇ ಇದೆ. ಆದರೆ ಬಿಜೆಪಿ ಒಂದು ಹೆಚ್ಚುವರಿ ಕ್ಷೇತ್ರವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದು, ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಸಮ್ರಾಟ್ ಚೌಧರಿ ಅವರ ಚಾಣಾಕ್ಷತೆಗೆ ಹಿಡಿದ ಕನ್ನಡಿ ಎಂದು ವಿಶ್ಲೇಷಿಸಲಾಗುತ್ತಿದೆ.

ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟದ ಸೀಟು ಹಂಚಿಕೆಯನ್ನು ನಿರ್ಧರಿಸಿದ್ದು ಮತ್ತು ನಿರ್ವಹಿಸಿದ್ದು ಸಮ್ರಾಟ್ ಅವರೇ ಎಂದು ಮೂಲಗಳು ಹೇಳುತ್ತವೆ. ಪದೇ-ಪದೇ ಮೈತ್ರಿ ಬದಲಿಸಿದ ಜೆಡಿಯುವಿನ ವಿಶ್ವಾಸಾರ್ಹತೆ ಕುಂದಿದ್ದನ್ನು ಪರಿಗಣಿಸಿಯೇ ಅದಕ್ಕೆ ಕಡಿಮೆ ಸ್ಥಾನಗಳನ್ನು ನೀಡಲಾಗಿದೆ ಎಂಬುದು ಬಿಜೆಪಿಯ ಮೂಲಗಳ ಅಭಿಪ್ರಾಯ. ಇದನ್ನು ಬಹಿರಂಗವಾಗಿ ಯಾರೂ ಹೇಳುತ್ತಿಲ್ಲ. ಆದರೆ, ವಿರೋಧ ಪಕ್ಷಗಳಂತೂ ಇದನ್ನೇ ಹೇಳುತ್ತಿವೆ.

ಸಮ್ರಾಟ್ ಅವರು ಬಿಹಾರದಲ್ಲಿ ಹೊಸ ತಲೆಮಾರಿನ ನಾಯಕತ್ವವನ್ನು ಬೆಳೆಸುವ ಮೂಲಕ ತಮ್ಮ ಮತ್ತು ತಮ್ಮ ಪಕ್ಷದ ನೆಲೆಯನ್ನು ಗಟ್ಟಿಗೊಳಿಸಲು ತಂತ್ರ ರೂಪಿಸಿದ್ದಾರೆ ಎಂಬ ವಿಶ್ಲೇಷಣೆಯೂ ಇದೆ. ಸೀಟು ಹಂಚಿಕೆಯಲ್ಲಿ ರಾಮ್ ವಿಲಾಸ್ ಪಾಸ್ವಾನ್ ಅವರ ಸೋದರ ಪಶುಪತಿ ಪಾರಸ್ ಅವರ ಆರ್‌ಎಲ್‌ಜೆಪಿಯನ್ನು ಹೊರಗಿಟ್ಟು, ಪಾಸ್ವಾನ್ ಅವರ ಮಗ ಚಿರಾಗ್ ಅವರ ಎಲ್‌ಜೆಪಿಗೆ ಮಣೆ ಹಾಕಿದ್ದು ಇದನ್ನೇ ಸೂಚಿಸುತ್ತದೆ. ಇದಿಷ್ಟೇ ಅಲ್ಲದೆ ಪಾಸ್ವಾನ್ ಕುಟುಂಬಕ್ಕೆ ಅತ್ಯಂತ ಪ್ರತಿಷ್ಠೆಯ ಕಣವಾದ ಹಾಜಿಪುರ ಕ್ಷೇತ್ರವನ್ನು ಹಾಲಿ ಸಂಸದ ಪಶುಪತಿ ಅವರಿಂದ ಕಿತ್ತುಕೊಂಡು, ಚಿರಾಗ್ ಅವರಿಗೆ ನೀಡಲಾಗಿದೆ. ಈ ಮೂಲಕ ಚಿರಾಗ್ ಅವರ ವಿಶ್ವಾಸವನ್ನು ಬಿಜೆಪಿ, ಅರ್ಥಾತ್ ಸಮ್ರಾಟ್ ಗಟ್ಟಿಗೊಳಿಸಿಕೊಂಡಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟವು 39 ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. ಆನಂತರ ನಿತೀಶ್ ಅವರ ಜೆಡಿಯು ಎನ್‌ಡಿಎಯನ್ನು ತೊರೆದಿತ್ತು. ಈ ಚುನಾವಣೆಯಲ್ಲಿ ಎನ್‌ಡಿಎ ಮತ್ತದೇ ಗೆಲುವನ್ನು ಸಾಧಿಸುವ ಗುರಿಯಲ್ಲಿದೆ. ಎಲ್ಲಾ 40 ಕ್ಷೇತ್ರಗಳಲ್ಲೂ ನಾವೇ ಗೆಲ್ಲುತ್ತೇವೆ ಎಂದು ಎನ್‌ಡಿಎ ವಕ್ತಾರರು ಹೇಳುತ್ತಿದ್ದಾರೆ. ಈ ಬಾರಿಯ ಸೀಟು ಹಂಚಿಕೆ ಸಂಯೋಜನೆ ಯಶಸ್ವಿಯಾದರೆ, ಬಿಜೆಪಿ ಮತ್ತು ಸಮ್ರಾಟ್ ಅವರ ನೆಲೆ ಮತ್ತಷ್ಟು ಗಟ್ಟಿಯಾಗಲಿದೆ. ಅದು ನಿತೀಶ್ ಅವರ 'ದೊಡ್ಡಣ್ಣ'ನ ಸ್ಥಾನಕ್ಕೆ ಕುತ್ತಾಗಲಿದೆ ಎಂದು ಅಂದಾಜಿಸಲಾಗುತ್ತಿದೆ. ಆದರೆ ಬೇರೆಲ್ಲಾ ರಾಜ್ಯಗಳಲ್ಲಿ ಪ್ರಬಲ ನಾಯಕರನ್ನು ಮೂಲೆಗೆ ತಳ್ಳಿದ ಬಿಜೆಪಿ ಇಲ್ಲಿ, ಯುವ ನಾಯಕರನ್ನು ಬೆಳೆಸುತ್ತದೆಯೇ ಎಂಬುದನ್ನೂ ಕಾದು ನೋಡಬೇಕು ಎಂಬುದು ತಜ್ಞರ ಅಭಿಪ್ರಾಯ.

ಪಶುಪತಿ ಮೂಲೆಗುಂಪು

ಪಶುಪತಿ ಪಾರಸ್ ಅವರ ಆರ್‌ಎಲ್‌ಜೆಪಿ ಸದ್ಯ ಐವರು ಸಂಸದರನ್ನು ಹೊಂದಿದೆ. ಮೈತ್ರಿಧರ್ಮದ ಹೆಸರಿನಲ್ಲಿ ಬಿಜೆಪಿ ಪಶುಪತಿ ಅವರಿಗೆ ಕೇಂದ್ರ ಸರ್ಕಾರದಲ್ಲಿ ಸಚಿವನ ಸ್ಥಾನವನ್ನೂ ಒದಗಿಸಿತ್ತು. ಅಂತಹ ಆರ್‌ಎಲ್‌ಜೆಪಿಯನ್ನೇ ಮೂಲೆಗುಂಪು ಮಾಡುವಲ್ಲಿ ಚಿರಾಗ್ ಪಾಸ್ವಾನ್ ಯಶ್ವಸಿಯಾಗಿದ್ದಾರೆ. ಪಶುಪತಿ ಅವರ ಪಕ್ಷಕ್ಕೆ ಬಿಜೆಪಿ ಒಂದು ಕ್ಷೇತ್ರವನ್ನೂ ನೀಡಿಲ್ಲ. ಇದರಿಂದ ಬೇಸತ್ತ ಪಶುಪತಿ ಅವರು ಕೇಂದ್ರ ಸಚಿವನ ಸ್ಥಾನವನ್ನೇ ತೊರೆದರು ಮತ್ತು ಎನ್‌ಡಿಎ ಮೈತ್ರಿಕೂಟವನ್ನೂ ತ್ಯಜಿಸಿದರು. ಅವರ ಪಕ್ಷವು ಸ್ವತಂತ್ರವಾಗಿ ಕಣಕ್ಕೆ ಇಳಿಯುತ್ತದೆಯೇ ಅಥವಾ 'ಇಂಡಿಯಾ' ಒಕ್ಕೂಟ ಸೇರುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ. ಆರ್‌ಎಲ್‌ಜೆಪಿ ಸ್ವತಂತ್ರವಾಗಿ ಕಣಕ್ಕೆ ಇಳಿಯುವ ಸಾಧ್ಯತೆಯೇ ಹೆಚ್ಚು ಎಂಬುದು ನಿರೀಕ್ಷೆ. ಅದು ಹೇಗೇ ಕಣಕ್ಕೆ ಇಳಿದರೂ ಎಲ್‌ಜೆಪಿ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಮತಗಳನ್ನು ವಿಭಜಿಸುತ್ತದೆ. ಬಿಜೆಪಿ ಕಣಕ್ಕೆ ಇಳಿಯಲಿರುವ ಕೆಲವು ಕ್ಷೇತ್ರಗಳಲ್ಲೂ ಅದು ಮತಗಳನ್ನು ವಿಭಜಿಸುವ ಸಾಧ್ಯತೆ ಇದೆ. ಇದು 'ಇಂಡಿಯಾ' ಮೈತ್ರಿಕೂಟಕ್ಕೆ ಅನುಕೂಲ ಮಾಡಿಕೊಡಲಿದೆ ಎಂದು ನಿರೀಕ್ಷಿಸಲಾಗಿದೆ.




ಕಾಂಗ್ರೆಸ್– ಆರ್‌ಜೆಡಿ: ಅಂತಿಮವಾಗದ ಸೀಟು ಹಂಚಿಕೆ

ಬಿಹಾರದಲ್ಲಿ ಸೀಟು ಹಂಚಿಕೆಯನ್ನು ಅಂತಿಮಗೊಳಿಸುವ ಮೂಲಕ ಎನ್‌ಡಿಎ ಮೈತ್ರಿಕೂಟವು ಲೋಕಸಭಾ ಚುನಾವಣೆಗೆ ಪೂರ್ಣ ಪ್ರಮಾಣದಲ್ಲಿ ಸಿದ್ಧವಾಗಿದೆ. ಆದರೆ ಎದುರಾಳಿ ಪಾಳಯವು ಇನ್ನೂ ಸೀಟು ಹಂಚಿಕೆಯನ್ನು ಅಂತಿಮಗೊಳಿಸಿಲ್ಲ. 'ಇಂಡಿಯಾ' ಮೈತ್ರಿಕೂಟದ ಅಥವಾ ಬಿಹಾರದ ಮಹಾಮೈತ್ರಿಕೂಟದ ಎರಡು ಪ್ರಮುಖ ಪಕ್ಷಗಳಾದ ಆರ್‌ಜೆಡಿ ಮತ್ತು ಕಾಂಗ್ರೆಸ್ ಮಧ್ಯೆ ಇನ್ನೂ ಸೀಟು ಹಂಚಿಕೆ ವಿಚಾರದಲ್ಲಿ ಒಮ್ಮತಕ್ಕೆ ಬರಲು ಸಾಧ್ಯವಾಗಿಲ್ಲ.

ಆರ್‌ಜೆಡಿ, ಕಾಂಗ್ರೆಸ್‌ಗೆ ಬಿಟ್ಟುಕೊಡುತ್ತಿರುವಷ್ಟು ಕ್ಷೇತ್ರಗಳ ಬಗ್ಗೆ ಕಾಂಗ್ರೆಸ್‌ಗೆ ಸಮಾಧಾನವಿಲ್ಲ. ಇನ್ನೂ ಹೆಚ್ಚಿನ ಕ್ಷೇತ್ರಗಳು ಬೇಕು ಎಂಬುದು ಕಾಂಗ್ರೆಸ್‌ನ ವಾದ. ಈ ಬಗ್ಗೆ ಒಮ್ಮತಕ್ಕೆ ಬರಲು ಸಾಧ್ಯವಾಗಿಲ್ಲ. ಇನ್ನೊಂದೆರಡು ದಿನಗಳಲ್ಲಿ ಸೀಟು ಹಂಚಿಕೆ ಅಂತಿಮವಾಗಲಿದೆ ಎಂದು ಎರಡೂ ಪಕ್ಷಗಳ ನಾಯಕರು ಹೇಳಿ ಎರಡು ದಿನ ಕಳೆದಿದೆ. ಆದರೆ ಸೀಟು ಹಂಚಿಕೆ ಅಂತಿಮವಾಗಿಲ್ಲ.

ಇನ್ನೊಂದೆಡೆ ಪಪ್ಪು ಯಾದವ್ ಅವರು ಕಾಂಗ್ರೆಸ್ ಸೇರಿದ್ದಾರೆ ಮತ್ತು ತಮ್ಮ ಪಕ್ಷವನ್ನು ಕಾಂಗ್ರೆಸ್‌ನೊಟ್ಟಿಗೆ ವಿಲೀನ ಮಾಡಿದ್ದಾರೆ. ಪಪ್ಪು ಯಾದವ್ ಅವರ ಜನ ಅಧಿಕಾರ್ ಪಕ್ಷವು 2019ರ ಚುನಾವಣೆಯಲ್ಲಿ ಸ್ವತಂತ್ರವಾಗಿ ಕಣಕ್ಕೆ ಇಳಿದಿತ್ತು. ಆ ಪಕ್ಷವು ಯಾವೊಂದು ಕ್ಷೇತ್ರವನ್ನೂ ಗೆಲ್ಲಲು ಸಾಧ್ಯವಾಗಲಿಲ್ಲವಾದರೂ, ಹಲವಾರು ಕ್ಷೇತ್ರಗಳಲ್ಲಿ ಆರ್‌ಜೆಡಿಯ ಮತಗಳನ್ನು ವಿಭಜಿಸಿತ್ತು.



ಇದರಿಂದಾಗಿ ಆರ್‌ಜೆಡಿ ಒಂದು ಸ್ಥಾನವನ್ನೂ ಗೆಲ್ಲಲು ಸಾಧ್ಯವಾಗಿರಲಿಲ್ಲ. ಕಾಂಗ್ರೆಸ್‌ನ ಸ್ಥಿತಿಯೂ ಹಾಗೇ ಇತ್ತು. ಪಪ್ಪು ಯಾದವ್ ಮತ್ತು ಲಾಲು ಪ್ರಸಾದ್ ಅವರ ನಡುವಣ ವೈಪೋಟಿಯನ್ನು ಮರೆತು ಈ ಬಾರಿ ಸೀಟು ಹಂಚಿಕೊಳ್ಳಬೇಕಿದೆ. ಆರ್‌ಜೆಡಿ ತನ್ನ ಸ್ಥಾನಗಳನ್ನು ಪಪ್ಪು ಯಾದವ್ ಮತ್ತು ಅವರ ಸಂಗಡಿಗರಿಗೆ ಬಿಟ್ಟುಕೊಡಲು ತಯಾರಿಲ್ಲ. ಕಾಂಗ್ರೆಸ್ ತನಗೆ ದೊರೆಯಲಿರುವ ಕ್ಷೇತ್ರಗಳನ್ನೇ ಪಪ್ಪು ಯಾದವ್ ಅವರಿಗಾಗಿ ತ್ಯಾಗ ಮಾಡಬೇಕಿದೆ. ಹೀಗಾಗಿಯೇ ಕಾಂಗ್ರೆಸ್ ಇನ್ನಷ್ಟು ಕ್ಷೇತ್ರಗಳನ್ನು ಬಿಟ್ಟುಕೊಡುವಂತೆ ಪಟ್ಟು ಹಿಡಿದಿದೆ ಎನ್ನಲಾಗುತ್ತಿದೆ.

ಇನ್ನೊಂದೆಡೆ ಉಪೇಂದ್ರ ಕುಶ್ವಾಹಾ ಅವರ ರಾಷ್ಟ್ರೀಯ ಲೋಕ ಮಂಚ್‌ಗೆ (ಆರ್‌ಎಲ್‌ಎಂ) ಬಿಜೆಪಿ ನೀಡಿದ್ದು ಒಂದು ಕ್ಷೇತ್ರ ಮಾತ್ರ. ಪಕ್ಷವು ಎರಡು ಸೀಟುಗಳಿಗೆ ಬೇಡಿಕೆ ಇಟ್ಟಿತ್ತು. ಒಂದನ್ನಷ್ಟೇ ಬಿಟ್ಟುಕೊಟ್ಟಿರುವ ಕಾರಣ, ಕುಶ್ವಾಹಾ ಅವರು ತೀವ್ರ ಅಸಮಾಧಾನಗೊಂಡಿದ್ದಾರೆ. ಕಾಂಗ್ರೆಸ್ ಮತ್ತು ಆರ್‌ಜೆಡಿ ನಾಯಕರೊಟ್ಟಿಗೆ ಮಾತುಕತೆಯನ್ನೂ ನಡೆಸಿದ್ದಾರೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ. ಕುಶ್ವಾಹಾ ಅವರೂ 'ಇಂಡಿಯಾ' ಮೈತ್ರಿಕೂಟವನ್ನು ಸೇರಿದರೆ, ಅಲ್ಲಿ ಸೀಟು ಹಂಚಿಕೆ ಮತ್ತಷ್ಟು ಕಠಿಣವಾಗಲಿದೆ. ಆದರೆ ಅದನ್ನು ಸರಿಯಾಗಿ ನಿರ್ವಹಿಸಿದರೆ, ಕಾಂಗ್ರೆಸ್ ಮತ್ತು ಆರ್‌ಜೆಡಿಯ ಮತಗಳು ವಿಭಜನೆ ಆಗುವುದನ್ನು ತಡೆಯಬಹುದು ಎಂದು ಅಂದಾಜಿಸಲಾಗುತ್ತಿದೆ.

ಆಧಾರ: ಪಿಟಿಐ, ರಾಯಿಟರ್ಸ್

ಏ.5ಕ್ಕೆ ನೀನಾಸಂ 'ಮ್ಯಾಟ್ನಿ' ಶೋ!



ನೀನಾಸಂ ಸತೀಶ್, ರಚಿತಾ ರಾಮ್ ಜೋಡಿಯಾಗಿ ನಟಿಸಿರುವ 'ಮ್ಯಾಟ್ನಿ' ಚಿತ್ರ ಬಿಡುಗಡೆಗೆ ಮೂಹೂರ್ತ ಕೂಡಿ ಬಂದಿದೆ. ಮನೋಹರ್ ನಿರ್ದೇಶನದ ಈ ಚಿತ್ರ ಏ.5ರಂದು ತೆರೆಗೆ ಬರುತ್ತಿದೆ.

'ಕಳೆದ ಡಿಸೆಂಬರ್‌ನಲ್ಲಿಯೇ ಚಿತ್ರ ಬಿಡುಗಡೆಗೆ ತಂಡ ಯೋಚಿಸಿತ್ತು. ಆದರೆ ಕಾರಣಾಂತರಗಳಿಂದ ಅದು ಸಾಧ್ಯವಾಗಲಿಲ್ಲ. ಮಾರ್ಚ್‌ನಲ್ಲಿ ತೆರೆಗೆ ಬರಲು ಸಾಕಷ್ಟು ಚಿತ್ರಗಳಿದ್ದವು. ಹೀಗಾಗಿ ಏಪ್ರಿಲ್ ಮೊದಲ ವಾರಕ್ಕೆ ಮುಂದೂಡಿಕೊಂಡೆವು' ಎನ್ನುತ್ತಾರೆ ನಿರ್ದೇಶಕ ಮನೋಹರ್

'ಬಾರೋ ಬಾರೋ ಬರುವಾಗ ಬಾಟಲ್ ತಾರೋ' ಹಾಡಿನ ಮೂಲಕ 'ಮ್ಯಾಟ್ನಿ' ತಂಡ ಹೊಸವರ್ಷವನ್ನು ಸ್ವಾಗತಿಸಿತ್ತು. ಪೂರ್ಣಚಂದ್ರ ತೇಜಸ್ವಿ ಸಂಗೀತ ಸಂಯೋಜನೆಯ ಈ ಎಣ್ಣೆ ಹಾಡನ್ನು ಪ್ರಕಾಶ್ ಹಾಡಿದ್ದರು.

ನಾಗಭೂಷಣ್, ಶಿವರಾಜ್ ಕೆ.ಆರ್ ಪೇಟೆ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ. ಚಿತ್ರದ ಪ್ರಚಾರ ಪ್ರಾರಂಭಿಸಿರುವ ನೀನಾಸಂ ಸತೀಶ್ ಇತ್ತೀಚೆಗಷ್ಟೇ ತಂಡದೊಂದಿಗೆ ಮಿರ್ಚಿ ಮಂಡಕ್ಕಿ ಜೊತೆ ಚಹಾ ಸೇವಿಸುವ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು.

'ವೆಂಕ್ಯಾ'ನಿಗೆ ಒಡೆಯರ್ ಸಾಥ್

ರಾಷ್ಟ್ರ ಪ್ರಶಸ್ತಿ ವಿಜೇತ 'ಡೊಳ್ಳು' ಸಿನಿಮಾ ನಿರ್ದೇಶಿಸಿದ್ದ ಸಾಗರ್ ಪುರಾಣಿಕ್ ತಮ್ಮ ಹೊಸ ಸಿನಿಮಾ ಘೋಷಿಸಿದ್ದಾರೆ. 'ವೆಂಕ್ಯಾ' ಎಂಬ ಸಿನಿಮಾಗೆ ಸಾಗರ್ ಪುರಾಣಿಕ್ ಆ್ಯಕ್ಷನ್ ಕಟ್ ಹೇಳುವುದರ ಜೊತೆಗೆ ನಾಯಕನಾಗಿಯೂ ಮೊದಲ ಹೆಜ್ಜೆ ಇಟ್ಟಿದ್ದಾರೆ. ನಿರ್ದೇಶನದ ಜೊತೆಗೆ ಸಾಗರ್ ನಟನೆ ಜವಾಬ್ದಾರಿ ಹೊತ್ತುಕೊಂಡಿದ್ದಾರೆ.

'ಡೊಳ್ಳು' ಸಿನಿಮಾ ನಿರ್ಮಾಣ ಮಾಡಿದ್ದ ಪವನ್ ಒಡೆಯರ್ ಅವರೇ 'ವೆಂಕ್ಯಾ' ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದು, ಹುಬ್ಬಳ್ಳಿಯ ಸಿದ್ಧಾರೂಢ ಮಠದಲ್ಲಿ ಇತ್ತೀಚೆಗಷ್ಟೇ ಈ ಚಿತ್ರದ ಮುಹೂರ್ತ ನಡೆಯಿತು. 'ವೆಂಕ್ಯಾ' ಚಿತ್ರೀಕರಣ ಈಗಾಗಲೇ ಆರಂಭವಾಗಿದ್ದು, ಇದೊಂದು ವಿಭಿನ್ನ ಪ್ರಯತ್ನದ ಸಿನಿಮಾ ಎಂದಿದೆ ಚಿತ್ರತಂಡ. ಉತ್ತರ ಕರ್ನಾಟಕದ ಕಥೆಯಾದರೂ ಅದು ದೇಶವೆಲ್ಲ ಸುತ್ತಲಿದೆ. ಇದೊಂದು ಹೊಸ ಬಗೆಯ ಕಮರ್ಷಿಯಲ್ ಸಿನಿಮಾ ಎಂದಿದೆ ತಂಡ. ಉಳಿದ ತಾರಾಬಳಗ ಹಾಗೂ ತಾಂತ್ರಿಕ ವರ್ಗದ ಬಗ್ಗೆ ಶೀಘ್ರದಲ್ಲೇ ಮಾಹಿತಿ ನೀಡುವುದಾಗಿ ಸಾಗರ್ ತಿಳಿಸಿದ್ದಾರೆ.



ಸಾಗರ್ ಪುರಾಣಿಕ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

'ಹರಿಯಾಣದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಮನೋಹರ ಲಾಲ್ ಖಟ್ಟರ್ ಅವರು ತಮ್ಮ ಅಧಿಕೃತ ನಿವಾಸವನ್ನು ತೊರೆದರು. ತಮ್ಮ ವಸ್ತುಗಳನ್ನು ತಾವೇ ಬ್ಯಾಗಿಗೆ ತುಂಬಿಕೊಂಡು ಹೊರಟರು. ಆರ್‌ಎಸ್‌ಎಸ್‌ನ ಕಟ್ಟಾಳುಗಳೆಲ್ಲರೂ ಹೀಗೆ. ಪ್ರಧಾನಿ ನರೇಂದ್ರ ಮೋದಿ ಅವರು ಹೇಳುವಂತೆ, 'ಜೋಳಿಗೆ ತೆಗೆದುಕೊಂಡು ಹೊರಟುಬಿಡುತ್ತೇನೆ' ಎಂಬುದಕ್ಕೆ ಇದು ಉದಾಹರಣೆ' ಎಂಬ ವಿವರದೊಂದಿಗೆ ಚಿತ್ರವೊಂದನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ ಇದು ಸುಳ್ಳು ಸುದ್ದಿ.



ಇಂತಹ ಪೋಸ್ಟ್‌ಗಳೊಟ್ಟಿಗೆ ಹಂಚಿಕೊಳ್ಳಲಾಗುತ್ತಿರುವ ಚಿತ್ರವು ಮನೋಹರ್ ಲಾಲ್ ಖಟ್ಟರ್ ಅವರದ್ದಲ್ಲ. ಗೂಗಲ್ ಇಮೇಜ್ ಸರ್ಚ್‌ನಲ್ಲಿ ಹುಡುಕಿದಾಗ ಈ ಚಿತ್ರ ತೀರಾ ಹಳೆಯದ್ದು ಎಂಬುದು ಗೊತ್ತಾಯಿತು. ಈ ಚಿತ್ರವು ಆನ್‌ಲೈನ್‌ನಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ 2019ರಿಂದಲೂ ಇವೆ. ಕೆಲವು ಪೋಸ್ಟ್‌ಗಳಲ್ಲಿ ಈ ವ್ಯಕ್ತಿಯನ್ನು ಬಳೆ ವ್ಯಾಪಾರಿ ಎಂದು ಕರೆದಿದ್ದರೆ, ಕೆಲವು ಪೋಸ್ಟ್‌ಗಳಲ್ಲಿ ಬಟ್ಟೆ ವ್ಯಾಪಾರಿ ಎಂದು ಕರೆಯಲಾಗಿದೆ. ಖಟ್ಟರ್ ಅವರು ರಾಜೀನಾಮೆ ನೀಡಿದ್ದು 2024ರಲ್ಲಿ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರದಲ್ಲಿರುವ ವ್ಯಕ್ತಿಯ ಚಹರೆ ಖಟ್ಟರ್ ಅವರಿಗೆ ಹೋಲುತ್ತದೆಯಾದರೂ, ಅದು ಖಟ್ಟರ್ ಅವರದ್ದಲ್ಲ.


ಗುಂಡಣ್ಣ



ಕಾಲು ಚಾಚಿ ಕೂತವನು

ನುಡಿ ಬೆಳಗು





ಪ್ರೊ.ಎಂ. ಕೃಷ್ಣೇಗೌಡ

ಅವನ್ಯಾರೋ ಒಬ್ಬ ರೈತ, ಶ್ರಮಜೀವಿ ಪಾಪ. ಹಳ್ಳಿಕಟ್ಟೆಯ ಮೇಲೆ ಕಾಲು ಚಾಚಿಕೊಂಡು ಆರಾಮವಾಗಿ ಕೂತಿದ್ದ. ಅವನು ಹಾಗೆ ಕೂತಿರುವಾಗಲೇ ಅಲ್ಲಿಗೆ ಆ ದೇಶದ ರಾಜ ಕುದುರೆಯ ಮೇಲೆ ಬಂದ. ರೈತ ಕುದುರೆಯ ಟಕ ಟಕ ಸದ್ದನ್ನು ಕೇಳಿ ಒಂದು ಸಲ ಆ ಕಡೆ ನೋಡಿದ. ಮತ್ತೆ ತಿರುಗಿ ತನ್ನ ಪಾಡಿಗೆ ತಾನು ಕೂತ. ಕಟ್ಟೆಯ ಮೇಲೆ ಕೂತಿದ್ದವನನ್ನು ನೋಡಿ ಅವನನ್ನು ಮಾತಾಡಿಸೋಣ, ಕುಶಲ ಕ್ಷೇಮ ಮಳೆ ಬೆಳೆ ವಿಚಾರಿಸೋಣ ಅಂತ ರಾಜ ಹಾಗೇ ಕುದುರೆಯ ಮೇಲೇ ಅವನ ಸಮೀಪಕ್ಕೆ ಬಂದ. ವಿಚಿತ್ರ ಅಂದರೆ ಆಗಲೂ ಆ ವ್ಯಕ್ತಿ ಹಾಗೇ ಕಾಲು ಚಾಚಿಕೊಂಡೇ ಕೂತಿದ್ದ. ಸಿಟ್ಟು ಬರಬಾರದಾ ರಾಜನಿಗೆ, ಬಂತು. 'ಏಯ್' ಅಂದ. ಆ ವ್ಯಕ್ತಿ ಅವನು ಕೂತಿದ್ದ ಭಂಗಿಯನ್ನು ಬದಲಾಯಿಸದೆ ತಲೆಯೆತ್ತಿ 'ಏನು?' ಅಂದ.

ರಾಜ: 'ನಾನ್ಯಾರು ಗೊತ್ತಾ?'

ರೈತ: 'ನಿಮ್ಮನ್ನ, ನಿಮ್ಮ ಕುದುರೆಯನ್ನ, ನಿಮ್ಮ ವೇಷಭೂಷಣಗಳನ್ನ ಎಲ್ಲಾ ನೋಡಿದರೆ ನೀವು ಈ ದೇಶದ ರಾಜ ಇರಬಹುದು.

ರಾಜ: 'ಹೌದು, ಮತ್ತೆ?'

ವ್ಯಕ್ತಿ: 'ಸರಿ, ಏನೀಗ?'

ಈಗ ರಾಜನ ಪಿತ್ಥ ಕೆರಳಿತು. 'ಅವಿವೇಕಿ, ನಾನು ನಾಡಿನ ದೊರೆ ಬಂದು ನಿಂತಿದ್ದೀನಿ, ನೀನು ಕಾಲು ಚಾಚಿಕೊಂಡೇ ಕೂತಿದ್ದೀಯ?' ಅಂತ ಅಬ್ಬರಿಸಿದ.

ಆ ವ್ಯಕ್ತಿ ಸಣ್ಣಗೆ ನಕ್ಕು ತಣ್ಣಗೆ ಹೇಳಿದ: 'ಅಷ್ಟೇನಾ? ನಾನು ಯಾರ ಮುಂದೆಯೂ ಕೈ ಚಾಚುವುದನ್ನು ಬಿಟ್ಟುಬಿಟ್ಟಿದ್ದೀನಿ. ಆದ್ದರಿಂದ ಕಾಲು ಚಾಚಿಕೊಂಡು ಕೂತಿದ್ದೀನಿ'.

ಈಗ ಈ ಕತೆ ಯಾಕೆ ನೆನಪಾಯಿತೆಂದರೆ, ನಮ್ಮ ದೇಶದಲ್ಲಿ ಈಗ ಮಹಾ ಚುನಾವಣೆ ಬಂದಿದೆ. ಚುನಾವಣೆ ಅಂದರೆ ಅದು ಪ್ರಜಾಪ್ರಭುತ್ವದ ಹಬ್ಬ ಅನ್ನುತ್ತಾರೆ. ಆದರೆ ದೇಶದ ಮಾನ್ಯ ಮತದಾರರೆಷ್ಟೋ ಮಂದಿ ಇನ್ನು ಮೇಲೆ ಕೈ ಚಾಚಿಕೊಂಡೇ ಓಡಾಡುತ್ತಾರೆ. ದುಡ್ಡಿರುವ ಧಣಿಗಳು ಅವರ ಚಾಚಿದ ಕೈಗೊಂದಿಷ್ಟು ಕಾಸೆರಚುತ್ತಾರೆ. ಮಾನ್ಯ ಮತದಾರ ಧರ್ಮಸ್ಥಳದ ಮಂಜುನಾಥನ ಮೇಲೋ, ತಿರುಪತಿ ವೆಂಕಟೇಶ್ವರನ ಮೇಲೋ, ಶಿರಡಿ ಸಾಯಿಬಾಬಾನ ಮೇಲೋ ಆಣೆ ಭಾಷೆ ಮಾಡಿ ನಿಯತ್ತುಳಿಸಿಕೊಳ್ಳುತ್ತಾನೆ. ಊರೂರಿನಲ್ಲಿ ಲಕ್ಷಾಂತರ ಜನ ಸೇರುವ ಸಭೆಗಳಾಗುತ್ತವೆ. ಅಬ್ಬರದ ಭಾಷಣ, ನಿಂದೆ, ಪ್ರತಿನಿಂದೆ, ಎಲ್ಲವೂ ನಡೆಯುತ್ತವೆ. ಆಚ್ಚರಿ ಏನು ಗೊತ್ತಾ? ಗದ್ದೆ ಕೆಲಸಕ್ಕೆ, ಗಾರೆ ಕೆಲಸಕ್ಕೆ, ಮನೆಕೆಲಸಕ್ಕೆ ಜನ ಸಿಗುವುದಿಲ್ಲ, ಆದರೆ ಈ ಭಾಷಣಗಳನ್ನು ಕೇಳುವುದಕ್ಕೆ ಅದೆಲ್ಲಿಂದ ಜನ ಸಿಗುತ್ತಾರೋ ಗೊತ್ತಿಲ್ಲ. ಅವರಲ್ಲಿ ಎಷ್ಟೋ ಕೈಗಳು ಚಪ್ಪಾಳೆ ಹೊಡೆಯುವುದು ಮಾತ್ರವಲ್ಲ, ಬರುವಾಗಲೂ ಹೋಗುವಾಗಲೂ ಚಾಚಿಕೊಂಡೇ ಇರುತ್ತವೆ. ಇದನ್ನೆಲ್ಲಾ ಮರೆತಂತೆ ಮಾಡಿ ನಮ್ಮ ಮಾಧ್ಯಮಗಳು ಜಾತಿ, ಒಳಜಾತಿ, ಮತ, ಧರ್ಮ ಅಂತ ಚರ್ಚೆ ಮಾಡುತ್ತವೆ.

ಅಂತೂ ನಾವು ಜಾತಿ ಲೆಕ್ಕಾಚಾರಗಳನ್ನು ಹಾಕಿಕೊಂಡೇ ಜಾತ್ಯತೀತ ಭಾರತವನ್ನು ಕಟ್ಟುತ್ತಿದ್ದೇವೆ...

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಮಾರ್ಚ್ 22, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ತ್ರಯೋದಶಿ ಅಹೋರಾತ್ರ ನಕ್ಷತ್ರ: ಮಘಾ ಗಂ. 28-28 ಯೋಗ: ಧೃತಿ ಗಂ. 18-35 ಕರಣ: ಕೌಲವ ಗಂ. 18-01, ಮೀನ ಮಾಸದ 08 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 2.
ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-36 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ : 11 ರಂಜಾನ್
ಅದೃಷ್ಟ ಸಂಖ್ಯೆ : 7, 1

ಮೇಷ: ಆಸೆಯಂತೆ ವಿದೇಶಿ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಲಭಿಸುವುದು. ಜೀವನದಲ್ಲಿ ಹೊಸ ಚೈತನ್ಯ ತುಂಬಿ, ಆಸಕ್ತಿ ಹೆಚ್ಚಿಸಿಕೊಳ್ಳಿ. ಅವಿವಾಹಿತರಿಗೆ ಸೂಕ್ತ ಸಂಬಂಧಗಳು ಸ್ನೇಹಿತರ ಬಳಗದಿಂದ ಒದಗಿಬರಬಹುದು.

ವೃಷಭ: ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಾಗಿ ಮನಸ್ಸಿಗೆ ನೆಮ್ಮದಿ ಉಂಟಾಗಲಿದೆ. ಸರ್ಕಾರಿ ನೌಕರರು ವರ್ಗಾವಣೆ ರದ್ದು ಮಾಡಿಸಿಕೊಳ್ಳುವಲ್ಲಿ ಸಫಲರಾಗುವಿರಿ. ಪ್ರಯಾಣ ನೀವು ಅಂದುಕೊಂಡಂತೆ ಸುಗಮವಾಗಿರುತ್ತದೆ.

ಮಿಥುನ : ಕಾರ್ಯದ ಒತ್ತಡ ತೀವ್ರವಾದ ಕಾರಣ ಶಿರೋವೇದನೆ ಕಾಡಲಿದೆ. ಬಂಧುಗಳ ಸಹಾಯವನ್ನು ನಯವಾಗಿ ನಿಷ್ಠೂರಗಳಿಲ್ಲದೇ ನಿರಾಕರಿಸುವ ಮಾರ್ಗ ಅತ್ಯಂತ ಶುಭಪ್ರದವಾದದ್ದು. ಗುರು ಹಿರಿಯರ ಆಶೀರ್ವಾದ ಪಡೆಯಿರಿ.

ಕರ್ಕಾಟಕ: ಈ ದಿನದ ಕಹಿ ಘಟನೆಗಳಿಗೆ ಹೆಚ್ಚು ಪ್ರಾಶಸ್ತ ಕೊಡುವ ಅವಶ್ಯಕತೆಯಿಲ್ಲ. ಅಂಥ ಘಟನೆಗಳನ್ನು ನಿರ್ಲಕ್ಷಿಸಬಹುದು. ಮೇಲಧಿಕಾರಿಗಳ ಮೆಚ್ಚುಗೆ ಪಡೆಯಲು ಕೆಲವು ತಂತ್ರಗಾರಿಕೆಯನ್ನು ನಡೆಸಬೇಕಾಗುತ್ತದೆ.

ಸಿಂಹ: ವಾಣಿಜ್ಯ ಇಲಾಖೆಯ ಅಧಿಕಾರಿಗಳಿಗೆ ಇಂದು ಸರ್ಕಾರದಿಂದ ಅನುಕೂಲ ಉಂಟಾಗುವುದು. ಉನ್ನತ ಹುದ್ದೆಯಿಂದ ಮನಸ್ಸಿಗೆ ಖುಷಿ ಇದ್ದರೂ ಕೆಲಸದ ಒತ್ತಡದಿಂದ ಕೆಲವು ಆರೋಗ್ಯ ಸಮಸ್ಯೆಗಳು ಕಾಣಿಸಬಹುದು.

ಕನ್ಯಾ: ರಾಜಕೀಯ ವ್ಯಕ್ತಿಗಳಿಗೆ ಇದ್ದಕ್ಕಿದ್ದಂತೆ ಜನಪ್ರಿಯತೆ ಉತ್ತುಂಗಕ್ಕೆ ಏರಬಹುದು. ಇದನ್ನು ನಂಬುವುದು ಕಷ್ಟವಾಗುವುದು. ಅಗೌರವಿಸಿದ ಸಂಬಂಧಿಕರ ಎದುರು ತಲೆ ಎತ್ತಿನಿಲ್ಲುವಂತಾಗುತ್ತದೆ.

ತುಲಾ: ಅನೇಕ ಸಾಮಾಜಿಕ ಚಟುವಟಿಕೆಗಳಲ್ಲಿ ಇಂದಿನ ಕೊಡುಗೆಯಿಂದ ಎಲ್ಲರ ಪ್ರಶಂಸೆಗೆ ಪಾತ್ರರಾಗುತ್ತೀರಿ. ವಿಚಾರ ಸಂಕಿರಣ ಒಂದರಲ್ಲಿ ಭಾಗವಹಿಸುವ ಸಲುವಾಗಿ ನಿಮಗೆ ಆಮಂತ್ರಣ ಸಿಗಲಿದೆ.

ವೃಶ್ಚಿಕ: ನೇರ ನುಡಿಯ ಸ್ವಭಾವದಿಂದಾಗಿ ಸಹೋದ್ಯೋಗಿಗಳಲ್ಲಿ ಮನಸ್ತಾಪ ಉಂಟಾಗಬಹುದು. ವಿದ್ಯಾರ್ಥಿಗಳ ಮನೋಕಾಮನೆ ಇಂದು ಪೂರ್ಣಗೊಳ್ಳಲಿದೆ. ಮುಂದಿನ ಕಾರ್ಯ ಯೋಜನೆಗಳಿಗೆ ಸ್ಪಷ್ಟ ರೂಪ ಕೊಡುವಿರಿ.

ಧನು: ಎಲ್ಲ ವಿಷಯಗಳನ್ನು ಮುಕ್ತವಾಗಿ ಚರ್ಚಿಸಬೇಕೆಂಬ ಮನಸ್ಸಾಗುವುದು ಅದರಂತೆ ಚರ್ಚಿಸಲು ಸಿದ್ಧರಾಗುವಿರಿ. ಮಕ್ಕಳೊಂದಿಗೆ ವಿದೇಶಕ್ಕೆ ಪ್ರಯಾಣ ಮಾಡುವ ಸಂದರ್ಭ ಬರಲಿದೆ.

ಮಕರ: ವೈದ್ಯರ ಸಲಹೆಯಂತೆ ವ್ಯಾಯಾಮ ಮತ್ತು ಯೋಗಾಭ್ಯಾಸವನ್ನು ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿ. ವರಮಾನದಲ್ಲಿ ಯಾವುದೇ ರೀತಿಯ ಕೊರತೆ ಇರುವುದಿಲ್ಲ.

ಕುಂಭ: ಮುಕ್ತ ಮನೋಭಾವ ನೀವಾಡುವ ಮಾತುಗಳಿಂದ ಬಹಿರಂಗಗೊಳ್ಳಲಿದೆ. ಪ್ರಮೋಷನ್ ಅವಕಾಶವನ್ನು ಕೈತಪ್ಪದಂತೆ ನೋಡಿಕೊಳ್ಳಿ. ಹೊಸ ಮನೆ ನಿರ್ಮಾಣಕ್ಕಾಗಿ ತಯಾರಿ ನಡೆಸಬಹುದು.


ಮೀನ : ಎಲ್ಲಾ ಬೆಳವಣಿಗೆಯಲ್ಲಿ ನಾಯಕತ್ವ ವಹಿಸುವುದರಿಂದ ಕೆಟ್ಟ ಜನಗಳ ದೃಷ್ಟಿದೋಷಕ್ಕೆ ಗುರಿಯಾಗಲಿದ್ದೀರಿ. ಅಧಿಕ ಪರಿಶ್ರಮದಿಂದ ಬಹು ದಿನಗಳ ಕನಸು ನನಸಾಗುತ್ತದೆ. ಕಂಕಣ ಬಲದ ಸಾಧ್ಯತೆ ಇರುವುದು.

ಪದಬಂಧ 5628

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊನೆಗೆ ಭಾರವಿರುವ ಅಡಿಪಾಯ! (4)
3.ಉತ್ತಮ ಕುಲದಲ್ಲಿ ಹುಟ್ಟಿದವನು (4)
5.ಆದಿಯಿಲ್ಲದುದು (3)
7.ಹಾಡಿನ ಪುನರಾವರ್ತನೆಗೊಳ್ಳುವ ಸಾಲು (3)
9.ಕರುವಿಗೆ ತೋರಿದ ದಯೆ (3)
10.ಜಗತ್ತಿನ ಒಳಿತಿದು (5)
11.ಮಲಗುವಾಗ ಬಂದಿರುವ ಸೇವಕ (3)
12.ಇನ್ನೂ ಕರು ಹಾಕದ ಹಸು (3)
14.ಮೆದೆ ಅಥವಾ ಒಟ್ಟಿಲು (3)
16.ತಂಪಾದ ಗಾಳಿ (4)
17.ಒಪ್ಪವಾಗಿ ಬಳಿಯುವುದು (4)

ಮೇಲಿಂದ ಕೆಳಕ್ಕೆ
1.ಸಾಮಾನ್ಯವಾಗಿ ದೊರಕದೆ ವಿರಳವಾಗಿರುವಂಥದ್ದು (4)
2.ಗಣಿತದಲ್ಲಿ ಭಾಗಿಸಲ್ಪಡುವ ಸಂಖ್ಯೆ (2)
4.ಶಿರ ಮೇಲೆತ್ತಿರುವ ಧೂರ್ತ! (4)
6.ಹೆಸರಿಡುವ ಶಾಸ್ತ್ರವಿದು (5)
8.ವಿರುದ್ಧವಾದುದನ್ನು ಹೀಗೆನ್ನಿ (3)
9.ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
11.ಒಳ್ಳೆಯದನ್ನ ಗ್ರಹಿಸುವವನು (4)
13.ಚಾರನಿಗೆ ಕಾಣಿಸಿದ ಕಾಮನಬಿಲ್ಲು (4)
15.ತಲೆಗೆ ಹತ್ತುವ ಕ್ರಿಮಿ (2)



5627ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಕ್ಷಿಕ 3.ಸರ್ವಜ್ಞ
4.ಗಡಾರಿ 5.ಅಳು
6.ಕರಗ 8.ವಿಷಾದ
9.ಮಾತುಲ 11.ನಗರ
14.ದಿಟ 15.ಹಮಾಲ
16.ಬಿಕ್ಕಲು 17.ನಜರು

ಮೇಲಿಂದ ಕೆಳಕ್ಕೆ:
2.ಕರುಳು 3.ಸರಿಕ
4.ಗಟಾರ 5.ಅಡವಿ
6.ಕದನ 7.ಗಮಾರ 10.ಲಲಾಟ
12.ಗದ್ದಲ 13.ಮಹಲು
14.ದಿವಾನ

ಸುಡೊಕು 6013

		6		4		3		5
	3		5					
	9	2		3		7		1
2	1		9		3	6		
				1			5	3
3	8			5			7	
9		8						7
				9			3	
4		3			1	2		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6012 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

ಮೇಕೆದಾಟು

ಮತ ರಾಜಕೀಯದ ಘಾಟು!

ತಮಿಳುನಾಡಿನ ಡಿಎಂಕೆ ಪಕ್ಷವು ಲೋಕಸಭೆ ಚುನಾವಣೆಗೆ ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ್ದು, 'ಇಂಡಿಯಾ' ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಮೇಕೆದಾಟು ಯೋಜನೆಯನ್ನು ತಡೆಯುವುದಾಗಿ ಭರವಸೆ ನೀಡಿದೆ. ಡಿಎಂಕೆಯ ಈ ಭರವಸೆಗೆ ರಾಜ್ಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಮೈತ್ರಿ ಮುಖ್ಯವೋ, ರಾಜ್ಯದ ಹಿತ ಮುಖ್ಯವೋ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ, ಕಾಂಗ್ರೆಸ್ ಪಕ್ಷವನ್ನು ಕೆಣಕಿದರೆ, 'ನಾನು ಜಲಸಂಪನ್ಮೂಲ ಖಾತೆ ವಹಿಸಿಕೊಂಡಿದ್ದೇ ಮೇಕೆದಾಟು ಅಣೆಕಟ್ಟು ಕಟ್ಟಲು. ಯಾರ ವಿರೋಧಕ್ಕೂ ಬಗ್ಗುವುದಿಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತ್ಯುತ್ತರ ನೀಡಿದ್ದಾರೆ

'ಡಿಎಂಕೆ ಕಚೇರಿ ಮುಂದೆ ಧರಣಿ ಮಾಡಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೇಕೆದಾಟು ಯೋಜನೆ ಜಾರಿಯನ್ನು ತಡೆಯುವುದಾಗಿ ತಮಿಳುನಾಡಿನ ಆಡಳಿತ ಪಕ್ಷ ಡಿಎಂಕೆ ತನ್ನ ಪ್ರಣಾಳಿಕೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ನಿಲುವು ಬಹಿರಂಗಪಡಿಸಬೇಕು. ಮೈತ್ರಿ ಮುಖ್ಯವೋ ಅಥವಾ ರಾಜ್ಯದ ಹಿತ ಮುಖ್ಯವೋ ಎಂಬುದನ್ನು ತಿಳಿಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಮೇಕೆದಾಟು ಯೋಜನೆಗೆ ತಮಿಳುನಾಡಿನ ಅಪ್ಪಣೆ ಪಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಮ್ಮ ಪಕ್ಷದ 135 ಶಾಸಕರೊಂದಿಗೆ ಚೆನ್ನೈನ ಡಿಎಂಕೆ ಕಚೇರಿ ಮುಂದೆ 'ನಮ್ಮ ನೀರು ನಮ್ಮ ಹಕ್ಕು' ಘೋಷಣೆಯೊಂದಿಗೆ ಹೋರಾಟ ಮಾಡಲಿ' ಎಂದು ವ್ಯಂಗ್ಯವಾಡಿದರು.

'ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರು ಕೋವಿಡ್ ಸಮಯದಲ್ಲಿ ಮೇಕೆದಾಟು ಯೋಜನೆಗಾಗಿ 'ನಮ್ಮ ನೀರು ನಮ್ಮ ಹಕ್ಕು' ಹೆಸರಿನಲ್ಲಿ ಪಾದಯಾತ್ರೆ ಮಾಡಿದ್ದರು. ಆದರೆ, ಇವರ ಮೈತ್ರಿಕೂಟದ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ತಮ್ಮ ಪ್ರಣಾಳಿಕೆಯಲ್ಲಿ ಮೇಕೆದಾಟು ಯೋಜನೆ ಜಾರಿಯಾಗಲು ಬಿಡುವುದಿಲ್ಲ ಎಂದು ಘೋಷಿಸಿದ್ದಾರೆ. ಅಂದು ಡಿ.ಕೆ.ಶಿವಕುಮಾರ್ ಅವರು ಮೇಕೆದಾಟುವಿನಲ್ಲಿ ಸ್ನಾನ ಮಾಡಿದ್ದರು. ಆದರೆ ಈಗ ಸ್ನಾನಕ್ಕಲ್ಲ, ಮುಖ ತೊಳೆಯುವುದಕ್ಕೂ ನೀರಿಲ್ಲ' ಎಂದು ಹೇಳಿದರು.


'ಬೆಂಗಳೂರಿನ ಜನರು ಕುಡಿಯಲು ನೀರಿಲ್ಲದೆ ವಲಸೆ ಹೋಗುತ್ತಿದ್ದಾರೆ. ಇಂತಹ ಸ್ಥಿತಿಯನ್ನು ಈವರೆಗೆ ನಾನಂತೂ ನೋಡಿಲ್ಲ. ಕರ್ನಾಟಕ ಕಾಂಗ್ರೆಸ್‌ಗೆ 'ಇಂಡಿಯಾ' ಒಕ್ಕೂಟ ಮುಖ್ಯವೋ, ರಾಜ್ಯದ ಹಿತ ಮುಖ್ಯವೋ ಎಂಬುದನ್ನು ಈ ಮೂಲಕ ಸಾಬೀತುಪಡಿಸಬೇಕು. ಮೇಕೆದಾಟು ಬಗ್ಗೆ ನಿಜವಾದ ಕಾಳಜಿ ಇದ್ದರೆ ಮಾತನಾಡಿ' ಎಂದು ಅಶೋಕ ಸವಾಲು ಹಾಕಿದರು.


'ಡಿ.ಕೆ.ಶಿವಕುಮಾರ್ ಪಾದಯಾತ್ರೆ ವೇಳೆ ಮೇಕೆದಾಟುವಿನಲ್ಲಿ ತರ್ಪಣ ಬಿಟ್ಟಿದ್ದರು. ಈ ಮೂಲಕ ರಾಜ್ಯದ ಜನರಿಗೆ ಅನ್ಯಾಯದ ತರ್ಪಣ ನೀಡಿದ್ದಾರೆ. ಕಾಂಗ್ರೆಸ್‌ಗೆ ಧೈರ್ಯವಿದ್ದರೆ ಡಿಎಂಕೆ ಪ್ರಣಾಳಿಕೆಯಿಂದ ಮೇಕೆದಾಟಿನ ಅಂಶವನ್ನು ತೆಗೆದುಹಾಕಿಸಲು ಪ್ರಯತ್ನ ಮಾಡಲಿ. ಅಲ್ಲಿಯವರೆಗೆ ಕೇಂದ್ರ ಸರ್ಕಾರದ ಬಗ್ಗೆ ಆರೋಪ ಮಾಡುವ ನೈತಿಕತೆ ಕಾಂಗ್ರೆಸ್ ನಾಯಕರಿಗೆ ಇಲ್ಲ' ಎಂದೂ ತಿಳಿಸಿದರು.

'ಹಿಂದೆ ಮಹದಾಯಿ ನದಿ ನೀರಿನ ವಿವಾದದ ಸಂಬಂಧ ಗೋವಾದಲ್ಲಿ ಸೋನಿಯಾ ಗಾಂಧಿಯವರು ಒಂದು ಹನಿ ನೀರನ್ನೂ ಕರ್ನಾಟಕಕ್ಕೆ ಕೊಡುವುದಿಲ್ಲ ಎಂದು ಹೇಳಿದ್ದರು. ಈಗ ಮತ್ತೊಮ್ಮೆ ಡಿಎಂಕೆ ಮೂಲಕ ಈ ಮಾತನ್ನಾಡಿಸಿದ್ದಾರೆ' ಎಂದು ಅವರು ಹೇಳಿದರು.

'ರಾಜ್ಯದಲ್ಲಿ ದುರ್ಬಲ ಸಿಎಂ ಇರುವುದರಿಂದಲೇ ಸರ್ಕಾರವೂ ದುರ್ಬಲವಾಗಿದೆ. ಈ ದೌರ್ಬಲ್ಯವನ್ನು ಉಪಯೋಗಿಸಿ ಇಂಡಿಯಾ ಒಕ್ಕೂಟದ ಮುಖ್ಯಪಾಲುದಾರ ಪಕ್ಷ ಡಿಎಂಕೆ ತನ್ನ ಪ್ರಣಾಳಿಕೆಯ ಮೂಲಕ ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದು ಹೇಳಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

> **ಡಿಎಂಕೆ ಪ್ರಣಾಳಿಕೆ ಕುರಿತು ಕರ್ನಾಟಕ ಸರ್ಕಾರ, ಕಾಂಗ್ರೆಸ್ ಪಕ್ಷ ತುಟಿ ಬಿಚ್ಚದೇ ಮೌನವಹಿಸಿದೆ. ಇದು ಸಮ್ಮತಿಯ ಸೂಚನೆಯೇ**
>
> **ಅಶ್ವತ್ಥನಾರಾಯಣಗೌಡ,** ವಕ್ತಾರ, ಬಿಜೆಪಿ


ಆರ್.ಅಶೋಕ


ಮೇಕೆದಾಟು ಪ್ರದೇಶದಲ್ಲಿ ಹರಿಯುತ್ತಿರುವ ಕಾವೇರಿ (ಸಂಗ್ರಹ ಚಿತ್ರ)


'ಅಣೆಕಟ್ಟು ಕಟ್ಟಲೆಂದೇ ಜಲಸಂಪನ್ಮೂಲ ಇಲಾಖೆ ವಹಿಸಿಕೊಂಡಿದ್ದೇನೆ'

ಪ್ರಜಾವಾಣಿ ವಾರ್ತೆ

'ತಮಿಳುನಾಡು ಏನಾದರೂ ಮಾಡಿಕೊಳ್ಳಲಿ. ಮೇಕೆದಾಟು ಅಣೆಕಟ್ಟು ಕಟ್ಟಲೆಂದೇ ನಾನು ಜಲಸಂಪನ್ಮೂಲ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಡಿಎಂಕೆ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಮೇಕೆದಾಟು ಅಣೆಕಟ್ಟು ಕಟ್ಟಲು ಬಿಡುವುದಿಲ್ಲ ಎಂದು ಹೇಳಿರುವ ಬಗ್ಗೆ ಸುದ್ದಿಗಾರರಿಗೆ ಗುರುವಾರ ಪ್ರತಿಕ್ರಿಯಿಸಿದ ಅವರು, 'ಅವರ ಹೋರಾಟ ಅವರು ಮಾಡಲಿ. ಕಾವೇರಿ ನೀರು ನಿರ್ವಹಣಾ ಸಮಿತಿಗೆ ನೀರಿನ ಸಮಸ್ಯೆಯ ಅರಿವಿದೆ. ಅವರು ನಮಗೆ ನ್ಯಾಯ ಕೊಡಲೇಬೇಕು' ಎಂದರು.

'ಮೇಕೆದಾಟು ವಿಚಾರದಲ್ಲಿ ಕೋರ್ಟ್‌ನಲ್ಲೂ ನಮಗೆ ನ್ಯಾಯ ಸಿಗುತ್ತದೆ. ಡಿಎಂಕೆ ಪ್ರಣಾಳಿಕೆ 'ಇಂಡಿಯಾ' ಮೈತ್ರಿಕೂಟದ ಪ್ರಣಾಳಿಕೆಯಲ್ಲ. ಅದು ಅವರ ಪಕ್ಷದ ಪ್ರಣಾಳಿಕೆ. ಅದು ಅವರ ರಾಜಕೀಯ ಬಯಕೆ ಅಷ್ಟೇ' ಎಂದರು. ಮೇಕೆದಾಟು ಯೋಜನೆ ಕರ್ನಾಟಕಕ್ಕೆ ಮಾತ್ರವಲ್ಲ. ಎರಡೂ ರಾಜ್ಯಗಳಿಗೆ ಉಪಯೋಗವಾಗುತ್ತದೆ. ಇಡೀ ದೇಶದ ಜನರು ಕರ್ನಾಟಕದಲ್ಲಿ ಇದ್ದಾರೆ. ಈ ಯೋಜನೆಯಿಂದ ಇಡೀ ದೇಶದ ಜನರಿಗೆ ಉಪಯೋಗವಾಗುತ್ತದೆ. ನಮ್ಮ ಸಹೋದರರು ಬೆಂಗಳೂರಿನಲ್ಲೂ ಇದ್ದಾರೆ. ಅವರಿಗೂ ಒಳ್ಳೆಯದು ಆಗಲಿ ಎಂದು ಮೇಕೆದಾಟು ಯೋಜನೆಯ ಪರವಾಗಿ ತಮಿಳುನಾಡು ಮಾತನಾಡುವ ಒಳ್ಳೆಯ ಕಾಲ ಬರಲಿದೆ' ಎಂದರು.


ಡಿ.ಕೆ. ಶಿವಕುಮಾರ್

ಯೋಜನೆ ಸ್ಥಗಿತ: ಡಿಎಂಕೆ ಭರವಸೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಚೆನ್ನೈ: ಕರ್ನಾಟಕದ ಮಹತ್ವಕಾಂಕ್ಷೆಯ, ಅದರಲ್ಲೂ ಬೆಂಗಳೂರಿನ ಕುಡಿಯುವ ನೀರಿನ ಬವಣೆ ನೀಗಿಸುವ ಉದ್ದೇಶದ ಮೇಕೆದಾಟು ಅಣೆಕಟ್ಟು ನಿರ್ಮಾಣ ಯೋಜನೆಯನ್ನು ಸ್ಥಗಿತಗೊಳಿಸುವುದಾಗಿ 'ಇಂಡಿಯಾ' ಮೈತ್ರಿಕೂಟದ ಡಿಎಂಕೆ ಪಕ್ಷವು ಲೋಕಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದೆ.

ಮಂಡ್ಯ ಜಿಲ್ಲೆಯಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಕೃಷ್ಣರಾಜಸಾಗರ (ಕೆಆರ್‌ಎಸ್) ಅಣೆಕಟ್ಟಿಗೆ ಪರ್ಯಾಯವಾಗಿ ಮತ್ತೊಂದು ಅಣೆಕಟ್ಟು ನಿರ್ಮಾಣದ ಪ್ರಸ್ತಾಪ ದಶಕಗಳ ಹಿಂದಿನದು. ಕನಕಪುರ ತಾಲ್ಲೂಕಿನ ಮೇಕೆದಾಟುವಿನಲ್ಲಿ ಅಣೆಕಟ್ಟು ನಿರ್ಮಿಸಲು ಕರ್ನಾಟಕ ಸಜ್ಜಾಗಿದೆ. ಕೇಂದ್ರ ಜಲ ಆಯೋಗಕ್ಕೆ ರಾಜ್ಯ ಸರ್ಕಾರ ಸಲ್ಲಿಸಿರುವ ವರದಿಯಂತೆ ಮೇಕೆದಾಟು ಅಣೆಕಟ್ಟು ನಿರ್ಮಾಣಕ್ಕೆ ಸುಮಾರು ₹5,900 ಕೋಟಿಗೂ ಹೆಚ್ಚು ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಇದರಿಂದ ಸುಮಾರು 66 ಟಿಎಂಸಿ ಅಡಿ ನೀರು ಸಂಗ್ರಹಿಸುವ ಗುರಿ ಇದೆ.

ಮೇಕೆದಾಟು ಯೋಜನೆಯ ಅನುಷ್ಠಾನಕ್ಕೆ ಆಗ್ರಹಿಸಿ ಕಾಂಗ್ರೆಸ್ ಪಾದಯಾತ್ರೆ ಕೂಡ ನಡೆಸಿತ್ತು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದರೆ ಯೋಜನೆಯನ್ನು ತ್ವರಿತಗತಿಯಲ್ಲಿ ಅನುಷ್ಠಾನ ಮಾಡುವುದಾಗಿಯೂ ಪಕ್ಷದ ನಾಯಕರು ವಾಗ್ದಾನ ಮಾಡಿದ್ದರು. 2022–23ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಈ ಯೋಜನೆ ಅನುಷ್ಠಾನಕ್ಕೆ ₹1,000 ಕೋಟಿ ಅನುದಾನ ಮೀಸಲಿಡಲಾಗಿತ್ತು. ಕೇಂದ್ರದ ಅನುಮತಿ ಸಿಗದೆ ಯೋಜನೆ ನನೆಗುದಿಗೆ ಬಿದ್ದಿದೆ.

ಸ್ಟಾಲಿನ್ ನಡೆಗೆ ಎಎಪಿ ಖಂಡನೆ

ಇಂಡಿಯಾ ಒಕ್ಕೂಟದ ಮಿತ್ರಪಕ್ಷ ಡಿಎಂಕೆ ರಾಜ್ಯದ ಆಶಯಕ್ಕೆ ವಿರುದ್ಧವಾಗಿ ಮೇಕೆದಾಟು ಯೋಜನೆಗೆ ತೊಡಕು ಮಾಡುತ್ತಿರುವುದು ದುರದೃಷ್ಟಕರ ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಹೇಳಿದ್ದಾರೆ. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಿಂದ ಇಂತಹ ನಡೆ ನಿರೀಕ್ಷಿಸಿರಲಿಲ್ಲ. ಮೇಕೆದಾಟು ಪ್ರಯೋಜನಗಳ ಕುರಿತು 'ಇಂಡಿಯಾ' ಮೈತ್ರಿಕೂಟದ ಮಿತ್ರ ಪಕ್ಷವಾಗಿರುವ ಡಿಎಂಕೆಗೆ ಕಾಂಗ್ರೆಸ್ ಮನವರಿಕೆ ಮಾಡಿಕೊಡಬೇಕು ಎಂದೂ ಅವರು ಸಲಹೆ ನೀಡಿದ್ದಾರೆ.


'ಮುಖ್ಯಮಂತ್ರಿ' ಚಂದ್ರು

ಗುಸುಗುಸು

ಟಿಕೆಟ್ ಕನಸು...ಶೆಟ್ಟರ್ ಬೆವರು!

ಮೂಲ ಬಿಜೆಪಿಯಾದರೂ ಈ ನಡುವೆ ಕಾಂಗ್ರೆಸ್ ಗೃಹಪ್ರವೇಶಿಸಿ ಮರಳಿ ಬಂದ ಕಾರಣಕ್ಕೋ ಏನೋ ಒಂದರ್ಥದಲ್ಲಿ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಸ್ಥಳೀಯ ಬಿಜೆಪಿಗೆ ಈಗಲೂ ರಾಜಕೀಯ ಅಸ್ಪೃಶ್ಯರಾಗಿದ್ದಾರೆ. ಹುಬ್ಬಳ್ಳಿಯ ಮಧುರಾ ಕಾಲೊನಿಯಲ್ಲಿ ಇರುವ ಮನೆ ಬಿಜೆಪಿ ಕಾರ್ಯಕರ್ತರ ಮಧುರ ತಾಣವಾಗಿ ಉಳಿದಿಲ್ಲ.

ಧಾರವಾಡ ತಪ್ಪಿತು, ಹಾವೇರಿಗೂ ಸಿಗಲಿಲ್ಲ...ಇನ್ನೂ ಬೆಳಗಾವಿ ಕಡೆಗಾದರೂ ಹೋಗೋಣ... ಅಲ್ಲಿ ನಮ್ಮದೇ ನೆಂಟಸ್ತಿಕೆ ಇದೆ... ಎಂದು ಶೆಟ್ಟರ್ ಮನಸ್ಸು ಮಾಡಿದರೆ, ಅಲ್ಲಿನ ಸ್ಥಳೀಯ ನಾಯಕರ ವಿರೋಧ. ಪಂಚಮಸಾಲಿಗಳಿಂದ ಸಿಗದ ಬೆಂಬಲದಿಂದ ಬೆಳಗಾವಿ ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಶೆಟ್ಟರ್ ದಿಗಿಲು ಹೆಚ್ಚುತ್ತಿದೆ. 'ಬಿಜೆಪಿ ಹೈಕಮಾಂಡ್ ಕೃಪಾಕಟಾಕ್ಷ ಬೀರಿ ಟಿಕೆಟ್ ಘೋಷಿಸದೇ, ಶೆಟ್ಟರ್ ದಿಗಿಲುಗೊಂಡು ಬಿರುಬಿಸಿಲಲ್ಲಿ ಅವರ ಹಣೆ ಮೇಲೆ ಬೆವರು ಹೆಚ್ಚಿಸಿದೆ' ಎಂಬ ಗುಸುಗುಸು ಮಧುರಾ ಕಾಲೊನಿ ದಾಟಿ ಮೂರು ಕ್ಷೇತ್ರ ಸುತ್ತುತ್ತಿದೆ.




ಈ ಮೊದಲು ಧಾರವಾಡ ಕ್ಷೇತ್ರಕ್ಕೆ ಶೆಟ್ಟರ್ ಟಿಕೆಟ್ ಪಕ್ಕಾ ಎನ್ನುವಂತಾಗಿತ್ತು, ತದನಂತರ ಹಾವೇರಿಗೆ ಅಂದರು. ಇವರೆಡೂ ಕ್ಷೇತ್ರಗಳಿಗೆ ಜೋಶಿ, ಬೊಮ್ಮಾಯಿ ಫಿಕ್ಸ್ ಆದ ನಂತರ ಬೆಳಗಾವಿಗೆ ಶೆಟ್ಟರ್‌ಗೆ ಟಿಕೆಟ್ ಎಂಬ ಮಾತು ಹರಿದಾಡಿತು.

ಆದರೆ ಅಲ್ಲಿಂದ ಶೆಟ್ಟರ್‌ಗೆ ಸ್ವಾಗತ ಸಿಗಲೇ ಇಲ್ಲ. 'ಶೆಟ್ಟರ್ ಗೋ ಬ್ಯಾಕ್' ಅಂತ ಬೆಳಗಾವಿಯಲ್ಲಿ ಬಿಜೆಪಿ ಟಿಕೆಟ್ ಆಕಾಂಕ್ಷಿ ಬೆಂಬಲಿಗರಿಂದ ಸಾಮಾಜಿಕ ಜಾಲತಾಣದಲ್ಲಿ ಅಭಿಯಾನ ನಡೀತು. ಜತೆಗೆ ಅಲ್ಲಿನ ಬಿಜೆಪಿ ಮುಖಂಡರೆಲ್ಲ ಈಚೆಗೆ ಸಭೆ ಸೇರಿ ಹೊರಗಿನಿಂದ ಅಭ್ಯರ್ಥಿಗಳನ್ನು ತಂದು ನಿಲ್ಲಿಸುವಷ್ಟು ನಮ್ಮಲ್ಲಿ ಮುಖಂಡರ ಬರ ಇದೆಯೇ ಎಂದು ಅಸಮಾಧಾನ ವ್ಯಕ್ತಪಡಿಸಿದ್ದೂ ಆಯಿತು.

'ಜೋಶಿ,ಬೊಮ್ಮಾಯಿ ಸೇರಿ ಯಾವ ಬಿಜೆಪಿ ಮುಖಂಡರೂ ನನಗೆ ಟಿಕೆಟ್ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದೇನೂ ಅನ್ನಿಸಲ್ಲ...ನನಗೆ ಟಿಕೆಟ್ ತಪ್ಪಿಸಲು ಕುತಂತ್ರ, ಷಡ್ಯಂತ್ರ ನಡೆದಿದೆ ಎಂದು ನಾನು ಒಪ್ಪಲ್ಲ' ಎನ್ನುತ್ತ ಒಳಗೊಳಗೇ ಟಿಕೆಟ್ ಎಲ್ಲಿ ಎಂದು ಅಲವತ್ತುಕೊಳ್ಳುತ್ತಿದ್ದಾರೆ ಶೆಟ್ಟರ್. ಅವರಿಗೆ ಎಲ್ಲಿ ಒಂದೆಡೆ ಗಟ್ಟಿಯಾಗಿ ನಿಲ್ಲುವುದು ಎಂಬ ಚಿಂತೆ ಶುರುವಾಗೈತಿ ಅಂತ ಬಯಲುಸೀಮೆ ಬಿರು ಬಿಸಿಲಿನ್ಯಾಗ ಹುಚ್ಚಾಪಟ್ಟೆ ಮಂದಿ ಬೆವರು ಒರೆಸ್ಕೋಂತ ಮಾತಾಡೋಹಂಗಾಗೈತಿ.

ಮದ್ಯಮಾಲೀಕರ ಸಭೆಯಲ್ಲಿ 'ಸಂಧಾನ' ಭಗ್ನ

ಮುನಿಸಿಕೊಂಡ ಬಿಜೆಪಿಯ ಮಾಜಿ ಶಾಸಕ ನೆಹರು ಓಲೇಕಾರ ಅವರೊಂದಿಗೆ ಮದ್ಯ ಮಾಲೀಕರ ಸಭೆಯಲ್ಲಿ 'ಚಿಯರ್ಸ್' ಹೇಳಲು ಮಾಜಿ ಮುಖ್ಯಮಂತ್ರಿ ಹಾಗೂ ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಮುಂದಾಗಿದ್ದರು. ಕೆಲ ಬಿಜೆಪಿ ಮುಖಂಡರು ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ 'ಸಂಧಾನದ' ಕನಸು ಭಗ್ನಗೊಂಡಿತು ಎಂಬುದು ಹಾವೇರಿಯಲ್ಲಿ ಹರಿದಾಡುತ್ತಿರುವ ಗುಸುಗುಸು.



ಹಾವೇರಿಯಲ್ಲಿರುವ ನೆಹರು ಓಲೇಕಾರ ಅವರ ಮನೆಯ ಕೂಗಳತೆ ದೂರದಲ್ಲೇ ಮದ್ಯ ಮಾರಾಟಗಾರರ ಸಂಘದ ಪದಾಧಿಕಾರಿಗಳ ಜೊತೆ ಬಸವರಾಜ ಬೊಮ್ಮಾಯಿ ಗುರುವಾರ ಸಭೆ ನಡೆಸಿದರು. ಇದೆ ಸಭೆಯಲ್ಲೇ ಬೊಮ್ಮಾಯಿ ಮತ್ತು ಓಲೇಕಾರ ಅವರನ್ನು ಒಂದಾಗಿಸಲು ಸ್ಥಳೀಯ ಮುಖಂಡರೊಬ್ಬರು ಭಾರಿ ಯೋಜನೆ ರೂಪಿಸಿದ್ದರು. 'ಇದಕ್ಕೆ ಸುತಾರಾಂ ನಮ್ಮ ಒಪ್ಪಿಗೆ ಇಲ್ಲ' ಎಂದು ಖಡಕ್ ಆಗಿ ಹೇಳಿದ ಮಾಜಿ ಶಾಸಕರಿಬ್ಬರು ಮತ್ತು ಇತರ ಮುಖಂಡರು, 'ಬೊಮ್ಮಾಯಿಯವರನ್ನು ಓಲೇಕಾರ ಅವರು ಬಾಯಿಗೆ ಬಂದಂತೆ ಬಯ್ದಾಗ ನಾವೆಲ್ಲರೂ ಉಗ್ರ ಹೋರಾಟ ಮಾಡಿದ್ದೆವು. ಈಗ ನೀವು 'ಭಾಯಿ ಭಾಯಿ' ಎಂದು ಹೊರಟರೆ ನಮ್ಮ ಗತಿಯೇನು? ನೀವು ಸಂಧಾನ ಮಾಡಿಕೊಂಡರೆ, ನಮ್ಮನ್ನು ಚುನಾವಣಾ ಪ್ರಚಾರಕ್ಕೆ ಕರೆಯಬೇಡಿ. ಇದು ಹೊರತುಪಡಿಸಿ ದೂಸ್ರಾ ಮಾತೇ ಇಲ್ಲ' ಎಂದರಂತೆ.

ಇದರಿಂದ ಬೊಮ್ಮಾಯಿ ಮದ್ಯ ಮಾಲೀಕರೊಂದಿಗೆ ಮಾತನಾಡಿ, 'ಬಂದ ದಾರಿಗೆ ಸುಂಕವಿಲ್ಲ' ಎಂದು ಹೊರಟುಬಿಟ್ಟರಂತೆ.

2023ರ ವಿಧಾನಸಭೆ ಚುನಾವಣೆಯಲ್ಲಿ ಹಾವೇರಿ ಮೀಸಲು ಕ್ಷೇತ್ರದ ಬಿಜೆಪಿ ಟಿಕೆಟ್ ಕೈತಪ್ಪಿದ್ದಕ್ಕೆ ನೆಹರು ಓಲೇಕಾರ, 'ನನ್ನ ಬೆಳವಣಿಗೆ ಸಹಿಸದೇ ಬೊಮ್ಮಾಯಿ ಟಿಕೆಟ್ ತಪ್ಪಿಸಿದ್ದಾರೆ. ಬೊಮ್ಮಾಯಿ ಸಿ.ಎಂ ಆದ ನಂತರ ರಾಜ್ಯದಲ್ಲಿ ಪಕ್ಷ ಕುಸಿಯಿತು' ಎಂದು ಆರೋಪಿಸಿದ್ದರು. ಅಂದಿನಿಂದ ಪಕ್ಷದ ಚಟುವಟಿಕೆಯತ್ತ ಅವರು ಮುಖ ಮಾಡಿಲ್ಲ.

ವಶಪಡಿಸಿಕೊಂಡ ಸ್ವತ್ತುಗಳ ವಿವರ

ಸ್ವತ್ತು	24 ಗಂಟೆಗಳ ಅವಧಿಯಲ್ಲಿ ವಶ	ಒಟ್ಟು ವಶ
ನಗದು	₹1.03 ಕೋಟಿ	₹6.88 ಕೋಟಿ
ಉಚಿತ ಉಡುಗೊರೆ	₹3.45 ಲಕ್ಷ	₹5.28 ಲಕ್ಷ
ಮದ್ಯ	₹80.18 ಲಕ್ಷ (13,667 ಲೀ)	₹22.28 ಕೋಟಿ (6.97 ಲಕ್ಷ ಲೀ)
ಮಾದಕವಸ್ತು	₹37.20 ಲಕ್ಷ (25.83 ಕೆ.ಜಿ.)	₹52.42 ಲಕ್ಷ (50.13 ಕೆ.ಜಿ.)
ಚಿನ್ನ ಮತ್ತು ಬೆಳ್ಳಿ	₹19.87 ಲಕ್ಷ (44.33 ಕೆ.ಜಿ.)	₹25.97 ಲಕ್ಷ (46.41 ಕೆ.ಜಿ.)

₹1.10 ಕೋಟಿ ಮೌಲ್ಯದ ಬಟ್ಟೆ ಶಿವಮೊಗ್ಗ ನಗರ ವಿಧಾನಸಭಾ ಕ್ಷೇತ್ರ

₹1.84 ಕೋಟಿ ಮೌಲ್ಯ 1,681 ಟಿ.ವಿಗಳ ಜಪ್ತಿ ಬೆಂಗಳೂರು ದಕ್ಷಿಣ ಕ್ಷೇತ್ರದ ಬಿಟಿಎಂ ಲೇಔಟ್

ಬಿಎಸ್‌ವೈ ವಿರುದ್ಧ ಸಿಡಿದೆದ್ದ ಡಿವಿಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಮಾಜಿ ಸಚಿವರಾದ ಕೆ.ಎಸ್. ಈಶ್ವರಪ್ಪ, ಜೆ.ಸಿ. ಮಾಧುಸ್ವಾಮಿ ತಿರುಗಿ ಬಿದ್ದ ಬೆನ್ನಲ್ಲೇ, ಸಂಸದ ಡಿ.ವಿ. ಸದಾನಂದಗೌಡ ಕೂಡ ಧ್ವನಿ ಎತ್ತಿದ್ದಾರೆ.



ಬೆಂಗಳೂರು ಉತ್ತರ ಕ್ಷೇತ್ರಕ್ಕೆ ಟಿಕೆಟ್ ಸಿಗದೇ ಮುನಿಸಿಕೊಂಡಿದ್ದ ಸದಾನಂದಗೌಡ ಅವರು ಕಳೆದ ಒಂದು ವಾರದಿಂದ ತಮ್ಮ ಮುಂದಿನ ರಾಜಕೀಯ ನಡೆ ಬಹಿರಂಗಪಡಿಸುವುದಾಗಿ ಹೇಳಿಕೊಂಡು ಬಂದಿದ್ದರು. ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, ತಮಗೆ ಕಾಂಗ್ರೆಸ್‌ನಿಂದ ಆಹ್ವಾನ ಬಂದಿದ್ದು ನಿಜ, ಆದರೆ ಕಾಂಗ್ರೆಸ್ ಸೇರುವುದಿಲ್ಲ. ಬಿಜೆಪಿಯಲ್ಲೇ ಇದ್ದು ಪಕ್ಷವನ್ನು ಶುದ್ಧೀಕರಣ ಮಾಡುವುದಾಗಿ ಹೇಳಿದರು.

'ನಮ್ಮ ರಾಜ್ಯದಲ್ಲಿ ಪಕ್ಷದ ಜವಾಬ್ದಾರಿ ವಹಿಸಿಕೊಂಡವರು ಸ್ವಾರ್ಥಿಗಳಾಗಿದ್ದಾರೆ. ತಾನು– ತನ್ನ ಮಕ್ಕಳು, ಕುಟುಂಬ, ಚೇಲಾಗಳು ಮತ್ತು ತನ್ನ ಜಾತಿಯವರಿಗೆ ಮಾತ್ರ ಪಕ್ಷವು ಸೀಮಿತ ಎಂಬಂತಾಗಿದೆ. ಪಕ್ಷ ಕುಟುಂಬ ರಾಜಕಾರಣದಿಂದ ಹೊರಬರಬೇಕು' ಎಂದು ಯಡಿಯೂರಪ್ಪ ಅವರ ಹೆಸರು ಉಲ್ಲೇಖಿಸದೇ ಗೌಡರು ಹರಿಹಾಯ್ದರು.

'ನಾನು ಚುನಾವಣಾ ಕಣದಿಂದ ದೂರ ಸರಿಯುವ ಉದ್ದೇಶ ಹೊಂದಿದ್ದೆ. ಆದರೆ, ಒಬ್ಬರು ಮಾಜಿ ಮುಖ್ಯಮಂತ್ರಿ, ಇಬ್ಬರು ಮಾಜಿ ಡಿಸಿಎಂಗಳು ಮತ್ತು ಕೆಲವು ಮಾಜಿ ಮಂತ್ರಿಗಳು ಬಂದು ಚುನಾವಣೆಯಲ್ಲಿ ನಿಲ್ಲಲೇ ಬೇಕು ಎಂದು ಹೇಳಿದರು. ಆ ಬಳಿಕ ಟಿಕೆಟ್ ಬೇರೆಯವರಿಗೆ ಘೋಷಿಸಲಾಯಿತು. ನನಗೆ ಟಿಕೆಟ್ ಸಿಗದೇ ಇರುವುದಕ್ಕೆ ನೋವಾಗಿದೆ. ನನಗೆ ಅನ್ಯಾಯ ಮಾಡಿದವರು ಮತ್ತು ನೋವುಂಟು ಮಾಡಿದವರು ಮುಂದಿನ ದಿನಗಳಲ್ಲಿ ಪಶ್ಚಾತ್ತಾಪಪಡಲಿದ್ದಾರೆ' ಎಂದರು.

'ಮೋದಿಯವರು ದೇಶವೇ ನನ್ನ ಪರಿವಾರ ಎಂದಿದ್ದಾರೆ. ಆದರೆ ರಾಜ್ಯದಲ್ಲಿ ಬಿಜೆಪಿ ಒಂದು ಕುಟುಂಬದ ಹಿಡಿತಕ್ಕೆ ಸಿಲುಕಿದೆ. ಒಂದು ಕುಟುಂಬ, ಒಂದು ಜಾತಿಯ ಪಕ್ಷ ಆಗಬಾರದು. ಇದು ಪಕ್ಷದ ಸಿದ್ಧಾಂತ ಮತ್ತು ಮೋದಿಯವರ ನಿಲುವಿಗೆ ವಿರುದ್ಧವಾದುದು. ಮೋದಿ ಮತ್ತೊಮ್ಮೆ ಪ್ರಧಾನಿ ಆಗಬೇಕು. ರಾಜ್ಯದಲ್ಲಿ ಜನ ಒಪ್ಪಿಕೊಳ್ಳುವ ಪಕ್ಷವಾಗಿ ಹೊರ ಹೊಮ್ಮಬೇಕು. ಶೇ 40 ಕಮಿಷನ್ ಆರೋಪ, ಸ್ವಜನಪಕ್ಷಪಾತ ಆರೋಪ ಬರಬಾರದು' ಎಂದು ಸದಾನಂದಗೌಡ ಹೇಳಿದರು.

'ನನಗೆ ದುಃಖವಾಗಿದೆ, ಬೇಸರವಾಗಿದೆ, ನೋವಾಗಿದೆ ಎನ್ನುವುದು ನಿಜ. ನನ್ನ ಕುರಿತ ಎಲ್ಲ ಟೀಕೆ ಟಿಪ್ಪಣಿಗಳನ್ನು ತಾಳ್ಮೆಯಿಂದ ಸಹಿಸಿದ್ದೇನೆ. ಹೀಗಾಗಿ ನೋವು ಕೊಡುವವರು ಇದ್ದೂ ಸತ್ತಂತೆ. ಟಿಕೆಟ್ ಕೈ ತಪ್ಪಿಸಿದವರು ಯಾರು ಎಂಬುದು ನನಗೂ ಗೊತ್ತು. ನಿಮಗೂ ಗೊತ್ತು' ಎಂದರು.

'ನನ್ನದು ಒಂದು ರೀತಿ ಸಿಂಗಲ್ ಮ್ಯಾನ್ ಆರ್ಮಿ ಇದ್ದಂತೆ ಎಂದುಕೊಳ್ಳಿ. ಪೂಜೆ ಮಾಡುವಾಗ ಶುದ್ಧೀಕರಣಕ್ಕೆ ನೆರವಾಗಲು ಹಲವರು ಇರಬಹುದು. ಆದರೆ, ಶುದ್ಧೀಕರಣ ಮಾಡಲು ಪುರೋಹಿತರು ಒಬ್ಬರೇ ಇರುತ್ತಾರೆ. ನಾನೂ ಸಮಾನ ಮನಸ್ಕರ ಜತೆ ಸೇರಿ ಶುದ್ಧೀಕರಣ ಕಾರ್ಯ ಮಾಡುತ್ತೇನೆ' ಎಂದು ಹೇಳಿದರು.

'ಕೈ' ಪಾಳಯದ ಹೊಸ ಮುಖಗಳು

ಸಾಗರ್ ಖಂಡ್ರೆ



ಬೀದರ್: ಪರಿಸರ, ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ ಬಿ. ಖಂಡ್ರೆಯವರ ಮಗ ಸಾಗರ್ ಅವರಿಗೆ ಈಗಷ್ಟೇ 26ರ ಹರೆಯ. ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾಲಯದಲ್ಲಿ ಬಿಬಿಎ, ಎಲ್‌ಎಲ್‌ಬಿ ಪದವಿ ಪೂರೈಸಿದ್ದಾರೆ. ಪ್ರತಿಷ್ಠಿತ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಆಗಿದ್ದಾರೆ. ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ (ಎನ್‌ಎಸ್‌ಯುಐ) ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿಯೂ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಚಿಕ್ಕ ವಯಸ್ಸಿನಲ್ಲೇ ಕಾಂಗ್ರೆಸ್ ಪಕ್ಷದಿಂದ ಬೀದರ್ ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ಅದೃಷ್ಟ ಅವರಿಗೆ ಒಲಿದು ಬಂದಿದೆ. ಅಪ್ಪನ ರಾಜಕೀಯ ಪಟ್ಟುಗಳನ್ನು ನೋಡುತ್ತಾ ಬೆಳೆದಿರುವ ಸಾಗರ್‌ಗೆ ಇದು ಮೊದಲ ಚುನಾವಣೆ.

ಸಂಯುಕ್ತಾ ಪಾಟೀಲ



ಬಾಗಲಕೋಟೆ: ಬಾಗಲಕೋಟೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾ ಪಾಟೀಲ, ರಾಜ್ಯದ ಸಕ್ಕರೆ ಸಚಿವ ಶಿವಾನಂದ ಪಾಟೀಲ ಅವರ ಪುತ್ರಿ. ವಿಜಯಪುರದ ನಿವಾಸಿ. ಕಾನೂನು ಪದವೀಧರರಾದ ಅವರು ಶಾಲಾ ಮತ್ತು ಕಾಲೇಜು ಶಿಕ್ಷಣ ಬೆಂಗಳೂರಿನಲ್ಲಿ ಪೂರೈಸಿದ್ದಾರೆ.

ಗ್ರಾಮೀಣ ಮಹಿಳಾ ಸಬಲೀಕರಣಕ್ಕೆ ಶ್ರಮಿಸುವ ಸ್ಪರ್ಶ ಫೌಂಡೇಷನ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆಗಿರುವ ಅವರು 2018ರಲ್ಲಿ ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿರ್ದೇಶಕರಾಗಿ ಅವಿರೋಧ ಆಯ್ಕೆಯಾದರು. 2019ರಿಂದ ಕೋಳಿ ಸಾಕಾಣಿಕೆ ಮತ್ತು ಮಾರುಕಟ್ಟೆ ಸಹಕಾರಿ ಸಂಘದ ಅಧ್ಯಕ್ಷರಾಗಿದ್ದಾರೆ. 2020ರಲ್ಲಿ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಡಾ.ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ: ದಂತ ವೈದ್ಯಕೀಯ ವಿಜ್ಞಾನದಲ್ಲಿ ಪದವಿ ಪೂರೈಸಿರುವ ಡಾ.ಪ್ರಭಾ ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ ಅವರ ಸೊಸೆ. ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಪತ್ನಿ. ದಂತ ವೈದ್ಯೆಯಾಗಿರುವ ಅವರು, ಎಸ್.ಎಸ್. ಕೇರ್ ಟ್ರಸ್ಟ್‌ನ ಲೈಫ್ ಟ್ರಸ್ಟಿ. ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯೆಯೂ ಹೌದು. ಎಸ್.ಎಸ್. ಕೇರ್ ಟ್ರಸ್ಟ್ ಮೂಲಕ ಆರೋಗ್ಯ ತಪಾಸಣಾ ಶಿಬಿರ ಆಯೋಜನೆ, ರಕ್ತದಾನದ ಜಾಗೃತಿ ಮಾಡಿದ್ದಾರೆ. 'ಮುಗುಳುನಗೆ' ಯೋಜನೆಯಡಿ ಶಾಲಾ ಮಕ್ಕಳಿಗೆ ದಂತ ಪರೀಕ್ಷೆ ನಡೆಸಿದ್ದಾರೆ. ಹಲವು ಮಹಿಳೆಯರಿಗೆ ಉಚಿತ ಹೆರಿಗೆ ಹಾಗೂ ಮಗುವಿನ ಆರೈಕೆ, ಉಚಿತವಾಗಿ ಕಣ್ಣಿನ ಪೊರೆ ಚಿಕಿತ್ಸೆ, ಉಚಿತವಾಗಿ ಡಯಾಲಿಸಿಸ್ ಚಿಕಿತ್ಸೆ, ಸ್ತನ ಕ್ಯಾನ್ಸರ್ ಪರೀಕ್ಷೆ, ಗರ್ಭ ಕ್ಯಾನ್ಸರ್ ಪರೀಕ್ಷೆ ನಡೆಸಿದ್ದಾರೆ.

ಜಿ. ಕುಮಾರ ನಾಯಕ



ರಾಯಚೂರು: ರಾಯಚೂರು ಎಸ್.ಟಿ. ಮೀಸಲು ಕ್ಷೇತ್ರದ ಅಭ್ಯರ್ಥಿ ಜಿ.ಕುಮಾರ ನಾಯಕ ನಿವೃತ್ತ ಐಎಎಸ್ ಅಧಿಕಾರಿ. ಬೆಂಗಳೂರಿನಲ್ಲಿ ಹುಟ್ಟಿ ಬೆಳೆದ ಅವರು ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನಿಂದ ಬಿಇ ಪದವಿ ಪಡೆದಿದ್ದಾರೆ. 1990ರ ಕೇಡರ್‌ನ ಐಎಎಸ್ ಅಧಿಕಾರಿಯಾಗಿದ್ದ ಇವರು ಸರ್ಕಾರದ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. 1999–2002ರವರೆಗೆ ರಾಯಚೂರು ಜಿಲ್ಲಾಧಿಕಾರಿಯಾಗಿದ್ದರು. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇಲಾಖೆಯ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದ ಅವರು, 2023ರ ಸೆಪ್ಟೆಂಬರ್ 31ರಂದು ಸೇವಾ ನಿವೃತ್ತಿ ಹೊಂದಿದ್ದಾರೆ. 60 ವರ್ಷ ವಯಸ್ಸಿನ ನಾಯಕ ಅವರು ಇದೇ ಮೊದಲ ಬಾರಿಗೆ ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ. ಪತ್ನಿ ಶೀಲಾ ಹಾಗೂ ಮಗಳು ಅನುಶ್ರೀ ಇದ್ದಾರೆ.

ಎಂ.ಲಕ್ಷ್ಮಣ



ಮೈಸೂರು: ಎಂ. ಲಕ್ಷ್ಮಣ ಸಿವಿಲ್ ಎಂಜಿನಿಯರಿಂಗ್ ಪದವೀಧರ. ಮಾಹಿತಿ ವಿಜ್ಞಾನದಲ್ಲಿ ಎಂ.ಟೆಕ್ ಹಾಗೂ ಘನತ್ಯಾಜ್ಯ ನಿರ್ವಹಣೆ ವಿಷಯದಲ್ಲಿ ಪಿಎಚ್‌ಡಿ ಪದವಿ ಪಡೆದಿದ್ದಾರೆ. ಕೊಯಮತ್ತೂರು ಹಾಗೂ ಬೆಂಗಳೂರಿನಲ್ಲಿ ಸಿವಿಲ್ ಎಂಜಿನಿಯರ್ ಆಗಿ ಕೆಲಸ ಮಾಡಿದ್ದಾರೆ. ಕರ್ನಾಟಕ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್‌ನ ಸಂಸ್ಥಾಪಕ ಹಾಗೂ ಅಧ್ಯಕ್ಷರಾಗಿದ್ದರು. ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್‌ಗೆ 2012 ಹಾಗೂ 2018ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋಲನುಭವಿಸಿದ್ದರು. 60 ವರ್ಷ ವಯಸ್ಸಿನ ಅವರು ಪ್ರಸ್ತುತ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ವಕ್ತಾರರೂ ಹೌದು. ಒಕ್ಕಲಿಗ ಸಮಾಜದವರು. ಹಲವು ಸಮಾಜಮುಖಿ, ಪ್ರಗತಿಪರ ಹೋರಾಟಗಳಲ್ಲಿ ಸಕ್ರಿಯ.

ಪ್ರಿಯಾಂಕಾ ಜಾರಕಿಹೊಳಿ



ಬೆಳಗಾವಿ: ಎಂಬಿಎ ಪದವೀಧರೆ ಆದ ಪ್ರಿಯಾಂಕಾ ಅವರು ಸಚಿವ ಸತೀಶ ಜಾರಕಿಹೊಳಿ ಪುತ್ರಿ. 27 ವರ್ಷ ವಯಸ್ಸಿನ ಅವರು ಅವರು ಕಳೆದ ಒಂದು ವರ್ಷದಿಂದ ರಾಜಕೀಯ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ. ಅವರ ದೊಡ್ಡಪ್ಪ ರಮೇಶ ಜಾರಕಿಹೊಳಿ, ಚಿಕ್ಕಪ್ಪ ಬಾಲಚಂದ್ರ ಜಾರಕಿಹೊಳಿ ಶಾಸಕರು. ಇನ್ನೊಬ್ಬ ಚಿಕ್ಕಪ್ಪ ಲಖನ್ ಜಾರಕಿಹೊಳಿ ವಿಧಾನ ಪರಿಷತ್ ಸದಸ್ಯರು. ಸತೀಶ್ ಶುಗರ್ಸ್, ಬೆಳಗಾಮ್ ಶುಗರ್ಸ್, ಗಡಿಗಾಂವ್ ರೆಸಾರ್ಟ್ಸ್, ವೆಸ್ಟರ್ನ್ ಘಾಟ್ಸ್ ಇನ್ಫ್ರಾ ಲಿಮಿಟೆಡ್, ನೇಚರ್ ನೆಸ್ಟ್ ಹಾರ್ಟಿಕಲ್ಚರ್ ಅಂಡ್ ಅಗ್ರಿಕಲ್ಚರ್ ಫಾರ್ಮ್ಸ್, ಎಕ್ಸಲನ್ಸ್ ಗ್ರಾನೈಟ್ಸ್ ಅಂಡ್ ಮಿನರಲ್ಸ್ ಸೇರಿ 10 ದೊಡ್ಡ ಉದ್ಯಮ ಸಂಸ್ಥೆಗಳ ನಿರ್ದೇಶಕಿ ಆಗಿದ್ದಾರೆ ಹಾಗೂ ನಾಲ್ಕು ದೊಡ್ಡ ಉದ್ಯಮ ಸಂಸ್ಥೆಗಳ ಪಾಲುದಾರಿಕೆ ಹೊಂದಿದ್ದಾರೆ.

ರಾಧಾಕೃಷ್ಣ ದೊಡ್ಡಮನಿ



ಕಲಬುರಗಿ: ಇದೇ ಮೊದಲ ಬಾರಿಗೆ ಚುನಾವಣೆ ಎದುರಿಸುತ್ತಿರುವ ರಾಧಾಕೃಷ್ಣ ದೊಡ್ಡಮನಿ ಅವರು ಕರ್ನಾಟಕ ಪೀಪಲ್ಸ್ ಎಜುಕೇಶನ್ ಸೊಸೈಟಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಸೋದರಳಿಯ ಆಗಿರುವ (ಪತ್ನಿಯ ತಮ್ಮ ಹಾಗೂ ಮಗಳ ಪತಿ) ರಾಧಾಕೃಷ್ಣ ಅವರು ಶಿಕ್ಷಣ ಸಂಸ್ಥೆಯನ್ನು ದಶಕಗಳಿಂದ ನಡೆಸಿಕೊಂಡು ಬಂದಿದ್ದಾರೆ. ಮೂಲತಃ ಚಿತ್ತಾಪುರ ತಾಲ್ಲೂಕಿನ ಗುಂಡಗುರ್ತಿ ಗ್ರಾಮದವರು. ತಮ್ಮ ಮಾವ ಮಲ್ಲಿಕಾರ್ಜುನ ಖರ್ಗೆ ಐದು ದಶಕಗಳಿಂದ ರಾಜಕಾರಣದಲ್ಲಿದ್ದರೂ ಇದುವರೆಗೂ ರಾಜಕಾರಣದಲ್ಲಿ ಗುರುತಿಸಿಕೊಂಡಿರಲಿಲ್ಲ. 63 ವಯಸ್ಸಿನವರಾದ ರಾಧಾಕೃಷ್ಣ ಬಿಎಸ್ಸಿ ಪದವೀಧರರು.

ಮೃಣಾಲ್ ಹೆಬ್ಬಾಳಕರ



ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಆರ್. ಹೆಬ್ಬಾಳಕರ ದಶಕದಿಂದ ಕಾಂಗ್ರೆಸ್ ಯುವ ಘಟಕದಲ್ಲಿ ಗುರುತಿಸಿಕೊಂಡಿದ್ದಾರೆ. ಎರಡು ಅವಧಿಗೆ ಜಿಲ್ಲಾ ಯುವ ಘಟಕದ ಉಪಾಧ್ಯಕ್ಷರಾದವರು. ಸಿವಿಲ್ ಎಂಜಿನಿಯರ್ ಆದ ಅವರಿಗೆ ಈಗ 31 ವರ್ಷ ವಯಸ್ಸು. ಅವರ ತಾಯಿ ಲಕ್ಷ್ಮಿ ಹೆಬ್ಬಾಳಕರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ, ಸೋದರಮಾವ ಚನ್ನರಾಜ ಹಟ್ಟಿಹೊಳಿ ವಿಧಾನ ಪರಿಷತ್ ಸದಸ್ಯ. ಮೃಣಾಲ್ ಶುಗರ್ಸ್‌ನ ವ್ಯವಸ್ಥಾಪಕ ನಿರ್ದೇಶಕ, ಹರ್ಷಾ ಶುಗರ್ಸ್‌ನ ನಿರ್ದೇಶಕ, ಲಕ್ಷ್ಮಿತಾಯಿ ಸೌಹಾರ್ದ ಸಹಕಾರ ಸಂಘದ ನಿರ್ದೇಶಕ, ಹರ್ಷಾ ಬಿಲ್ಡರ್ ಹಾಗೂ ಡೆವೆಲಪರ್ಸ್‌ನ ಉದ್ಯಮ ಸಹಭಾಗಿ ಆಗಿದ್ದಾರೆ.

ಪದ್ಮರಾಜ್



ಮಂಗಳೂರು: ಪದ್ಮರಾಜ್ ಆರ್. ಅವರು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಬಾಳೂರು ಗ್ರಾಮದ ಬಿಲ್ಲವ ಸಮುದಾಯದ ಎಚ್.ಎಂ.ರಾಮಯ್ಯ ಮತ್ತು ಲಲಿತಾ ದಂಪತಿಯ ದ್ವಿತೀಯ ಪುತ್ರ. ಪದವಿಪೂರ್ವ ವರೆಗಿನ ಶಿಕ್ಷಣವನ್ನು ಹುಟ್ಟೂರಿನಲ್ಲಿ ಪೂರೈಸಿದ್ದಾರೆ. ಮಡಂತ್ಯಾರು ಸೆಕ್ರೆಡ್ ಹಾರ್ಟ್ ಕಾಲೇಜಿನಲ್ಲಿ ಬಿ.ಎ ಹಾಗೂ ಮಂಗಳೂರಿನ ಎಸ್‌ಡಿಎಂ ಕಾನೂನು ಕಾಲೇಜಿನಲ್ಲಿ ಎಲ್‌ಎಲ್‌ಬಿ ಪದವಿ ಪಡೆದಿದ್ದಾರೆ. ಕೇಂದ್ರದ ಮಾಜಿ ಸಚಿವ ಬಿ.ಜನಾರ್ದನ ಪೂಜಾರಿ ಶಿಷ್ಯರಾಗಿ, 1995ರಲ್ಲಿ ವಕೀಲ ವೃತ್ತಿ ಆರಂಭಿಸಿದರು. ಅವರು ಪಕ್ಷದ ಸದಸ್ಯತ್ವ ಪಡೆದದ್ದು 2023ರಲ್ಲಿ. ಸದ್ಯ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಕುದ್ರೋಳಿ ಗೋಕರ್ಣನಾಥ ದೇವಸ್ಥಾನದ ಖಜಾಂಚಿಯಾಗಿರುವ ಅವರು, ಸಮಾಜಸೇವಾ ಕಾರ್ಯದಲ್ಲಿ ತೊಡಗಿದ್ದಾರೆ.

ವಿನೋದ ಅಸೂಟಿ



ಧಾರವಾಡ: ರಾಜಕೀಯ ನಂಟು ಇಲ್ಲದ ಕುಟುಂಬದಿಂದ ಬಂದವರು ವಿನೋದ ಅಸೂಟಿ. ವಯಸ್ಸು 34 ವರ್ಷ. ಕುರುಬ ಸಮುದಾಯದವರು. ಧಾರವಾಡ ಜಿಲ್ಲೆಯ ನವಲಗುಂದದಲ್ಲಿ ನೆಲೆಸಿದ್ದಾರೆ. ಬಿಬಿಎ ಪದವೀಧರರಾದ ಅವರು ಧಾರವಾಡದಲ್ಲಿ ಶಿಕ್ಷಣ ಪೂರ್ಣಗೊಳಿಸಿದ್ದಾರೆ.

ವಿದ್ಯಾರ್ಥಿ ದೆಸೆಯಿಂದಲೇ ರಾಜಕೀಯದಲ್ಲಿ ಸಕ್ರಿಯರಾಗಿ ಯೂತ್ ಕಾಂಗ್ರೆಸ್ ಮೂಲಕ ರಾಜಕೀಯ ಪ್ರವೇಶಿಸಿದರು. ಧಾರವಾಡ ಜಿಲ್ಲಾ (ಗ್ರಾಮೀಣ) ಯೂತ್ ಕಾಂಗ್ರೆಸ್ ಅಧ್ಯಕ್ಷರಾಗಿರುವ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಗುರುತಿಸಿಕೊಂಡಿದ್ದಾರೆ. 2018ರಲ್ಲಿ ಮೊದಲ ಸಲ ನವಲಗುಂದ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿದು, ಪರಾಭವಗೊಂಡಿದ್ದರು.

ಎಂಥಾ ಮಾತು



ಜೆಡಿಎಸ್ ವರಿಷ್ಠರಾದ ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ನನ್ನನ್ನು ಮತ್ತು ಪಕ್ಷದ ಕಾರ್ಯಕರ್ತರನ್ನು ಇತ್ತೀಚೆಗೆ ಭಿನ್ನಾಭಿಪ್ರಾಯಗಳ ಕಾರಣದಿಂದ ಕಡೆಗಣಿಸುತ್ತಿದ್ದರು. ಯಾವ ಮಾತಿಗೂ ಸ್ಪಂದಿಸುತ್ತಿರಲಿಲ್ಲ. ಮಂಡ್ಯದಿಂದ ನಿಖಿಲ್ ಕುಮಾರಸ್ವಾಮಿ ಬದಲು ಪಕ್ಷದ ಕಾರ್ಯಕರ್ತರಿಗೆ ಟಿಕೆಟ್ ನೀಡಲು ಹೇಳಿದೆ. ಇದರಿಂದ ಸಿಟ್ಟಿಗೆದ್ದ ಅವರು ನನ್ನನ್ನು ಪಕ್ಷದ ಯಾವ ಕಾರ್ಯಕ್ರಮಕ್ಕೂ ಕರೆಯಲಿಲ್ಲ. ಸಭೆಗೂ ಆಹ್ವಾನಿಸಲಿಲ್ಲ.

ಮರಿತಿಬ್ಬೇಗೌಡ, ಜೆಡಿಎಸ್ ಮುಖಂಡ (ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ)



ಬಿಜೆಪಿಗೆ ಬರುವುದಿಲ್ಲ ಎಂದಿದ್ದ ಜೆ.ಸಿ.ಮಾಧುಸ್ವಾಮಿ ಅವರನ್ನು ಈ ಪಕ್ಷಕ್ಕೆ ಕರೆ ತಂದಿದ್ದೇ ನಾನು. ಈಗ ನನಗೇ ವಿರೋಧ ಮಾಡುತ್ತಿದ್ದಾರೆ. ನೀನು ಬುದ್ಧಿವಂತ, ಪ್ರಜ್ಞಾವಂತ ಎಂದು ಹೇಳಿ ಕರೆದುಕೊಂಡು ಬಂದವರಲ್ಲಿ ನಾನು ಮೊದಲಿಗನಾಗಿದ್ದೆ. ಈಗ ಪದೇ ಪದೇ ಸೋಮಣ್ಣನನ್ನು ಸೋಲಿಸುತ್ತೇನೆ ಎಂದು ಅವರು ಹೇಳುವುದು ಎಷ್ಟರಮಟ್ಟಿಗೆ ಸರಿ? ಅವರ ಅಸಮಾಧಾನವನ್ನು ವರಿಷ್ಠರ ಗಮನಕ್ಕೆ ತಂದಿರುವೆ. ಅವರು ಹೇಳಿದಂತೆ ನಡೆದುಕೊಳ್ಳುವೆ. ನಾನು ಹರಿಯುವ ನೀರು. ಇನ್ಯಾರಿಗೋಸ್ಕರನೋ ಬದುಕಿದವನಲ್ಲ.

ವಿ.ಸೋಮಣ್ಣ, ತುಮಕೂರು ಬಿಜೆಪಿ ಅಭ್ಯರ್ಥಿ

ಕ್ಷೇತ್ರ ಮಹಾತ್ಮೆ



ರಾಜಧಾನಿಯ ಕಸವು, ಕಲಬೆರಿಕೆ, ಕುತಂತ್ರ ಪ್ರತಿತಂತ್ರ, ಎಲ್ಲವನ್ನೂ ಮೈಗೂಡಿಸಿಕೊಂಡ ಕ್ಷೇತ್ರ ಬೆಂಗಳೂರು ಗ್ರಾಮಾಂತರ. ಇಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಮಧ್ಯೆಯೂ ಮಹಾ ಅಂತರ. ಹಳೆ ಮೈಸೂರು ಭಾಗದ ರಾಜಕಾರಣದಲ್ಲಿ ಪ್ರಬಲ ಹಿಡಿತ ಹೊಂದಿರುವ ಒಕ್ಕಲುತನ ಹಿನ್ನೆಲೆಯ ಎರಡು ಕುಟುಂಬಗಳ ನಡುವೆಯೇ ಇಲ್ಲಿ ಸಮರ. ಜನರ 'ಹೃದಯ'ಗಳು ಬಾಧೆಪಟ್ಟಾಗ ಪಿಸುಮಾತು ಆಲಿಸಿ ಚಿಕಿತ್ಸೆ ಕೊಡಿಸಿದ 'ಹೃದಯವಂತ' ಎಂದೇ ಹೆಸರಾದ ಡಾ.ಸಿ.ಎನ್. ಮಂಜುನಾಥ್ ಇಲ್ಲಿ ಕೇಸರಿ ಕಲಿ. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಅಳಿಯ, ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿಯವರ ಭಾವ. ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿಯ ಮಾವ... ಇಂತಿಪ್ಪ ಪ್ರಭಾವಿಯ ಎದುರಾಳಿ, ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರಿಂದ 'ಸೂರಿಯಣ್ಣ' ಎಂದೇ ಪರಿಚಿತರಾದ, ಹಾಲಿ ಸಂಸದ ಡಿ.ಕೆ. ಸುರೇಶ್. ಇವರ ಅಣ್ಣ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್. ಇವರ ನೆಂಟ ಕುಣಿಗಲ್ ಶಾಸಕ ರಂಗನಾಥ್. ಈ ಕ್ಷೇತ್ರದಲ್ಲಿ ಉತ್ಸವಮೂರ್ತಿ ಡಿಕೆಶಿಯಾದರೆ, ಮೂರ್ತಿಯ ಮೆರವಣಿಗೆ ಸಾಗುವುದು 'ಸೂರಿಯಣ್ಣ'ನಿಂದಲೇ ಎನ್ನುವುದು ಕಾರ್ಯಕರ್ತರ ಅಂಬೋಣ. 'ಸೂರಿಯಣ್ಣ'ನ ರಾಜಕೀಯದ ವರಸೆಯೇ ಭಿನ್ನ. ಅಭಿಮಾನಿಗಳ ಪಾಲಿಗೆ 'ದೇವರು'. ಎದುರಾಳಿ ಪಾಲಿಗೆ 'ರಣವಿಕ್ರಮ'. ಕ್ಷೇತ್ರದ ಮತದಾರರ ಗುಟ್ಟು ಇವರಿಗೆ ಕರತಲಾಮಲಕ. ಎರಡು ಕುಟುಂಬದ ತಕ್ಕಡಿ ಜಗ್ಗಾಟದಲ್ಲಿ ಹಸ್ತಕ್ಕೆ ಅಭಯವೋ, ಕಮಲಕ್ಕೆ ಅರಳುವಿಕೆಯೋ... ಕುತೂಹಲ ಬಾಕಿ.

ಬ್ಯಾಂಕ್ ಖಾತೆಗಳ ಬಳಕೆಗೆ ಅನುಮತಿ: ಕಾಂಗ್ರೆಸ್ ನಾಯಕರ ಒತ್ತಾಯ

‘ಕೇಂದ್ರದ ನಡೆ; ಪ್ರಜಾತಂತ್ರಕ್ಕೆ ಪೆಟ್ಟು’


ಸೋನಿಯಾ ಗಾಂಧಿ

ನವದೆಹಲಿ (ಪಿಟಿಐ): ಸ್ಥಗಿತಗೊಳಿಸಿರುವ ತನ್ನ ಬ್ಯಾಂಕ್ ಖಾತೆಗಳ ಬಳಕೆಗೆ ಅವಕಾಶ ನೀಡಬೇಕು ಎಂದು ಕಾಂಗ್ರೆಸ್ ಪಕ್ಷ ಗುರುವಾರ ಮತ್ತೆ ಆಗ್ರಹಿಸಿದೆ. ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಎಲ್ಲ ಪಕ್ಷಗಳಿಗೂ ಸಮಾನ ಅವಕಾಶಗಳನ್ನು ಒದಗಿಸಬೇಕು ಎಂದು ಹೇಳಿದೆ.

ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರೊಂದಿಗೆ ಸುದ್ದಿಗೋಷ್ಠಿ ನಡೆಸಿದ ಸೋನಿಯಾ ಗಾಂಧಿ, ‘ಕಾಂಗ್ರೆಸ್ ಪಕ್ಷವನ್ನು ಆರ್ಥಿಕ ಸಂಕಷ್ಟಕ್ಕೆ ದೂಡುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ವ್ಯವಸ್ಥಿತ ಪ್ರಯತ್ನಗಳು ನಡೆಯುತ್ತಿವೆ’ ಎಂದು ಆರೋಪಿಸಿದರು.

‘ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿರುವ ಈ ಕ್ರಮವು ಕಾಂಗ್ರೆಸ್ ಪಕ್ಷದ ಮೇಲಷ್ಟೆ ಅಲ್ಲ, ಭಾರತದ ಪ್ರಜಾತಂತ್ರ ವ್ಯವಸ್ಥೆಯ ಮೇಲೆಯೇ ಪರಿಣಾಮ ಬೀರಿದೆ’ ಎಂದು ಹೇಳಿದರು.

‘ನಾವು ಈ ದಿನ ಪ್ರಸ್ತಾಪಿಸಿರುವ ವಿಷಯ ಬಹಳ ಗಂಭೀರವಾದುದು. ಕೇಂದ್ರ ಸರ್ಕಾರದ ಈ ನಡೆ ಕಾಂಗ್ರೆಸ್ ಪಕ್ಷವನ್ನು ಮಾತ್ರವಲ್ಲ ನಮ್ಮ ಪ್ರಜಾಪ್ರಭುತ್ವದ ಮೂಲ ಆಶಯಕ್ಕೇ ಬಲವಾದ ಪೆಟ್ಟು ನೀಡಲಿದೆ’ ಎಂದರು.

> ಮುಕ್ತ ಹಾಗೂ ನ್ಯಾಯಯುತ ಚುನಾವಣೆಗಾಗಿ ಕಾಂಗ್ರೆಸ್‌ನ ಬ್ಯಾಂಕ್ ಖಾತೆಗಳನ್ನು ಬಳಕೆ ಮಾಡುವುದಕ್ಕೆ ಸಾಂವಿಧಾನಿಕ ಸಂಸ್ಥೆಗಳು ಅವಕಾಶ ನೀಡಬೇಕು
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

> ಭಾರತದಲ್ಲಿ ಈಗ ಪ್ರಜಾಪ್ರಭುತ್ವವೇ ಇಲ್ಲ. ಭಾರತ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂಬುದು ಸಂಪೂರ್ಣ ಸುಳ್ಳು
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹಾಗೂ ಎಐಸಿಸಿ ಖಜಾಂಚಿ ಅಜಯ್ ಮಾಕನ್ ಸಹ ಇದ್ದರು.

ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ರಾಹುಲ್ ಗಾಂಧಿ, ‘ಚುನಾವಣೆಯಲ್ಲಿ ಹೋರಾಟ ನಡೆಸುವ ನಮ್ಮ ಸಾಮರ್ಥ್ಯವನ್ನೇ ನಾಶ ಮಾಡಲಾಗಿದೆ. ನಾವು ಚುನಾವಣಾ ಪ್ರಚಾರ ಕಾರ್ಯ ಮಾಡುವ ಶಕ್ತಿ ಕಳೆದುಕೊಂಡಿದ್ದೇವೆ’ ಎಂದು ಹೇಳಿದರು.

ಆದಾಯ ತೆರಿಗೆ ಬಾಕಿ ವಿಚಾರಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್‌ನ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿದೆ.

‘ಪಕ್ಷದ ಬ್ಯಾಂಕ್ ಖಾತೆಗಳನ್ನು ಸ್ಥಗಿತ ಮಾಡಿ, ಅದರಿಂದ ₹115.32 ಕೋಟಿಯಷ್ಟು ಮೊತ್ತವನ್ನು ಒತ್ತಾಯದಿಂದ ಪಡೆದುಕೊಂಡಿರುವ ಬಿಜೆಪಿ, ಆ ಮೂಲಕ ಸಾಮಾನ್ಯ ಜನರು ಕಾಂಗ್ರೆಸ್‌ಗೆ ನೀಡಿದ್ದ ದೇಣಿಗೆಗಳನ್ನು ಲೂಟಿ ಮಾಡಿದೆ’ ಎಂದು ಮಾಕನ್ ಆರೋಪಿಸಿದರು.

ಕಾಂಗ್ರೆಸ್ ಹೇಳಿಕೆ ಹಾಸ್ಯಾಸ್ಪದ: ನಡ್ಡಾ


ಜೆ.ಪಿ. ನಡ್ಡಾ

ನವದೆಹಲಿ(ಪಿಟಿಐ): ‘ಪಕ್ಷದ ಬ್ಯಾಂಕ್ ಖಾತೆಗಳನ್ನು ಸ್ಥಗಿತ ಮಾಡಿರುವುದರಿಂದ ಹಣಕಾಸು ವಿಚಾರವಾಗಿ ಅಸಹಾಯಕತೆ ವ್ಯಕ್ತಪಡಿಸುತ್ತಿರುವ ಕಾಂಗ್ರೆಸ್‌ನ ಹೇಳಿಕೆ ಹಾಸ್ಯಾಸ್ಪದ’ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಗುರುವಾರ ಹೇಳಿದ್ದಾರೆ.

ತನ್ನ ಬ್ಯಾಂಕ್ ಖಾತೆಗಳನ್ನು ಸಕ್ರಿಯಗೊಳಿಸುವಂತೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಆಗ್ರಹಿಸಿರುವುದಕ್ಕೆ ಈ ರೀತಿ ಪ್ರತಿಕ್ರಿಯಿಸಿರುವ ನಡ್ಡಾ, ‘ಕಾಂಗ್ರೆಸ್ ತನ್ನ ಆಡಳಿತದ ಅವಧಿಯಲ್ಲಿ ಮಾಡಿರುವ ಹಗರಣಗಳಿಂದ ಸಂಗ್ರಹಿಸಿರುವ ಹಣವನ್ನು ಈ ಚುನಾವಣಾ ವೆಚ್ಚಕ್ಕೆ ಬಳಸಿಕೊಳ್ಳಲಿ’ ಎಂದು ತಿರುಗೇಟು ನೀಡಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ನಡ್ಡಾ, ‘ತಾನು ಎದುರಿಸುತ್ತಿರುವ ಆರ್ಥಿಕ ಸಂಕಷ್ಟಕ್ಕೆ ಕಾಂಗ್ರೆಸ್ ಅಸಂಬದ್ಧವಾಗಿ ದೂಷಣೆ ಮಾಡುತ್ತಿದೆ. ವಾಸ್ತವದಲ್ಲಿ ಆ ಪಕ್ಷ ನೈತಿಕವಾಗಿ, ಬೌದ್ಧಿಕವಾಗಿ ದಿವಾಳಿಯಾಗಿದೆಯೇ ಹೊರತು ಆರ್ಥಿಕವಾಗಿ ಅಲ್ಲ’ ಎಂದಿದ್ದಾರೆ.

‘ಈ ಬಾರಿ ಜನರು ಕಾಂಗ್ರೆಸ್ ಪಕ್ಷವನ್ನು ಸಾರಾಸಗಟಾಗಿ ತಿರಸ್ಕರಿಸಲಿದ್ದಾರೆ. ಈ ಹೀನಾಯ ಸೋಲಿನ ಭಯದಿಂದ ಪಕ್ಷದ ಉನ್ನತ ನಾಯಕರು ಸುದ್ದಿಗೋಷ್ಠಿ ನಡೆಸಿ, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸಾಂವಿಧಾನಿಕ ಸಂಸ್ಥೆಗಳ ವಿರುದ್ಧ ಹರಿಹಾಯ್ದಿದ್ದಾರೆ’ ಎಂದೂ ಹೇಳಿದ್ದಾರೆ.

‘ಕಾಂಗ್ರೆಸ್ ತನ್ನ ತಪ್ಪುಗಳನ್ನು ಸರಿಪಡಿಸಿಕೊಳ್ಳುವ ತನ್ನ ಸಂಕಷ್ಟಗಳಿಗೆ ಕೇಂದ್ರೀಯ ಸಂಸ್ಥೆಗಳನ್ನು ದೂಷಿಸುತ್ತಿದ್ದಾರೆ. ಐಟಿಎಟಿ ಅಥವಾ ದೆಹಲಿ ಹೈಕೋರ್ಟ್ ಆಗಲಿ ಬಾಕಿ ತೆರಿಗೆಯನ್ನು ಪಾವತಿಸುವ ಮೂಲಕ ನಿಯಮಗಳನ್ನು ಪಾಲಿಸುವಂತೆ ಕಾಂಗ್ರೆಸ್‌ಗೆ ಸೂಚಿಸಿದೆ. ಆದರೆ, ಪಕ್ಷ ಆ ಕೆಲಸ ಮಾಡುತ್ತಿಲ್ಲ’ ಎಂದು ನಡ್ಡಾ ಟೀಕಿಸಿದ್ದಾರೆ.

ಸರ್ವಾಧಿಕಾರಿ ನಡೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಪಕ್ಷದ ಬ್ಯಾಂಕ್ ಖಾತೆಯನ್ನು ಸ್ಥಗಿತಗೊಳಿಸಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಕ್ರಮ ಅಧಿಕಾರ ದುರುಪಯೋಗ ಮಾತ್ರವಲ್ಲ ವಿರೋಧ ಪಕ್ಷಗಳನ್ನು ಹಣಿಯುವ ಸರ್ವಾಧಿಕಾರಿ ನಡೆ. ಕಾನೂನುಬಾಹಿರವಾದ ಈ ಕ್ರಮವನ್ನು ತಕ್ಷಣ ಹಿಂದಕ್ಕೆ ಪಡೆಯುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು’ ಎಂದು ಚುನಾವಣಾ ಆಯೋಗವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

‘ಲೋಕಸಭಾ ಚುನಾವಣೆಯ ಸಮಯದಲ್ಲಿ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿ ಪಕ್ಷವು ಹಣದ ಕೊರತೆಯಿಂದ ಗೋಳಾಡುವಂತೆ ಮಾಡಬೇಕೆನ್ನುವುದು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ದುರುದ್ದೇಶವಾಗಿದೆ. ನಮ್ಮ ಪಕ್ಷದ ಖಾತೆಯಲ್ಲಿರುವುದು ಪಕ್ಷದ ಅಭಿಮಾನಿಗಳಾದ ಸಾಮಾನ್ಯ ಜನರಿಂದ ಸಂಗ್ರಹಿಸಿರುವ ಹಣವೇ ಹೊರತು ದೊಡ್ಡ ಉದ್ಯಮಪತಿಗಳದ್ದಲ್ಲ’ ಎಂದಿದ್ದಾರೆ.

‘ಚುನಾವಣಾ ಬಾಂಡ್‌ಗಳ ಮೂಲಕ ಉದ್ಯಮಿಗಳಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ಸುಲಿಗೆ ಮಾಡಿ ತಮ್ಮ ಖಾತೆಗೆ ತುಂಬಿಸಿಕೊಂಡಿರುವ ಬಿಜೆಪಿ ಬಗ್ಗೆ ಚುನಾವಣಾ ಆಯೋಗ ಮೌನವಾಗಿರುವುದು ಪ್ರಜಾಪ್ರಭುತ್ವಕ್ಕೆ ಮಾರಕ. ಆಯೋಗ ತಕ್ಷಣ ಇದನ್ನು ಗಮನಿಸಿ, ಕಾಂಗ್ರೆಸ್ ಪಕ್ಷಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು’ ಎಂದು ಆಗ್ರಹಿಸಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿಯಲ್ಲಿ ಸೋಲಿನ ಭಯ ಹುಟ್ಟಿಕೊಂಡಿದೆ. 400 ಸ್ಥಾನಗಳನ್ನು ಗೆಲ್ಲುತ್ತೇವೆ ಎಂದು ಹೇಳಿಕೊಂಡರೂ ವಾಸ್ತವ ಸ್ಥಿತಿ ಏನು ಎಂಬುದು ಮೋದಿಗೆ ಗೊತ್ತಿದೆ. ಈ ಭಯದ ಕಾರಣದಿಂದಲೇ ಕೇಂದ್ರ ಸರ್ಕಾರ ಕಾಂಗ್ರೆಸ್ ಪಕ್ಷದ ಬ್ಯಾಂಕ್ ಖಾತೆಯನ್ನು ಸ್ಥಗಿತಗೊಳಿಸುವ ಸೇಡಿನ ಕ್ರಮಕ್ಕೆ ಮುಂದಾಗಿದೆ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

‘ನರೇಂದ್ರ ಮೋದಿ ಅವರ ಹಿಂದಿರುವ ‘ದುಷ್ಟ ಶಕ್ತಿ’ಯು ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಲಯವನ್ನು ಕೂಡ ಬುಡಮೇಲು ಮಾಡಲು ಹೊರಟಿದೆ. ಇದನ್ನು ತಡೆಯುವ ಶಕ್ತಿ ಇರುವುದು ಚುನಾವಣೆಗೆ ಮಾತ್ರ’ ಎಂದೂ ಹೇಳಿದ್ದಾರೆ.

ಕೊಯಮತ್ತೂರು: ಅಣ್ಣಾಮಲೈ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಚುನಾವಣಾ ಕಣದಲ್ಲಿ

ನವದೆಹಲಿ: ತಮಿಳುನಾಡಿನ ಒಂಬತ್ತು ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಗುರುವಾರ ಪ್ರಕಟಿಸಿದೆ.

ಕೊಯಮತ್ತೂರು ಕ್ಷೇತ್ರದಿಂದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಹಾಗೂ ಚೆನ್ನೈ ದಕ್ಷಿಣ ಕ್ಷೇತ್ರದಿಂದ ತೆಲಂಗಾಣದ ಮಾಜಿ ರಾಜ್ಯಪಾಲೆ ತಮಿಳ್ ಇಸೈ ಸೌಂದರ್‌ರಾಜನ್ ಸ್ಪರ್ಧಿಸಲಿದ್ದಾರೆ. ಬಿಜೆಪಿ ಈವರೆಗೆ 272 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದಂತಾಗಿದೆ.

ಕೇಂದ್ರ ಸಚಿವ ಎಲ್.ಮುರುಗನ್ ಅವರು ನೀಲಗಿರಿ ಮೀಸಲು ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ. ಮಾದಿಗ ಸಮುದಾಯಕ್ಕೆ ಸೇರಿದ ಮುರುಗನ್ ಅವರು ಈ ಹಿಂದೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು. ಕಳೆದ ಲೋಕಸಭಾ ಚುನಾವಣೆಯಲ್ಲಿ ಸೋತಿದ್ದರು. ಬಳಿಕ ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡಲಾಗಿತ್ತು. ಇತ್ತೀಚೆಗೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಮಧ್ಯಪ್ರದೇಶದಿಂದ ಅವರು ಆಯ್ಕೆಯಾಗಿದ್ದಾರೆ.

ತಮಿಳ್ ಇಸೈ ಅವರು ಸೋಮವಾರವಷ್ಟೇ ರಾಜ್ಯಪಾಲ ಹುದ್ದೆಗೆ ರಾಜೀನಾಮೆ ನೀಡಿದ್ದರು. ತಮಿಳ್ ಇಸೈ ಅವರು 2019ರ ಲೋಕಸಭಾ ಚುನಾವಣೆಯಲ್ಲಿ ತೂತ್ತುಕುಡಿ ಕ್ಷೇತ್ರದಿಂದ ಬಿಜೆಪಿ ಟಿಕೆಟ್‌ನಿಂದ ಸ್ಪರ್ಧಿಸಿ, ಡಿಎಂಕೆಯ ಕನಿಮೊಳಿ ಎದುರು ಪರಾಭವಗೊಂಡಿದ್ದರು. ಕೊಯಮತ್ತೂರು ಕ್ಷೇತ್ರದಲ್ಲಿ 2019ರಲ್ಲಿ ಕಾಂಗ್ರೆಸ್ ಜಯ ಗಳಿಸಿತ್ತು. ಈ ಸಲ ಕ್ಷೇತ್ರವನ್ನು ಡಿಎಂಕೆಗೆ ಬಿಟ್ಟುಕೊಟ್ಟಿದೆ.

ಕೇಂದ್ರದ ಮಾಜಿ ಸಚಿವ ಪೊನ್ ರಾಧಾಕೃಷ್ಣನ್ ಅವರು ಕನ್ಯಾಕುಮಾರಿ ಕ್ಷೇತ್ರದಿಂದ ಸ್ಪರ್ಧೆ ಮಾಡಲಿದ್ದಾರೆ. ಡಿಎಂಕೆ ಮಾಜಿ ನಾಯಕ ಹಾಗೂ ಹಾಲಿ ಸಂಸದ ಟಿ.ಆರ್.ಪರಿವೆಂಧರ್ ಅವರು ಪೆರಂಬಲೂರಿನಿಂದ ಕಣಕ್ಕಿಳಿಯಲಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ತಮಿಳುನಾಡಿನಲ್ಲಿ ಬಿಜೆಪಿ ಒಂದೇ ಒಂದು ಸ್ಥಾನವನ್ನು ಗೆದ್ದಿರಲಿಲ್ಲ. ರಾಜ್ಯದ 39 ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ಏಪ್ರಿಲ್ 19ರಂದು ಮತದಾನ ನಡೆಯಲಿದೆ.

ತಮ್ಮೇಶಗೌಡ ಬಿಜೆಪಿ ರಾಜ್ಯ ಕಾರ್ಯದರ್ಶಿ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಕಾರ್ಯದರ್ಶಿಯನ್ನಾಗಿ ತಮ್ಮೇಶಗೌಡ ಅವರನ್ನು ನೇಮಕ ಮಾಡಲಾಗಿದೆ.

ಅಲ್ಲದೇ, ಲೋಕಸಭಾ ಚುನಾವಣಾ ನಿರ್ವಹಣಾ ಸಮಿತಿಗೆ ಸದಸ್ಯರನ್ನಾಗಿ ವಿಧಾನಪರಿಷತ್ ಸದಸ್ಯರಾದ ಎನ್.ರವಿಕುಮಾರ್, ಭಾರತಿಶೆಟ್ಟಿ ಮತ್ತು ಎಸ್.ಕೇಶವಪ್ರಸಾದ್ ಅವರನ್ನು ನೇಮಿಸಲಾಗಿದೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಂಧ್ರ ಬಿಜೆಪಿ: ಮೂಲ, ವಲಸಿಗರ ತಿಕ್ಕಾಟ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರ ಪ್ರದೇಶದ ಬಿಜೆಪಿಯಲ್ಲಿ ಮೂಲ ಮತ್ತು ಹೊರಗಿನಿಂದ ಬಂದವರ ನಡುವೆ ತಿಕ್ಕಾಟ ನಡೆಯುತ್ತಿದೆ. ಇದು ದಕ್ಷಿಣ ರಾಜ್ಯದಿಂದ ಕೆಲ ಸ್ಥಾನಗಳನ್ನು ಗೆಲ್ಲುವ ಭರವಸೆ ಹೊಂದಿರುವ ಕೇಸರಿ ಪಕ್ಷದ ಹೈಕಮಾಂಡ್‌ಗೆ ಎಚ್ಚರಿಕೆಯ ಗಂಟೆ ಬಾರಿಸಿದೆ.

ಈಗಾಗಲೆ ಚುನಾವಣಾ ದಿನಾಂಕಗಳು ಪ್ರಕಟವಾಗಿವೆ. ಇದಕ್ಕೂ ಮುನ್ನವೇ ಟಿಡಿಪಿ, ಬಿಜೆಪಿ ಮತ್ತು ಜನಸೇನಾ ಪಕ್ಷಗಳು ಮೈತ್ರಿ ಮಾಡಿಕೊಂಡು, ಸೀಟು ಹಂಚಿಕೆ ಮಾಡಿಕೊಂಡಿವೆ. ಇದು ದೀರ್ಘಕಾಲದಿಂದ ಪಕ್ಷ ಮತ್ತು ಸಿದ್ಧಾಂತದ ಜೊತೆಗಿರುವ ಮೂಲ ಬಿಜೆಪಿ ನಾಯಕರಲ್ಲಿ ಅಸಮಾಧಾನ ಮೂಡಿಸಿದೆ.

ಸೀಟು ಹಂಚಿಕೆಯ ಭಾಗವಾಗಿ ಬಿಜೆಪಿಗೆ ಆರು ಲೋಕಸಭಾ ಕ್ಷೇತ್ರಗಳು ಮತ್ತು 10 ವಿಧಾನಸಭಾ ಕ್ಷೇತ್ರಗಳು ದೊರೆತಿವೆ. ಟಿಡಿಪಿಯಿಂದ ಕೆಲ ವರ್ಷಗಳಲ್ಲಿ ಕೇಸರಿ ಪಕ್ಷಕ್ಕೆ ಸೇರಿರುವ ನಾಯಕರೇ, ಇದರಲ್ಲಿನ ಬಹುಪಾಲನ್ನು ಕಬಳಿಸುತ್ತಾರೆ ಎಂಬುದು ಮೂಲ ಬಿಜೆಪಿಗರ ಶಂಕೆಯಾಗಿದೆ. ಅದು ರಾಜ್ಯದಲ್ಲಿ ಬಿಜೆಪಿಯನ್ನು ಬಲಪಡಿಸುವ ಗುರಿ ಹೊಂದಿಲ್ಲ, ಬದಲಿಗೆ ದೀರ್ಘಾವಧಿಯಲ್ಲಿ ಟಿಡಿಪಿಗೆ ಹೆಚ್ಚಿನ ಲಾಭವನ್ನು ತಂದುಕೊಡಲಿದೆ ಎಂದು ಅವರು ಚಿಂತಿತರಾಗಿದ್ದಾರೆ.

ಈ ಸಂಬಂಧ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಆಂಧ್ರ ಪ್ರದೇಶದ ರಾಜ್ಯ ಸಮಿತಿಯ ಒಂಬತ್ತು ಪದಾಧಿಕಾರಿಗಳು ಪತ್ರವನ್ನು ಬರೆದಿದ್ದಾರೆ. ‘ಆಂಧ್ರ ಪ್ರದೇಶದ ಲಕ್ಷಗಟ್ಟಲೆ ಕಾರ್ಯಕರ್ತರ ಧ್ವನಿ’ ಎಂದು ಅದರಲ್ಲಿ ನಮೂದಿಸಲಾಗಿದೆ.

‘ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗೆ ನಮಗೆ ಹಂಚಿಕೆಯಾಗಿರುವ ಕ್ಷೇತ್ರಗಳಲ್ಲಿ ಬಿಜೆಪಿ ಅಥವಾ ಟಿಡಿಪಿಗೆ ಗೆಲ್ಲುವ ಅವಕಾಶಗಳಿಲ್ಲ. ಟಿಡಿಪಿಯು ಈ ಸ್ಥಾನಗಳನ್ನು ಬಿಜೆಪಿಗೆ ಹಂಚಿಕೆ ಮಾಡುವ ಮೂಲಕ ಮತ್ತೊಮ್ಮೆ ಬೆನ್ನಿಗೆ ಇರಿದಿದೆ. ಈ ಕ್ಷೇತ್ರಗಳಲ್ಲಿ ಹಿಂದೆ ಎಂದೂ ಟಿಡಿಪಿ ಗೆದ್ದಿಲ್ಲ. ಅಂತಹ ದುರ್ಬಲ ವಿಧಾನಸಭಾ ಕ್ಷೇತ್ರಗಳನ್ನು ಬಿಜೆಪಿಗೆ ನೀಡಲಾಗಿದೆ. ಬಿಜೆಪಿ ಅಭ್ಯರ್ಥಿಗಳ ಆಯ್ಕೆಯ ಹಿಂದೆ ಟಿಡಿಪಿ ಕೈವಾಡವಿದೆ ಎಂಬ ಶಂಕೆಯಿದೆ. ಮೈತ್ರಿಯನ್ನು ಮೊದಲೇ ನಿರೀಕ್ಷಿಸಿ, ಗುಪ್ತ ಕಾರ್ಯಸೂಚಿಯೊಂದಿಗೆ ಟಿಡಿಪಿ ತನ್ನ ನಾಯಕರನ್ನು ಬಿಜೆಪಿಗೆ ಪಕ್ಷಾಂತರಿಸಿದೆ. ಈ ಮೂಲಕ ಅದು ತನ್ನ ಕಾರ್ಯಕರ್ತರನ್ನು ತೃಪ್ತಿಪಡಿಸುವ ಮತ್ತು ಬಿಜೆಪಿ ಕಾರ್ಯಕರ್ತರನ್ನು ಹಾನಿಗೊಳಿಸುವ ಕಾರ್ಯ ನಿರ್ವಹಿಸಿದೆ’ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ವಿಧಾನಸಭೆ ಚುನಾವಣೆ: ಆರು ಮಾಜಿ ಮುಖ್ಯಮಂತ್ರಿಗಳ ಪುತ್ರರು ಕಣದಲ್ಲಿ!


ಜಗನ್ ಮೋಹನ್ ರೆಡ್ಡಿ


ನಾರಾ ಲೋಕೇಶ್

ಅಮರಾವತಿ(ಆಂಧ್ರಪ್ರದೇಶ) (ಪಿಟಿಐ): ರಾಜಕೀಯ ಜಿದ್ದಾಜಿದ್ದಿ ಕಾರಣದಿಂದ ರಂಗೇರುವ ಆಂಧ್ರಪ್ರದೇಶ ವಿಧಾನಸಭೆ ಚುನಾವಣೆ ಕಣ, ಈ ಬಾರಿ ಮತ್ತೊಂದು ಕಾರಣದಿಂದಾಗಿ ಗಮನ ಸೆಳೆಯುತ್ತಿದೆ.

ಆರು ಜನ ಮಾಜಿ ಮುಖ್ಯಮಂತ್ರಿಗಳ ಪುತ್ರರು ತಮ್ಮ ಅದೃಷ್ಟ ಪರೀಕ್ಷೆಗೆ ಮುಂದಾಗಿರುವುದು ಈ ಬಾರಿಯ ಚುನಾವಣೆಯ ವಿಶೇಷ.

ಮಾಜಿ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ ರೆಡ್ಡಿ ಅವರ ಪುತ್ರರಾಗಿರುವ ಹಾಲಿ ಮುಖ್ಯಮಂತ್ರಿ ವೈ.ಎಸ್.ಜಗನ್ ಮೋಹನ್ ರೆಡ್ಡಿ ಅವರು ಪುಲಿವೆಂದುಲ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಯುತ್ತಿದ್ದಾರೆ.

ಪುಲಿವೆಂದುಲ ಕ್ಷೇತ್ರವು ವೈಎಸ್‌ಆರ್ ಕುಟುಂಬದ ಭದ್ರಕೋಟೆ. 1978ರಿಂದ 2009ರ ನಡುವೆ 6 ಬಾರಿ ಈ ಕ್ಷೇತ್ರದಿಂದ ಈ ಕುಟುಂಬದವರೇ ಆಯ್ಕೆಯಾಗಿದ್ದರು. 2009ರ ಸೆಪ್ಟೆಂಬರ್ 2ರಂದು ಸಂಭವಿಸಿದ ಹೆಲಿಕಾಪ್ಟರ್ ಅಪಘಾತದಲ್ಲಿ ರಾಜಶೇಖರ ರೆಡ್ಡಿ ಮೃತಪಟ್ಟರು. ಆಗ, ಅವರು ಎರಡನೇ ಬಾರಿ ಆಯ್ಕೆಯಾಗಿ, ಆಗಷ್ಟೇ ಅಧಿಕಾರ ಸ್ವೀಕರಿಸಿದ್ದರು.

ಟಿಡಿಪಿ ಮುಖ್ಯಸ್ಥ ಹಾಗೂ ಮೂರು ಬಾರಿ ಮುಖ್ಯಮಂತ್ರಿಯಾಗಿದ್ದ ಎನ್.ಚಂದ್ರಬಾಬು ನಾಯ್ಡು ಅವರ ಪುತ್ರ ನಾರಾ ಲೋಕೇಶ್ ಅವರು ಮಂಗಲಗಿರಿ ಕ್ಷೇತ್ರದಿಂದ ಎರಡನೇ ಬಾರಿಗೆ ಸ್ಪರ್ಧೆ ಮಾಡುತ್ತಿದ್ದಾರೆ. ಈ ಬಾರಿ ಅವರ ಎದುರು ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಎಂ.ಲಾವಣ್ಯ ಕಣಕ್ಕಿಳಿಯುತ್ತಿದ್ದಾರೆ.

ಲೋಕೇಶ್ ಅವರು ಮಾಜಿ ಮುಖ್ಯಮಂತ್ರಿ ಹಾಗೂ ತೆಲುಗು ಚಿತ್ರರಂಗದ ಮೇರು ನಟ ಎನ್.ಟಿ.ರಾಮ ರಾವ್ ಅವರ ಮೊಮ್ಮಗ.

ಹಿಂದೂಪುರ ಕ್ಷೇತ್ರದ ಶಾಸಕ ಹಾಗೂ ತೆಲುಗು ನಟ ಎನ್.ಬಾಲಕೃಷ್ಣ ಅವರು ಈ ಬಾರಿ ಅದೇ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ.

ಹಿಂದೂಪುರ ಕ್ಷೇತ್ರ ಎನ್‌ಟಿಆರ್ ಕುಟುಂಬದ ಭದ್ರಕೋಟೆ. ಮೊದಲು ರಾಮ ರಾವ್ ನಂತರ, ಅವರ ಹಿರಿಯ ಪುತ್ರ ಎನ್.ಹರಿಕೃಷ್ಣ ಅವರು ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು.

ತೆನಾಲಿ ಕ್ಷೇತ್ರದಿಂದ ಕಣಕ್ಕಿಳಿಯಲಿರುವ ಜನ ಸೇನಾ ಪಕ್ಷದ ಮುಖಂಡ ಎನ್.ಮನೋಹರ್ ಅವರು ಮಾಜಿ ಮುಖ್ಯಮಂತ್ರಿ ಎನ್.ಭಾಸ್ಕರ್ ರಾವ್ ಅವರ ಪುತ್ರ.

ಮಾಜಿ ಸಿ.ಎಂ ಎನ್.ಜನಾರ್ದನ ರೆಡ್ಡಿ ಅವರ ಪುತ್ರ ಎನ್.ರಾಮಕುಮಾರ್ ರೆಡ್ಡಿ ಅವರು ವೈಎಸ್‌ಆರ್ ಕಾಂಗ್ರೆಸ್ ಹುರಿಯಾಳಾಗಿ ವೆಂಕಟಗಿರಿ ಕ್ಷೇತ್ರದಿಂದ ಸ್ಪರ್ಧೆ ಮಾಡುತ್ತಿದ್ದರೆ, ಮತ್ತೊಮ್ಮ ಮಾಜಿ ಮುಖ್ಯಮಂತ್ರಿ ಕೆ.ವಿಜಯಭಾಸ್ಕರ್ ರೆಡ್ಡಿ ಪುತ್ರ ಕೆ.ಸೂರ್ಯಪ್ರಕಾಶ ರೆಡ್ಡಿ ಅವರು ಟಿಡಿಪಿ ಅಭ್ಯರ್ಥಿಯಾಗಿ ಧೋನೆ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ.



ಮುಖವಾಡ– ಮೋಡಿ

ಹೋಳಿ ಹಬ್ಬದ ಪ್ರಯುಕ್ತ ಮೀರಠ್‌ನಲ್ಲಿ ವ್ಯಾಪಾರಿಗಳು ಮೋದಿ ಅವರ ಮುಖವಾಡಗಳನ್ನು ಗುರುವಾರ ಮಾರಾಟ ಮಾಡಿದರು –ಪಿಟಿಐ ಚಿತ್ರ

ದ್ವೇಷದ ಪೋಸ್ಟ್: ಸಿ.ಟಿ.ರವಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ದ್ವೇಷದ ಪೋಸ್ಟ್ ಪ್ರಕಟಿಸಿದ ಆರೋಪದಲ್ಲಿ ಬಿಜೆಪಿ ಮುಖಂಡ ಸಿ.ಟಿ. ರವಿ ವಿರುದ್ಧ ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಚುನಾವಣಾ ಆಯೋಗದ ಸಾಮಾಜಿಕ ಜಾಲತಾಣ ಮೇಲ್ವಿಚಾರಣಾ ಸಮಿತಿಯ ನೋಡಲ್ ಅಧಿಕಾರಿಯ ಸೂಚನೆ ಮೇರೆಗೆ ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಕೆ.ಜಯಲಕ್ಷ್ಮಮ್ಮ ದೂರು ನೀಡಿದ್ದರು.

ಸಿ.ಟಿ.ರವಿ ತಮ್ಮ ಎಕ್ಸ್ ಖಾತೆಯಲ್ಲಿ ‘ಸಾಗರಗಳ ಆಳವನ್ನು ಅಳೆಯಬಹುದು. ಹಿಂದೂ ಮತ್ತು ಹಿಂದೂ ಧರ್ಮದ ವಿರುದ್ಧ ರಾಹುಲ್ ಗಾಂಧಿ ದ್ವೇಷವನ್ನು ಎಂದಿಗೂ ಕಂಡು ಹಿಡಿಯಲಾಗುವುದಿಲ್ಲ. ಹಿಂದೂ ಧರ್ಮದಲ್ಲಿ ಶಕ್ತಿ ಎಂಬ ಪದವಿದೆ, ನಮ್ಮ ಹೋರಾಟ ಶಕ್ತಿ ವಿರುದ್ಧ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ದುಷ್ಟ ಶಕ್ತಿಗಳ ದಾಳಿಯಿಂದ ನಮ್ಮ ಧರ್ಮವನ್ನು ರಕ್ಷಿಸಲು ಚುನಾವಣೆಯಲ್ಲಿ ಹಿಂದೂಗಳು ಕಾಂಗ್ರೆಸ್ ಅನ್ನು ನಿರ್ದಯವಾಗಿ ತೆಗೆದು ಹಾಕಬೇಕು’ ಎಂದು ಪೋಸ್ಟ್ ಹಾಕಿದ್ದರು.

‘ಇದು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ. ಕಾನೂನು ಕ್ರಮ ಕೈಗೊಂಡು ವರದಿ ಸಲ್ಲಿಸಬೇಕು’ ಎಂದು ಚುನಾವಣಾ ಆಯೋಗವು ಜಿಲ್ಲಾ ಚುನಾವಣಾಧಿಕಾರಿಗೆ ಸೂಚನೆ ನೀಡಿತ್ತು.

ಮರಿತಿಬ್ಬೇಗೌಡ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಅವರು ಗುರುವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ರಾಜೀನಾಮೆ ಪತ್ರವನ್ನು ಅಂಗೀಕರಿಸಿದರು.

ಈ ಸಂದರ್ಭದಲ್ಲಿ ಮರಿತಿಬ್ಬೇಗೌಡ ಮಾತನಾಡಿ, ‘ವೈಯಕ್ತಿಕ ಕಾರಣಗಳಿಗೆ ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದು, ಜೆಡಿಎಸ್ ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ನೀಡುವೆ. ಕಾಂಗ್ರೆಸ್ ಸೇರುವ ಬಗ್ಗೆ ಇನ್ನೂ ತೀರ್ಮಾನಿಸಿಲ್ಲ’ ಎಂದರು.

‘ನನ್ನ ಹಿತೈಷಿಗಳು ಹಾಗೂ ನನ್ನ ಕ್ಷೇತ್ರದ ಶಿಕ್ಷಕ ಮತದಾರರ ಜೊತೆ ಸಮಾಲೋಚನೆ ನಡೆಸಿ, ಮುಂದಿನ ನಿರ್ಧಾರ ತೆಗೆದುಕೊಳ್ಳುವೆ. ಲೋಕಸಭೆ ಅಥವಾ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ ಆಲೋಚನೆ ಇಲ್ಲ’ ಎಂದರು.

‘ಶೀಘ್ರ ಮತ್ತೊಬ್ಬ ಎಂಎಲ್‌ಸಿ ರಾಜೀನಾಮೆ’

ಹುಬ್ಬಳ್ಳಿ: ‘ನಾನು ವಿಧಾನ ಪರಿಷತ್ ಸಭಾಪತಿಯಾದ ದಿನದಿಂದ ಈವರೆಗೆ 11 ಮಂದಿ ಸದಸ್ಯರು ರಾಜೀನಾಮೆ ಸಲ್ಲಿಸಿದ್ದಾರೆ. ಇದೊಂದು ರೀತಿ ದಾಖಲೆಯಾಗಿದೆ. ಒಂದೆರಡು ದಿನಗಳಲ್ಲಿ ಮತ್ತೊಬ್ಬ ಸದಸ್ಯರು ರಾಜೀನಾಮೆ ಸಲ್ಲಿಸುವರು’ ಎಂದು ವಿಧಾನ ಪರಿಷತ್ ಸದಸ್ಯ ಬಸವರಾಜ ಹೊರಟ್ಟಿ ಹೇಳಿದರು.

ಮೊಸಳೆ ಮೇಲೆ ಸವಾರಿ: ‘ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳುವ ಬಗ್ಗೆ ಜೆಡಿಎಸ್ ವರಿಷ್ಠರಾದ ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ಒಮ್ಮೆಯೂ ನಮ್ಮ ಜೊತೆ ಚರ್ಚಿಸಲಿಲ್ಲ. ಅಪ್ಪ–ಮಕ್ಕಳು ಸೇರಿ ನಿರ್ಧಾರ ಕೈಗೊಂಡರು. ಬಿಜೆಪಿ ಜೊತೆಗಿನ ಮೈತ್ರಿ ಮೊಸಳೆ ಮೇಲಿನ ಸವಾರಿ’ ಎಂದು ಟೀಕಿಸಿದರು.

‘1985ರಲ್ಲಿ ಜನತಾ ಪಕ್ಷದ ಮೂಲಕ ರಾಜಕೀಯ ಜೀವನ ಆರಂಭಿಸಿದೆ. 2000ರಲ್ಲಿ ಎಂಎಲ್‌ಸಿಗೆ ಟಿಕೆಟ್ ನೀಡದಿದ್ದಾಗ ಕಾಂಗ್ರೆಸ್ ಸೇರಿ, ದಕ್ಷಿಣ ಶಿಕ್ಷಕ ಮತಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಆಯ್ಕೆಯಾದೆ. 2006ರಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ, ಜಯಗಳಿಸಿದೆ. 2012, 2018ರಲ್ಲಿ ಪುನಃ ಜೆಡಿಎಸ್‌ನಿಂದ ಎಂಎಲ್‌ಸಿ ಆದೆ’ ಎಂದು ಅವರು ಹೇಳಿದರು.

ಅಭ್ಯರ್ಥಿ ಬದಲಿಸದಿದ್ದರೆ ಬಂಡಾಯ ಖಚಿತ: ಎಚ್ಚರಿಕೆ

ದಾವಣಗೆರೆ: ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬದಲಾಗಬೇಕು. ಬದಲಾಗದೇ ಇದ್ದರೆ ಕೊನೆಯ ಕ್ಷಣದಲ್ಲಿ ಬಂಡಾಯವಾಗಿ ‘ಅಚ್ಚರಿ ಅಭ್ಯರ್ಥಿ’ಯನ್ನು ಕಣಕ್ಕೆ ಇಳಿಸಲಾಗುವುದು ಎಂದು ಮಾಜಿ ಸಚಿವರಾದ ಎಸ್.ಎ. ರವೀಂದ್ರನಾಥ್ ಹಾಗೂ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು.

‘ಅಭ್ಯರ್ಥಿ ಬದಲಾಗಲಿದ್ದಾರೆ ಎಂಬ ವಿಶ್ವಾಸ ಇದೆ. ಬದಲಿಸಿದ ಹತ್ತಾರು ನಿದರ್ಶನಗಳು ನಮ್ಮೆದುರಿಗೆ ಇವೆ. ನಾಮಪತ್ರ ಸಲ್ಲಿಕೆಯ ಕೊನೆ ಕ್ಷಣದವರೆಗೂ ಅಭ್ಯರ್ಥಿ ಬದಲಾವಣೆಗೆ ಅವಕಾಶವಿದೆ. ಕೊನೆಯ ದಿನದವರೆಗೂ ಕಾಯುತ್ತೇವೆ. ಬದಲಿಸದಿದ್ದರೆ ಬಿಜೆಪಿಯಲ್ಲಿರುವ ಪ್ರಮುಖರೊಬ್ಬರನ್ನು ಕಣಕ್ಕಿಳಿಸಿ ಗೆಲ್ಲಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿಯವರಿಗೆ ಒಪ್ಪಿಸುತ್ತೇವೆ’ ಎಂದು ಸಭೆಯ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

‘ಮೋದಿ ವಿರುದ್ಧ, ಜೆ.ಪಿ.ನಡ್ಡಾ, ಬಿ.ಎಸ್. ಯಡಿಯೂರಪ್ಪ ಅವರ ವಿರುದ್ಧ ನಾವು ಹೇಳಿಕೆ ನೀಡಿಲ್ಲ. ನಾವು ಪಕ್ಷ ವಿರೋಧಿ ಚಟುವಟಿಕೆ ಮಾಡಿಲ್ಲ. ಹೋಳಿ ಹಬ್ಬದ ನಂತರ ವಿವಿಧ ಮಠಾಧೀಶರ, ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸಿ ಅಭ್ಯರ್ಥಿಯನ್ನು ಕಣಕ್ಕಿಳಿಸುತ್ತೇವೆ’ ಎಂದು ಮಾಹಿತಿ ನೀಡಿದರು.

ಮಾಜಿ ಸಚಿವ ಜಿ.ಕರುಣಾಕರ ರೆಡ್ಡಿ, ಮಾಜಿ ಶಾಸಕರಾದ ಎ.ಎಚ್. ಶಿವಯೋಗಿ ಸ್ವಾಮಿ, ಬಸವರಾಜ್ ನಾಯ್ಕ, ಮುಖಂಡರಾದ ಲೋಕಿಕೆರೆ ನಾಗರಾಜ್, ಬಿ.ಜಿ. ಅಜಯಕುಮಾರ, ಮಾಡಾಳ್ ಮಲ್ಲಿಕಾರ್ಜುನ್, ಡಾ.ಟಿ.ಜಿ. ರವಿಕುಮಾರ್ ಈ ಸಂದರ್ಭ ಇದ್ದರು.

ಕೈ– ಕಮಲ ನಡುವೆ ಸ್ಪಷ್ಟವಾಯಿತು ಸ್ಪರ್ಧೆಯ ಚಿತ್ರಣ

ದಾವಣಗೆರೆ: ಸ್ತ್ರೀಶಕ್ತಿ ಜಿದ್ದಾಜಿದ್ದಿ

• ಸಿದ್ದಯ್ಯ ಹಿರೇಮಠ


ಡಾ.ಪ್ರಭಾ


ಗಾಯತ್ರಿ

ದಾವಣಗೆರೆ: ‘ದಾವಣಗೆರೆ ಲೋಕಸಭೆ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಯಾರಾಗಲಿದ್ದಾರೆ’ ಎಂಬ ಕುತೂಹಲಕ್ಕೆ ಗುರುವಾರ ರಾತ್ರಿ ತೆರೆಬಿದ್ದಿದೆ.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪತ್ನಿ, ಶಾಸಕ ಶಾಮನೂರು ಶಿವಶಂಕರಪ್ಪ ಅವರ ಸೊಸೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರಿಗೇ ನಿರೀಕ್ಷೆಯಂತೆ ಕಾಂಗ್ರೆಸ್ ಟಿಕೆಟ್ ಘೋಷಣೆಯಾಗಿದೆ.

ಇದರಿಂದಾಗಿ ಕ್ಷೇತ್ರವು ಇದೇ ಮೊದಲ ಬಾರಿ ಮಹಿಳೆಯರಿಬ್ಬರ ನಡುವಿನ ‘ಜಿದ್ದಾಜಿದ್ದಿ’ ಕಣವಾಗಿ ಹೊರಹೊಮ್ಮಿದೆ.

ಹಾಲಿ ಸಂಸದ ಜಿ.ಎಂ. ಸಿದ್ದೇಶ್ವರ ಅವರ ಪತ್ನಿ ಗಾಯತ್ರಿ ಅವರಿಗೆ ಬಿಜೆಪಿಯು ‘ಅಚ್ಚರಿಯ ಅಭ್ಯರ್ಥಿ’ ಎಂಬಂತೆ ಕಳೆದ ವಾರವೇ ಟಿಕೆಟ್ ಘೋಷಿಸಿದ್ದರಿಂದ ಅವರ ಎದುರಾಳಿ ಯಾರಾಗಬಹುದು ಎಂಬ ಕುತೂಹಲ ಮತದಾರರಲ್ಲಿ ಮನೆ ಮಾಡಿತ್ತು.

ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿರುವ ಪ್ರಮುಖ ಪಕ್ಷಗಳು ಹೆಣ್ಮಕ್ಕಳಿಗೇ ಮಣೆ ಹಾಕಿದಂತಾಗಿದೆ. ಅಲ್ಲದೇ ಲೋಕಸಭೆ ಚುನಾವಣೆಗೆ ಸಂಬಂಧಿಸಿದಂತೆ, ಮೊದಲಿನಿಂದಲೂ ‘ಪ್ರಬಲ ರಾಜಕೀಯ ಎದುರಾಳಿ’ ಎನ್ನಿಸಿಕೊಂಡಿರುವ ‘ಶಾಮನೂರು’ ಮತ್ತು ‘ಭೀಮಸಮುದ್ರ’ ಕುಟುಂಬಗಳ ಸದಸ್ಯರಿಗೇ ಉಭಯ ಪಕ್ಷಗಳ ಟಿಕೆಟ್ ದೊರೆತಿರುವುದರಿಂದ ಪ್ರಬಲ ಸ್ಪರ್ಧೆ ನಿರೀಕ್ಷಿಸಲಾಗುತ್ತಿದೆ.

ಆದರೆ, ಗಾಯತ್ರಿ ಸಿದ್ದೇಶ್ವರ ಅವರಿಗೆ ಟಿಕೆಟ್ ನೀಡಿದ್ದರಿಂದ ಬಿಜೆಪಿ ಬಂಡಾಯ ಮುಖಂಡರು ಹಾಗೂ ಡಾ.ಪ್ರಭಾ ಅವರಿಗೆ ಟಿಕೆಟ್ ನೀಡಿದ್ದರಿಂದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಜಿ.ಬಿ. ವಿನಯಕುಮಾರ್ ಅವರು ಕಾರ್ಯಕರ್ತರ, ಮತದಾರರ ಅಭಿಪ್ರಾಯ ಸಂಗ್ರಹಿಸಿ ಮುಂದಿನ ನಡೆ ನಿರ್ಧರಿಸುವುದಾಗಿ ಗುರುವಾರವಷ್ಟೇ ಘೋಷಿಸಿದ್ದರಿಂದ ಎರಡೂ ಪಕ್ಷಗಳ ನಡುವೆ ಬಂಡಾಯದ ಸಂಭವನೀಯತೆ ತಳ್ಳಿ ಹಾಕುವಂತಿಲ್ಲ.

ಇದರಿಂದಾಗಿ ಕ್ಷೇತ್ರದಲ್ಲಿ ನೇರ ಸ್ಪರ್ಧೆ ಏರ್ಪಡಲಿದೆಯೇ ಅಥವಾ ಚತುಷ್ಕೋನ ಸ್ಪರ್ಧೆಗೆ ಕ್ಷೇತ್ರ ವೇದಿಕೆ ಆಗಲಿದೆಯೇ ಎಂಬ ಕುತೂಹಲ ಕೆರಳಿದೆ.

ನಾಲ್ಕು ದಿನ ಕಾದು ನಿರ್ಧಾರ: ಸಂಗಣ್ಣ

ಪ್ರಜಾವಾಣಿ ವಾರ್ತೆ

ಕೊಪ್ಪಳ: ‘ಕೊಪ್ಪಳ ಲೋಕಸಭಾ ಕ್ಷೇತ್ರದ ಟಿಕೆಟ್ ತಪ್ಪಿದ ಬಳಿಕ ರಾಜ್ಯದ ಹಲವು ನಾಯಕರು ಫೋನ್ ಕರೆ ಮಾಡಿ ಮಾತನಾಡಿದ್ದಾರೆ. ಟಿಕೆಟ್ ವಿಚಾರದ ಬಗ್ಗೆ ಮರು ಚರ್ಚೆ ಮಾಡುವುದಾಗಿ ಭರವಸೆ ನೀಡಿದ್ದಾರೆ. ಹೀಗಾಗಿ ನಾಲ್ಕು ದಿನ ಕಾದು ಮುಂದಿನ ರಾಜಕೀಯ ನಡೆ ಬಗ್ಗೆ ನಿರ್ಧರಿಸುವೆ’ ಎಂದು ಬಿಜೆಪಿ ಸಂಸದ ಸಂಗಣ್ಣ ಕರಡಿ ಹೇಳಿದರು.

ನಗರದಲ್ಲಿ ಗುರುವಾರ ನಡೆದ ಬೆಂಬಲಿಗರ ಹಾಗೂ ಅಭಿಮಾನಿಗಳ ಸ್ವಾಭಿಮಾನಿ ಸಮಾವೇಶದಲ್ಲಿ ಭಾವಾವೇಶದಿಂದ ಮಾತನಾಡಿದ ಅವರು, ‘ಬಿ.ಎಸ್. ಯಡಿಯೂರಪ್ಪ, ಬಿ.ವೈ. ವಿಜಯೇಂದ್ರ, ರಾಮದಾಸ್, ಪ್ರಲ್ಹಾದ ಜೋಶಿ, ನಳಿನ್ ಕುಮಾರ್ ಕಟೀಲ್ ಮತ್ತು ಸುನಿಲ್ ಕುಮಾರ್ ಸೇರಿದಂತೆ ಪಕ್ಷದ ಹಲವರು ಕರೆ ಮಾಡಿ ಮಾತನಾಡಿದ್ದಾರೆ. ಎರಡ್ಮೂರು ದಿನಗಳಲ್ಲಿ ಪಕ್ಷದ ವರಿಷ್ಠರು ನನ್ನನ್ನೇ ಕರೆಸಿಕೊಳ್ಳಬಹುದು ಅಥವಾ ಕೊಪ್ಪಳಕ್ಕೆ ಬರಬಹುದು’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

> ಸಂಸದ ಸಂಗಣ್ಣ ಕರಡಿ ಬಿಜೆಪಿ ತೊರೆಯಲ್ಲ, ಬಂಡಾಯವಾಗಿ ಸ್ಪರ್ಧಿಸಲ್ಲ. ಅವರ ಜೊತೆ ಮಾತನಾಡಿದ್ದೇನೆ. ಬೆಂಬಲಿಗರ ಜೊತೆ ಸಭೆ ನಡೆಸುವುದಾಗಿ ಹೇಳಿದ್ದಾರೆ
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

‘ಕೊಪ್ಪಳ ಕ್ಷೇತ್ರದ ಬಿಜೆಪಿ ಟಿಕೆಟ್ ಬಗ್ಗೆ ಮರು ಪರಿಶೀಲಿಸಿ ಸಂಗಣ್ಣ ಅವರಿಗೆ ಟಿಕೆಟ್ ನೀಡದಿದ್ದರೆ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಬೇಕು’ ಎಂದು ಕೆಲ ಬೆಂಬಲಿಗರು ಸಲಹೆ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಂಗಣ್ಣ, ‘ನಾಲ್ಕು ದಿನಗಳ ಬಳಿಕ ಮುಂದಿನ ನಿರ್ಧಾರ ಮಾಡೋಣ’ ಎಂದರು.

ಎಐಎಡಿಎಂಕೆ: 16 ಅಭ್ಯರ್ಥಿಗಳ ಘೋಷಣೆ

ಚೆನ್ನೈ (ಪಿಟಿಐ): ತಮಿಳುನಾಡಿನ 16 ಲೋಕಸಭಾ ಕ್ಷೇತ್ರಗಳಿಗೆ ಎಐಎಡಿಎಂಕೆ ಗುರುವಾರ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ದಿವಂಗತ ಮಾಜಿ ಮುಖ್ಯಮಂತ್ರಿ ಜೆ. ಜಯಲಲಿತಾ ಅವರ ವಿರುದ್ಧ ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದ ವಕೀಲೆ ಸಿಮ್ಲಾ ಮುತ್ತುಚೋಜನ್ ಅವರಿಗೆ ಟಿಕೆಟ್ ಘೋಷಿಸಲಾಗಿದೆ. ಅವರನ್ನು ತಿರುನೆಲ್ವೇಲಿ ಕ್ಷೇತ್ರದ ಅಭ್ಯರ್ಥಿಯಾಗಿ ಹೆಸರಿಸಲಾಗಿದೆ. ಅವರು 2016ರಲ್ಲಿ ಆರ್‌.ಕೆ. ನಗರ ವಿಧಾನಸಭಾ ಕ್ಷೇತ್ರದಿಂದ ಜಯಲಲಿತಾ ವಿರುದ್ಧ ಸೋತಿದ್ದರು.

ಡಿಎಂಕೆ ಮಾಜಿ ನಾಯಕ ಎಸ್. ಪಿ.ಸರ್ಗುಣ ಪಾಂಡಿಯನ್ ಅವರ ಸೊಸೆಯಾದ ಮುತ್ತುಚೋಜನ್ ಅವರು ಇತ್ತೀಚೆಗಷ್ಟೇ ಎಐಎಡಿಎಂಕೆ ಸೇರಿದ್ದರು. ವೃತ್ತಿಯಲ್ಲಿ ವಕೀಲರಾಗಿರುವ ಅವರು ಎಐಎಡಿಎಂಕೆ ಘೋಷಿಸಿದ ಏಕೈಕ ಮಹಿಳಾ ಅಭ್ಯರ್ಥಿ. ಪಕ್ಷವು ಒಟ್ಟು ಐವರು ವಕೀಲರಿಗೆ ಟಿಕೆಟ್ ಘೋಷಿಸಿದೆ.

ಹೊಸ ಪಟ್ಟಿಯಲ್ಲಿ ಮೂವರು ವೈದ್ಯರ ಹೆಸರನ್ನು ಪ್ರಕಟಿಸಲಾಗಿದ್ದು, ಪಕ್ಷವು ಒಟ್ಟಾರೆ ಐವರು ವೈದ್ಯರನ್ನು ಅಭ್ಯರ್ಥಿಯಾಗಿ ಹೆಸರಿಸಿದಂತಾಗಿದೆ.

ಮಾರ್ಚ್ 20ರಂದು ಮೊದಲ ಪಟ್ಟಿಯಲ್ಲಿ 16 ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಲಾಗಿತ್ತು.

ಚುನಾವಣೆ ಹತ್ತಿರವಾಗಿರುವ ಹೊತ್ತಿನಲ್ಲಿ ತಡೆ ನೀಡಿದರೆ ಗೊಂದಲ ಸೃಷ್ಟಿ: ‘ಸುಪ್ರೀಂ’

ಚುನಾವಣಾ ಆಯುಕ್ತರ ನೇಮಕ ತಡೆಗೆ ನಕಾರ

ನವದೆಹಲಿ (ಪಿಟಿಐ): ಜ್ಞಾನೇಶ್ ಕುಮಾರ್ ಮತ್ತು ಸುಖಬೀರ್ ಸಿಂಗ್ ಸಂಧು ಅವರನ್ನು ನೂತನ ಚುನಾವಣಾ ಆಯುಕ್ತರನ್ನಾಗಿ ನೇಮಕ ಮಾಡಿದ್ದಕ್ಕೆ ತಡೆಯಾಜ್ಞೆ ನೀಡಲು ಸುಪ್ರೀಂ ಕೋರ್ಟ್ ಗುರುವಾರ ನಿರಾಕರಿಸಿದೆ. ಲೋಕಸಭಾ ಚುನಾವಣೆ ಹತ್ತಿರವಾಗಿರುವ ಈ ಹೊತ್ತಿನಲ್ಲಿ ತಡೆಯಾಜ್ಞೆ ನೀಡಿದರೆ ‘ಗೊಂದಲಗಳು ಹಾಗೂ ಅನಿಶ್ಚಿತತೆ’ ಸೃಷ್ಟಿಯಾಗುತ್ತದೆ ಎಂದು ಅದು ಹೇಳಿದೆ.

ಚುನಾವಣಾ ಆಯೋಗವು ಕಾರ್ಯಾಂಗದ ನಿಯಂತ್ರಣದಲ್ಲಿ ಇಲ್ಲ ಎಂದು ಹೇಳಿರುವ ಕೋರ್ಟ್, ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಚುನಾವಣಾ ಆಯುಕ್ತರ (ನೇಮಕ, ಸೇವಾ ನಿಯಮಗಳು ಮತ್ತು ಅಧಿಕಾರಾವಧಿ) ಕಾಯ್ದೆ – 2023ರ ಜಾರಿಗೆ ಮಧ್ಯಂತರ ತಡೆ ನೀಡುವುದಕ್ಕೂ ಕೂಡ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರು ಇದ್ದ ವಿಭಾಗೀಯ ಪೀಠ ನಿರಾಕರಿಸಿದೆ.

ಮುಖ್ಯಾಂಶಗಳು

- ಆಯೋಗವು ಕಾರ್ಯಾಂಗದ ನಿಯಂತ್ರಣದಲ್ಲಿ ಇಲ್ಲ: ಕೋರ್ಟ್
- ‘ಆಯ್ಕೆ ಸಮಿತಿಯಲ್ಲಿ ನ್ಯಾಯಾಂಗದ ಪ್ರತಿನಿಧಿ ಇರಬೇಕು ಎಂದು ಹೇಳಿಲ್ಲ’

ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿರುವ ಅರ್ಜಿಗಳ ವಿಚಾರಣೆ ನಡೆಸುವುದಾಗಿ ಹೇಳಿರುವ ಪೀಠವು, ಆರು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ. ಅರ್ಜಿಗಳ ವಿಚಾರಣೆಯನ್ನು ಆಗಸ್ಟ್ 5ಕ್ಕೆ ನಿಗದಿ ಮಾಡಲಾಗಿದೆ.

‘ಅವರನ್ನು ನೇಮಕ ಮಾಡಿಯಾಗಿದೆ, ಚುನಾವಣೆ ಹತ್ತಿರವಾಗುತ್ತಿದೆ... ಹೊಸ ಚುನಾವಣಾ ಆಯುಕ್ತರ ವಿರುದ್ಧವಾಗಿ ಯಾವುದೇ ಆರೋಪಗಳು ಇಲ್ಲ’ ಎಂದು ಪೀಠವು ನೇಮಕವನ್ನು ಪ್ರಶ್ನಿಸಿದವರನ್ನು ಉದ್ದೇಶಿಸಿ ಹೇಳಿತು.



2023ರ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿರುವ ಹಾಗೂ ಹೊಸ ಚುನಾವಣಾ ಆಯುಕ್ತರ ನೇಮಕಕ್ಕೆ ತಡೆ ಕೋರಿರುವ ಅರ್ಜಿಗಳ ವಿಚಾರಣೆಯನ್ನು ಪೀಠವು ನಡೆಸಿತು. ‘ನೇಮಕಾತಿಗೆ ತಡೆ ಕೋರಿದ್ದ ಅರ್ಜಿಗಳನ್ನು ನಾವು ವಜಾಗೊಳಿಸುತ್ತಿದ್ದೇವೆ’ ಎಂದು ಪೀಠವು ಹೇಳಿತು.

ಇಬ್ಬರು ಚುನಾವಣಾ ಆಯುಕ್ತರ ನೇಮಕದ ವಿಚಾರದಲ್ಲಿ ಕೇಂದ್ರ ಸರ್ಕಾರ ತೋರಿದ ಅವಸರವನ್ನು ಪೀಠವು ಪ್ರಶ್ನಿಸಿತು. ‘ನ್ಯಾಯದಾನ ಮಾಡುವುದಷ್ಟೇ ಮುಖ್ಯವಲ್ಲ. ನ್ಯಾಯದಾನ ಆಗುತ್ತಿದೆ ಎಂಬುದು ಗೊತ್ತಾಗುವಂತೆಯೂ ಇರಬೇಕು... ನಾವು ಪ್ರಜಾ ಪ್ರಾತಿನಿಧ್ಯ ಕಾಯ್ದೆಯ ಬಗ್ಗೆ ಪರಿಶೀಲಿಸುತ್ತಿದ್ದೇವೆ. ಇದು ನನ್ನ ಪ್ರಕಾರ ಸಂವಿಧಾನದ ನಂತರ ಅತ್ಯಂತ ಮಹತ್ವದ್ದು. ಜನರ ಹುಬ್ಬೇರುವಂತೆ ಮಾಡಲು ಅವಕಾಶ ಏಕೆ ನೀಡಬೇಕು’ ಎಂದು ನ್ಯಾಯಮೂರ್ತಿ ದತ್ತ ಅವರು ಕೇಂದ್ರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಪ್ರಶ್ನಿಸಿತು.


ಕೇಂದ್ರವು 2023ರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪನ್ನು ಪಾಲಿಸಿಲ್ಲ, ಆಯ್ಕೆ ಸಮಿತಿಯಿಂದ ಸಿಜೆಐ ಅವರನ್ನು ಕೈಬಿಡಲಾಗಿದೆ ಎಂದು ಅರ್ಜಿದಾರರ ಪರ ವಕೀಲ ಪ್ರಶಾಂತ್ ಭೂಷಣ್ ದೂರಿದರು.

ಚುನಾವಣಾ ಆಯುಕ್ತರ ನೇಮಕಕ್ಕೆ ಸಂಬಂಧಿಸಿದ ಆಯ್ಕೆ ಸಮಿತಿಯಲ್ಲಿ ನ್ಯಾಯಾಂಗದ ಪ್ರತಿನಿಧಿ ಇರಬೇಕು ಎಂದು ಸುಪ್ರೀಂ ಕೋರ್ಟ್ 2023ರ ತೀರ್ಪಿನಲ್ಲಿ ಎಲ್ಲಿಯೂ ಹೇಳಿಲ್ಲ. ಆ ವಿಚಾರದ ಬಗ್ಗೆ ತೀರ್ಮಾನ ಕೈಗೊಳ್ಳುವ ಕೆಲಸವನ್ನು ಸಂಸತ್ತಿಗೆ ಬಿಟ್ಟಿತ್ತು ಎಂದು ಪೀಠವು ವಿವರಿಸಿತು.

2023ರಲ್ಲಿ, ಸಿಜೆಐ, ಪ್ರಧಾನಿ ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ಇರುವ ಸಮಿತಿಯನ್ನು ರಚಿಸುವಂತೆ ಹೇಳಿದ ಸುಪ್ರೀಂ ಕೋರ್ಟ್ ತೀರ್ಪು, ಸಂಸತ್ತು ಹೊಸ ಕಾನೂನು ರಚಿಸುವವರೆಗೆ ಆ ಸಮಿತಿ ಚಾಲ್ತಿಯಲ್ಲಿರಲಿ ಎಂಬ ಆಶಯ ಹೊಂದಿತ್ತು ಎಂದು ಪೀಠವು ಭೂಷಣ್ ಅವರಿಗೆ ತಿಳಿಸಿತು.

ಕಾಯ್ದೆಯೊಂದನ್ನು ರೂಪಿಸುವಂತೆ ಸಂಸತ್ತಿಗೆ ನೆನಪಿಸುವ ಕೆಲಸವನ್ನು ಆ ತೀರ್ಪು ಮಾಡಿತ್ತೇ ವಿನಾ, ಕಾನೂನನ್ನು ಯಾವ ಬಗೆಯಲ್ಲಿ ರೂಪಿಸಬೇಕು ಎಂಬುದನ್ನು ಹೇಳಿರಲಿಲ್ಲ ಎಂದು ಸ್ಪಷ್ಟಪಡಿಸಿತು. ಆದರೆ ಹೊಸದಾಗಿ ಇಬ್ಬರು ಚುನಾವಣಾ ಆಯುಕ್ತರನ್ನು ನೇಮಕ ಮಾಡಲು ಅನುಸರಿಸಿದ ಪ್ರಕ್ರಿಯೆಯು ಪಾರದರ್ಶಕ ಆಗಿರಲಿಲ್ಲ ಎಂಬ ಭೂಷಣ್ ವಾದವನ್ನು ತಾನು ಮೇಲ್ನೋಟಕ್ಕೆ ಒಪ್ಪುವುದಾಗಿ ಹೇಳಿತು.

ಷೇರುಪೇಟೆ ವಹಿವಾಟು 539



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,839
ಇಂದಿನ ಅಂತ್ಯ	22,011
▲	172
ದಿನದ ಗರಿಷ್ಠ	22,080

ವಿನಿಮಯ ದರ

$ ಡಾಲರ್	83.13
£ ಪೌಂಡ್	106.18
€ ಯುರೊ	90.75
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹470
12 ಕ್ಕೆ	₹63
ಮೈಸೂರು	
100ಕ್ಕೆ	₹472

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹1000 (1005)
ಸೂರ್ಯಕಾಂತಿ (ರಿಫೈನ್ಡ್)	₹975 (975)
ಪಾಮೋಲಿನ್	₹958 (962)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹9000-9000
ಪುತ್ತೂರು	₹5500-8600
ತಿಪಟೂರು	₹7500-8811
ತುರುವೇಕೆರೆ	₹8700-8800

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹180
ಆರ್‌ಎಸ್‌ಎಸ್-5	₹172
ಗುಡ್ ಲಾಟ್	₹162

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹300-455
ದ್ವಿತಳಿ (ಬಿ.ವಿ)	₹309-560

ವಿಡಿಯೊ ವಿವರ ಪ್ರದರ್ಶನ ಕಡ್ಡಾಯ ಯೂಟ್ಯೂಬ್ ಹೊಸ ಮಾನದಂಡ

ನವದೆಹಲಿ (ಪಿಟಿಐ): ನೈಜ ವಿಡಿಯೊಗಳೇ ಅಥವಾ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿ ಸೃಷ್ಟಿಸಲಾಗಿದೆಯೇ ಎಂಬ ಬಗ್ಗೆ ವಿಡಿಯೊ ತಯಾರಕರು ಕಡ್ಡಾಯವಾಗಿ ಅವುಗಳ ಮೇಲೆ ಲೇಬಲ್ ಪ್ರದರ್ಶಿಸಬೇಕಿದೆ ಎಂದು ಗೂಗಲ್ ಒಡೆತನದ ಯೂಟ್ಯೂಬ್ ಸೂಚಿಸಿದೆ.

ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡುವ ವಿಡಿಯೊಗಳ ಪಾರದರ್ಶಕತೆ ಬಗ್ಗೆ ತಿಳಿಯಲು ಬಳಕೆದಾರರು ಇಚ್ಛಿಸುತ್ತಾರೆ. ಹಾಗಾಗಿ, ಅವುಗಳ ನೈಜತೆ ಕುರಿತು ತಿಳಿಸುವುದೇ ಈ ಹೊಸ ಮಾನದಂಡದ ಮೂಲ ಉದ್ದೇಶವಾಗಿದೆ ಎಂದು ಹೇಳಿದೆ.

ಪ್ರಸ್ತುತ ಯೂಟ್ಯೂಬ್‌ನ ಕ್ರಿಯೇಟರ್ ಸ್ಟುಡಿಯೊದಲ್ಲಿ ಹೊಸ ಟೂಲ್ ಅನ್ನು ಪರಿಚಯಿಸಲಾಗಿದೆ. ಹಾಗಾಗಿ, ವಿಡಿಯೊ ತಯಾರಕರು ಮತ್ತು ವೀಕ್ಷಕರ ನಡುವಿನ ನಂಬಿಕೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವುದು ಅನಿವಾರ್ಯವಾಗಿದೆ ಎಂದು ಹೇಳಿದೆ. ವಿಡಿಯೊಗಳಲ್ಲಿ ಇರುವ ವಿಷಯದ ನೈಜತೆ, ನೈಜ ವ್ಯಕ್ತಿ, ಸ್ಥಳ, ದೃಶ್ಯ ಅಥವಾ ಕಾರ್ಯಕ್ರಮಗಳ ಬಗೆಗಿನ ಮಾಹಿತಿಯನ್ನು ಅವುಗಳ ತಯಾರಕರು, ವೀಕ್ಷಕರಿಗೆ ಬಹಿರಂಗಪಡಿಸಬೇಕಿದೆ. ಅನಿಮೇಟೆಡ್, ಎ.ಐ ತಂತ್ರಜ್ಞಾನ ಬಳಸಿ ವಿಡಿಯೊ ಸೃಷ್ಟಿಸುವವರು ನಮಗೆ ಅಗತ್ಯವಿಲ್ಲ ಎಂದಿದೆ.

ವಿಡಿಯೊಗಳ ಮೇಲೆ ಲೇಬಲ್ ಪ್ರದರ್ಶಿಸಿದರೂ ಅದರ ನೈಜತೆ ಬಗ್ಗೆ ಮಾಹಿತಿಯನ್ನು ಬಹಿರಂಗಪಡಿಸುವುದು ಕಡ್ಡಾಯ. ಇಲ್ಲವಾದರೆ ಅಂತಹ ವಿಡಿಯೊಗಳು ಜನರನ್ನು ದಿಕ್ಕುತಪ್ಪಿಸುವ ಸಾಧ್ಯತೆ ಇರುತ್ತದೆ ಎಂದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ

21-03-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	965 (975)
ಪಾಮ್ ವಾರದ ಡೆಲಿವರಿ	960 (960)
ಸೂರ್ಯಕಾಂತಿ ಎಣ್ಣೆ ಕಚ್ಚಾ	925 (925)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ₹**66,500** (65,400)

ಬೆಳ್ಳಿ ಕೆ.ಜಿ ₹**75,000** (73,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಾರುಕಟ್ಟೆ ಧಾರಣೆ

ಬಂಟ್ವಾಳ (ಅಡಿಕೆ)	
ಕೋಕ	18000-28500
ಹೊಸತು	28500-35500
ಹಳತು	34500-44000
ಚಿತ್ರದುರ್ಗ	
ಅಪಿ	46919-47329
ಬೆಟ್ಟೆ	34659-35079
ಕೆಂಪುಗೋಟು	29109-29510
ರಾಶಿ	46439-46869
ಕಾರ್ಕಳ	
ಹೊಸತು	25000-35500
ಹಳತು	30000-44500
ಪುತ್ತೂರು	
ಕೋಕ	11500-26000
ಹೊಸತು	26500-35500
ಸಾಗರ	
ಬಿಳಿಗೋಟು	10290-26129
ಚಾಲಿ	24800-33839
ಕೋಕ	10199-27699
ಕೆಂಪುಗೋಟು	18299-32899
ರಾಶಿ	26989-48319
ಸಿಪ್ಪೆಗೋಟು	8919-18170
ಶಿವಮೊಗ್ಗ	
ಬೆಟ್ಟೆ	47200-56609
ಗೊರಬಲು	18000-32869
ರಾಶಿ	30000-48599
ಸರಕು	50063-83510
ಸಿದ್ದಾಪುರ	
ಬಿಳಿಗೋಟು	25209-29209
ಚಾಲಿ	35299-37239
ಕೋಕ	24799-30209
ಹೊಸಚಾಲಿ	33299-36099
ಕೆಂಪುಗೋಟು	31069-31699
ರಾಶಿ	44349-46699
ತಟ್ಟಿಬೆಟ್ಟೆ	34599-35700
ಶಿರಸಿ	
ಬೆಟ್ಟೆ	37323-41298
ಬಿಳಿಗೋಟು	25009-30399
ಚಾಲಿ	31536-35600
ಕೆಂಪುಗೋಟು	24799-32099
ರಾಶಿ	42508-46309
ಯಲ್ಲಾಪುರ	
ಅಪಿ	59169-62169
ಬಿಳಿಗೋಟು	21799-30899
ಚಾಲಿ	31915-38180
ಕೋಕ	12899-25499
ಕೆಂಪುಗೋಟು	24899-34719
ರಾಶಿ	43219-55510
ತಟ್ಟಿಬೆಟ್ಟೆ	35899-42899

ಕ್ವಿಂಟಲ್‌ಗೆ ₹20 ಸಾವಿರ ಧಾರಣೆ: ಕಳೆದ ವರ್ಷಕ್ಕಿಂತ 3 ಪಟ್ಟು ದರ ಹೆಚ್ಚಳ

ಸೀಗೆಕಾಯಿಗೆ ಬಂಪರ್ ಬೆಲೆ

ಪ್ರಜಾವಾಣಿ ವಾರ್ತೆ


ಸೀಗೆಕಾಯಿ

ತುಮಕೂರು: ಈ ಬಾರಿ ಸೀಗೆಕಾಯಿಗೆ ಉತ್ತಮ ಬೆಲೆ ಬಂದಿದ್ದು, ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ ದಾಖಲೆ ದರಕ್ಕೆ ಮಾರಾಟವಾಗುತ್ತಿದೆ.

ಒಂದು ಕ್ವಿಂಟಲ್ ಸೀಗೆಕಾಯಿ ಧಾರಣೆ ₹15 ಸಾವಿರದಿಂದ ₹20 ಸಾವಿರದವರೆಗೂ ಇದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಮೂರು ಪಟ್ಟು ಬೆಲೆ ಹೆಚ್ಚಳವಾಗಿದೆ. ಯಾವ ವರ್ಷವೂ ಇಷ್ಟೊಂದು ಬೆಲೆ ಸಿಕ್ಕಿರಲಿಲ್ಲ. ಮುಂದಿನ ವಾರಗಳಲ್ಲಿ ಧಾರಣೆ ಮತ್ತಷ್ಟು ಏರಿಕೆಯಾಗಬಹುದು ಎಂದು ವ್ಯಾಪಾರಿಗಳು ಹೇಳುತ್ತಾರೆ. ಕಳೆದ ವರ್ಷದ ಹಾಗೂ ಕಪ್ಪಾಗಿರುವ ಸೀಗೆಕಾಯಿಯು, ಕ್ವಿಂಟಲ್‌ಗೆ ₹8 ಸಾವಿರದಿಂದ ₹10 ಸಾವಿರದ ವರೆಗೂ ಮಾರಾಟವಾಗುತ್ತಿದೆ.

ಕಳೆದ ವರ್ಷ ಕ್ವಿಂಟಲ್‌ಗೆ ₹6 ಸಾವಿರದಿಂದ ₹8 ಸಾವಿರದವರೆಗೂ ಮಾರಾಟವಾಗಿದ್ದ ಸೀಗೆಕಾಯಿ ಧಾರಣೆಯು ಈ ಸಲ ಒಮ್ಮೆಲೆ ಏರಿಕೆಯಾಗಿದೆ. ಇದರಿಂದ ಜಿಲ್ಲೆಯಲ್ಲಿ ಸೀಗೆಕಾಯಿ ಬೆಳೆದಿರುವ ರೈತರು ಉತ್ತಮ ಲಾಭ ಮಾಡಿಕೊಳ್ಳುತ್ತಿದ್ದಾರೆ.

ಬೆಲೆ ಏರಿಕೆಗೆ ಕಾರಣ ಏನು?: ಮಾರುಕಟ್ಟೆಗೆ ಆವಕ ಕಡಿಮೆಯಾಗಿರುವುದೇ ಬೆಲೆ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ ತುಮಕೂರು ಎಪಿಎಂಸಿ ಮಾರುಕಟ್ಟೆಗೆ ಪ್ರತಿದಿನ 100ರಿಂದ 150 ಚೀಲ ಆವಕವಾಗುತಿತ್ತು. ಆದರೆ, ಈಗ ದಿನಕ್ಕೆ 20ರಿಂದ 25 ಚೀಲ ಆವಕವಾಗುತ್ತಿದೆ.

ಸೀಗೆಕಾಯಿ ಬಣ್ಣದ ಮೇಲೆ ಬೆಲೆ ನಿರ್ಧಾರವಾಗುತ್ತದೆ. ಕೆಂಪು ಬಣ್ಣ ಇದ್ದರೆ ಹೆಚ್ಚು ಬೆಲೆ ಸಿಗುತ್ತದೆ. ಕಾಯಿ ಕಪ್ಪಾಗಿದ್ದರೆ ದರ ಕಡಿಮೆಯಾಗುತ್ತದೆ. ಕಾಯಿಯ ಗುಣಮಟ್ಟ, ಬಣ್ಣದ ಆಧಾರದಲ್ಲಿ ಬೆಲೆ ನಿಗದಿಪಡಿಸಲಾಗುತ್ತದೆ. ಈ ಬಾರಿ ಕಡಿಮೆ ಗುಣಮಟ್ಟದ ಕಾಯಿಗೂ ಉತ್ತಮ ಬೆಲೆ ಸಿಗುತ್ತಿದೆ. ಸೀಗೆಕಾಯಿಗೆ ಬೇಡಿಕೆ ಇದ್ದು, ಖರೀದಿಗೂ ವ್ಯಾಪಾರಿಗಳು ಮುಂದಾಗಿದ್ದಾರೆ. ಆದರೆ, ಸರಕು ಬರುತ್ತಿಲ್ಲ ಎಂದು ವರ್ತಕರು ಹೇಳುತ್ತಾರೆ.

ಗ್ರಾಮೀಣ ಭಾಗದಲ್ಲಿ ಮಧ್ಯವರ್ತಿಗಳು ಕ್ವಿಂಟಲ್‌ಗೆ ₹10 ಸಾವಿರದಿಂದ ₹12 ಸಾವಿರದ ವರೆಗೂ ಖರೀದಿಸುತ್ತಿದ್ದಾರೆ. ಮಾರುಕಟ್ಟೆಯಲ್ಲಿ ದುಪ್ಪಟ್ಟು ಬೆಲೆಗೆ ಮಾರಾಟ ಮಾಡಿ, ಲಾಭ ಮಾಡಿಕೊಳ್ಳುತ್ತಿದ್ದಾರೆ.

ಬರದ ಪ್ರಭಾವ: ಪ್ರಮುಖವಾಗಿ ಬರದಿಂದ ಬೆಳೆ ಹಾಳಾಗಿದ್ದು, ಸಾಕಷ್ಟು ಕಡೆಗಳಲ್ಲಿ ಸೀಗೆಮೆಳೆಗಳು ಒಣಗಿ ಹೋಗಿವೆ. ಸೀಗೆಮೆಳೆ ಬದುಕಿ ಉಳಿದಿರುವ ಕಡೆಗಳಲ್ಲಿ ಇಳುವರಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ.

ನಾಲ್ಕು ಚೀಲ ಸಿಗುವ ಕಡೆಗಳಲ್ಲಿ ಅರ್ಧ ಚೀಲದಷ್ಟು ಕಾಯಿ ಸಿಗುತ್ತಿಲ್ಲ. ಅಲ್ಪಸ್ವಲ್ಪ ಕಾಯಿ ಸಿಕ್ಕರೆ ಜನರು ಮಾರಾಟ ಮಾಡದೆ ಮನೆ ಬಳಕೆಗೆ ಇಟ್ಟುಕೊಳ್ಳುತ್ತಾರೆ. ಹೆಚ್ಚಿನ ಪ್ರಮಾಣದಲ್ಲಿ ಇದ್ದರೆ ಅದನ್ನು ಮಾರಾಟ ಮಾಡುತ್ತಿದ್ದಾರೆ.

ಮಲೆನಾಡಿನಲ್ಲೂ ಇಳುವರಿ ಕುಸಿತ

ತುಮಕೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗುತ್ತದೆ ಎಂಬ ಕಾರಣಕ್ಕೆ ಚಿಕ್ಕಮಗಳೂರು ಜಿಲ್ಲೆ ಹಾಗೂ ಇತರೆ ಕಡೆಗಳಿಂದ ಸೀಗೆಕಾಯಿ ಬರುತ್ತಿತ್ತು. ಈ ಬಾರಿ ಅಲ್ಲಿಂದಲೂ ಕಾಯಿ ಬರುತ್ತಿಲ್ಲ. ಹಾಗಾಗಿ, ಬೆಲೆ ಹೆಚ್ಚಳವಾಗಿದೆ ಎಂದು ವರ್ತಕರೊಬ್ಬರು ತಿಳಿಸಿದರು.

ಮಲೆನಾಡು ಭಾಗದಲ್ಲೂ ಸಮರ್ಪಕವಾಗಿ ಮಳೆಯಾಗದೆ ಇಳುವರಿ ಕುಸಿದಿದ್ದು, ಯಥೇಚ್ಛವಾಗಿ ಕಾಯಿ ಸಿಗದಿರುವುದರಿಂದ ಇಲ್ಲಿನ ಮಾರುಕಟ್ಟೆಗೆ ತರುತ್ತಿಲ್ಲ. ಸ್ಥಳೀಯವಾಗಿಯೇ ಮಾರಾಟ ಮಾಡುತ್ತಿದ್ದು, ಆವಕ ಕಡಿಮೆಯಾಗಿದೆ ಎಂದರು.

ಏಪ್ರಿಲ್ 1ರಿಂದ ಕಿಯಾ ಕಾರಿನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಕಿಯಾ ಇಂಡಿಯಾ ಕಂಪನಿಯು ತನ್ನ ಎಲ್ಲಾ ಮಾದರಿಯ ವಾಹನಗಳ ಬೆಲೆಯನ್ನು ಶೇ 3ರಷ್ಟು ಹೆಚ್ಚಿಸುವುದಾಗಿ ಗುರುವಾರ ತಿಳಿಸಿದೆ.

ಏಪ್ರಿಲ್ 1ರಿಂದ ದರ ಹೆಚ್ಚಳವು ಜಾರಿಗೆ ಬರಲಿದೆ. ಸೆಲ್ಟೋಸ್, ಸಾನೆಟ್, ಕಾರೆನ್ಸ್ ಕಾರಿನ ಬೆಲೆ ಏರಿಕೆಯಾಗಲಿದೆ.

'ವಾಹನಗಳ ತಯಾರಿಕೆಯ ಕಚ್ಚಾ ಸಾಮಗ್ರಿಗಳ ದರ ಏರಿಕೆಯಾಗಿದೆ. ಇದರಿಂದ ಉತ್ಪಾದನಾ ವೆಚ್ಚವೂ ಏರುಗತಿಯಲ್ಲಿದೆ. ಈ ವೆಚ್ಚವನ್ನು ಭಾಗಶಃ ಸರಿದೂಗಿಸಬೇಕಿದೆ. ಹಾಗಾಗಿ, ಗ್ರಾಹಕರ ಜೇಬಿಗೆ ಹೆಚ್ಚಿನ ಹೊರೆಯಾಗದಂತೆ ಅಲ್ಪ ಪ್ರಮಾಣದಲ್ಲಿ ದರ ಏರಿಸಲು ತೀರ್ಮಾನಿಸಲಾಗಿದೆ' ಎಂದು ಕಿಯಾ ಇಂಡಿಯಾ ಮುಖ್ಯಸ್ಥ ಹರ್‌ದೀಪ್ ಎಸ್. ಬರಾರ್ ತಿಳಿಸಿದ್ದಾರೆ.

ಬೈಜುಸ್ ಸಭೆಗೆ ತಡೆ ನೀಡಲು ನಕಾರ

ನವದೆಹಲಿ (ಪಿಟಿಐ): ಬೈಜುಸ್ ಕಂಪನಿಯ ಮಾತೃಸಂಸ್ಥೆಯಾದ ಥಿಂಕ್ ಆ್ಯಂಡ್ ಲರ್ನ್, ಮಾರ್ಚ್ 29ರಂದು ವಿಶೇಷ ಸಾಮಾನ್ಯ ಸಭೆ (ಇಜಿಎಂ) ಕರೆದಿದೆ.

ಇದಕ್ಕೆ ಕೆಲವು ಪ್ರಮುಖ ಹೂಡಿಕೆದಾರರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸಭೆಗೆ ಅನುಮತಿ ನೀಡದಂತೆ ತಡೆ ಕೋರಿ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಬೆಂಗಳೂರು ಘಟಕದ ಮೊರೆ ಹೋಗಿದ್ದಾರೆ. ಆದರೆ, ನ್ಯಾಯಮಂಡಳಿಯು ತಕ್ಷಣಕ್ಕೆ ತಡೆಯಾಜ್ಞೆ ನೀಡಲು ನಿರಾಕರಿಸಿದೆ ಎಂದು ಮೂಲಗಳು ತಿಳಿಸಿವೆ.

ಕಂಪನಿಯ ಒಟ್ಟು ₹1,664 ಕೋಟಿ (200 ಮಿಲಿಯನ್ ಡಾಲರ್) ಮೊತ್ತದ ಅಧಿಕೃತ ಷೇರು ಬಂಡವಾಳ ಹೆಚ್ಚಳಕ್ಕೆ ಸಂಬಂಧಿಸಿದಂತೆ ಒಪ್ಪಿಗೆ ಪಡೆಯಲು ಈ ಸಭೆ ಕರೆಯಲಾಗಿದೆ ಎಂದು ಹೇಳಲಾಗಿದೆ. ಹೂಡಿಕೆದಾರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮಂಡಳಿಯು ಮಾರ್ಚ್ 28ಕ್ಕೆ ವಿಚಾರಣೆಯನ್ನು ಮುಂದೂಡಿದೆ ಎಂದು ಮೂಲಗಳು ತಿಳಿಸಿವೆ.

ಸೆನ್ಸೆಕ್ಸ್ 539, ನಿಫ್ಟಿ 172 ಅಂಶ ಏರಿಕೆ

ಹೂಡಿಕೆದಾರರ ಸಂಪತ್ತು ₹5.72 ಲಕ್ಷ ಕೋಟಿ ವೃದ್ಧಿ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದಲ್ಲಿ ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಕಡಿತಗೊಳಿಸುವ ಬಗ್ಗೆ ನೀಡಿದ ಸುಳಿವಿನಿಂದಾಗಿ ಗುರುವಾರ ಷೇರುಪೇಟೆಗಳಲ್ಲಿ ಗೂಳಿಯ ನಾಗಾಲೋಟ ಮುಂದುವರಿದಿದ್ದು, ಸೂಚ್ಯಂಕಗಳು ಶೇ 1ರಷ್ಟು ಏರಿಕೆ ಕಂಡಿವೆ.

ಹೂಡಿಕೆದಾರರ ಸಂಪತ್ತು ಒಂದೇ ದಿನ ₹5.72 ಲಕ್ಷ ಕೋಟಿ ಹೆಚ್ಚಳವಾಗಿದೆ. ಬಿಎಸ್‌ಇಯ ಎಂ-ಕ್ಯಾಪ್ ಒಟ್ಟು ₹379 ಲಕ್ಷ ಕೋಟಿಗೆ ಮುಟ್ಟಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 539 ಅಂಶ ಏರಿಕೆಯಾಗಿ 72,641ಕ್ಕೆ ಸ್ಥಿರವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 172 ಅಂಶ ಹೆಚ್ಚಳ ಕಂಡು, 22,011ಕ್ಕೆ ಅಂತ್ಯಗೊಂಡಿತು.

ಎನ್‌ಟಿಪಿಸಿ, ಪವರ್‌ಗ್ರಿಡ್, ಟಾಟಾ ಸ್ಟೀಲ್, ಇಂಡಸ್‌ಇಂಡ್ ಬ್ಯಾಂಕ್, ಟಾಟಾ ಮೋಟರ್ಸ್, ಜೆಎಸ್‌ಡಬ್ಲ್ಯು, ಟೆಕ್ ಮಹೀಂದ್ರ ಮತ್ತು ಲಾರ್ಸೆನ್ ಆ್ಯಂಡ್ ಟೂರ್ಬೊ ಕಂಪನಿಗಳ ಷೇರಿನ ಮೌಲ್ಯ ಏರಿಕೆಯಾಗಿದೆ.

ಎಲ್‌ಐಸಿ ಷೇರಿನ ಮೌಲ್ಯ ಏರಿಕೆ

ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಪ್ರತಿ ಷೇರಿನ ಮೌಲ್ಯ ಬಿಎಸ್‌ಇಯಲ್ಲಿ ಶೇ 4.05 ಮತ್ತು ಎನ್‌ಎಸ್‌ಇಯಲ್ಲಿ ಶೇ 3.96ರಷ್ಟು ಏರಿಕೆ ಆಗಿದೆ. ಪ್ರತಿ ಷೇರಿನ ಬೆಲೆ ಕ್ರಮವಾಗಿ ₹902 ಮತ್ತು ₹901.25 ಆಗಿದೆ.

ಆರಂಭಿಕ ಸಾರ್ವಜನಿಕ ಕೊಡುಗೆಯಲ್ಲಿ (ಐಪಿಒ) ಎಲ್‌ಐಸಿಯ ಪ್ರತಿ ಷೇರಿನ ಬೆಲೆ ₹949 ಆಗಿತ್ತು. ಪ್ರಸಕ್ತ ವರ್ಷದ ಫೆಬ್ರುವರಿ 9ರಂದು ಷೇರಿನ ಬೆಲೆಯು ₹1,175ಕ್ಕೆ ಮುಟ್ಟಿದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟವಾಗಿತ್ತು. ಕೇಂದ್ರ ಸರ್ಕಾರವು ಇತ್ತೀಚೆಗೆ ಎಲ್‌ಐಸಿ ನೌಕರರ ವೇತನ ಹೆಚ್ಚಳಕ್ಕೆ ಅನುಮೋದನೆ ನೀಡಿದೆ. ಇದು ಕಂಪನಿಗೆ ಆರ್ಥಿಕ ಹೊರೆಯಾಗಲಿದೆ ಎಂದು ಹೇಳಲಾಗಿದೆ. ಹಾಗಾಗಿ, ಷೇರುಪೇಟೆಯ ಹಿಂದಿನ ವಹಿವಾಟುಗಳಲ್ಲಿ ಎಲ್‌ಐಸಿ ಷೇರಿನ ಬೆಲೆ ಇಳಿಕೆಯಾಗಿತ್ತು. ಸದ್ಯ ಷೇರಿನ ಬೆಲೆಯು ಐಪಿಒ ಅವಧಿಯಲ್ಲಿ ನಿಗದಿಪಡಿಸಿದ್ದ ಬೆಲೆಗಿಂತಲೂ ಕಡಿಮೆಯಾಗಿದೆ.

ಅಮೆರಿಕ: ಬಡ್ಡಿದರ ಯಥಾಸ್ಥಿತಿ

ವಾಷಿಂಗ್ಟನ್ (ಎಎಫ್‌ಪಿ): ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್ ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ. ಆದರೆ, ದೇಶದ ಚಿಲ್ಲರೆ ಹಣದುಬ್ಬರದ ಸ್ಥಿತಿಗತಿ ಆಧರಿಸಿ ಪ್ರಸಕ್ತ ವರ್ಷದಲ್ಲಿ ಮೂರು ಬಾರಿ ಬಡ್ಡಿದರವನ್ನು ಇಳಿಸುವ ಸುಳಿವು ನೀಡಿದೆ.

ಬ್ಯಾಂಕ್‌ನ ಅಧ್ಯಕ್ಷ ಜೆರೋಮ್ ಪೊವೆಲ್ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು. ಸದ್ಯ ಅಮೆರಿಕದಲ್ಲಿ ಶೇ 5.25ರಿಂದ ಶೇ 5.50ರಷ್ಟು ಬಡ್ಡಿದರವಿದ್ದು, ಇದು 23 ವರ್ಷಗಳ ಗರಿಷ್ಠ ಮಟ್ಟವಾಗಿದೆ.

2022ರಲ್ಲಿ ಹಣದುಬ್ಬರವು ಏರುಗತಿ ಕಂಡಿತ್ತು. ಹಾಗಾಗಿ, ಅಮೆರಿಕವು ಆರ್ಥಿಕ ಹಿಂಜರಿತದ ಸುಳಿಗೆ ಸಿಲುಕುವ ಸಾಧ್ಯತೆ ಇದೆ ಎಂದು ಆರ್ಥಿಕ ತಜ್ಞರು ಅಂದಾಜಿಸಿದ್ದರು. ಈ ನಡುವೆಯೇ ದೇಶದಲ್ಲಿ ಹಣದುಬ್ಬರವನ್ನು ಶೇ 2ರ ಮಿತಿಯಲ್ಲಿ ಕಾಯ್ದುಕೊಳ್ಳಲು ಫೆಡರಲ್ ರಿಸರ್ವ್ ಹಲವು ಕ್ರಮಗಳನ್ನು ಕೈಗೊಂಡಿದೆ. ಸದ್ಯ ಹಣದುಬ್ಬರವು ಕೇಂದ್ರೀಯ ಬ್ಯಾಂಕ್‌ನ ಗುರಿಯತ್ತ ಸಾಗುತ್ತಿದ್ದು, ಆರ್ಥಿಕತೆ ಸದೃಢವಾಗುತ್ತಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಆದರೆ, ಪ್ರಸಕ್ತ ವರ್ಷದ ಜನವರಿ ಮತ್ತು ಫೆಬ್ರುವರಿಯಲ್ಲಿ ಚಿಲ್ಲರೆ ಹಣದುಬ್ಬರವು ತುಸು ಏರಿಕೆ ಕಂಡಿದೆ. ಹಾಗಾಗಿ, ಆಹಾರ ಪದಾರ್ಥಗಳ ಬೆಲೆ ನಿಯಂತ್ರಣಕ್ಕಾಗಿ ಫೆಡರಲ್ ರಿಸರ್ವ್ ಮತ್ತೆ ಬಡ್ಡಿದರ ಏರಿಸಬಹುದು ಎಂಬ ಆತಂಕ ಕೂಡ ಕಾಡುತ್ತಿದೆ ಎಂದು ಹೇಳಿದ್ದಾರೆ.



ಹೋಳಿ ಆಚರಣೆ ವಾರಾಣಸಿಯಲ್ಲಿ ಗುರುವಾರ ನಡೆದ ಹೋಳಿ ಆಚರಣೆಯಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು –ಪಿಟಿಐ ಚಿತ್ರ

ಅಮೆರಿಕ ಹೇಳಿಕೆಗೆ ಚೀನಾ ವಿರೋಧ

ಅರುಣಾಚಲ ಪ್ರದೇಶ ಭಾರತದ ಅವಿಭಾಜ್ಯ ಅಂಗ

ಬೀಜಿಂಗ್(ಪಿಟಿಐ): ಅರುಣಾಚಲ ಪ್ರದೇಶವು ಭಾರತದ ಅವಿಭಾಜ್ಯ ಅಂಗ ಎಂದು ಮಾನ್ಯತೆ ನೀಡುವುದಾಗಿ ಅಮೆರಿಕ ಹೇಳಿರುವುದನ್ನು ವಿರೋಧಿಸುವುದಾಗಿ ಗುರುವಾರ ಹೇಳಿರುವ ಚೀನಾ, 'ಭಾರತ ಮತ್ತು ಚೀನಾ ನಡುವಿನ ಗಡಿ ವಿವಾದದಲ್ಲಿ ಅಮೆರಿಕ ತಲೆ ಹಾಕುವ ಅಗತ್ಯ ಇಲ್ಲ' ಎಂದಿದೆ.

'ಸ್ವಾರ್ಥದಿಂದ ಕೂಡಿದ ತನ್ನ ರಾಜಕೀಯ ಹಿತಾಸಕ್ತಿಗಳ ಉದ್ದೇಶಕ್ಕಾಗಿ ಅಮೆರಿಕ ಇತರ ದೇಶಗಳ ನಡುವಿನ ಗಡಿ ವಿವಾದಗಳನ್ನು ಪ್ರಚೋದಿಸುತ್ತದೆ' ಎಂದು ಚೀನಾ ವಿದೇಶಾಂಗ ಸಚಿವಾಲಯ ವಕ್ತಾರ ಲಿನ್ ಜಿಯಾನ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಅರುಣಾಚಲ ಪ್ರದೇಶ ಭಾರತದ ಅವಿಭಾಜ್ಯ ಅಂಗ ಎಂದು ಅಮೆರಿಕ ಬುಧವಾರ ಹೇಳಿತ್ತು. ಇದರ ಬೆನ್ನಲ್ಲೇ ಚೀನಾ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ. 'ಭಾರತ ಮತ್ತು ಚೀನಾ ನಡುವಿನ ಗಡಿರೇಖೆಯನ್ನು ಗುರುತಿಸುವ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲ. ಝಾಂಗ್‌ನಾನ್ (ಅರುಣಾಚಲ ಪ್ರದೇಶಕ್ಕೆ ಚೀನಾ ಇಟ್ಟ ಹೆಸರು) ಯಾವತ್ತಿನಿಂದಲೂ ಚೀನಾದ ಭಾಗವಾಗಿದೆ. ಈ ಸಂಗತಿಯನ್ನು ನಿರಾಕರಿಸಲು ಸಾಧ್ಯವೇ ಇಲ್ಲ' ಎಂದರು.

ಅರುಣಾಚಲ ಪ್ರದೇಶವನ್ನು ದಕ್ಷಿಣ ಟಿಬೆಟ್ ಎಂದು ಹೇಳಿಕೊಳ್ಳುತ್ತಿರುವ ಚೀನಾ, ಈ ರಾಜ್ಯಕ್ಕೆ ಭಾರತದ ನಾಯಕರು ಭೇಟಿ ನೀಡಿದಾಗಲೆಲ್ಲಾ ಆಕ್ಷೇಪ ವ್ಯಕ್ತಪಡಿಸುತ್ತಲೇ ಇದೆ. ಮಾ.9ರಂದು ಪ್ರಧಾನಿ ನರೇಂದ್ರ ಮೋದಿ ಅವರು ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಿದ್ದನ್ನು ಚೀನಾ ಸೇನೆ ವಿರೋಧಿಸಿತ್ತಲ್ಲದೇ, ಅರುಣಾಚಲ ಪ್ರದೇಶ ತನಗೆ ಸೇರಿದ್ದು ಎಂದು ಹೇಳಿತ್ತು.

'ಅರುಣಾಚಲ ಪ್ರದೇಶ ಎಂದು ಕರೆಯಲಾಗುತ್ತಿರುವ ಪ್ರದೇಶವನ್ನು ಭಾರತ ಅಕ್ರಮವಾಗಿ ವಶಪಡಿಸಿಕೊಂಡಿದೆ' ಎಂದು ಚೀನಾ ರಕ್ಷಣಾ ಸಚಿವಾಲಯದ ವಕ್ತಾರ ಕರ್ನಲ್ ಝಾಂಗ್ ಷಿಯಾಯೊಗಾಂಗ್ ಮಾ.15ರಂದು ಹೇಳಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಅಮೆರಿಕದ ವಿದೇಶಾಂಗ ಇಲಾಖೆಯ ಪ್ರಧಾನ ಉಪವಕ್ತಾರ ವೇದಾಂತ್ ಪಟೇಲ್, 'ಅರುಣಾಚಲ ಪ್ರದೇಶವನ್ನು ಭಾರತದ ಅವಿಭಾಜ್ಯ ಅಂಗ ಎಂಬುದಾಗಿ ಅಮೆರಿಕ ಮಾನ್ಯತೆ ನೀಡುತ್ತದೆ' ಎಂದಿದ್ದರು. 'ಅರುಣಾಚಲ ಪ್ರದೇಶ ಗಡಿ ವಿಚಾರದಲ್ಲಿ ಯಾವುದೇ ಏಕಪಕ್ಷೀಯ ಕ್ರಮವನ್ನು ಅಮೆರಿಕ ವಿರೋಧಿಸುತ್ತದೆ' ಎಂದೂ ಹೇಳಿದ್ದರು.

ಚೀನಾದ ವಾದವನ್ನು ತಿರಸ್ಕರಿಸುತ್ತಲೇ ಇರುವ ಭಾರತ, 'ಅರುಣಾಚಲ ಪ್ರದೇಶಕ್ಕೆ ಚೀನಾ ಹೊಸ ಹೆಸರನ್ನು ನೀಡಿದ ಮಾತ್ರಕ್ಕೆ ಈ ವಿಚಾರ ಕುರಿತ ವಸ್ತುಸ್ಥಿತಿ ಬದಲಾಗುವುದಿಲ್ಲ' ಎಂದು ತಿರುಗೇಟು ನೀಡಿದೆ.



ಸೂಪರ್ ಕಿಂಗ್ಸ್‌ಗೆ 'ರಾಯಲ್ ಚಾಲೆಂಜ್'

ಧೋನಿ ಬದಲು ಋತುರಾಜ್ ಗಾಯಕವಾಡ ನಾಯಕ



ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ತಂಡ ಐಪಿಎಲ್‌ನಲ್ಲಿ ಆಡಿರುವ 250 ಪಂದ್ಯಗಳ ಪೈಕಿ 235 ಪಂದ್ಯಗಳಿಗೆ ಮಹೇಂದ್ರ ಸಿಂಗ್ ಧೋನಿ ನಾಯಕರಾಗಿದ್ದರು. ಈ ಬಾರಿ ಈ ದಿಗ್ಗಜ ಆಟಗಾರ, ಋತುರಾಜ್ ಗಾಯಕವಾಡ ನಾಯಕತ್ವದಲ್ಲಿ ಆಡಲಿದ್ದಾರೆ. ಈ ತಂಡ ಶುಕ್ರವಾರ ಆರಂಭವಾಗುವ 17ನೇ ಆವೃತ್ತಿಯ ಐಪಿಎಲ್ ಉದ್ಘಾಟನಾ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಿಂದ ತೀವ್ರ ಪೈಪೋಟಿ ಎದುರಿಸುವ ನಿರೀಕ್ಷೆಯಿದೆ.

ಪಂದ್ಯದ ಮುನ್ನಾದಿನ ಈ ಮಹತ್ವದ 'ಪರಿವರ್ತನೆ' ನಡೆದಿದೆ. ಹೀಗಾಗಿ ಧೋನಿ ಈ ಐಪಿಎಲ್‌ನ ಕೊನೆಯಲ್ಲಿ ನಿವೃತ್ತಿ ಘೋಷಿಸುವ ನಿರೀಕ್ಷೆ ಬಲವಾಗಿದೆ.

ಈ ಭಾವನಾತ್ಮಕ ಅಂಶ ಬಿಟ್ಟರೆ ಉಳಿದಂತೆ ಎರಡು ತಂಡಗಳ ನಡುವೆ ಜಿದ್ದಾಜಿದ್ದಿ ಈ ಪಂದ್ಯಕ್ಕೂ ಮುಂದುವರಿಯಲಿದೆ. ಐದು ಬಾರಿ ಚಾಂಪಿಯನ್ ಆಗಿರುವ ಸಿಎಸ್‌ಕೆ ಈ ಆವೃತ್ತಿಯಲ್ಲಿ ಟ್ರೋಫಿ ಗೆದ್ದರೆ ಅದು ದಾಖಲೆಯಾಗಲಿದೆ. ಮುಂಬೈ ಇಂಡಿಯನ್ಸ್ ಸಹ ಐದು ಸಲ ಕಿರೀಟ ಧರಿಸಿದೆ.

ಇತ್ತೀಚೆಗೆ ಮಹಿಳಾ ತಂಡದ ಚೊಚ್ಚಲ ಯಶಸ್ಸಿನಿಂದ ಉತ್ತೇಜಿತಗೊಂಡಿರುವ ಆರ್‌ಸಿಬಿ, ಜೆರ್ಸಿ ಜೊತೆಗೆ ಹೆಸರಿನಲ್ಲಿ (ಬೆಂಗಳೂರ್ ಬದಲು ಬೆಂಗಳೂರು) ಅಲ್ಪ ಬದಲಾವಣೆಯೊಡನೆ ಕಣಕ್ಕಿಳಿದಿದೆ. ಚೊಚ್ಚಲ ಪ್ರಶಸ್ತಿ ಗೆಲ್ಲುವ ಗುರಿ ಹೊಂದಿದೆ.

ವಯಸ್ಸಿನ ಪ್ರಭಾವದಿಂದ ಧೋನಿ ಮೊದಲಿನಂತೆ ಸ್ಫೋಟಕ ಆಟವಾಡುತ್ತಿಲ್ಲ. ಆದರೆ ಅವರ 'ಕ್ರಿಕೆಟ್ ಮಿದುಳು' ತಂಡದ ನೆರವಿಗೆ ಇದ್ದೇ ಇದೆ. ಈ ಬಾರಿ ತಂಡಕ್ಕೆ ಸೇರ್ಪಡೆಯಾಗಿರುವ ನ್ಯೂಜಿಲೆಂಡ್ ತಾರೆ ರಚಿನ್ ರವೀಂದ್ರ ಮೇಲೆ ತಂಡ ಅಪಾರ ಭರವಸೆ ಇಟ್ಟಿದೆ. ಇದೇ ದೇಶದ ಡೆವಾನ್ ಕಾನ್ವೆ ಹೆಬ್ಬೆರಳ ಗಾಯದಿಂದ ಆರಂಭದ ಕೆಲವು ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ಮತ್ತೊಬ್ಬ ಕಿವೀಸ್ ಆಲ್‌ರೌಂಡರ್ ಡೇರಿಲ್ ಮಿಚೆಲ್ ಕೂಡ ಭರವಸೆಯಿಡಬಲ್ಲ ಆಟಗಾರ.

ನಾಯಕ ಗಾಯಕವಾಡ್, ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಮಹಾರಾಷ್ಟ್ರ ಪರ ಅತ್ಯಧಿಕ ರನ್ ಗಳಿಸಿ ಈ ದೀರ್ಘ ಲೀಗ್‌ಗೆ ಸಜ್ಜಾಗಿದ್ದಾರೆ. ಅವರು ಮೊದಲ ಬಾರಿ ತಮಗೊಲಿದ ನಾಯಕತ್ವವನ್ನು ಹೇಗೆ ನಿಭಾಯಿಸಲಿದ್ದಾರೆ ಎಂದು ಕೌತುಕ ಇದೆ.

ಪಿಚ್ ಸಂಪ್ರದಾಯ ದಂತೆ ಸ್ಪಿನ್ನರ್‌ಗಳಿಗೆ ನೆರವಾಗುವ ನಿರೀಕ್ಷೆಯಿದೆ. ಈ ವಿಭಾಗದಲ್ಲಿ ರವೀಂದ್ರ ಜಡೇಜ, ಮಿಚೆಲ್ ಸ್ಯಾಂಟ್ನರ್, ಮೊಯಿನ್ ಅಲಿ, ಮಹೀಷ ತೀಕ್ಷಣ ಅವರ ನೆರವು ತಂಡಕ್ಕಿದೆ. ತೀಕ್ಷಣ ಪಾದದ ನೋವಿನಿಂದ ಮೊದಲ ಕೆಲವು ಪಂದ್ಯಗಳಿಗೆ ಲಭ್ಯರಿಲ್ಲ.

ಸುಲಭವಲ್ಲ: ಆದರೆ ಈ ಕ್ರೀಡಾಂಗಣದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಸೋಲಿಸುವಲ್ಲಿ ಆರ್‌ಸಿಬಿಗೆ 2009 ರಿಂದ ಒಮ್ಮೆಯೂ ಸಾಧ್ಯವಾಗಿಲ್ಲ.

ನಾಯಕ ಫಫ್ ಡುಪ್ಲೆಸಿ, ಎರಡು ತಿಂಗಳ ನಂತರ ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಇಳಿದಿರುವ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ, ಮ್ಯಾಕ್ಸ್‌ವೆಲ್ ತಂಡದ ಪ್ರಮುಖ ಬ್ಯಾಟರ್‌ಗಳು. ಈ ಬಾರಿ ತಂಡಕ್ಕೆ ಸೇರ್ಪಡೆಯಾಗಿರುವ ಆಸ್ಟ್ರೇಲಿಯಾದ ಆಲ್‌ರೌಂಡರ್ ಕ್ಯಾಮರಾನ್ ಗ್ರೀನ್ ಕೂಡ ಬಿರುಸಿನ ಆಟಗಾರ.

ವೇಗದ ಬೌಲಿಂಗ್ ವಿಭಾಗದ ಮೊಹಮ್ಮದ್ ಸಿರಾಜ್, ಲಾಕಿ ಫರ್ಗ್ಯೂಸನ್, ಅಲ್ಜಾರಿ ಜೋಸೆಫ್, ಆಕಾಶ್ ದೀಪ್, ಟೋಪ್ಲಿ ಅವರಿಂದ ಪ್ರಬಲವಾಗಿದೆ. ಆದರೆ ಹಸರಂಗ ಅವರನ್ನು ಕಳೆದುಕೊಂಡ ನಂತರ ಸ್ಪಿನ್ ವಿಭಾಗ ದುರ್ಬಲವಾಗಿದೆ. ಮ್ಯಾಕ್ಸ್‌ವೆಲ್, ಕರ್ಣ ಶರ್ಮಾ, ಮಯಂಕ್ ದಾಗರ್, ಹಿಮಾಂಶು ಶರ್ಮ ಮೊದಲಾದವರ ಮೇಲೆ ಭರವಸೆ ಇಡುವುದು ಅನಿವಾರ್ಯವಾಗಿದೆ.



ಚೆನ್ನೈ ಸೂಪರ್ ಕಿಂಗ್ಸ್ ತಂಡದ ಮಹೇಂದ್ರಸಿಂಗ್ ಧೋನಿ –ಪಿಟಿಐ ಚಿತ್ರ

ತಂಡಗಳು

ರಾಯಲ್ ಚಾಲೆಂಜರ್ಸ್ ಬೆಂಗಳೂರು

ಫಫ್ ಡು ಪ್ಲೆಸಿ (ನಾಯಕ), ಗ್ಲೆನ್ ಮ್ಯಾಕ್ಸ್‌ವೆಲ್, ವಿರಾಟ್ ಕೊಹ್ಲಿ, ರಜತ್ ಪಾಟೀದಾರ್, ಅನುಜ್ ರಾವತ್, ದಿನೇಶ್ ಕಾರ್ತಿಕ್, ಸುಯಶ್ ಪ್ರಭುದೇಸಾಯಿ, ವಿಲ್ ಜಾಕ್ಸ್, ಮಹಿಪಾಲ್ ಲೊಮ್ರರ್, ಕರಣ್ ಶರ್ಮಾ, ಮನೋಜ್ ಭಾಂಡಗೆ, ಮಯಂಕ್ ಡಾಗರ್, ವೈಶಾಖ ವಿಜಯ್‌ಕುಮಾರ್, ಆಕಾಶ್ ದೀಪ್, ಮೊಹಮ್ಮದ್ ಸಿರಾಜ್, ರೀಸ್ ಟೋಪ್ಲಿ, ಹಿಮಾಂಶು ಶರ್ಮಾ, ರಾಜನ್ ಕುಮಾರ್, ಕ್ಯಾಮರಾನ್ ಗ್ರೀನ್, ಅಲ್ಜಾರಿ ಜೋಸೆಫ್, ಯಶ್ ದಯಾಳ್, ಟಾಮ್ ಕರನ್, ಲಾಕಿ ಫರ್ಗ್ಯುಸನ್, ಸ್ವಪ್ನಿಲ್ ಸಿಂಗ್, ಸೌರವ್ ಚೌಹಾನ್.

ಚೆನ್ನೈ ಸೂಪರ್ ಕಿಂಗ್ಸ್

ಋತುರಾಜ್ ಗಾಯಕವಾಡ (ನಾಯಕ), ಮಹೇಂದ್ರ ಸಿಂಗ್ ಧೋನಿ, ಮೊಯಿನ್ ಅಲಿ, ದೀಪಕ್ ಚಾಹರ್, ತುಷಾರ್ ದೇಶಪಾಂಡೆ, ಶಿವಂ ದುಬೆ, ರಾಜವರ್ಧನ್ ಹಂಗರ್ಗೇಕರ್, ರವೀಂದ್ರ ಜಡೇಜ, ಅಜಯ್ ಮಂಡಲ್, ಮುಕೇಶ್ ಚೌಧರಿ, ಅಜಿಂಕ್ಯ ರಹಾನೆ, ಶೇಕ್ ರಶೀದ್, ಮಿಚೆಲ್ ಸ್ಯಾಂಟ್ನರ್, ಸಿಮರ್ಜೀತ್ ಸಿಂಗ್, ನಿಶಾಂತ್ ಸಿಂಧು, ಪ್ರಶಾಂತ್ ಸೋಲಂಕಿ, ಮಹೀಶ್ ತೀಕ್ಷಣ, ರಚಿನ್ ರವೀಂದ್ರ, ಶಾರ್ದೂಲ್ ಠಾಕೂರ್, ಡೇರಿಲ್ ಮಿಚೆಲ್, ಸಮೀರ್ ರಿಜ್ವಿ, ಮುಸ್ತಫಿಜುರ್ ರೆಹಮಾನ್, ಅವನೀಶ್ ರಾವ್ ಅರವಲ್ಲಿ.

ಪಂದ್ಯ ಆರಂಭ ರಾತ್ರಿ: 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಮತ್ತು ಜಿಯೊ ಸಿನಿಮಾ

ಐಪಿಎಲ್: ಈತನಕ ಪ್ರಶಸ್ತಿ ಗೆದ್ದ ತಂಡಗಳು

ವರ್ಷ	ಚಾಂಪಿಯನ್	ರನ್ನರ್ಸ್ ಅಪ್
2008	ರಾಜಸ್ಥಾನ ರಾಯಲ್ಸ್	ಚೆನ್ನೈ ಸೂಪರ್ ಕಿಂಗ್ಸ್
2009	ಡೆಕ್ಕನ್ ಚಾರ್ಜರ್ಸ್	ರಾಯಲ್ ಚಾಲೆಂಜರ್ಸ್ ಬೆಂಗಳೂರು
2010	ಚೆನ್ನೈ ಸೂಪರ್ ಕಿಂಗ್ಸ್	ಮುಂಬೈ ಇಂಡಿಯನ್ಸ್
2011	ಚೆನ್ನೈ ಸೂಪರ್ ಕಿಂಗ್ಸ್	ರಾಯಲ್ ಚಾಲೆಂಜರ್ಸ್ ಬೆಂಗಳೂರು
2012	ಕೋಲ್ಕತ್ತ ನೈಟ್ ರೈಡರ್ಸ್	ಚೆನ್ನೈ ಸೂಪರ್ ಕಿಂಗ್ಸ್
2013	ಮುಂಬೈ ಇಂಡಿಯನ್ಸ್	ಚೆನ್ನೈ ಸೂಪರ್ ಕಿಂಗ್ಸ್
2014	ಕೋಲ್ಕತ್ತ ನೈಟ್ ರೈಡರ್ಸ್	ಕಿಂಗ್ಸ್ ಇಲೆವೆನ್ ಪಂಜಾಬ್
2015	ಮುಂಬೈ ಇಂಡಿಯನ್ಸ್	ಚೆನ್ನೈ ಸೂಪರ್ ಕಿಂಗ್ಸ್
2016	ಸನ್‌ರೈಸರ್ಸ್ ಹೈದರಾಬಾದ್	ರಾಯಲ್ ಚಾಲೆಂಜರ್ಸ್ ಬೆಂಗಳೂರು
2017	ಮುಂಬೈ ಇಂಡಿಯನ್ಸ್	ರೈಸಿಂಗ್ ಪುಣೆ ಸೂಪರ್‌ಜೈಂಟ್ಸ್
2018	ಚೆನ್ನೈ ಸೂಪರ್ ಕಿಂಗ್ಸ್	ಸನ್‌ರೈಸರ್ಸ್ ಹೈದರಾಬಾದ್
2019	ಮುಂಬೈ ಇಂಡಿಯನ್ಸ್	ಚೆನ್ನೈ ಸೂಪರ್ ಕಿಂಗ್ಸ್
2020	ಮುಂಬೈ ಇಂಡಿಯನ್ಸ್	ಡೆಲ್ಲಿ ಕ್ಯಾಪಿಟಲ್ಸ್
2021	ಚೆನ್ನೈ ಸೂಪರ್ ಕಿಂಗ್ಸ್	ಕೋಲ್ಕತ್ತ ನೈಟ್ ರೈಡರ್ಸ್
2022	ಗುಜರಾತ್ ಟೈಟನ್ಸ್	ರಾಜಸ್ಥಾನ ರಾಯಲ್ಸ್
2023	ಚೆನ್ನೈ ಸೂಪರ್ ಕಿಂಗ್ಸ್	ಗುಜರಾತ್ ಟೈಟನ್ಸ್



ಚೆನ್ನೈನಲ್ಲಿ ಗುರುವಾರ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ 'ಗ್ರೀನ್ ಜರ್ಸಿ' ಅನಾವರಣ ಕಾರ್ಯಕ್ರಮದಲ್ಲಿ ಫಫ್ ಡುಪ್ಲೆಸಿ, ಮೊಹಮ್ಮದ್ ಸಿರಾಜ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಕಾಣಿಸಿಕೊಂಡರು. ಪಿಟಿಐ ಚಿತ್ರ

ಸಿಎಸ್‌ಕೆ–ಆರ್‌ಸಿಬಿ ಮುಖಾಮುಖಿ

31 ಆಡಿದ ಪಂದ್ಯಗಳು	**1** ಫಲಿತಾಂಶವಿಲ್ಲ	**82** ಅತಿ ಕಡಿಮೆ ಮೊತ್ತ: ಸಿಎಸ್‌ಕೆ
20 ಸಿಎಸ್‌ಕೆ ಗೆಲುವು	**226** ಅತ್ಯಧಿಕ ಮೊತ್ತ: ಸಿಎಸ್‌ಕೆ	
10 ಆರ್‌ಸಿಬಿ ಗೆಲುವು	**218** ಆರ್‌ಸಿಬಿ	**70** ಬೆಂಗಳೂರು

ಈ ವರ್ಷದ ಐಪಿಎಲ್ ಹರಾಜಿನಲ್ಲಿ ಗರಿಷ್ಠ ಮೊತ್ತ ಪಡೆದ ಆಟಗಾರರು

ಆಟಗಾರ	ತಂಡ	ಪಡೆದ ಮೊತ್ತ
ಮಿಚೆಲ್ ಸ್ಟಾರ್ಕ್	ಕೋಲ್ಕತ್ತ ನೈಟ್ ರೈಡರ್ಸ್	₹24.75 ಕೋಟಿ
ಪ್ಯಾಟ್ ಕಮಿನ್ಸ್	ಸನ್‌ರೈಸರ್ಸ್ ಹೈದರಾಬಾದ್	₹20.50 ಕೋಟಿ
ಡೇರಿಲ್ ಮಿಚೆಲ್	ಚೆನ್ನೈ ಸೂಪರ್ ಕಿಂಗ್ಸ್	₹14 ಕೋಟಿ
ಹರ್ಷಲ್ ಪಟೇಲ್	ಪಂಜಾಬ್ ಕಿಂಗ್ಸ್	₹11.75 ಕೋಟಿ
ಅಲ್ಜರಿ ಜೋಸೆಫ್	ರಾಯಲ್ ಚಾಲೆಂಜರ್ಸ್ ಬೆಂಗಳೂರು	₹11.50 ಕೋಟಿ

ಐಪಿಎಲ್‌ನ ಹಲವು ಮೈಲಿಗಲ್ಲುಗಳು

7,263 ಆರ್‌ಸಿಬಿ ಆಟಗಾರ ವಿರಾಟ್ ಕೊಹ್ಲಿ ಗಳಿಸಿದ ದಾಖಲೆ ರನ್

229 ಆರ್‌ಸಿಬಿಯ ವಿರಾಟ್ ಕೊಹ್ಲಿ ಮತ್ತು ಎ.ಬಿ. ಡಿವಿಲಿಯರ್ಸ್ ಗರಿಷ್ಠ ರನ್ ಜೊತೆಯಾಟ (2016ರಲ್ಲಿ ಗುಜರಾತ್ ಲಯನ್ಸ್ ವಿರುದ್ಧ)

7 ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಗಳಿಸಿದ ಒಟ್ಟು ಶತಕ



175* ಆರ್‌ಸಿಬಿ ತಂಡದಲ್ಲಿದ್ದ ಕ್ರಿಸ್ ಗೇಲ್ ಗಳಿಸಿದ ರನ್ (2013ರಲ್ಲಿ ಪುಣೆ ವಾರಿಯರ್ಸ್ ವಿರುದ್ಧ)

357 ಕ್ರಿಸ್ ಗೇಲ್ ಸಿಡಿಸಿದ ಗರಿಷ್ಠ ಸಿಕ್ಸರ್ (ಆರ್‌ಸಿಬಿ/ಕೋಲ್ಕತ್ತ ನೈಟ್ ರೈಡರ್ಸ್/ಪಂಜಾಬ್ ಕಿಂಗ್ಸ್)



750 ಶಿಖರ್ ಧವನ್ ಬಾರಿಸಿದ ಗರಿಷ್ಠ ಬೌಂಡರಿಗಳು (ಡೆಲ್ಲಿ ಡೇರ್ ಡೆವಿಲ್ಸ್/ಮುಂಬೈ ಇಂಡಿಯನ್ಸ್/ಡೆಲ್ಲಿ ಕ್ಯಾಪಿಟಲ್ಸ್/ಸನ್‌ರೈಸರ್ಸ್ ಹೈದರಾಬಾದ್/ಪಂಜಾಬ್ ಕಿಂಗ್ಸ್)



65 ಡೇವಿಡ್ ವಾರ್ನರ್ ಹೆಚ್ಚು ಬಾರಿ 50+ ರನ್ ಗಳಿಸಿರುವುದು (ಡೆಲ್ಲಿ ಕ್ಯಾಪಿಟಲ್ಸ್/ಸನ್‌ರೈಸರ್ಸ್ ಹೈದರಾಬಾದ್)



187 ಯಜುವೇಂದ್ರ ಚಾಹಲ್ ಗಳಿಸಿದ ಒಟ್ಟು ಒಟ್ಟು ವಿಕೆಟ್ (ಮುಂಬೈ ಇಂಡಿಯನ್ಸ್/ಆರ್‌ಸಿಬಿ/ರಾಜಸ್ಥಾನ ರಾಯಲ್ಸ್)



12ಕ್ಕೆ6 ಮುಂಬೈ ಇಂಡಿಯನ್ಸ್ ತಂಡದ ಅಲ್ಜಾರಿ ಜೋಸೆಫ್ ಬೌಲಿಂಗ್ ಸಾಧನೆ (2019ರಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ)

180 ವಿಕೆಟ್ ಕೀಪರ್ ಮಹೇಂದ್ರ ಸಿಂಗ್ ಧೋನಿ ಕ್ಯಾಚ್/ಸ್ಟಂಪಿಂಗ್‌ನಲ್ಲಿ ಸಾಧನೆ (ಚೆನ್ನೈ ಸೂಪರ್ ಕಿಂಗ್ಸ್/ರೈಸಿಂಗ್ ಪುಣೆ ಸೂಪರ್ ಜೈಂಟ್)

250 ಮಹೇಂದ್ರ ಸಿಂಗ್ ಧೋನಿ ಆಡಿರುವ ಪಂದ್ಯಗಳು (ಚೆನ್ನೈ ಸೂಪರ್ ಕಿಂಗ್ಸ್/ರೈಸಿಂಗ್ ಪುಣೆ ಸೂಪರ್ ಜೈಂಟ್ಸ್)



109 ಸುರೇಶ್ ರೈನಾ ಪಡೆದ ಗರಿಷ್ಠ ಕ್ಯಾಚ್‌ಗಳು (ಚೆನ್ನೈ ಸೂಪರ್ ಕಿಂಗ್ಸ್/ಗುಜರಾತ್ ಲಯನ್ಸ್)

2ಕ್ಕೆ263 ರಾಯಲ್ ಚಾಲೆಂಜರ್ಸ್ ಬೆಂಗಳೂರು ಗಳಿಸಿದ ಈ ಮೊತ್ತ ತಂಡವೊಂದರ ಗರಿಷ್ಠ ಸ್ಕೋರ್ (2013ರಲ್ಲಿ ಪುಣೆ ವಾರಿಯರ್ಸ್ ವಿರುದ್ಧ)

49 ರಾಯಲ್ ಚಾಲೆಂಜರ್ಸ್ ಬೆಂಗಳೂರು ಗಳಿಸಿದ ರನ್. ಇದು ತಂಡವೊಂದರ ಕನಿಷ್ಠ ಮೊತ್ತ (2017ರಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ)


ಐಪಿಎಲ್ 2024ರ ವೇಳಾಪಟ್ಟಿ (ಮಾರ್ಚ್ 22ರಿಂದ ಏ.7ರವರೆಗೆ)

ತಿಂಗಳು	ದಿನಾಂಕ	ತಂಡಗಳು	ಸಮಯ	ಸ್ಥಳ
ಮಾರ್ಚ್	22	ಚೆನ್ನೈ ಸೂಪರ್ ಕಿಂಗ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು	ರಾತ್ರಿ 8.00	ಚೆನ್ನೈ
ಮಾರ್ಚ್	23	ಪಂಜಾಬ್ ಕಿಂಗ್ಸ್–ಡೆಲ್ಲಿ ಕ್ಯಾಪಿಟಲ್ಸ್	ಮಧ್ಯಾಹ್ನ 3.30	ಮೊಹಾಲಿ
ಮಾರ್ಚ್	23	ಕೋಲ್ಕತ್ತ ನೈಟ್ ರೈಡರ್ಸ್–ಸನ್‌ರೈಸರ್ಸ್ ಹೈದರಾಬಾದ್	ರಾತ್ರಿ 7.30	ಕೋಲ್ಕತ್ತ
ಮಾರ್ಚ್	24	ರಾಜಸ್ಥಾನ ರಾಯಲ್ಸ್–ಲಖನೌ ಸೂಪರ್ ಜೈಂಟ್ಸ್	ಮಧ್ಯಾಹ್ನ 3.30	ಜೈಪುರ
ಮಾರ್ಚ್	24	ಗುಜರಾತ್ ಟೈಟನ್ಸ್–ಮುಂಬೈ ಇಂಡಿಯನ್ಸ್	ರಾತ್ರಿ 7.30	ಅಹಮದಾಬಾದ್
ಮಾರ್ಚ್	25	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಪಂಜಾಬ್ ಕಿಂಗ್ಸ್	ರಾತ್ರಿ 7.30	ಬೆಂಗಳೂರು
ಮಾರ್ಚ್	26	ಚೆನ್ನೈ ಸೂಪರ್ ಕಿಂಗ್ಸ್–ಗುಜರಾತ್ ಟೈಟನ್ಸ್	ರಾತ್ರಿ 7.30	ಚೆನ್ನೈ
ಮಾರ್ಚ್	27	ಸನ್‌ರೈಸರ್ಸ್ ಹೈದರಾಬಾದ್–ಮುಂಬೈ ಇಂಡಿಯನ್ಸ್	ರಾತ್ರಿ 7.30	ಹೈದರಾಬಾದ್
ಮಾರ್ಚ್	28	ರಾಜಸ್ಥಾನ ರಾಯಲ್ಸ್–ಡೆಲ್ಲಿ ಕ್ಯಾಪಿಟಲ್ಸ್	ರಾತ್ರಿ 7.30	ಜೈಪುರ
ಮಾರ್ಚ್	29	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಕೋಲ್ಕತ್ತ ನೈಟ್ ರೈಡರ್ಸ್	ರಾತ್ರಿ 7.30	ಬೆಂಗಳೂರು
ಮಾರ್ಚ್	30	ಲಖನೌ ಸೂಪರ್ ಜೈಂಟ್ಸ್–ಪಂಜಾಬ್ ಕಿಂಗ್ಸ್	ರಾತ್ರಿ 7.30	ಲಖನೌ
ಮಾರ್ಚ್	31	ಗುಜರಾತ್ ಟೈಟನ್ಸ್–ಸನ್‌ರೈಸರ್ಸ್ ಹೈದರಾಬಾದ್	ಮಧ್ಯಾಹ್ನ 3.30	ಅಹಮದಾಬಾದ್
ಮಾರ್ಚ್	31	ಡೆಲ್ಲಿ ಕ್ಯಾಪಿಟಲ್ಸ್–ಚೆನ್ನೈ ಸೂಪರ್ ಕಿಂಗ್ಸ್	ರಾತ್ರಿ 7.30	ವಿಶಾಖಪಟ್ಟಣ
ಏಪ್ರಿಲ್	1	ಮುಂಬೈ ಇಂಡಿಯನ್ಸ್–ರಾಜಸ್ಥಾನ ರಾಯಲ್ಸ್	ರಾತ್ರಿ 7.30	ಮುಂಬೈ
ಏಪ್ರಿಲ್	2	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಲಖನೌ ಸೂಪರ್ ಜೈಂಟ್ಸ್	ರಾತ್ರಿ 7.30	ಬೆಂಗಳೂರು
ಏಪ್ರಿಲ್	3	ಡೆಲ್ಲಿ ಕ್ಯಾಪಿಟಲ್ಸ್–ಕೋಲ್ಕತ್ತ ನೈಟ್ ರೈಡರ್ಸ್	ರಾತ್ರಿ 7.30	ವಿಶಾಖಪಟ್ಟಣ
ಏಪ್ರಿಲ್	4	ಗುಜರಾತ್ ಟೈಟನ್ಸ್–ಪಂಜಾಬ್ ಕಿಂಗ್ಸ್	ರಾತ್ರಿ 7.30	ಅಹಮದಾಬಾದ್
ಏಪ್ರಿಲ್	5	ಸನ್‌ರೈಸರ್ಸ್ ಹೈದರಾಬಾದ್–ಚೆನ್ನೈ ಸೂಪರ್ ಕಿಂಗ್ಸ್	ರಾತ್ರಿ 7.30	ಹೈದರಾಬಾದ್
ಏಪ್ರಿಲ್	6	ರಾಜಸ್ಥಾನ ರಾಯಲ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು	ರಾತ್ರಿ 7.30	ಜೈಪುರ
ಏಪ್ರಿಲ್	7	ಮುಂಬೈ ಇಂಡಿಯನ್ಸ್–ಡೆಲ್ಲಿ ಕ್ಯಾಪಿಟಲ್ಸ್	ಮಧ್ಯಾಹ್ನ 3.30	ಮುಂಬೈ
ಏಪ್ರಿಲ್	7	ಲಖನೌ ಸೂಪರ್ ಜೈಂಟ್ಸ್–ಗುಜರಾತ್ ಟೈಟನ್ಸ್	ರಾತ್ರಿ 7.30	ಲಖನೌ

ನಾಲ್ವರು ಹೊಸ ನಾಯಕರಿಗೆ ಸತ್ವಪರೀಕ್ಷೆ

ನಾಲ್ಕು ಮಂದಿ ವಿಭಿನ್ನ ಅನುಭವದ ಪ್ರತಿಭಾನ್ವಿತ ಆಟಗಾರರಿಗೆ ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಸತ್ವಪರೀಕ್ಷೆಯಾಗಲಿದೆ. ಆಸ್ಟ್ರೇಲಿಯಾದ ಆಲ್‌ರೌಂಡರ್ ಪ್ಯಾಟ್ ಕಮಿನ್ಸ್, ಯುವ ಬ್ಯಾಟರ್ ಶುಭಮನ್ ಗಿಲ್, ಆರಂಬ ಆಟಗಾರ ಋತುರಾಜ್ ಗಾಯಕವಾಡ್ ಮತ್ತು ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಹೊಸ ತಂಡಗಳಿಗೆ ನಾಯಕರಾಗಿದ್ದಾರೆ. ಅವರು ಹೊಸ ಸವಾಲನ್ನು ಹೇಗೆ ನಿಭಾಯಿಸುತ್ತಾರೆ ಎಂಬುದು ಕುತೂಹಲಕ್ಕೆ ಎಡೆಮಾಡಿದೆ.


ಶುಭಮನ್ ಗಿಲ್ (ಗುಜರಾತ್ ಟೈಟನ್ಸ್)



ಹಾರ್ದಿಕ್ ಪಾಂಡ್ಯ ಕಳೆದ ವರ್ಷ ಹಠಾತ್ ಬೆಳವಣಿಗೆಯಲ್ಲಿ ಮುಂಬೈ ಇಂಡಿಯನ್ಸ್ ಪಾಲಾಗಿದ್ದರಿಂದ ಶುಭಮನ್ ಗಿಲ್ ಅವರಿಗೆ ಗುಜರಾತ್ ಟೈಟನ್ಸ್ ನಾಯಕತ್ವ ಹೆಗಲೇರಿದೆ. ಕಳೆದ ವರ್ಷ ವಿರಾಟ್ ಕೊಹ್ಲಿ ಅವರನ್ನು ಹಿಂದೆಹಾಕಿ 890 ರನ್ ಗಳಿಸಿ ಆರೆಂಜ್ ಕ್ಯಾಪ್ ಧರಿಸಿದ್ದ ಗಿಲ್ ಅವರು ಈ ಬಾರಿ ನಾಯಕತ್ವದ ಹೆಚ್ಚುವರಿ ಹೊಣೆಯನ್ನು ತಮ್ಮ ಬ್ಯಾಟಿಂಗ್ ಮೇಲೆ ಪರಿಣಾಮ ಬೀರದಂತೆ ಹೇಗೆ ನಿಭಾಯಿಸುತ್ತಾರೆ ಎಂಬುದು ಕುತೂಹಲಕರ.

ಹಿರಿಯ ಆಟಗಾರರಾದ ಡೇವಿಡ್ ಮಿಲ್ಲರ್, ವೃದ್ಧಿಮಾನ್ ಸಹ, ರಷೀದ್ ಖಾನ್ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವುದು ಇನ್ನೊಂದು ಸವಾಲು. ಅದಕ್ಕಿಂತ ಹೆಚ್ಚಾಗಿ ಕಳೆದ ವರ್ಷದ ಯಶಸ್ವಿ ಬೌಲರ್ ಆಗಿ ಪರ್ಪಲ್ ಕ್ಯಾಪ್ ಧರಿಸಿದ್ದ ಮೊಹಮ್ಮದ್ ಶಮಿ ಅನುಪಸ್ಥಿತಿ, ಹಾರ್ದಿಕ್ ಪಾಂಡ್ಯ ಅವರಿಂದ ಆಗಿರುವ ನಿರ್ವಾತವನ್ನು ಸರಿದೂಗಿಸುವುದು ಬಲುದೊಡ್ಡ ಸವಾಲು.

ಪ್ಯಾಟ್ ಕಮಿನ್ಸ್ (ಎಸ್‌ಆರ್‌ಎಚ್)



ಕಳೆದ ವರ್ಷ ಆಸ್ಟ್ರೇಲಿಯಾಕ್ಕೆ ಟೆಸ್ಟ್ ಚಾಂಪಿಯನ್‌ಷಿಪ್, ಏಕದಿನ ವಿಶ್ವಕಪ್ ಗೆಲ್ಲಿಸಿಕೊಟ್ಟ ಶ್ರೇಯಸ್ಸು ಕಮಿನ್ಸ್ ಅವರದ್ದು. ಕಳೆದ ಹರಾಜಿನಲ್ಲಿ ₹20.5 ಕೋಟಿಗೆ ಸನ್‌ರೈಸರ್ಸ್ ಪಾಲಾದ ಕಮಿನ್ಸ್ ಅವರಿಗೆ ತಂಡದ ಸಾರಥ್ಯ ವಹಿಸಲಾಗಿದೆ.

ಕೆಲವು ವರ್ಷಗಳಿಂದ ಕೊನೆಯಿಂದ 2–3ನೇ ಸ್ಥಾನ ಗಳಿಸುತ್ತಿರುವ 'ಆರೆಂಜ್ ಬ್ರಿಗೇಡ್' ಮನೋಬಲ ಕುಸಿದಿದೆ. ಸಾಲದ್ದಕ್ಕೆ ನಾಯಕ, ಕೋಚ್ ಕೂಡ ಬದಲಾಗುತ್ತಲೇ ಇದ್ದಾರೆ. ಡೇವಿಡ್ ವಾರ್ನರ್, ಏಯ್ಡನ್ ಮರ್ಕರಂ ಒಂದೊಂದು ಋತುವಿಗೆ ನಾಯಕರಾಗಿದ್ದರು.

ಹೀಗಾಗಿ ಅನುಭವಿ ಕಮಿನ್ಸ್ ಅವರಿಗೆ ತಂಡಕ್ಕೆ ಸ್ಫೂರ್ತಿ, ವಿಶ್ವಾಸ ತುಂಬುವ ಸವಾಲು ಇದೆ. ಮಾರ್ಕೊ ಯಾನ್ಸೆನ್, ಗ್ಲೆನ್ ಫಿಲಿಪ್ಸ್, ಮರ್ಕರಂ, ಉಮ್ರಾನ್ ಮಲಿಕ್ ಅವರಂಥ ಆಟಗಾರರಿಂದ ಉತ್ತಮ ಹೊರ ತೆಗೆಯಬೇಕಾದ ಸವಾಲು ಇದೆ.

ಹಾರ್ದಿಕ್ ಪಾಂಡ್ಯ (ಮುಂಬೈ ಇಂಡಿಯನ್ಸ್)



ಭಾರತ ತಂಡದ ನಾಯಕ ರೋಹಿತ್ ಶರ್ಮಾ ಐಪಿಎಲ್‌ನಲ್ಲೂ ಯಶಸ್ವಿ ನಾಯಕರು. ಆದರೆ ಈ ಬಾರಿ ಹಾರ್ದಿಕ್ ನಾಯಕತ್ವದಡಿ ಆಡಬೇಕಾಗಿದೆ. ರೋಹಿತ್ ಜೊತೆಗೆ ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಇಶಾನ್ ಕಿಶನ್ ಅಂಥ ತಾರಾಖಚಿತ ಆಟಗಾರರಿದ್ದಾರೆ. ಬೂಮ್ರಾ, ಬೆಹ್ರೆನ್‌ಡಾಫ್ ಅವರಂಥ ಅನುಭವಿ ವೇಗಿಗಳಿದ್ದಾರೆ. ಎರಡು ವರ್ಷಗಳ ಬಳಿಕ ಮಾತೃತಂಡಕ್ಕೆ ಮರಳಿರುವ ಪಾಂಡ್ಯ ಅವರನ್ನೆಲ್ಲಾ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿ ಆಗುತ್ತಾರೆ ಎನ್ನುವ ಕುತೂಹಲವಿದೆ. ಗುಜರಾತ್ ತಂಡಕ್ಕೆ ಒಮ್ಮೆ ಟ್ರೋಫಿ, ಒಮ್ಮೆ ರನ್ನರ್ ಅಪ್ ಸ್ಥಾನ ಗಳಿಸಿಕೊಟ್ಟಿರುವ ಪಾಂಡ್ಯ ಅವರಿಗೆ ಐಪಿಎಲ್ ಅನುಭವದ ಬಲ ಬೆನ್ನಿಗಿದೆ.

ಋತುರಾಜ್ (ಸಿಎಸ್‌ಕೆ)




ದಿಗ್ಗಜ ಆಟಗಾರ ಮಹೇಂದ್ರ ಸಿಂಗ್ ಧೋನಿ ಅವರಿಂದ ಕೊನೆಗಳಿಗೆಯಲ್ಲಿ ತೆರವಾಗಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಆರಂಭ ಆಟಗಾರ ಋತುರಾಜ್ ಗಾಯಕವಾಡ ನಾಯಕರಾಗಿದ್ದಾರೆ. 27 ವರ್ಷದ ಗಾಯಕವಾಡ ಮುಂದಿರುವ ಸವಾಲು ದೊಡ್ಡದೇ. ಧೋನಿ ಸ್ಫೂರ್ತಿಯುತ ನಾಯಕನಾಗಿ ಈ ತಂಡಕ್ಕೆ ಐದು ಸಲ ಕಪ್ ಗೆಲ್ಲಿಸಿಕೊಟ್ಟವರು. ಪ್ರಮುಖರ ಗೈರಿನಲ್ಲೂ ತಂಡ ಬಲಗುಂದದಂತೆ ನೋಡಿಕೊಂಡಿದ್ದರು. ಮೂರು ವರ್ಷಗಳಿಂದ ಚೆನ್ನೈ ತಂಡದ ಪ್ರಮುಖ ಬ್ಯಾಟರ್ ಆಗಿರುವ ಬ್ಯಾಟಿಂಗ್ ಹೊಣೆಯ ಜತೆ ಅವರು ಈ ಹೊಸ ಸವಾಲನ್ನು ಹೇಗೆ ನಿಭಾಯಿಸಲಿದ್ದಾರೆ ಎಂಬ ಕುತೂಹಲವಿದೆ.

ಭಾರತದ ಇಬ್ಬರು ಆಟಗಾರ್ತಿಯರಿಗೆ ಮಾತ್ರ ಅವಕಾಶ

ಹಂಡ್ರೆಡ್ ಲೀಗ್: ಸ್ಮೃತಿ, ರಿಚಾಗೆ ಸ್ಥಾನ



ಸ್ಮೃತಿ ಮಂದಾನ



ರಿಚಾ ಘೋಷ್

ಲಂಡನ್ (ಪಿಟಿಐ): ಮಹಿಳಾ ಪ್ರೀಮಿಯರ್ ಲೀಗ್‌ನ ಎರಡನೇ ಆವೃತ್ತಿಯ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕಿ ಸ್ಮೃತಿ ಮಂದಾನ ಮತ್ತು ವಿಕೆಟ್ ಕೀಪರ್ ರಿಚಾ ಘೋಷ್ ಅವರು 'ದಿ ಹಂಡ್ರೆಡ್ ಲೀಗ್'ನಲ್ಲಿ ಸ್ಥಾನ ಪಡೆದಿದ್ದಾರೆ. ಭಾರತದ ಇಬ್ಬರಷ್ಟೇ ಅವಕಾಶ ಪಡೆದಿದ್ದಾರೆ.

ಮಂದಾನ ಅವರು ಸದರ್ನ್ ಬ್ರೇವ್ ಹಾಗೂ ಅವರ ಸಹ ಆಟಗಾರ್ತಿ ರಿಚಾ ಅವರು ಬರ್ಮಿಂಗ್‌ಹ್ಯಾಮ್ ಫೀನಿಕ್ಸ್ ತಂಡಗಳ ಪಾಲಾಗಿದ್ದಾರೆ.

ಎಡಗೈ ಆಟಗಾರ್ತಿ ಮಂದಾನ ಡಬ್ಲ್ಯುಪಿಎಲ್‌ನಲ್ಲಿ 10 ಪಂದ್ಯಗಳಿಂದ ಎರಡು ಅರ್ಧಶತಕಗಳೊಂದಿಗೆ 300 ರನ್ ಗಳಿಸಿದ್ದರು.

ಟೂರ್ನಿಯಲ್ಲಿ ಫಿನಿಶರ್ ಪಾತ್ರವನ್ನು ಹೆಚ್ಚಾಗಿ ನಿರ್ವಹಿಸಿದ್ದ ರಿಚಾ ಅವರು 10 ಪಂದ್ಯಗಳಿಂದ ಎರಡು ಅರ್ಧ ಶತಕದೊಂದಿಗೆ 257 ರನ್ ಗಳಿಸಿದ್ದರು.

ಮಂದಾನ ಅವರು 2021ರಿಂದಲೇ ಸದರ್ನ್ ತಂಡದ ಭಾಗವಾಗಿದ್ದಾರೆ. ಈ ಮೊದಲು ಲಂಡನ್ ಸ್ಪಿರಿಟ್ ತಂಡದ ಜರ್ಸಿ ಧರಿಸಿದ್ದ ರಿಚಾ, ಈ ಬಾರಿ ಫೀನಿಕ್ಸ್ ತಂಡವನ್ನು ಸೇರಿಕೊಂಡಿದ್ದಾರೆ.

ಹಂಡ್ರೆಡ್ ಡ್ರಾಫ್ಟ್‌ನಲ್ಲಿ ಭಾರತದ 17 ಆಟಗಾರ್ತಿಯರು ನೋಂದಾಯಿಸಿದ್ದರು. ಅವರಲ್ಲಿ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ದೀಪ್ತಿ ಶರ್ಮಾ, ಜೆಮಿಮಾ ರಾಡ್ರಿಗಸ್ ಮತ್ತು ಕನ್ನಡತಿ ಶ್ರೇಯಾಂಕಾ ಪಾಟೀಲ್ ಅವರಿಗೆ ಯಾವ ತಂಡದಲ್ಲೂ ಸ್ಥಾನ ಸಿಗಲಿಲ್ಲ.

ಐಪಿಎಲ್‌ನಿಂದ ಹಿಂದೆ ಸರಿದ ಜಂಪಾ



ಆ್ಯಡಂ ಜಂಪಾ

ನವದೆಹಲಿ: ರಾಜಸ್ಥಾನ ರಾಯಲ್ಸ್ ತಂಡದ ಲೆಗ್ ಸ್ಪಿನ್ನರ್ ಆ್ಯಡಂ ಜಂಪಾ ವೈಯಕ್ತಿಕ ಕಾರಣಗಳಿಂದ ಇಂಡಿಯನ್ ಪ್ರೀಮಿಯರ್ ಲೀಗ್‌ನ ಈ ವರ್ಷದ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

ಕಳೆದ ವರ್ಷ ನಡೆದ ಐಪಿಎಲ್ ಆಟಗಾರರ ಹರಾಜಿಗೂ ಮುನ್ನ ಜಂಪಾ ಅವರನ್ನು ರಾಜಸ್ಥಾನ ರಾಯಲ್ಸ್ ತಂಡವು ₹1.5 ಕೋಟಿ ನೀಡಿ ತೆಕ್ಕೆಗೆ ಸೇರಿಸಿಕೊಂಡಿತ್ತು. ಆಸ್ಟ್ರೇಲಿಯಾ ತಂಡದ ಬಿಡುವಿಲ್ಲದ ವೇಳಾಪಟ್ಟಿ ಹಿನ್ನೆಲೆಯಲ್ಲಿ ಅವರ ಹೆಸರನ್ನು ಐಪಿಎಲ್‌ನಿಂದ ಹಿಂಪಡೆಯಲಾಗಿದೆ ಎಂದು ಅವರ ಮ್ಯಾನೇಜರ್ ಖಚಿತ ಪಡಿಸಿದ್ದಾರೆ.

ಐಪಿಎಲ್‌ನಲ್ಲಿ ಕನ್ನಡಿಗರು

ಕೆ.ಎಲ್.ರಾಹುಲ್ (ಲಖನೌ ಸೂಪರ್ ಜೈಂಟ್ಸ್), ಮಯಂಕ್ ಅಗರವಾಲ್ (ಸನ್‌ರೈಸರ್ಸ್ ಹೈದರಾಬಾದ್), ದೇವದತ್ತ ಪಡಿಕ್ಕಲ್ (ಲಖನೌ ಸೂಪರ್ ಜೈಂಟ್ಸ್), ವೈಶಾಖ ವಿಜಯಕುಮಾರ್ (ರಾಯಲ್ ಚಾಲೆಂಜರ್ಸ್ ಬೆಂಗಳೂರು), ಮನೀಷ್ ಪಾಂಡೆ (ಕೋಲ್ಕತ್ತ ನೈಟ್ ರೈಡರ್ಸ್), ಅಭಿನವ್ ಮನೋಹರ್ (ಗುಜರಾತ್ ಟೈಟನ್ಸ್), ಶ್ರೇಯಸ್ ಗೋಪಾಲ್ (ಮುಂಬೈ ಇಂಡಿಯನ್ಸ್), ವಿದ್ವತ್ ಕಾವೇರಪ್ಪ (ಪಂಜಾಬ್ ಕಿಂಗ್ಸ್), ಪ್ರವೀಣ್ ದುಬೆ (ಡೆಲ್ಲಿ ಕ್ಯಾಪಿಟಲ್ಸ್), ಷಣ್ಪ ಗೌತಮ್ (ಲಖನೌ ಸೂಪರ್ ಜೈಂಟ್ಸ್), ಮನೋಜ್ ಭಾಂಡಗೆ ಆರ್‌ಸಿಬಿ)

ಚೆನ್ನೈ ಸೂಪರ್ ಕಿಂಗ್ಸ್: 42 ವರ್ಷದ ಧೋನಿ ಪದತ್ಯಾಗ

ಋತುರಾಜ್‌ಗೆ ನಾಯಕತ್ವ ಹಸ್ತಾಂತರ

ಚೆನ್ನೈ (ಪಿಟಿಐ): ಭಾರತದ ಕ್ರಿಕೆಟ್ ದಿಗ್ಗಜ ಎಂ.ಎಸ್. ಧೋನಿ ಅವರು ಐಪಿಎಲ್ ಉದ್ಘಾಟನಾ ಪಂದ್ಯದ ಮುನ್ನಾದಿನವಾದ ಗುರುವಾರ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕತ್ವವನ್ನು ಆರಂಭ ಆಟಗಾರ ಋತುರಾಜ್ ಗಾಯಕವಾಡ ಅವರಿಗೆ 'ಹಸ್ತಾಂತರಿಸಿದರು'.

ಸಿಎಸ್‌ಕೆ ತಂಡ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸುವ ಒಂದು ದಿನ ಮೊದಲು ಇಂಡಿಯನ್ ಪ್ರೀಮಿಯರ್ ಲೀಗ್ ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಹಾಕಿತು. ಇದಾಗಿ ಕೆಲವೇ ಹೊತ್ತಿನಲ್ಲಿ ಸಿಎಸ್‌ಕೆ ಆಡಳಿತ ಸಂಕ್ಷಿಪ್ತ ಹೇಳಿಕೆ ಬಿಡುಗಡೆ ಮಾಡಿತು.

'ಟಾಟಾ ಐಪಿಎಲ್ 2024ಕ್ಕೆ ಮುಂಚಿತವಾಗಿ ಧೋನಿ ಅವರು ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕತ್ವವನ್ನು ಋತುರಾಜ್ ಗಾಯಕವಾಡ ಅವರಿಗೆ ವಹಿಸಿದ್ದಾರೆ. ಋತುರಾಜ್ 2019ರಿಂದ ಚೆನ್ನೈ ಸೂಪರ್ ಕಿಂಗ್ಸ್ ಭಾಗವಾಗಿದ್ದಾರೆ. ಈ ಅವಧಿಯಲ್ಲಿ ಐಪಿಎಲ್‌ನಲ್ಲಿ 52 ಪಂದ್ಯಗಳನ್ನು ಆಡಿದ್ದಾರೆ' ಎಂದು ಸಿಎಸ್‌ಕೆ ತಿಳಿಸಿದೆ.

ಋತುರಾಜ್, ಭಾರತ ಪರ ಆರು ಏಕದಿನ ಮತ್ತು 19 ಟಿ20 ಪಂದ್ಯಗಳನ್ನು ಆಡಿದ್ದಾರೆ. 2020ರಲ್ಲಿ ಅವರು ಸಿಎಸ್‌ಕೆ ತಂಡಕ್ಕೆ ಪದಾರ್ಪಣೆ ಮಾಡಿದ್ದರು.

'ಧೋನಿ ಏನೇ ಮಾಡಿದರೂ ಅದನ್ನು ತಂಡದ ಹಿತದೃಷ್ಟಿಯಿಂದ ಮಾಡುತ್ತಾರೆ. ನಾಯಕರ ಸಭೆಯ ಸ್ವಲ್ಪ ಮೊದಲು ಈ ನಿರ್ಧಾರ ನನಗೆ ತಿಳಿಯಿತು. ಅವರ ನಿರ್ಧಾರ ಗೌರವಿಸುತ್ತೇನೆ' ಎಂದು ಸಿಎಸ್‌ಕೆ ಸಿಇಒ ಕಾಶಿ ವಿಶ್ವನಾಥನ್ ಪಿಟಿಐಗೆ ತಿಳಿಸಿದರು.

ಕಳೆದ ವರ್ಷ ಗಾಯಕವಾಡ16 ಪಂದ್ಯಗಳಿಂದ 590 ರನ್ ಕಲೆಹಾಕಿದ್ದರು. ಆದರೆ 2021ರಲ್ಲಿ ಅವರು 16 ಪಂದ್ಯಗಳಿಂದ 635 ರನ್ ಪೇರಿಸಿ ಪ್ರಸಿದ್ಧಿಗೆ ಬಂದಿದ್ದರು.

ಕಳೆದ ವರ್ಷ ಏಷ್ಯನ್ ಗೇಮ್ಸ್‌ನಲ್ಲಿ ಅವರು ಭಾರತ ತಂಡವನ್ನು ಮುನ್ನಡೆಸಿ ಚಿನ್ನ ಗೆದ್ದಿದ್ದರು. 2022ರಲ್ಲಿ ಧೋನಿ ಅವರನ್ನು ಬದಲಾಯಿಸಿ ರವೀಂದ್ರ ಜಡೇಜ ಅವರಿಗೆ ಸಿಎಸ್‌ಕೆ ನಾಯಕತ್ವ ವಹಿಸಲಾಗಿತ್ತು. ಆದರೆ ಎಂಟು ಪಂದ್ಯಗಳ ನಂತರ ಜಡೇಜ ಅವರು ನಾಯಕತ್ವದಿಂದ ಹಿಂದೆಸರಿದು, ಮತ್ತೆ ಧೋನಿಗೆ ಪಟ್ಟ ಕಟ್ಟಲಾಯಿತು.

ಧೋನಿ 2020ರ ಆಗಸ್ಟ್ 15ರಂದು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಆದರೆ ಐಪಿಎಲ್‌ನಲ್ಲಿ ಮುಂದುವರಿದಿದ್ದಾರೆ. 42 ವರ್ಷದ ಧೋನಿಗೆ ಮೊಣಕಾಲು ನೋವು ಬಾಧಿಸುತ್ತಿದೆ. ಕಳೆದ ಋತುವಿನಲ್ಲಿ ಕಪ್ ಗೆದ್ದ ನಂತರ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರು.

250 ಐಪಿಎಲ್ ಪಂದ್ಯ ಆಡಿರುವ ಅವರು 135.92 ಸ್ಟ್ರೈಕ್‌ರೇಟ್‌ನಲ್ಲಿ 5000ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ.

ಬಾಕ್ಸಿಂಗ್ ತಾರೆ ಮೇರಿ ಕೋಮ್ ತಂಡದ ಷೆಫ್ ಡಿ ಮಿಷನ್ ಆಗಿ ನೇಮಕ

ಒಲಿಂಪಿಕ್ಸ್ ಧ್ವಜಧಾರಿ ಶರತ್


ಶರತ್ ಕಮಲ್


ಮೇರಿ ಕೋಮ್

ನವದೆಲಿ (ಪಿಟಿಐ); ಹಿರಿಯ ಟೇಬಲ್ ಟೆನಿಸ್ ಆಟಗಾರ ಮತ್ತು ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಶರತ್ ಕಮಲ್ ಅವರು 2024ರ ಪ್ಯಾರಿಸ್ ಒಲಿಂಪಿಕ್ ಕ್ರೀಡೆಗಳ ಉದ್ಘಾಟನಾ ಸಮಾರಂಭದಲ್ಲಿ ಭಾರತದ ಧ್ವಜಧಾರಿಯಾಗಲಿದ್ದಾರೆ. ಭಾರತದ ಬಾಕ್ಸಿಂಗ್ ತಾರೆ ಎಂ.ಸಿ ಮೇರಿ ಕೋಮ್ ಅವರನ್ನು ತಂಡದ ಷೆಫ್ ಡಿ ಮಿಷನ್ ಆಗಿ ಗುರುವಾರ ನೇಮಿಸಲಾಗಿದೆ

‘41 ವರ್ಷದ ಶರತ್ ಕಮಲ್, ಒಲಿಂಪಿಕ್ ವೇದಿಕೆಯಲ್ಲಿ ಭಾಗಿಯಾಗುತ್ತಿರುವ ನಮ್ಮ ತಂಡದ ಏಕತೆ ಮತ್ತು ಸ್ಫೂರ್ತಿಯನ್ನು ಸಂಕೇತಿಸುತ್ತಾರೆ’ ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಪ್ರಕಟಣೆಯಲ್ಲಿ ತಿಳಿಸಿದೆ.

‘ನಾನು ಒಲಿಂಪಿಕ್ಸ್‌ನಲ್ಲಿ ಭಾಗ ವಹಿಸುವುದೂ ಕೂಡ ಖಚಿತವಾಗಿರಲಿಲ್ಲ. ಆದರೆ ಸಿಂಗಪುರದಲ್ಲಿ ಕಳೆದ ವಾರ ಆಡಿದ ರೀತಿಯಿಂದ ರ‍್ಯಾಂಕಿಂಗ್‌ನಲ್ಲಿ 54 ಸ್ಥಾನ ಜಿಗಿದು, ಈ ಅವಕಾಶ ದೊರೆತು ಈಗ ಧ್ವಜದಾರಿಯಾಗುವ ಅವಕಾಶ ದೊರಕಿದೆ’ ಎಂದು ಶರತ್ ಪಿಟಿಐಗೆ ತಿಳಿಸಿದರು.

‘ಇದು ನನ್ನ ಐದನೇ ಮತ್ತು ಕೊನೆಯ ಒಲಿಂಪಿಕ್ಸ್ ಆಗಿರುವುದರಿಂದ ಅತಿದೊಡ್ಡ ಗೌರವವಾಗಿದೆ. ವಿಶ್ವದಲ್ಲಿ ಹೆಚ್ಚಿನ ಟಿಟಿ ಆಟಗಾರರಿಗೆ ಈ ಗೌರವ ದೊರೆತಿಲ್ಲ. ನನಗೆ ಐಒಎಯಿಂದ ಕರೆ ಬಂತು. ನಂಬಲಾಗಲಿಲ್ಲ’ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

ರ‍್ಯಾಂಕಿಂಗ್ ಆಧಾರದಲ್ಲಿ ಇತ್ತೀಚೆಗೆ ಭಾರತ ಪುರುಷರ ಮತ್ತು ಮಹಿಳೆಯರ ತಂಡಗಳು ಮೊದಲ ಬಾರಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದವು.

ಚೆಫ್ ಡಿ ಆಗಿ ನೇಮಕಗೊಂಡಿರುವ ಮೇರಿ ಕೋಮ್ 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದರು. ಆರು ಬಾರಿಯ ವಿಶ್ವ ಚಾಂಪಿಯನ್ ಮೇರಿ ಕೋಮ್ ಅವರಿಗೆ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಭಾಗ ವಹಿಸಿರುವ ಶಿವ ಕೇಶವನ್ ನೆರವಾಗಲಿದ್ದಾರೆ. ಶಿವ ಕೇಶವನ್ ಅವರನ್ನು ಡೆಪ್ಯುಟಿ ಷೆಫ್ ಡಿ ಮಿಷನ್ ಆಗಿ ನೇಮಕ ಮಾಡಲಾಗಿದೆ. ಒಲಿಂಪಿಕ್ಸ್ ರೈಫಲ್ ಶೂಟಿಂಗ್‌ನಲ್ಲಿ ಕಂಚಿನ ಪದಕ ವಿಜೇತ ಗಗನ್ ನಾರಂಗ್ ಅವರು ಶೂಟಿಂಗ್ ರೇಂಜ್‌ನಲ್ಲಿ ಭಾರತದ ಸ್ಪರ್ಧೆಯ ಮೇಲ್ವಿಚಾರಣೆ ನಡೆಸಲಿದ್ದಾರೆ.

ಈ ಸ್ಪರ್ಧೆ ಒಲಿಂಪಿಕ್ ಮುಖ್ಯ ತಾಣದಿಂದ ಬಹಳ ದೂರದಲ್ಲಿದೆ.

ಶೂಟಿಂಗ್‌ನಲ್ಲಿ ಭಾರತವು ತನ್ನ ಅತಿದೊಡ್ಡ ಶೂಟಿಂಗ್ ಪ್ಯಾರಿಸ್‌ಗೆ ಕಳುಹಿಸಲಿದ್ದು, 19 ಮಂದಿ ಈಗಾಗಲೇ ಕೋಟಾಗಳನ್ನು ಪಡೆದಿದ್ದಾರೆ.

ಈ ನೇಮಕಗಳ ಬಗ್ಗೆ ಪ್ರತಿಕ್ರಿಯಿಸಿರುವ ಐಒಎ ಅಧ್ಯಕ್ಷೆ ಪಿ.ಟಿ.ಉಷಾ, ‘ಪ್ಯಾರಿಸ್ 2024ರ ಒಲಿಂಪಿಕ್ ಕ್ರೀಡೆಗಳಿಗೆ ವೈವಿಧ್ಯಮಯ ಕ್ರೀಡಾಪಟುಗಳ ಮತ್ತು ಸಮರ್ಥ ಅಧಿಕಾರಿಗಳ ತಂಡವನ್ನು ಹೊಂದಿರುವುದು ಸಂತಸ ಮೂಡಿಸಿದೆ. ಅವರ ಪರಿಣತಿ, ಸಮರ್ಪಣಾ ಭಾವ ಮತ್ತು ಕ್ರೀಡೆಯ ಮೇಲಿನ ಪ್ರೀತಿ ನಮ್ಮ ಸ್ಪರ್ಧಿಗಳಿಗೆ ಅತ್ಯುತ್ತಮ ಪ್ರದರ್ಶನ ನೀಡಲು ಪ್ರೇರೇಪಿಸಲಿದೆ’ ಎಂದರು.

ಪ್ಯಾರಾಲಿಂಪಿಕ್ಸ್‌ಗೆ ಅಶೋಕ್, ಪರಮ್‌ಜೀತ್

ನವದೆಹಲಿ (ಪಿಟಿಐ): ಈಜಿಪ್ಟ್‌ನ ಶರ್ಮ್ ಅಲ್ ಶೇಖ್‌ನಲ್ಲಿ ಗುರುವಾರ ನಡೆದ ಪ್ಯಾರಾ ಪವರ್‌ಲಿಫ್ಟಿಂಗ್ ವಿಶ್ವಕಪ್‌ನಲ್ಲಿ ಏಷ್ಯನ್ ಪ್ಯಾರಾಗೇಮ್ಸ್ ಕಂಚಿನ ಪದಕ ವಿಜೇತ ಅಶೋಕ್ ಮತ್ತು ಪರಮ್‌ಜೀತ್ ಕುಮಾರ್ ಬೆಳ್ಳಿ ಪದಕಗಳನ್ನು ಗೆದ್ದುಕೊಂಡು, ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದಾರೆ.

41 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸಿದ ಮನ್‌ಪ್ರೀತ್ ಕೌರ್ 86 ಕೆ.ಜಿ ಎತ್ತುವ ಮೂಲಕ ಕಂಚಿನ ಪದಕ ಗೆದ್ದರು.

ಅಶೋಕ್ ಕ್ರಮವಾಗಿ 192 ಕೆ.ಜಿ ಮತ್ತು 196 ಕೆ.ಜಿ ಭಾರ ಎತ್ತಿ ಬೆಳ್ಳಿ ಪದಕ ಗೆದ್ದರು. ಅವರ ಎರಡನೇ ಪ್ರಯತ್ನವನ್ನು 'ನೋ ಲಿಫ್ಟ್' ಎಂದು ಘೋಷಿಸಿದ ನಂತರ, ತಮ್ಮ ಮೂರನೇ ಪ್ರಯತ್ನದಲ್ಲಿ 196 ಕೆಜಿ ಭಾರವನ್ನು ಎತ್ತಿದರು. ತೀವ್ರ ಪೈಪೋಟಿಯಿಂದ ಕೂಡಿದ್ದ 49 ಕೆ.ಜಿ ವಿಭಾಗದಲ್ಲಿ ಪರಮ್‌ಜೀತ್ ತನ್ನ ಮೊದಲ ಎರಡು ಪ್ರಯತ್ನಗಳಲ್ಲಿ 160 ಕೆ.ಜಿ ಮತ್ತು 166 ಕೆ.ಜಿ ಎತ್ತಿದರು ಮತ್ತು ಸ್ವಲ್ಪದರಲ್ಲೇ ಚಿನ್ನದಿಂದ ವಂಚಿತರಾದರು.

‘ಪ್ಯಾರಾಲಿಂಪಿಕ್ಸ್‌ನಲ್ಲಿ ಭಾಗವಹಿಸುವುದು ಪ್ರತಿಯೊಬ್ಬ ಪ್ಯಾರಾ ಅಥ್ಲೀಟ್‌ನ ಕನಸು. ಆ ಕನಸನ್ನು ನನಸು ಮಾಡುವತ್ತ ಮಹತ್ವದ ಹೆಜ್ಜೆ ಇಟ್ಟಿರುವುದಕ್ಕೆ ನನಗೆ ಸಂತೋಷವಾಗಿದೆ. ದೇಶಕ್ಕೆ ಕೀರ್ತಿ ತರಲು ದೃಢನಿಶ್ಚಯ ಮಾಡಿದ್ದೇನೆ’ ಎಂದು ಅಶೋಕ್ ಹೇಳಿದರು.

ಐಪಿಎಲ್ : ಸಂಕೇತ ಭಾಷೆ ‘ಕಾಮೆಂಟ್ರಿ’

ಮುಂಬೈ (ಪಿಟಿಐ): ಈ ಸಲ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಗಳ ನೇರಪ್ರಸಾರದಲ್ಲಿ ಈಗ ಸಂಕೇತ ಭಾಷೆ ಮತ್ತು ವಿವರಣೆ ನೀಡಲಾಗುವುದು.

ಟೂರ್ನಿಯ ಅಧಿಕೃತ ಪ್ರಸಾರಕರಾದ ಸ್ಟಾರ್ ಸ್ಪೋರ್ಟ್ಸ್ ವಾಹಿನಿಯು ಇಂಡಿಯಾ ಸೈನಿಂಗ್ ಹ್ಯಾಂಡ್ಸ್ (ಐಎಸ್‌ಎಚ್ ನ್ಯೂಸ್) ಜೊತೆಗೂಡಿ ಸಂಕೇತ ಭಾಷೆಯ 'ಕಾಮೆಂಟ್ರಿ' ನೀಡಲಿದೆ. ‘ಸಂಕೇತ ಭಾಷೆಯ ಮೂಲಕ ಶ್ರವಣ ದೋಷ ಮತ್ತು ಆಡಿಯೊ ಕಾಮೆಂಟ್ರಿಯಿಂದ ದೃಷ್ಟಿದೋಷವುಳ್ಳವರಿಗಾಗಿ ಪಂದ್ಯದ ವಿವರಣೆ ಅರಿಯಲು ಸಾಧ್ಯವಾಗಲಿದೆ’ ಎಂದು ಅಧಿಕೃತ ಪ್ರಸಾರಕ ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ.

ಎಂಟರ ಘಟ್ಟಕ್ಕೆ ಟ್ರೀಸಾ- ಗಾಯತ್ರಿ

ಸ್ವಿಸ್ ಓಪನ್ ಬ್ಯಾಡ್ಮಿಂಟನ್: ತನಿಶಾ–ಅಶ್ವಿನಿ ನಿರ್ಗಮನ


ಗಾಯತ್ರಿ ಗೋಪಿಚಂದ್ ಮತ್ತು ಟ್ರೀಸಾ ಜೋಳಿ.

ಬಾಸೆಲ್ (ಸ್ವಿಜರ್ಲೆಂಡ್), (ಪಿಟಿಐ): ಭಾರತದ ಡಬಲ್ಸ್ ಆಟಗಾರ್ತಿಯರಾದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಈ ಜೋಡಿ ಗುರುವಾರ ನಡೆದ ಮಹಿಳಾ ಡಬಲ್ಸ್ ಎರಡನೇ ಸುತ್ತಿನಲ್ಲಿ ಸ್ವದೇಶದ ಪ್ರಿಯಾ ಕೊಂಜೆಂಗ್‌ಬಾಮ್ ಮತ್ತು ಶ್ರುತಿ ಮಿಶ್ರಾ ಜೋಡಿಯನ್ನು ಸೋಲಿಸಿತು.

ಎಂಟನೇ ಶ್ರೆಯಾಂಕದ ಟ್ರೀಸಾ–ಗಾಯತ್ರಿ ಅವರು 21–10, 21–12 ರಿಂದ 75ನೇ ಕ್ರಮಾಂಕದ ಜೋಡಿಯ ಮೇಲೆ ಗೆಲ್ಲಲು ಕೇವಲ 36 ನಿಮಿಷ ತೆಗೆದುಕೊಂಡರು. ಟ್ರೀಸಾ–ಗಾಯತ್ರಿ ಜೋ ಡಿ ವಿಶ್ವ ಕ್ರಮಾಂಕದಲ್ಲಿ 26ನೇ ಸ್ಥಾನದಲ್ಲಿದೆ.

ಆದರೆ, 20ನೇ ಕ್ರಮಾಂಕ ಹೊಂದಿರುವ ತನಿಶಾ ಕ್ರಾಸ್ಟೊ ಮತ್ತು ಅಶ್ವಿನಿ ಪೊನ್ನಪ್ಪ ಜೋಡಿ ನಿರ್ಗಮಿಸಿತು. ವಿಶ್ವದ 30ನೇ ಕ್ರಮಾಂಕದ ರುಯಿ ಹಿರೊಕಮಿ ಮತ್ತು ಯುನಾ ಕಟೊ ಜೋಡಿ 21–17, 21–16 ರಿಂದ ತನಿಶಾ- ಅಶ್ವಿನಿ ಜೋಡಿಯನ್ನು ಸೋಲಿಸಿತು. ಭಾರತದ ಈ ಆಟಗಾರ್ತಿಯರು ಪ್ಯಾರಿಸ್ ಒಲಿಂಪಿಕ್ಸ್ ರೇಸ್‌ನಲ್ಲಿದ್ದಾರೆ.

ಏಪ್ರಿಲ್ ಕೊನೆಯಲ್ಲಿ ಪ್ರಕಟವಾಗುವ ವಿಶ್ವ ಕ್ರಮಾಂಕದಲ್ಲಿ ಮೊದಲ 16 ಸ್ಥಾನದಲ್ಲಿರುವ ಜೋಡಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಅರ್ಹತೆ ಪಡೆಯುತ್ತದೆ.

ಅನ್ಶ್ ನೆರೂರ್ಕರ್‌ಗೆ ಪ್ರಾಗ್ ಚೆಸ್ ಪ್ರಶಸ್ತಿ

ಮುಂಬೈ (ಪಿಟಿಐ): 11 ವರ್ಷದ ಆಟಗಾರ ಅನ್ಶ್ ನೆರೂರ್ಕರ್, ಪ್ರಾಗ್ ಇಂಟರ್‌ನ್ಯಾಷನಲ್ ಚೆಸ್ ಫೆಸ್ಟಿವಲ್‌ನ ‘ಫ್ಯೂಚರ್’ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಭಾರತದ ಮೊದಲ ಆಟಗಾರ ಎನಿಸಿದರು. ನೆರೂರ್ಕರ್ ಒಂಬತ್ತು ಸುತ್ತುಗಳಿಂದ ಎಂಟು ಪಾಯಿಂಟ್ಸ್ ಸಂಗ್ರಹಿಸಿ ಅಜೇಯ ಸಾಧನೆ ಪ್ರದರ್ಶಿಸಿದರು. ಇದರಲ್ಲಿ ಏಳು ಗೆಲುವು, ಎರಡು ಡ್ರಾ ಸೇರಿವೆ. ಇಲ್ಲಿ 132 ರೇಟಿಂಗ್ ಪಾಯಿಂಟ್ಸ್ ಸಂಗ್ರಹಿಸಿದ ಅವರು ಸದ್ಯ 1786 ಪಾಯಿಂಟ್ಸ್ ಹೊಂದಿದ್ದಾರೆ.

‘ಕ್ಯಾಂಡಿಡೇಟ್ ಮಾಸ್ಟರ್’ ಪದವಿಗೂ (ಟೈಟಲ್) ಅವರು ಅರ್ಹತೆ ಪಡೆದರು ಎಂದು ಪ್ರಕಟಣೆ ತಿಳಿಸಿದೆ.

ಫ್ಯೂಚರ್ ಕೆಟಗರಿ ವಿಭಾಗದಲ್ಲಿ ವಿಶ್ವದಾದ್ಯಂತ 10 ಆಟಗಾರರು ಪಾಲ್ಗೊಂಡು ರೌಂಡ್‌ರಾಬಿನ್ ಮಾದರಿಯಲ್ಲಿ ಆಡುತ್ತಾರೆ. ಫಿಡೆ ರೇಟಿಂಗ್ ಮತ್ತು ವಯಸ್ಸಿನ ಆಧಾರದಲ್ಲಿ ಆಟಗಾರರನ್ನು ಈ ಟೂರ್ನಿಗೆ ಆಯ್ಕೆ ಮಾಡಲಾಗುತ್ತದೆ.

ಫುಟ್‌ಬಾಲ್: ಕ್ಸೇವಿಯರ್ಸ್, ವಿಪಿಎಸ್ ತಂಡಗಳಿಗೆ ಜಯ

ಬೆಂಗಳೂರು: ಫ್ರಾನ್ಸಿಸ್ ಕ್ಸೇವಿಯರ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ‘ಸಿ’ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 2–0ಯಿಂದ ಫುಟ್‌ಬಾಲ್ ಔರಾ ತಂಡವನ್ನು ಮಣಿಸಿತು. ಗುರುವಾರ ನಡೆದ ಎಚ್ ಗುಂಪಿನ ಪಂದ್ಯದಲ್ಲಿ ಕ್ಸೇವಿಯರ್ಸ್ ತಂಡದ ಪರವಾಗಿ ಕೆ.ಲಾರೆಮಿ ಮತ್ತು ವಸಂತ್ ಡಿ. ತಲಾ ಒಂದು ಗೋಲು ಗಳಿಸಿದರು. ಮತ್ತೊಂದು ಪಂದ್ಯದಲ್ಲಿ ವಿಪಿಎಸ್ ತಂಡವು 2–0ಯಿಂದ ಗಾರ್ಡನ್ ಸಿಟಿ ಎಫ್‌ಸಿ ತಂಡವನ್ನು ಸೋಲಿಸಿತು.

ವಿಪಿಎಸ್ ಪರವಾಗಿ ಶಹಬಾಜ್ ಮತ್ತು ತಾರಾನಾಥ್ ಗೋಲುಗಳನ್ನು ತಂದಿತ್ತರು.

‘ಈಜು ಕ್ರೀಡೆಗೆ ನಾಯಕತ್ವದ ಕೊರತೆ’

ನವದೆಹಲಿ (ಪಿಟಿಐ): ಭಾರತದಲ್ಲಿ ಈಜು ಕ್ರೀಡೆ ಬೆಳೆಯಲು ಸಾಕಷ್ಟು ಅವಕಾಶವಿದೆ. ಆದರೆ ನಾಯಕತ್ವದ ಕೊರತೆ ಮತ್ತು ಮೂಲ ಸೌಕರ್ಯಗಳ ಸಮಸ್ಯೆಯಿಂದ ಒಲಿಂಪಿಕ್ ಕ್ರೀಡೆಗಳಲ್ಲಿ ಭಾರತದ ಈಜು ಸ್ಪರ್ಧಿಗಳ ಸಾಧನೆಗೆ ತೊಡಕಾಗುತ್ತಿದೆ ಎಂದು ವಿಶ್ವ ಅಕ್ವೆಟಿಕ್ಸ್ ಅಧ್ಯಕ್ಷ ಹುಸೇನ್ ಅಲ್ ಮುಸಲಮ್ ಗುರುವಾರ ಇಲ್ಲಿ ಅಭಿಪ್ರಾಯಪಟ್ಟರು.

ಏಷ್ಯಾ ಒಲಿಂಪಿಕ್ ಕೌನ್ಸಿಲ್ ಹಂಗಾಮಿ ಅಧ್ಯಕ್ಷ ರಣಧೀರ್ ಸಿಂಗ್ ಅವರೂ ದೇಶದ ಈಜು ಕ್ಷೇತ್ರದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಒಲಿಂಪಿಕ್ಸ್‌ನ ಇತರ ಕೆಲವು ಕ್ರೀಡೆಗಳಿಗೆ ಹೋಲಿಸಿದರೆ ಇದು ಹಿಂದುಳಿದಿದೆ ಎಂದರು.

ಸಮಾರಂಭವೊಂದರಲ್ಲಿ ಅವರು ಈ ನಿರಾಶೆಯ ಮಾತುಗಳನ್ನಾಡಿದರು. ಆದರೆ ಈ ಸಮಾರಂಭದಲ್ಲಿ ಭಾರತ ಈಜು ಫೆಡರೇಷನ್‌ನ (ಎಸ್‌ಎಫ್‌ಐ) ಹಿರಿಯ ಅಧಿಕಾರಿಗಳ್ಯಾರೂ ಭಾಗವಹಿಸಿರದಿದ್ದುದು ಅಚ್ಚರಿ ಮೂಡಿಸಿತು. ‘ನನಗೆ ಈ ಬೆಳವಣಿಗೆಯಿಂದ ಅಚ್ಚರಿಯಾಗಿದೆ’ ಎಂದು ಎಸ್‌ಎಫ್‌ಐ ಮಹಾ ಪ್ರಧಾನ ಕಾರ್ಯದರ್ಶಿ ಮೊನಾಲ್ ಚೋಕ್ಸಿ ಹೇಳಿದರು. ತಮ್ಮನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತೇ ಎಂಬ ಪ್ರಶ್ನೆಗೆ ಚೋಕ್ಸಿ ಅವರ ಉತ್ತರ ಇದಾಗಿತ್ತು.

ಬಿಸಿಸಿಐ: ರೇಸ್‌ನಲ್ಲಿ ಮಿಥುನ್, ನಿಖಿಲ್

ನವದೆಹಲಿ (ಪಿಟಿಐ): ಭಾರತ ತಂಡದ ಮಾಜಿ ಸ್ಪಿನ್ನರ್ ನಿಖಿಲ್ ಚೋಪ್ರಾ, ದೆಹಲಿಯ ಬ್ಯಾಟರ್ ಮಿಥುನ್ ಮನ್ಹಾಸ್ ಮತ್ತು ಹಾಲಿ ಜೂನಿಯರ್ ಆಯ್ಕೆಗಾರ ಕೃಷ್ಣ ಮೋಹನ್ ಅವರು ಬಿಸಿಸಿಐ ಸೀನಿಯರ್ ತಂಡದ ಆಯ್ಕೆಗಾರ ಸ್ಥಾನದ ಪೈಪೋಟಿಯಲ್ಲಿದ್ದಾರೆ. ಐವರು ಸದಸ್ಯರ ಆಯ್ಕೆ ಸಮಿತಿಯಲ್ಲಿನ ಒಂದು ಸ್ಥಾನಕ್ಕೆ ಜನವರಿಯಲ್ಲಿ ಬಿಸಿಸಿಐ ಅರ್ಜಿಗಳನ್ನು ಆಹ್ವಾನಿಸಿತ್ತು.